ಅಧ್ಯಕ್ಷರು: ನಾಳೆ ಹೇಳುತ್ತೇನೆ ಎಂದು ಅವರು ಆಶ್ವಾಸನೆ ಕೊಟ್ಟಿದ್ದಾರೆ. ನಿಮಗೆ ತೃಪ್ತಿ ಬರುವ ಹಾಗೆ ಆಶ್ವಾಸನೆಯನ್ನು ನಾಳೆ ಕೊಡುತ್ತೇನೆ ಎಂದು ಹೇಳಿದ ಮೇಲೆ ಇನ್ನೂ ಏಕೆ ಮಾತನಾಡುತ್ತೀರಿ ?

ಶ್ರೀ ಕೆ. ಶ್ರೀನಿವಾಸಗೌಡ: ಕೆಲಸ ಶುರುಮಾಡಬಹುದೇ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ನಿಮ್ಮ ಹತ್ತಿರ ಹಣ ಹೆಚ್ಚಾಗಿ ಇದ್ದರೆ ಕೆಲಸ ಶುರು ಮಾಡಿಸಿ. ಆಮೇಲೆ ನಿಮಗೆ ಹಣ ಕೊಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಆಗಬಹುದು. ಅವರು ಹೇಳಿದರೆ ಕೆಲಸ ಶುರು ಮಾಡಿಸುತ್ತೇನೆ. ನನಗೇನೂ ತೊಂದರೆಯಾಗುವುದಿಲ್ಲ.

ಅಧ್ಯಕ್ಷರು: ಆಯಿತು ' ಈಗ ಮಾನ್ಯ ಸಿಂಧ್ಯಾರವರು ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಭಾಷಣವನ್ನು ಮುಂದುವರೆಸಬೇಕು.

12.20 ಪಿ.ಎಂ.

6. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರಿದ ಚರ್ಚೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ವಾಸ್ತವಿಕವಾಗಿ ಒಂದೆರಡು ಮಾತುಗಳನ್ನು ಹೇಳಿದೆ. ಮೊದಲನೆಯದಾಗಿ, ಈ ಸರ್ಕಾರ ಬಂದಮೇಲೆ ಇದು ಎರಡನೇ ರಾಜ್ಯಪಾಲರ ಭಾಷಣ. ಮಾನ್ಯ ರಾಜ್ಯಪಾಲರು ಸೊಗಸಾಗಿ ಕನ್ನಡದಲ್ಲಿ ಮಾತನಾಡಿ ಐತಿಹಾಸಿಕವಾದ ಈ ಸದನದಲ್ಲಿ, ಇತಿಹಾಸದ ದಾಖಲೆಯನ್ನು ಉಂಟುಮಾಡಿ, ಕರ್ನಾಟಕದ ಜನಮನವನ್ನು ಗೆದ್ದಿರತಕ್ಕ ಪ್ರಥಮ ಮಹಿಳಾ ರಾಜ್ಯಾಪಾಲರು ಎಂಬ ಹೆಗ್ಗಳಿಕೆಯ ಜೊತೆಗೆ ಪ್ರಥಮ ಕನ್ನಡೇತರ ರಾಜ್ಯಪಾಲರ ಪೈಕಿ ಕನ್ನಡದಲ್ಲಿ ಮಾತನಾಡಿರತಕ್ಕ ಪ್ರಥಮ ರಾಜ್ಯಪಾಲರು ಎಂಬ ಕೀರ್ತಿಗೆ ಒಳಗಾಗಿದ್ದಾರೆ. ಅದಕ್ಕಾಗಿ ನಾನು ಮಾಯ್ಯ ರಾಜ್ಯಪಾಲರನ್ನು ಅಭಿನಂದಿಸುತ್ತೇನೆ. ಆದರೆ, ಈ ಸದನದಲ್ಲಿ ನಡೆಯುತ್ತಿರತಕ್ಕ ವ್ಯವಹಾರಗಳು, ಇದಕ್ಕೆ ವಿರೋಧಾಭಾಸವಾಗಿ, ಕನ್ನಡದಲ್ಲಿ ವ್ಯವಹಾರಗಳನ್ನು ನಡೆಸುತ್ತಾ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆ. ಕನ್ನಡದಲ್ಲಿ ವ್ಯವಹಾರ ನಡೆಸಿ, ಕನ್ನಡದಲ್ಲಿ ಮಾತನಾಡಿ ಕನ್ನಡದಲ್ಲಿ ಶ್ವೇತಪತ್ರವನ್ನು ಹೊರಡಿಸಿ, ಕನ್ನಡದಲ್ಲಿಯೇ ಹೇಳಿಕೆಗಳನ್ನು ನೀಡಿ ಎಂದು ಪರಿಪರಿಯಾಗಿ ಬೇಡುವ ಪರಿಸ್ಥಿತಿ ನಮ್ಮದಾಗಿದೆ. ಇನ್ನು ಮಂತ್ರಿಗಳು ಈ ಸಭೆಗೆ ಬರುವುದೇ ನಮಗೆ ಮಾಡುವಂಥ ಒಂದು ದೊಡ್ಡ ಉಪಕಾರ ಎನ್ನುವುದಾಗಿದೆ. ಮೊದಲನೇ ಸಾಲಿನಲ್ಲಿ ಮಾನ್ಯ ಶ್ರೀಕಂಠಯ್ಯನವರೊಬ್ಬರನ್ನು ಬಿಟ್ಟರೆ ಬೇರೆ ಯಾವುದೇ ಮಂತ್ರಿಗಳೂ ಇಲ್ಲ. ಇದು ನಮಗೆ ಕೊಡತಕ್ಕಂಥ ಗೌರವ. ಮಂತ್ರಿಗಳು ಈ ಸಭೆಗೆ ಬರುವುದೇ ನಮಗೆ ಮಾಡುವಂಥ ದೊಡ್ಡ ಉಪಕಾರವಾದರೆ ಕನ್ನಡದಲ್ಲಿ ಈ ಮಹನೀಯರು ಮಾತನಾಡತಕ್ಕಂತಾದ್ದು, ನಮಗೆ ತೋರತಕ್ಕ ದಯೆಯೇ ಸರಿ ಎಂದು ನಾನು ಭಾವಿಸಿದ್ದೇನೆ. ಅದೇನೇ ಇರಲಿ, ಕೊನೇಪಕ್ಷ ಮಾನ್ಯ

ರಾಜ್ಯಪಾಲರಿಂದಲಾದರೂ ಸಹಿತ ಸರ್ಕಾರ ನಡೆಸುವವರು ಇದನ್ನು ಕಲಿಯಬೇಕು. ಇವತ್ತು ಬೆಳಗಾವಿ ಶಾಸಕರಾದ ಶ್ರೀಮಾನ್ ಕಡೋಲ್ಕರ್‌ರವರನ್ನು ನಾವೆಲ್ಲರೂ ಅಭಿನಂದಿಸಬೇಕು. ಕಾರಣ ಈ ರಾಜ್ಯದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು, ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗಬೇಕೆಂಬ ಭಾವನೆಯನ್ನು ವ್ಯಕ್ತ ಮಾಡುತ್ತಾ ಇದ್ದರು ಅದಕ್ಕೆ ವಿರುದ್ಧವಾಗಿ, ಇವತ್ತು ಅವರು ಎದ್ದುನಿಂತು ಕನ್ನಡದಲ್ಲಿ ಭಾಷಣ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿ, ಕನ್ನಡವನ್ನು ಅಳಿಯಲಿಕ್ಕೆ ಅವರು ಮುಂದಾಗಿದ್ದಾರೆ, ಕನ್ನಡದ ಪ್ರಾಧಿಕಾರವನ್ನು ಮತ್ತು ಅವರನ್ನು ನಾನು ಅಭಿನಂದಿಸಲಿಕ್ಕೆ ಇಚ್ಛಿಪಡುತ್ತೇನೆ. ಕೊನೇಪಕ್ಷ ಅದರಿಂದಲಾದರೂ ಸಹಿತ ಈ ಸರ್ಕಾರ ನಡೆಸ ತಕ್ಕಂಥವರು ಪಾಠ ಕಲಿತರೆ ಒಳ್ಳೆಯದು. ಇಲ್ಲಿಗಿಂತ ಹೆಚ್ಚಾಗಿ, ಇವರು ಪಾಠ ಕಲಿಯಬೇಕು ಎಂದು ಹೇಳಲಿಕ್ಕೆ ನಾನು ಬಯಸುತ್ತೇನೆ. ಅದರಿಂದ ಈ ವಂದನಾ ನಿರ್ಣಯದಲ್ಲಿ ತಾವೇನು ಮಾನ್ಯ ರಾಜ್ಯಪಾಲರಿಗೆ ಕಳುಹಿಸುತ್ತಾ ಇದ್ದೀರಿ. ಇದರಲ್ಲಿ ವಿಶೇಷವಾಗಿ ನಮೂದನೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ರಾಜ್ಯಪಾಲರಿಗೆ ಅಭಿನಂದನೆಗಳನ್ನು ಸಲ್ಲಿಸಿ, ತಾವು ಮಾಡಿರತಕ್ಕ ಭಾಷಣ, ಇದೊಂದು ಇತಿಹಾಸ, ಅದಕ್ಕೋಸ್ಕರ ಸಭೆ ತಮ್ಮನ್ನು ಅಭಿನಂದಿಸುತ್ತದೆ ಎನ್ನುವ ವಿಚಾರವನ್ನು ತಾವು ಹೇಳಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದು 7 ತಿಂಗಳಾಗಿದೆ. ಇವರು ಹೇಳುವುದು ಒಂದು, ಮಾಡುವುದು ಒಂದು. ಇವರು ಏನೇನು ಹೇಳಿದ್ದಾರೆ, ಏನೇನು ಮಾಡುತ್ತಿದ್ದಾರೆ ಇದನ್ನು ನಮಗಿಂತ ಹೆಚ್ಚಾಗಿ ಆಡಳಿತ ಪಕ್ಷದ ಸದಸ್ಯರು ಬಹಳ ಮುಖ್ಯವಾಗಿ ಗಮನಿಸಬೇಕಾಗಿದೆ. ಯಾವರೀತಿ ಇವರು ಹೇಳುವುದು ಒಂದು, ಮಾಡುವುದು ಒಂದು ಎನ್ನುವುದಕ್ಕೆ ನಿನ್ನೆದಿನ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ತಮ್ಮ ಚುನಾವಣಾ ಪ್ರಣಾಳಿಕೆ ಬಗ್ಗೆ ಮಾತನಾಡಿದರೆ ಇವರಿಗೆ ಎಲ್ಲೋ ಒಂದು ಕಡೆ ನೋವಾಗುತ್ತದೆ; ಸಿಂಧ್ಯರವರು ಯಾವಾಗಲೂ ಚುನಾವಣಾ ಪ್ರಣಾಳಿಕೆ ಬಗ್ಗೆಯೇ ಮಾತನಾಡುತ್ತಾರೆ ಎಂದು. ಇವತ್ತು ಚುನಾವಣಾ ಪ್ರಣಾಳಿಕೆ ಅಷ್ಟೇ ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ಅಕ್ಟೋಬರ್ 10 ಮತ್ತು 11ನೇ ತಾರೀಖು ಏನು ಪ್ರಮಾಣವಚನವನ್ನು ಸ್ವೀಕಾರ ಮಾಡಿದರು. ಅವತ್ತಿನಿಂದ ಇವತ್ತಿನವರೆಗೆ ಅವರು ಕೊಟ್ಟಿರತಕ್ಕ ಹೇಳಿಕೆಗಳು ಏನಿವೆ, ಈ ಹೇಳಿಕೆಗಳ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಇವರು ಹೇಳಿದರು, ನೀರಾವರಿ ಯೋಜನೆಗಳ ಬಗ್ಗೆ ಮಾತನಾಡುತ್ತಾರೆ. ಪಶ್ಚಿಮದ ಕಡೆ ಹರಿಯತಕ್ಕ ಹೊಳೆಗಳನ್ನೆಲ್ಲಾ ಪೂರ್ವಕ್ಕೆ ಬದಲಾವಣೆ ಮಾಡಿ ಹಾಸನ, ತುಮಕೂರು, ಮಂಡ್ಯ, ಮಂಗಳೂರು, ಬೆಂಗಳೂರ ಎಲ್ಲಾದಕ್ಕೂ ನಾವು ಕುಡಿಯುವ ನೀರನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಾಚಿಕೆಯಾಗುವುದಿಲ್ಲವೇ? ಈ ಒಂದು ಚುನಾವಣಾ ಪ್ರಣಾಳಿಕೆಯಲ್ಲಿ ತಾವೇನು ಬರೆದಿದ್ದೀರಿ, ಇದನ್ನು ನೀವೇಕೆ ಇಷ್ಟು ಬೇಗ ಮರೆತಿದ್ದೀರಿ. ಇದನ್ನು ಇವತ್ತು ಆಡಳಿತ ಪಕ್ಷದವರು ತಿಳಿಸಬೇಕು. ಇದೊಂದೇ ಅಲ್ಲ. ಕೆ.ಎಸ್.ಎಫ್.ಸಿ. ರೋಗಗ್ರಸ್ಥ ಎಲ್ಲಾ ಕೈಗಾರಿಕಾ ಘಟಕಗಳಿಗೆ ಸಾಲ ತೀರಿಸುವ ಅವಧಿಯನ್ನು ವಿಸ್ತರಣೆ ಮಾಡುತ್ತೇವೆಂದು ಹೇಳಿದರು. ಅವಧಿ ವಿಸ್ತರಣೆ ಅಲ್ಲ, ಇವತ್ತು ಜಪ್ತಿ ಮಾಡಲಿಕ್ಕೆ ಹೊರಟಿದ್ದಾರೆ. 1994ರಲ್ಲಿ ನಾವು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಿದೆವು. 1983ರಲ್ಲಿ, 1985 ರಲ್ಲಿ ಮತ್ತು 1994ರಲ್ಲಿ ಮಾಡಿದೆವು. ಅದಕ್ಕೆ ಬದಲಾಗಿ ಇವತ್ತು ನೀವು ವಸೂಲಾತಿ ಮಾಡುವುದಕ್ಕೆ ಹೊರಟ್ಟಿದ್ದೀರಾ? ರೈತರ ಸಾಲದ ಬಡ್ಡಿಯನ್ನು ರದ್ದು ಮಾಡುವುದಕ್ಕೆ ಆಗದಿರುವಂಥ ಸರ್ಕಾರ ನಿಮ್ಮದು, ರೈತರಿಂದ

ಮತವನ್ನು ತೆಗೆದುಕೊಂಡು ಅವರಿಗೆ ಪಂಗನಾಮ ಹಾಕಲಿಕ್ಕೆ ಹೊರಟಿದ್ದೀರಿ. ಶಾಲಾ ಮಕ್ಕಳ ಬಗ್ಗೆ ಮಾತನಾಡಿದ್ದಾರೆ. ಮಧ್ಯಾಹ್ನದ ವೇಳೆಯಲ್ಲಿ ಪುಕ್ಕಟೆ ಊಟ ಕೊಡುತ್ತೇವೆಂದು ಹೇಳಿದ್ದಾರೆ. ಶಾಲಾ ಮಕ್ಕಳೂ ಇವರಿಗೆ ಜಯಕಾರ ಹಾಕಬೇಕು. ಇವರ ಮಂತ್ರಿಗಳು ಬಂದುನಿಂತಾಗ ಕಾಂಗ್ರೆಸ್ ಬಾವುಟವನ್ನು ಹಾರಿಸಬೇಕು. ಅವರಿಗೂ ಪಂಗನಾಮ. ಮತ್ತೆ ಹೇಳಿದ್ದಾರೆ, ಮೂತ್ರಪಿಂಡದ ರೋಗ, ಹೃದ್ರೋಗ, ಕ್ಯಾನ್ಸರ್‌ನಂಥ ಖಾಯಿಲೆ ಇರುವ ಬಡಜನರಿಗೆ ಉಚಿತ ಚಿಕಿತ್ಸೆ. ಮಾನ್ಯ ಅಧ್ಯಕ್ಷರೇ, ಎಲ್ಲಿ ಮಾಡಿದ್ದಾರೆ ಉಚಿತ ಚಿಕಿತ್ಸೆ. ರೋಗಿಗಳು ಸತ್ತು ಹೋದರೂ ಸಹಿತ ಮುಖ್ಯಮಂತ್ರಿಗಳ ನಿಧಿಯಿಂದ ದುಡ್ಡು ಸಿಗುವುದಿಲ್ಲ. ಇವತ್ತು ಬಡವರ ಪರಿಸ್ಥಿತಿ ಅದು. ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ, ಹಣ ಬಿಡುಗಡೆಯಾಗಿಲ್ಲ. ಮನುಷ್ಯರಿಗೆ ಇರಲಿ, ದನಕರುಗಳ ಆಸ್ಪತ್ರೆಗಳಿಗೂ ಸಹಿತ ಈ ಸರ್ಕಾರ, ಆ ಮೂಕ ಪ್ರಾಣಿಗಳಿಗೆ ಬೇಕಾಗಿರತಕ್ಕಂಥ ಔಷಧಿಗಳನ್ನು ಕೊಂಡುಕೊಳ್ಳದೇ ಇರತಕ್ಕ ನಾಚಿಗೆಟ್ಟಿರತಕ್ಕ ಕೆಲಸವನ್ನು ಮಾಡಿದ್ದಾರೆ. ಅದಾದ ಮೇಲೆ ಒಂದು ಸರ್ಕಾರದ ಆಜ್ಞೆಯನ್ನು ಮಾಡಿಸಿದ್ದಾರೆ. ಇವರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದರು. ಶಾಲೆಗಳಲ್ಲಿ ಮಕ್ಕಳ ಡೊನೇಷನ್ ನಾವು ರದ್ದು ಮಾಡುತ್ತೇವೆಂದು ಹೇಳಿದರು. ಡೊನೇಷನ್ ಎಲ್ಲಿ ರದ್ದು ಮಾಡಿದ್ದಾರೆ? ಮಾರ್ಚ್ 14ನೇ ತಾರೀಖು ಒಂದು ಆದೇಶವನ್ನು ಹೊರಡಿಸಿದ್ದಾರೆ. ಶಾಲಾ ಕಟ್ಟಡ, ನಿರ್ಮಾಣ, ವಿಸ್ತರಣೆ, ಕಂಪ್ಯೂಟರ್, ಪ್ರಯೋಗಾಲಯ, ಮತ್ತು 5 ಸಾವಿರ ರೂಪಾಯಿವರೆಗೆ ಶಾಲಾಭಿವೃದ್ಧಿ ಶುಲ್ಕ ಪಡೆಯಲು ಪರವಾನಗಿ ನೀಡಬೇಕು. ಇದು ಸರ್ಕಾರದ ಆಜ್ಞೆ. ಯಾವ ಸರ್ಕಾರ, ಯಾವ ಪಕ್ಷ ಆಡಳಿತಕ್ಕೆ ಬರುವ ಮುನ್ನ ಸಂಪೂರ್ಣವಾಗಿ ಡೊನೇಷನ್‌ನ್ನು ಶಾಲೆಗಳಲ್ಲಿ ರದ್ದುಮಾಡುತ್ತೇವೆಂದು ಹೇಳಿದರು, ಇವತ್ತು ಈ ಆಜ್ಞೆಯನ್ನು ಹೊರಡಿಸಿ, ಆ ಶಾಲೆಯ ಆಡಳಿತ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದಾಯಿತು. ಇವತ್ತು ಭಾರಿ ಮೊತ್ತದ ಪ್ರವೇಶ ಶುಲ್ಕವನ್ನು ವಸೂಲಾತಿ ಮಾಡುತ್ತಿದ್ದಾರೆ. ಪಟ್ಟಣ ಪ್ರದೇಶದಲ್ಲಿ ಅಷ್ಟೇ ಅಲ್ಲ, ತಾಲ್ಲೂಕುಮಟ್ಟದ ಪ್ರದೇಶಗಳಲ್ಲೂ ಸಹಿತ ಇವತ್ತು ಇಂಗ್ಲೀಷ್ ಶಾಲೆಗಳಿಗೆ ಆದ್ಯತೆಯನ್ನು ಕೊಡುತ್ತಿದ್ದಾರೆ. ಇಂಗ್ಲೀಷ್ ಶಾಲೆಗಳಲ್ಲಿ ಡೊನೇಷನ್‌ನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಇವತ್ತು 25-30 ಸಾವಿರ ರೂಪಾಯಿಗಳ ಡೊನೇಷನ್ ಇಲ್ಲದೆ ಅಡ್ಮಿಷನ್ ಸಿಗುವುದಿಲ್ಲ. ಶಿಕ್ಷಣ ಮಂತ್ರಿಗಳು ಬಹಳ ದೊಡ್ಡದಾಗಿ ಆಮೂಲಾಗ್ರ ಕ್ರಾಂತಿ ಮಾಡುತ್ತಾರಂತೆ? ಶಾಲಾ ವೇಳೆಯನ್ನು ಬದಲಾವಣೆ ಮಾಡುತ್ತಾರಂತೆ? ಆದರೆ ಡೊನೇಷನ್‌ನ್ನು ಕಲೆಕ್ಟ್ ಮಾಡಿಕೊಂಡು ಮಾಡುತ್ತಾರಂತೆ? ಈ ಕಾಪಿಯಲ್ಲಿ ಏಕೆ ಹೇಳುವುದಕ್ಕೆ ಹೋದರು. ಡೊನೇಷನ್ ಕಲೆಕ್ಟ್ ಮಾಡುವುದಿಲ್ಲ ಎಂದು? ನಿಮಗೆ ನಾಚಿಕೆಯಾಗುವುದಿಲ್ಲವೇ? ಇದಾದ ಮೇಲೆ ಒ.ಎ.ಪಿ.ಯನ್ನು 100 ರಿಂದ 125 ರೂಪಾಯಿ ಮಾಡುತ್ತಾರಂತೆ. ಇವರು ಬಡವರ ಪರವಾಗಿ ಮಾತನಾಡತಕ್ಕ ಜನ. 100 ರಿಂದ 125 ಮಾಡಿದರು. ಅದಕ್ಕೆ ಪಂಗನಾಮ. ಇನ್ನೂ 4 ವರ್ಷ ಇದೆಯೆಂದು ಹೇಳುತ್ತಾರೆ. ಅದಕ್ಕೆ ನಾವು ಈಗ ಮಾತನಾಡುವ ಹಾಗೆ ಇಲ್ಲ. 4 ವರ್ಷ ಇರಲಿ ಎಂದು ಹೇಳಿ ಸುಮ್ಮನೆಯಾಗತಕ್ಕ ಪರಿಸ್ಥಿತಿ ಬಂದಿದೆ. ಇದಾದನಂತರ, ಶ್ರೀಮಾನ್ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾದ ಮೇಲೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆ ಏನೆಂದರೆ, "ಕೆಂಗಲ್, ಎಸ್.ಎನ್. ಅರಸು ನಮಗೆ ದಾರಿದೀಪ. ಹನುಮಂತಯ್ಯನವರ ಬಿಗಿತನ ನಿಜಲಿಂಗಪ್ಪನವರ ಅನುಕಂಪ, ದೇವರಾಜ ಅರಸು ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆ ನಮಗೆ ದಾರಿದೀಪ. ಇಂತಹ ಆಡಳಿತವನ್ನು ನೀಡಲು ನಾನುಬದ್ಧನಾಗಿದ್ದೇನೆಂದು

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾದ ಎಸ್.ಎಂ.ಕೃಷ್ಣರವರು ಭಾನುವಾರ ರಾಜ್ಯದ ಜನತೆಗೆ ಆಶ್ವಾಸನೆ ನೀಡದರು." ನಂತರ ಮುಂದೆ ಹೋಗಿ ಹೇಳುತ್ತಾರೆ. ಮುಗಿಲು ಮುಟ್ಟಿದ ಭ್ರಷ್ಟಾಚಾರ, ಖಾಲಿಯಾದ ಖಜಾನೆ. ನಮ್ಮ ಸರ್ಕಾರ 1994ರಲ್ಲಿ ಆಡಳಿತಕ್ಕೆ ಬಂದಾಗ, ಪಿಯರ್‌ಲೆಸ್ ಕಂಪನಿಯಿಂದ ಇವರು 244 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದನ್ನು ಮರೆತುಹೋದರು. ವೈಟ್ ಪೇಪರಿನಲ್ಲಿ ಹೇಳಿದ್ದಾರೆ, ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ, ನಮ್ಮ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳುತ್ತಾರೆ. ಅವತ್ತು ಹೇಳುತ್ತಾರೆ, ಖಾಲಿಯಾದ ಖಜಾನೆ. ಅಭಿವೃದ್ಧಿ ಶೂನ್ಯ. ಛಿದ್ರವಾದ ಅಧಿಕಾರ ಶಾಹಿ, ಮುಗಿಲು ಮುಟ್ಟಿದ ಭ್ರಷ್ಟಾಚಾರ, ಇವೆಲ್ಲಾ ನಾವೀಗ ನಿಭಾಯಿಸಬೇಕು. ನಿಭಾಯಿಸುತ್ತಿದ್ದಾರೆ 7 ತಿಂಗಳಲ್ಲಿ. ಸರ್ಕಾರ ಮೋಜು ಮಾಡುವ ದಿನಗಳು ಹೊರಟು ಹೋಗಿವೆ. ಕುರ್ಚಿ ತುಂಬುವುದಕ್ಕಲ್ಲ ಮುಖ್ಯಮಂತ್ರಿಯಾಗುವುದು, ಮುಖ್ಯಮಂತ್ರಿಯಾಗುವುದು, ಮಂತ್ರಿಗಳಾಗುವುದು ಕುರ್ಚಿ ತುಂಬುವುದರಲಿಲ್ಲ ಎಲ್ಲಿ ವಿಧಾನ ಸಭೆಯಲ್ಲಿ, ಬೇರೆ ಕಡೆ ಅಲ್ಲ ಮಾನ್ಯ ಅಧ್ಯಕ್ಷರೇ, ಇವರ ಹೇಳಿಕೆಗಳಲ್ಲಿ ಇವರು ಹೇಳುತ್ತಾರೆ, ಕೆಂಗಲ್‌ಹನುಮಂತಯ್ಯನವರ ಆದರ್ಶವಂತೆ. ದೇವರಾಜು ಅರಸು ಅವರ ಸಾಮಾಜಿಕ ನ್ಯಾಯ, ಎಲ್ಲಿದೆ ಸಾಮಾಜಿಕ ನ್ಯಾಯ? ಏನು ಮಾಡಿದ್ದಾರೆ? ಕಾಗೋಡು ತಿಮ್ಮಪ್ಪನವರು ಇವತ್ತು ಇಲ್ಲ. ನಿಮ್ಮ ಸರ್ಕಾರ ಬಂದು 7 ತಿಂಗಳಾಯಿತು. ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿಯವರು, ಪರಿಶಿಷ್ಟ ಪಂಗಡದವರು, ಇವರ ಹೆಸರಿನಲ್ಲಿ ತಾವು ಅಧಿಕಾರಕ್ಕೆ ಬಂದಿದ್ದೀರಿ. ಈ ವರ್ಗದ ಜನರಿಗೆ ನಿಮ್ಮ ಬಜೆಟ್‌ನಲ್ಲಿ ಏನಾದರೂ ಒಂದು ರೂಪಾಯಿ ಕೊಟ್ಟಿದ್ದೀರಾ? ಹಿಂದುಳಿದ ವರ್ಗದ ಜನರ ಹಾಸ್ಟಲ್‌ಗಳ ಬೋರ್ಡಿಂಗ್ ಫೀಜು ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಿ ಅದನ್ನು ಜಾಸ್ತಿ ಮಾಡಿದ್ದೀರಾ? ಪರಿಶಿಷ್ಟ ಜಾತಿ ಮತ್ತು ಪಂಗಡದವರ ಹಾಸ್ಟಲ್‌ಗಳ ಬಗ್ಗೆ ತಾವು ಇವತ್ತು ಯೋಚನೆ ಮಾಡಬೇಕು ಮಾನ್ಯ ಚಿಮ್ಮನಕಟ್ಟಿಯವರೇ, ತಾವು ಆ ವರ್ಗಕ್ಕೆ ಸೇರಿರತಕ್ಕಂಥವರು. ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗೆ ನಾವು ಅನುಕೂಲ ಮಾಡಿಕೊಡುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಏನು ಮಾಡಿದ್ದೀರಿ ಬಜೆಟ್‌ನಲ್ಲಿ? ಮುಂದಿನ ಬಜೆಟ್ ಇವರು ಮಂಡನೆ ಮಾಡುತ್ತಾರೋ ಇಲ್ಲವೋ ಕಾಂಗ್ರೆಸ್ ವೆಸ್ಟ್ ಬೆಂಗಾಲ್‌ನಲ್ಲಿ ಇವರ ಜೊತೆ ಸೇರಿಕೊಳ್ಳುವುದಕ್ಕೆ ಹೊರಟಿದೆ. ಅದೇನೇನು ಆಗುತ್ತದೆಯೋ, ಯಾರು ಇಲ್ಲಿ ಇರುತ್ತಾರೋ ನಮಗಂತೂ ಗೊತ್ತಿಲ್ಲ. ಆದರೆ ಒಂದಂತೂ ನಾನು ಹೇಳುವುದಕ್ಕೆ ಬಯಸುತ್ತೇನೆ. ನೀವು ಹೇಳಿದಂತೆ ಇದು ಕೆಂಗಲ್‌ರ ಬಿಗಿತನವೂ ಅಲ್ಲ, ಎಸ್.ಎನ್.ರವರ ಮುತ್ಸದ್ದಿತನವೂ ಅಲ್ಲ ಅರಸುರವರ ಸಾಮಾಜಿಕ ಪರಿಕಲ್ಪನೆಯೂ ಅಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ಇವತ್ತು ಮಾನ್ಯ ಹೆಚ್.ಕೆ. ಪಾಟೀಲರು ಈ ಸದನದಲ್ಲಿ ಇಲ್ಲ. ಅವರು ಎಲ್ಲಿ ಹೋಗಿದ್ದಾರೋ ನನಗೆ ಗೊತ್ತಿಲ್ಲ. ಮಾತೆತ್ತಿದರೆ ಮಾನ್ಯ ಅಧ್ಯಕ್ಷರೇ ತಾವು ಆ ಸದನದಲ್ಲಿ ಇರಲಿಲ್ಲ. ಹೈದ್ರಾಬಾದ್ ಕರ್ನಾಟಕ ಏರಿಯಾಗೆ ಅನ್ಯಾಯ ಆಗಿದೆ, ಅನ್ಯಾಯವಾಗಿದೆ ಎಂದು ಹೇಳಿ ಭಾಷಣ ಮಾಡುವವರು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಹೊಸ ಸಹಸ್ರಮಾನದ ಕೊಡುಗೆಗಾಗಿ 20 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದೇನೆ. ಮಂಡಲಿಗೆ ಕನಿಷ್ಟ ಒಂದು ನೂರು ಕೋಟಿ ರೂಪಾಯಿಗಳನ್ನು ಈ ವರ್ಷದ ಮಾರ್ಚಿ ಮುಂಗಡ ಪತ್ರದಲ್ಲಿ ನೀಡುತ್ತೇನೆಂದು ಹೇಳಿದ್ದಾರೆ. ಉತ್ತರ ಕರ್ನಾಟಕದ ಜನತೆಗೆ ಪಂಗನಾಮ. ತಮಿಳುನಾಡಿನವರು 6 ತಿಂಗಳಲ್ಲಿ ಒಂದು ಹೈ ಪೀಠವನ್ನು ತೆಗೆದುಕೊಂಡರು ಕೇಂದ್ರ ಸರ್ಕಾರದಿಂದ. ನಮ್ಮ ಜಗದೀಶ್ ಶೆಟ್ಟರ್ ಅವರು

ಹೋರಾಟವನ್ನು ಮಾಡುತ್ತಲೇ ಇದ್ದಾರೆ. ಎಸ್.ಎಸ್. ಪಾಟೀಲರು ಹೋರಾಟವನ್ನು ಮಾಡುತ್ತಲೇ ಇದ್ದಾರೆ. ನಿನ್ನೆಯ ದಿವಸ ಮದುರೈನಲ್ಲಿ ಹೈಕೋರ್ಟ್ ಪೀಠ ಪ್ರಾರಂಭವಾಗಿದೆ. ತಮಿಳುನಾಡಿನ ಎರಡನೇ ಹೈಕೋರ್ಟ್ ಪ್ರಾರಂಭವಾಗಿದೆ. ಆದರೆ ನಮ್ಮ ಉತ್ತರ ಕರ್ನಾಟಕದ ಜನರ ಧ್ವನಿ ನಿಮಗೆ ಕೇಳುತ್ತಿಲ್ಲ. ಒಂದು ತಿಂಗಳಾಯಿತು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟು, ನಾವೆಲ್ಲರೂ ಹೋಗಿ ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡೋಣ ಎಂದು ಹೇಳಿ, ನಾವೆಲ್ಲರೂ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡೋಣ ಎಂದು ಹೇಳಿದರು. ಆದರೆ ಏನಾಯಿತು? ಏಕೆ ಹೋಗಿಲ್ಲ ಇದುವರೆಗೂ? ತಮಿಳುನಾಡಿನವರು ಹೈಕೋರ್ಟ್ ಬೆಂಚ್ ತೆಗೆದುಕೊಂಡರು. ನಾವು ಇವತ್ತು ಆ ಪ್ರಶ್ನೆಯನ್ನು ಕೇಳುವುದರಲ್ಲಿ ಏನು ತಪ್ಪು ಇದೆ? ದಯವಿಟ್ಟು ಹೇಳಿ, ಹೈದ್ರಾಬಾದ್ ಕರ್ನಾಟಕ ಏರಿಯಾಗೆ ಪಂಗನಾಮ. ನಾನು ಮೊನ್ನೆ ಗುಲ್ಬರ್ಗಕ್ಕೆ ಹೋಗಿದ್ದೇ, ಅಲ್ಲಿನ ಯು.ಕೆ.ಪಿ. ಎಲ್ಲಾ ಕೆಲಸಗಳು ಸ್ಥಗಿತವಾಗಿವೆ. ದಯವಿಟ್ಟು ಹೇಳಿ, ಉತ್ತರ ಕರ್ನಾಟಕದ ಶಾಸಕರು ಇಲ್ಲಿ ಬಂದಿದ್ದೀರಿ. ಕಳೆದ ವರ್ಷ 50 ಲಕ್ಷ ರೂಪಾಯಿಗಳು ಬಿಡುಗಡೆಯಾಗಿತ್ತು. ಇವತ್ತು ಪ್ರತಿ ಕ್ಷೇತ್ರಕ್ಕೂ 15 ಲಕ್ಷ ರೂಪಾಯಿಗಳು ಬಿಡುಗಡೆಯಾಗಿಲ್ಲ. ಮತ್ತೆ ಹೇಳುತ್ತಿದ್ದೀರಿ ನಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳಿ. ಬರೀ ಹೇಳಿಕೆ. ಪತ್ರಿಕೆಗಳಲ್ಲಿ ಇಮೇಜ್ ಬಿಲ್ಡಿಂಗ್ ಏಕ್ಸರ್‌ಸೈಜ್ ನಡೆಯುತ್ತಿದೆ. ಆಲ್ ಇಂಡಿಯಾದಲ್ಲಿ ಇಮೇಜ್ ಬಿಲ್ಡ್ ಎಕ್ಸ್‌ರ್‌ಸೈಜ್ ನಡೆಯುತ್ತಿದೆ. ಕಡತಗಳ ವಿಲೇವಾರಿಗೆ 15 ದಿವಸಗಳ ಗಡವು. ಇದನ್ನು ಹೇಳಿರುವುದು ಯಾವತ್ತು? ಜನವರಿ 20ನೇ ತಾರೀಖು 2000 ಇಸವಿ. ಎಲ್ಲಿ ಕಡತಗಳ ವಿಲೇವಾರಿಯಾಗಿದೆ? ಯಾವ ತಹಶೀಲ್ದಾರ್ ಕಛೇರಿಯಲ್ಲಿ? ಯಾವ ಸೆಕ್ರೆಟರಿಯೇಟ್‌ನಲ್ಲಿ, ಎಲ್ಲಿ ಆಗಿದೆ.? ಕಡತಗಳ ವಿಲೇವಾರಿಗೆ ಮಾನ್ಯ ಮುಖ್ಯಮಂತ್ರಿಗಳು 15 ದಿನಗಳ ಗಡವು ಕೊಟ್ಟುಬಿಟ್ಟರು. ಎಲ್ಲಾ ಬೋಗಸ್ ಗಡವು. ಇದು ಆಯಿತು, ಇದಾದ ನಂತರ ಇನ್ನೊಂದು ಹೇಳಿದ್ದಾರೆ. ರೈತರ ಮೇಲಿನ ಮೊಕದ್ದಮೆಗಳ ವಾಪಸ್ಸಾತಿಗೆ ಕ್ರಮ. ನಮ್ಮ ಸರ್ಕಾರ ಇದ್ದಾಗ ಮಾನ್ಯ ಅಧ್ಯಕ್ಷರೇ, ರೈತರ ಮೇಲೆ ಇದ್ದಂತಹ ಕೇಸ್‌ಗಳನ್ನು ಒಂದೇ ಒಂದು ಸರ್ಕಾರಿ ಆಜ್ಞೆಯಲ್ಲಿ ವಾಪಸ್ಸು ತೆಗೆದು ಕೊಂಡೆವು. ಇವತ್ತು ಹಾಕಿರತಕ್ಕಂತ ಕೇಸ್‌ಗಳನ್ನು ತಾವು ಏಕೆ ವಾಪಸ್ಸು ತೆಗೆದುಕೊಂಡಿಲ್ಲ? ರೈತರು ನಿಮಗೆ ಬೆಂಬಲ ಕೊಟ್ಟಿಲ್ಲವೇ? ತಾವು ವಾಪಸ್ಸು ತೆಗದುಕೊಳ್ಳುವುದಕ್ಕೆ ಆಗದಿದ್ದರೆ ಏಕೆ ತಾವು ಈ ಹೇಳಿಕೆಗಳನ್ನು ಕೊಡುತ್ತೀರಿ? ಇದು ಮುಖ್ಯವಾಗಿ ಆಗಬೇಕಾಗರಿತಕ್ಕಂಥಾದ್ದು. ಇಮೇಜ್ ಬಿಲ್ಡ್ ಎಕ್ಸಸೈಜ್ ಮಾಡುತ್ತಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು. ಇದಾದ ನಂತರ ಇನ್ನೊಂದು ಸ್ಟೇಟ್‌ಮೆಂಟನ್ನು ಇವರು ಕೊಟ್ಟಿದ್ದಾರೆ. ಹೊಸ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳು. ನನ್ನ ದುರಾದೃಷ್ಟ ಇವತ್ತು ನಮ್ಮ ಮಾನ್ಯ ಖರ್ಗೆಯವರು ಇಲ್ಲಿ ಇಲ್ಲಿ ನಮ್ಮ ಪಟೇಲರ ಸರ್ಕಾರದಲ್ಲಿ ರೋಷನ್ ಬೇಗ್ ಅವರು ಗದಗ್‌ನಲ್ಲಿ ಡಿ.ಆರ್.ಪಾಟೀಲರ ನೇತೃತ್ವದಲ್ಲಿ ಮೆರವಣಿಗೆಯನ್ನು ಮಾಡಿದರು. ಗದಗಿನ ಜನ. ಆ ಮೆರವಣಿಗೆಯಲ್ಲಿ ಮಾನ್ಯ ಗೃಹಸಚಿವರಾಗಿ ಇದ್ದಂತಹ ರೋಷನ್ ಬೇಗ್ ಅವರು ಬಂದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಖರ್ಗೆಯವರು ಹೇಳಿದರು. ಯಾದಗಿರಿಯನ್ನು ಏಕೆ ಜಿಲ್ಲೆಯನ್ನಾಗಿ ಮಾಡಲಿಲ್ಲ ಎಂದು ಹೇಳಿ. ಈಗ ತಾವು 8ನೇ ಜಿಲ್ಲೆಯನ್ನು ಮಾಡಿ ನಾವು ನೋಡುತ್ತೇವೆ. ನಾವಂತೂ 7 ಜಿಲ್ಲೆಗಳನ್ನು ಮಾಡಿದೆವು. ಕೊನೆಯ ಪಕ್ಷ ನೀವು 8ನೇ ಜಿಲ್ಲೆಯನ್ನು ಮಾಡಿ. ತಾವು 8ನೇ ಜಿಲ್ಲೆಯನ್ನು ಮಾಡುವುದು ಇರಲಿ, ಈ 7 ಜಿಲ್ಲೆಗಳಿಗೂ

ವಿಶೇಷ ಯೋಜನೆಯನ್ನು ಮಾಡುತ್ತೇವೆಂದು ಹೇಳಿದರು. ಯಾವಾಗ ಹೇಳಿದ್ದು ಇವರು ಬಳ್ಳಾರಿ ಲೋಕಸಭಾ ಮರು ಚುನಾವಣೆಯ ಸಂದರ್ಭದಲ್ಲಿ ಯಾವ ಸಂದರ್ಭ? ಕಾಂಗ್ರೆಸ್ ಅಭ್ಯರ್ಥಿಯ ಪರ ಪ್ರಚಾರ. ಆಗ ಒಂದು ಬಹಿರಂಗ ಸಭೆ. ಹೊಸ ಜಿಲ್ಲೆಗಳು ರಚನೆಯಾಗಿ ಎರಡು ವರ್ಷಗಳು ಕಳೆದಿದ್ದರೂ ಸಹ ಏನೂ ಆಗಿಲ್ಲ. ಈಗ ಇವರು ಎಲ್ಲಾ ಮಾಡಿದ್ದಾರೆ. ಈಗ ಎಲ್ಲಾ ಯೋಜನೆಗಳನ್ನು ತಯಾರು ಮಾಡಿದ್ದೇನೆಂದು ಹೇಳಿದ್ದಾರೆ. ಇವರು ಮಾಡಿರತಕ್ಕಂಥ ಬಜೆಟ್‌ನಲ್ಲಿ ಒಂದು ರೂಪಾಯಿಗಳನ್ನು ಹೊಸ ಜಿಲ್ಲೆಗಳ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದಾರಾ? ಇದನ್ನು ನಾನು ಕೇಳುತ್ತಿರುವುದು. ಇದಾದ ಮೇಲೆ ಇವರು ಹೇಳಿಕೆಗಳನ್ನು ಬಹಳ ಚೆನ್ನಾಗಿ ಕೊಡುತ್ತಾರೆ. ಇವರ ಪ್ರೆಸ್ ಸೆಕ್ರೆಟರಿ ಯಾರೋ ನನಗೆ ಗೊತ್ತಿಲ್ಲ. ಬಹಳ ಚೆನ್ನಾಗಿ ಮ್ಯಾನೇಜ್ ಮಾಡುತ್ತಿದ್ದಾರೆ. C.M. Urges Ministers to delare Assets. ಏಕೆ ಲೋಕಾಯುಕ್ತ ಇಲ್ಲವೇ? ಜೂನ್ 30ನೇ ತಾರೀಖಿನ ಒಳಗಡೆ ತಮ್ಮ ಮೂಲಕವಾಗಿ, ತಮ್ಮ ಕಾರ್ಯದರ್ಶಿ ಮೂಲಕವಾಗಿ ಇಲ್ಲಿರತಕ್ಕಂಥಾ ಎಲ್ಲಾ ಶಾಸಕರುಗಳು ಎಲ್ಲಾ ಮಂತ್ರಿಗಳು ಲೋಕಾಯುಕ್ತಕ್ಕೆ ರಿಟರ್ನ್ಸ್ ಫೈಲ್ ಮಾಡಬೇಕೆನ್ನುವ ನಿಯಮ ಇಲ್ಲವೇ? ನಿಯಮ ಇದೆ. ಆದರೂ ಏಕೆ ಈ ಸೆಟ್ಟ್‌ಮೆಂಟ್ ಬೇಕಾಗಿತ್ತು. ಇನ್‌ಕಮ್ ಟ್ಯಾಕ್ಸ್ ಕಟ್ಟುವುದಿಲ್ಲವೇ ನಾವು ಆದಾಯ ಇದ್ದರೆ. ಏಕೆಂದರೆ ಇಮೇಜ್ ಬಿಲ್ಡ್ ಎಕ್ಸರ್‌ಸೈಜ್. ಹಾಗಾದರೆ ನಾನು ಇವತ್ತು ಒತ್ತಾಯ ಮಾಡುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಗಳಿಗೆ, ಎಷ್ಟು ಜನ ತಮ್ಮ ಸಹೋದ್ಯೋಗಿ ಮಂತ್ರಿಗಳು ತಮ್ಮ ಆಸ್ಸೆಟ್ಸ್‌ನ್ನು ಡಿಕ್ಲೇರ್ ಮಾಡಿದ್ದಾರೆ. ಇದು ಗೊತ್ತಾಗಬೇಕಲ್ಲ ರಾಜ್ಯದ ಜನತೆಗೆ. ಇಮೇಜ್ ಬಿಲ್ಡ್ ಎಕ್ಸರ್ ಸೈಜ್ ಆದರೆ ಆಗಲಿಲ್ಲವಲ್ಲ ಸ್ವಾಮಿ. ಅದ್ದರಿಂದ ಮಾನ್ಯ ಅಧ್ಯಕ್ಷರೇ ಇವರು ಹೇಳುವುದು ಒಂದು ಮಾಡುವುದು ಒಂದು. It should be made public ಅದು ಎನು ಹೇಳಿದ್ದಾರೆ ಮಾನ್ಯ ಬಿ.ಕೆ. ಚಂದ್ರಶೇಖರ್ ಅವರ ಒಂದು ಹೇಳಿಕೆ. ಮಾನ್ಯ ಬಿ.ಕೆ. ಚಂದ್ರಶೇಖರ್ ಅವರು ಪ್ರಚಾರ ಇಲಾಖಾ ಮಂತ್ರಿಗಳು. ಬಹುಶಃ ಅವರಿಗೆ ಅಸಮಧಾನವಿರಬೇಕು. ನನಗೆ ಮಂತ್ರಿಮಂಡಲದಲ್ಲಿ ಸರಿಯಾದ ಖಾತೆ ಕೊಡಲಿಲ್ಲ ಎಂದು ಹೇಳಿ ಅವರು ಬರುವುದೇ ಇಲ್ಲ. ಬಂದರೂ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ While setting of no deadline ಅಂದರೆ 5 ವರ್ಷಗಳ ಕೊನೆಯಲ್ಲಿಯೂ ನೀವು ಕೊಡಬಹುದು.

``Deadline of the details - Krishna said that the Ministers were expected to bring the details to his notice. This is in addition to the statutory obligation of declaring assets to the Lok Ayukta." ಏಕೆ ಸ್ವಾಮಿ ಇನ್ನೂ ನೀವು ಅಸ್ಸೆಟ್ಸ್ ಡಿಕ್ಲೇರ್ ಮಾಡಿಲ್ಲ? ಇದು ನಿಮ್ಮ ಆಡಳಿತ ವೈಖರಿ. ಹೇಳುವುದು ಒಂದು ಮಾಡುವುದು ಒಂದು ನಿಮ್ಮ ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಒತ್ತು ಕೊಟ್ಟಿದ್ದೀರಿ. ಇಡೀ ರಾಷ್ಟ್ರದಲ್ಲಿ ಹೈಟೆಕ್ ಮುಖ್ಯಮಂತ್ರಿಗಳು ನೀವು. ಮಂತ್ರಿಗಳು ನೀವು. ಸ್ವಾಗತಾರ್ಹ. ಆದರೆ ನೀವು ಕೊಟ್ಟಿರುವ ಹೇಳಿಕೆಗಳು ನಾನು ನಮ್ಮ ವೈ.ಕೆ. ರಾಮಯ್ಯನವರ ಬಗ್ಗೆ ಸಿಟ್ಟು ಇಲ್ಲ, ಬಹಳ ಅಭಿಮಾನ ಇದೆ. ತಾವು ಅಧಿಕಾರಕ್ಕೆ ಬಂದು 7 ತಿಂಗಳಾಯಿತು. ಎಷ್ಟು ಜಿಲ್ಲೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿಯನ್ನು ಕೊಟ್ಟಿದ್ದಾರೆ. ಎಷ್ಟು ಕಡೆ ರಿವ್ಯೂ ಮಾಡಿದ್ದಾರೆ. ಬೆಳಗಾಂಗೆ ಹೋಗುತ್ತಾರೆ ಆಡಳಿತವನ್ನು ರಿವ್ಯೂ ಮಾಡುವುದಕ್ಕೆ ಅರ್ಧ ಗಂಟೆಯಲ್ಲಿ ರಿವ್ಯೂ ಮುಗಿಸುತ್ತಾರೆ. ಇಲ್ಲೇ ತಾವು ಶಾಸಕರುಗಳು ತಮ್ಮ ಆತ್ಮಸಾಕ್ಷಿಯಾಗಿ ಮಾತನಾಡಿ. ಯಾವ

ಯಾವ ಜಿಲ್ಲೆಗೆ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿದ್ದಾರೆ. ಯಾವ ಯಾವ ಜಿಲ್ಲೆಯ ಆಡಳಿತವನ್ನು ರಿವ್ಯೂ ಮಾಡಿದ್ದಾರೆ. ಏಕೆ ಮಾಡಿಲ್ಲ. ಇದು ಇವರ ಜವಾಬ್ದಾರಿ ಅಲ್ಲವೇ? ಅದನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ. ನೀವು ಜಿಲ್ಲೆಗಳ ಸಮಸ್ಯೆಯನ್ನು ತಿಳಿದುಕೊಳ್ಳುವುದಕ್ಕೆ ಎಷ್ಟು ಸಮಯವನ್ನು ಕೊಟ್ಟಿದ್ದೀರಿ? ಜಿಲ್ಲಾ ಪಂಚಾಯತಿ ಆಡಳಿತ. ಜಿಲ್ಲಾಧಿಕಾರಿಗಳ ಆಡಳಿತ. ಜಿಲ್ಲೆಯ ಕಾನೂನಿನ ವ್ಯವಸ್ಥೆ. ಇದನ್ನು ವಿಚಾರ ಮಾಡುವುದಕ್ಕೆ ನಿಮಗೆ ವೀಡಿಯೋ ಕಾನ್ಫರೆನ್ಸ್ ಸಾಕಾ? ವೀಡಿಯೋ ಕಾನ್ಫರೆನ್ಸ್ ಬಗ್ಗೆ ನನ್ನ ಸಹೋದ್ಯೋಗಿ ಮಿತ್ರರಾದ ಶ್ರೀನಿವಾಸ ಗೌಡರು ಹೇಳಿದರು. ಕೋಲಾರದ ಜನರಿಗೆ ಕುಡಿಯುವ ನೀರಿನ ತೊಂದರೆ ಇದೆ ಎಂದು ಹೇಳಿ. ನಮ್ಮ ಬೀದರ್ ಶಾಸಕರು ನಿನ್ನೆಯಿಂದ ಕಾಯುತ್ತಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಗುಬ್ಬಚ್ಚಿಗಳು ಕುಡಿಯುವುದಕ್ಕೆ ನೀರು ಇಲ್ಲ ಎಂದು ಹೇಳಿ. ವೀಡಿಯೋ ಕಾನ್ಫರೆನ್ಸ್‌ನಲ್ಲಿ ಇದನ್ನು ಹೇಳುವುದಿಲ್ಲವೇ? ನಿಮ್ಮ ಡಿ.ಸಿ. ಗಳು ಏನು ಹೇಳುತ್ತಾರೆ ಅಲ್ಲಿ ವೀಡಿಯೋ ಕಾನ್ಫರೆನ್ಸ್‌ಗೆ ಇನ್‌ಫರ್‌ಮೇಷನ್ ಕೊಡುವಾಗ ಎವರಿ ಥಿಂಗ್ ಇಜ್ ಫೈನ್ ಸಾರ್ ಎಂದು ಹೇಳುತ್ತಾರೆ. ಅವರನ್ನು ಏನಾದರೂ ಕೇಳಿ ಎಲ್ಲಾ ಫೈನ್. ತಾವು ಎಷ್ಟೇ ವೀಡಿಯೋ ಕಾನ್ಫರೆನ್ಸ್ ಮಾಡಿದರೂ ಸಹ ತಾವು ಆ ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಅವರ ಕುರ್ಚಿಯಲ್ಲಿ ಕುಳಿತು ನೀವು ಮುಖ್ಯಮಂತ್ರಿಗಳಾಗಿರುವವರು ಕೇಳಬೇಕು, ಏಕೆ ತಾವು ಮಾಡಿಲ್ಲ, ತಮಗೆ ದುಡ್ಡಿನ ತೊಂದರೆ ಇದೆಯೇ ಇವತ್ತು ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಇದೆ. ಸೀಮೆ ಎಣ್ಣೆ ವಿತರಣೆ, ಅಕ್ಕಿ, ಗೋಧಿ, ಜೋಳದ ವಿತರಣೆ, ಇದೊಂದು ಆಯಿತು, ಆಮೇಲೆ ಎಲ್.ಓ.ಸಿ. ಬಿಡುಗಡೆ. ನಾವು ಇಲ್ಲೇ ಪ್ರಾಮಾಣಿಕವಾಗಿ ಮಾತನಾಡೋಣ. ಇವೊತ್ತು 350 ಕೋಟಿ ರೂಪಾಯಿಗಳ ಬಿಲ್‌ಗಳು ಬಿಡುಗಡೆಗಾಗಿ ಬಾಕಿ ಇದೆ. ಇವರು ಮೊನ್ನೆ ಇರಿಗೇಶನ್ ಡಿಪಾರ್ಟ್‌ಮೆಂಟ್‌ಗೆ ಎಲ್‌ಓಸಿ ಬಿಡುಗಡೆ ಮಾಡಿರುವುದು 35ಕೋಟಿ ರೂಪಾಯಿಗಳು ಮಾತ್ರ. ಹಾಗೆಯೇ ಬಾಕಿ ಡಿಪಾರ್ಟ್‌ಮೆಂಟ್‌ಗಳಿಗೆ 30ಕೋಟಿ ರೂಪಾಯಿಗಳ ಮಾತ್ರ. ಮಾನ್ಯ ನೀರಾವರಿ ಸಚಿವರು ಹೋಗಿ ಒಬ್ಬ ಡೆಪ್ಯುಟಿ ಸೆಕ್ರೆಟರಿಯವರನ್ನು ಸಸ್ಪೆಂಡ್ ಮಾಡಿದ ಬಗ್ಗೆ ಇಲ್ಲಿ ಎಕ್ಸ್‌ಪ್ಲೈನ್ ಮಾಡಬೇಕು. ಇವರು ಹೇಳಿದವರಿಗೆ ಎಲ್‌ಓಸಿ ಕೊಡಲಿಲ್ಲ ಎಂದು ಹಾಗೆ ಮಾಡಿರಬೇಕು. ಹಾಗೆ ಹೇಳಲು ಇವರು ಯಾರು? ಇವರಿಗೆ ಏನು ಅಧಿಕಾರ ಇದೆ? ಎಲ್‌ಓಸಿ ಬಿಡುಗಡೆ ಮಾಡಲು ಈ ಸದನಕ್ಕೆ ಮಾತ್ರ ಅಧಿಕಾರ ಇರತಕ್ಕಂಥಾದ್ದು. ಅದು ಮಂತ್ರಿಗಳಿಗೆ ಅಲ್ಲ. ಇಂಥ ಕಂಟ್ರಾಕ್ಟ್‌ದಾರರಿಗೆ ಕೊಡಬೇಕೆಂದು ಬೈನೇಮ್ ಹೇಳಿದ್ದಾರೆ. ಸಂಯುಕ್ತ ಕರ್ನಾಟಕ ಪತ್ರಿಕೆಯು ನಮ್ಮ ರಾಜ್ಯದಲ್ಲಿನ ಒಂದು ಪ್ರಮುಖವಾದಂಥ ಪತ್ರಿಕೆ. ಅದರಲ್ಲಿ ಬರೆದಿದ್ದಾರೆ. "ಮಾರ್ಚ್ 29 ರಿಂದ ಏಪ್ರಿಲ್ 5ನೇ ತಾರೀಖಿನತನಕ ಯುಕೆಪಿಯಲ್ಲಿ ಕೊಟ್ಟವನು ಕೋಡಂಗಿ, ಇಸ್ಕೊಂಡವನು ವೀರಭದ್ರ- ಬಿಲ್‌ಗಳಾಗಿವೆ" - ಎಂದು ಹೇಳಿ.... ಏಕೆ ಸ್ವಾಮಿ ಹೀಗೆ? ಇದು ಇವರ ಪಾರದರ್ಶಕ ಆಡಳಿತ, ಈ- ಮೈಲ್ ಆಡಳಿತ, ಎಲೆಕ್ಟ್ರಾನಿಕ್ಸ್ ಗವರ್ನಮೆಂಟ್, ವಿಡಿಯೋ ಕಾನ್‌ಫರೆನ್ಸ್, ಎಂದೆಲ್ಲಾ ಹೇಳುತ್ತೀರಿ? ಹಾಗಾದರೆ ಇದರ ಮೂಲಕ ಆಯಾಯ ತಿಂಗಳ ಬಿಲ್‌ನ್ನು ಅವೊತ್ತೇ ಕ್ಲಿಯರ್ ಮಾಡಲು ಏತಕ್ಕಾಗಿ ಆಗಲಿಲ್ಲ? ನೀವು ಸುಧಾರಣೆಗಳನ್ನು ಮಾಡಿರುವುದಾದರೂ ಏನು? ಕಳೆದ ಏಳು ತಿಂಗಳುಗಳಲ್ಲಿ ತಾಲ್ಲೂಕುಗಳಲ್ಲಿ ಆಗಿರತಕ್ಕಂಥ ಆಡಳಿತ ಸುಧಾರಣೆಗಳನ್ನು ದಯವಿಟ್ಟು ತಿಳಿಸಿರಿ. ನಿಮ್ಮ ಪಕ್ಷದ ಶಾಸಕರುಗಳನ್ನೇ ಕೇಳಿ. ನಿಮ್ಮ ಪಕ್ಷದ ಕಾರ್ಯಕರ್ತರನ್ನು ಕೇಳಿ. ನಿಮ್ಮ ಕಾರ್ಯಕರ್ತರು ಜಾತಕಪಕ್ಷಿಗಳ ಹಾಗೆ

ಕಾಯುತ್ತಾ ಇದ್ದಾರೆ. ಎಲ್ಲಾದರೂ ಒಂದು ಅವಕಾಶ ಸಿಗಬಹುದು ಎಂದು ಅವರ ನಿರೀಕ್ಷೆ ಇತ್ತು. ಲ್ಯಾಂಡ್ ಟ್ರಿಬ್ಯೂನಲ್ ಮಾಡಿ ಅಂದರೆ ಇನ್ನೂ ಮಾಡಿಲ್ಲ. ಲ್ಯಾಂಡ್‌ಗ್ರಾಂಟ್ ಕಮಿಟಿ ಅಂದರೆ ಇನ್ನೂ ಮಾಡಿಲ್ಲ. ಆರಾಧನಾ ಸಮಿತಿಯನ್ನು ಇನ್ನೂ ಮಾಡಿಲ್ಲ. ಅವರು ಹೊಳೆನರಸೀಪುರ ಬೆಂಗಳೂರು ಆದರೆ, ಇವರು ಚೆನ್ನರಾಯಪಟ್ಟಣ ಬೆಂಗಳೂರು ಆಗಿ ಬಿಟ್ಟಿದ್ದಾರೆ. ನಾವು ಏನು ಮಾಡುವುದು? ನಿಮ್ಮಲ್ಲಿನ ಎಷ್ಟು ಜನ ಜಿಲ್ಲಾ ಮಂತ್ರಿಗಳು ಅವರವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇರೆ ಜಿಲ್ಲೆಗಳಿಗೆ ಹೋಗಿ ರಿವ್ಯೂ ಮಾಡಿದ್ದಾರೆ? ಅದನ್ನು ದಯವಿಟ್ಟು ಹೇಳಬೇಕು. ಅದನ್ನು ಸದನದಲ್ಲಿ ಸಬ್‌ಮಿಟ್ ಮಾಡಲಿ. ಇವೊತ್ತು ಕೊಡಗು ಜಿಲ್ಲೆಗೆ ಮೂರು ಜನ ಮಂತ್ರಿಗಳು. ಗುಲ್ಬರ್ಗ ಜಿಲ್ಲೆಯಲ್ಲಿ ಖರ್ಗೆಯವರು, ಧರ್ಮಸಿಂಗ್‌ರವರು ಆಲ್ಟರ್‌ನೇಟಿವ್ ಲೀಡರ್‌ಶಿಪ್ ಆಗಿ ಬೆಳೆದುಬಿಡುತ್ತಾರೆ. ಅಲ್ಲಿಗೆ ಏಳು ಜನ ಮಂತ್ರಿಗಳು. ಅಲ್ಲಿ ಮಂತ್ರಿಗಳಿಗೆ ಬರ ಇರಬಾರದು ಎಂದು. ಮೊನ್ನೆ ನಾನು ಗುಲ್ಬರ್ಗಕ್ಕೆ ಹೋಗಿದ್ದೆ. ಅಲ್ಲಿನ ಡಿಸಿ ಮತ್ತು ಡಿವಿಸಿ ಯವರನ್ನು ನೋಡಿ ನನಗೆ ದುಃಖವಾಯಿತು. ನನಗೆ ಒಳ್ಳೆಯ ರೂಮ್ ಕೊಡಲಿಲ್ಲ ಎಂದು ಬೇಜಾರು ಮಾಡಿಕೊಳ್ಳಬೇಡಿ ಎಂದು ಹೇಳಿದರು. ನಾನು ಯಾವುದೇ ಒಂದು ರೂಮ್ ಕೊಡಿ ಎಂದು ಹೇಳಿ, ಕೊಟ್ಟ ರೂಮ್‌ನಲ್ಲಿದ್ದೆ. ಅಲ್ಲಿ ಎಲ್ಲಿ ನೋಡಿದರೂ ಕುಂಯ್ ಕುಂಯ್.. ಎಂದು ಕೆಂಪುದೀಪದ ಕಾರುಗಳೇ ಓಡಾಡುತ್ತಿರುತ್ತವೆ. ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬರನ್ನು ಮಂತ್ರಿಗಳಾಗಿ ಮಾಡಿ ಬಿಟ್ಟಿದ್ದಾರೆ. ಏಕೆಂದರೆ ಇವರನ್ನು ಅಂಡರ್‌ಮೈನ್ ಮಾಡಬೇಕು.., ಇವರು ಆಲ್ಟರ್‌ನೇಟಿವ್ ಪೊಲಿಟಿಕಲ್ ಫೋರ್ಸ್ ಆಗಿ ಬೆಳೆಯಬಾರದು. ಇದು ಒಂದು ಸಮಗ್ರವಾಗಿ ಯೋಚನೆ ಮಾಡಿರತಕ್ಕಂಥ ಸರಕಾರವಲ್ಲಿ, ಇವೊತ್ತು ನಿಮ್ಮ ಮಂತ್ರಿಗಳೆಲ್ಲರೂ ಪ್ರಾರಂಭದಲ್ಲಿ ಎಲ್ಲಾ ಇನ್‌ಸ್ಪೆಕ್ಷನ್ ಮಾಡುತ್ತೇವೆ ಎಂದು ಹೇಳಿದರು. ಶ್ರೀಮತಿ ನಫೀಜಾ ಫಜಲ್‌ರವರು ಎಲ್ಲಾ ಆಸ್ಪತ್ರೆಗಳಿಗೆ ಹೋಗಿ ಬಂದರು. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಎಲ್ಲಾ ನೀರಾವರಿ ಯೋಜನೆಗಳನ್ನು ಹೆಲಿಕಾಪ್ಟರ್‌ನಲ್ಲಿ ಹೋಗಿ ನೋಡಿ ಓಡಾಡಿಕೊಂಡು ಬಂದರು. ಆ ಮೇಲೆ ಇನ್‌ಸ್ಪೆಕ್ಷನ್‌ಗಳು ನಿಂತೇ ಹೋದುವು. ಏಕೆ? ನಿಮ್ಮ ಮಂತ್ರಿಗಳಲ್ಲಿ ಸಾಮರಸ್ಯ ಇಲ್ಲ. ನಮ್ಮ ಶಿಕ್ಷಣ ಸಚಿವರಿಗೂ ನಮ್ಮ ರೇಷ್ಮೆ ಮಂತ್ರಿಗಳಿಗೂ ಆಗುತ್ತಾ ಇರತಕ್ಕಂಥ ಕೋಳಿ ಜಗಳ. ಈ ಕೋಳಿ ಜಗಳಕ್ಕೆ ಏನಾದರೂ ಅರ್ಥವಿದೆಯೇ? ಈ ಕೋಳಿ ಜಗಳವನ್ನು ಬಗೆಹರಿಸಲು ಪುರೋಹಿತ್ಯಕ್ಕೆ ಮಾನ್ಯ ಮುಖ್ಯಮಂತ್ರಿಗಳು. ಇದು ಜಾತಿ ಜಗಳವೆ? ಅಥವಾ ಅಧಿಕಾರಕ್ಕೋಸ್ಕರವೆ?

ಅಧ್ಯಕ್ಷರು: ಒಳ್ಳೆಯ ಮಾತುಗಳನ್ನು ಉಪಯೋಗಿಸಿ ಭಾಷಣ ಮಾಡಿ...

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದು ಜಾತಿ ಜಗಳವೇ? ಅಧಿಕಾರಕ್ಕಾಗಿಯೇ? ಅಥವಾ ಒಣಪ್ರತಿಷ್ಠೆಯೇ? ಇದನ್ನು ದಯವಿಟ್ಟು ಹೇಳಬೇಕು. ಹೀಗೆ ಶಿಕ್ಷಣ ಸಚಿವರಿಗೂ ರೇಷ್ಮೆ ಸಚಿವರಿಗೂ ಜಗಳವಾಯಿತು. ರಾಜ್ಯದ ಶಿಕ್ಷಣ ಸಚಿವ ವಿಶ್ವನಾಥ ತಮ್ಮ ಸಹೋದ್ಯೋಗಿಯ ಬಗ್ಗೆ ಮಾಡಿರು ಪತ್ರಿಕಾ ಗೋಷ್ಠಿಯಲ್ಲಿನ ವ್ಯಂಗ್ಯದ ಬಗ್ಗೆ ಜವುಳಿ ಮಂತ್ರಿಗಳು ಹೇಳುತ್ತಾರೆ, "ಸರ್ಕಾರಿ ಶಾಲೆಗಳ ಬಡ ಮಕ್ಕಳಿಗಾಗಿ ಇಲಾಖೆ ಪ್ರತಿವರ್ಷವೂ 34 ಕೋಟಿ ರೂಪಾಯಿಗಳಿಂದ 40 ಕೋಟಿ ರೂಪಾಯಿಗಳವರೆಗೂ ಬಟ್ಟೆ, ಸಮವಸ್ತ್ರ ಕೊಳ್ಳುತ್ತಾ ಬಂದಿದೆ, ರಾಜ್ಯ ಸರ್ಕಾರ ಸ್ವಾಮ್ಯದ ಕೈಮಗ್ಗ ನಿಗಮವು ಇದನ್ನು ಸರಬರಾಜು ಮಾಡುತ್ತಾ ಬಂದಿದೆ, ಈ ಪೂರೈಕೆಯಲ್ಲಿ

ಏನಾದರೂ ಲೋಪದೋಷಗಳಿದ್ದರೆ ಅದನ್ನು ನನ್ನೊಂದಿಗೆ ಅಥವಾ ಸಚಿವಸಂಪುಟದ ಸಭೆಯಲ್ಲಿ ಚರ್ಚಿಸ ಬಹುದಾಗಿತ್ತೇ ವಿನಹ ವಿರೋಧ ಪಕ್ಷದ ನಾಯಕರ ರೀತಿಯಲ್ಲಿ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಸರ್ಕಾರದ ನಿರ್ಧಾರ ಎನ್ನುವ ರೀತಿಯಲ್ಲಿ ಮನಸ್ಸಿಗೆ ಬಂದಹಾಗೆ ಟೀಕೆ ಮಾಡಿದ್ದಾರೆ." - ಎಂದು ಇಲ್ಲಿ ಹೌಸ್‌ನಲ್ಲಿ ಬಂದು ಹೇಳುತ್ತಾರೆ. ಇವರಿಗೇನೂ ವ್ಯತ್ಯಾಸವೇ ಇಲ್ಲದಂತೆ, ಆ ಮೇಲೆ ಚೀಫ್‌ಮಿನಿಸ್ಟರ್‌ರವರು ಇವರುಗಳಿಗೆ ವಾರ್ನ್ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ, ಆಗ ನಾನು ಪುರೋಹಿತರು ಎನ್ನುವ ಶಬ್ದವನ್ನು ಸಮಜಾಯಿಷಿ ಮಾಡುವವರು ಎನ್ನುವ ಅರ್ಥದಲ್ಲಿ ಹೇಳಿದ್ದೆ. ಬೇರೆ ಯಾವ ದೃಷ್ಟಿಯಿಂದಲೂ ಅದನ್ನು ನಾನು ಹೇಳಲಿಲ್ಲ. ತಾವುಗಳು ಆ ಶಬ್ದವನ್ನು ಬಳಸಬೇಡಿ ಎಂದು ಹೇಳಿದ್ದೀರಿ. ಇದು ಪೇಪರ್‌ನಲ್ಲಿ ಬಂದಿರುವುದು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ. "On direction from Chief Minister S.M. Krishna a compromise was arrived". ಇದರಿಂದ ಆಡಳಿತದ ಮೇಲೆ ಆಗತಕ್ಕಂಥ ದುಷ್ಪರಿಣಾಮಗಳು ಏನು? What is the signal you are giving to the people? we would like to know. ಇದು ಒಟ್ಟಾರೆ ಸಚಿವರುಗಳ ಬೀದಿ ಜಗಳ. ಪತ್ರಿಕೆಗಳಲ್ಲಿ ಎಡಿಟೋರಿಯಲ್‌ನಲ್ಲಿ ಬಂದಿರುವುದು. ಇದಾದ ಮೇಲೆ ನಿನ್ನೆ ಒಂದು ವಿಚಾರ ಬಂದಿರುವುದು ತಮ್ಮ ಗಮನಕ್ಕೂ ಬಂದಿರಬಹುದು. ಅದಕ್ಕಾಗಿ ವಿಶ್ವನಾಥ್‌ರವರಿಗೆ ಬಹಳ ಬೇಸರವಾಗಿದೆ. ಮುಖ್ಯಮಂತ್ರಿಗಳು ಡೈರೆಕ್ಷನ್ಸ್ ಕೊಟ್ಟಿದ್ದಾರೆ. ಯಾವುದೇ ಫೈಲ್‌ಗಳನ್ನು ನೇರವಾಗಿ ನನಗೆ ಕಳುಹಿಸಬೇಕೆಂದು ಹೇಳಿದ್ದಾರೆ. ಶಿಕ್ಷಣ ಮಂತ್ರಿಗಳು ಎಸ್.ವಿ. ರಂಗನಾಥ್ ಹತ್ತಿರ ಹೋಗುತ್ತಾರೆ. ಎಸ್.ವಿ. ರಂಗನಾಥ್ ಹೇಳುತ್ತಾರೆ. "What can I do? I am only a humble servant here. Hon'ble Chief Minister has given me the direction not to send the files". ಇದು ಅವರು ಹೇಳಿರುವುದು. ಇದು ಇವರ ಆಡಳಿತದಲ್ಲಿ ಮಂತ್ರಿಗಳಲ್ಲಿರತಕ್ಕಂಥ ಸಾಮರಸ್ಯ. ಮಂತ್ರಿಮಂಡಳದಲ್ಲಿರತಕ್ಕಂಥ ಸಾಮರಸ್ಯ. ಇದಾದನಂತರ ಮಾನ್ಯ ಕಂದಾಯ ಮಂತ್ರಿಗಳು. ಅವರು ದಯಮಾಡಿ ಈ ಸದನಕ್ಕೆ ತಿಳಿಸೇಕು. ಕೇಂದ್ರ ಸರಕಾರಕ್ಕೆ ಮಳೆ ಹಾನಿಯಿಂದ 280 ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂಬ ಮೆಮೊರ್ಯಾಂಡಮ್‌ನ್ನು ಕೊಟ್ಟಿದ್ದೇವೆ ಎಂದು ತಾವುಗಳು ಹೇಳಿದ್ದೀರಿ. ಕೇಂದ್ರ ಸರಕಾರದವರು ಏನು ಮಾಡಿದ್ದಾರೆ? ನೀವು ಯಾವ ಜಿಲ್ಲೆಗೆ ಹೋಗಿದ್ದೀರಿ? ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದೀರಿ? ನಮ್ಮ ಕ್ಷೇತ್ರಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಿನ್ನೂ ಕೆಲಸ ಶುರುವಾಗಿಲ್ಲ. ಈಗಾಗಲೇ ಇನ್ನೊಂದು ಮಳೆಗಾಲ ಶುರುವಾಗಿದೆ. ಹೋದ ಮಳೆಗಾಲದ ನಷ್ಟಕ್ಕೆ ಇನ್ನೂ ರಿಪೇರಿಯಾಗಿಲ್ಲ, ಆಗಲೇ ಇನ್ನೊಂದು ಮಳೆಗಾಲ ಶುರುವಾಗಿದೆ. ಇದು ನಿಮ್ಮ ಆಡಳಿತದ ವೈಖರಿ. ಅದಕ್ಕಾಗಿಯೇ ನಾನು ಕೇಂದ್ರ ಸರಕಾರದವರು ಈ ಬಗ್ಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಕೇಳುತ್ತಿದ್ದೇನೆ. ನೀವು ಎಷ್ಟು ಇದಕ್ಕಾಗಿ ಕೊಟ್ಟಿದ್ದೀರಿ? ಇದರ ಬಗ್ಗೆ ತಾವುಗಳು ಹೇಳಬೇಕು.

ಇನ್ನೂ ಆಶ್ರಯ ಮನೆಯ ವಿಚಾರದಲ್ಲಿ 1999-2000ನೇ ಇಸವಿಗೆ ಫಲಾನುಭವಿಗಳು ಯಾರು ಎಂದು ಹೋದ ಸರಕಾರದವರು ನಿಗದಿ ಮಾಡಿರುವುದರಿಂದ ಆ ಹಣವನ್ನು ನೀವು ಬಿಡುಗಡೆ ಮಾಡಿಲ್ಲವೆ? ಯಾವ ಕಾರಣಕ್ಕಾಗಿ ಆ ಹಣವನ್ನು ಬಿಡುಗಡೆ ಮಾಡಿಲ್ಲ? ಅಂಬೇಡ್ಕರ್ ಮನೆಗಳ ದುಡ್ಡು ಸ್ವಲ್ಪ ಬಿಡುಗಡೆಯಾಗಿದೆ ಅದು ಹೋದ ವರ್ಷದ್ದು. ಇಂದಿರಾ ಆವಾಸ್ ಕೇಂದ್ರ ಸರಕಾರದವರ ದುಡ್ಡು. ಅದನ್ನೂ ಕೂಡ ಮೊನ್ನೆ 31ನೇ ತಾರೀಖಿಗೆ ಬಿಡುಗಡೆ

ಮಾಡಿದ್ದಾರೆ. ಆಶ್ರಯ ಮನೆಗಳ ಹಣವನ್ನು ಇನ್ನೂ ಬಿಡುಗಡೆ. ತಮ್ಮ ಕ್ಷೇತ್ರಕ್ಕೂ ತಾವುಗಳು ಅಧ್ಯಕ್ಷರಾದ ಮೇಲೆ ಒಂದು ಮನೆ ಕೂಡ ಕೊಡಲು ಇವರಿಂದ ಆಗಲಿಲ್ಲ. ನಮ್ಮ ಮಾತುಗಳು ಬೇರೆ. ಮಾರ್ಚ್ 29ನೇ ತಾರೀಖಿನಿಂದ ಏಪ್ರಿಲ್ 5ನೇ ತಾರೀಖಿನವರೆಗೆ ಆಗಿರತಕ್ಕಂಥ ಪೇಮೆಂಟ್‌ಗಳು ಏನಿವೆ, ಇದರ ಬಗ್ಗೆ ಯುಕೆಪಿ ಯಲ್ಲಿ ತನಿಖೆಯಾಗಬೇಕು. ಇದು ಒಂದಾದರೆ ನೀವು ಎಲೆಕ್ಟ್ರಾನಿಕ್ ಗವರ್ನ್‌ಮೆಂಟ್‌ನ್ನು ನಿಜವಾಗಿಯೂ ಮಾಡಬೇಕು. ನೀವು ಹೇಳಿದ ಪ್ರಕಾರ ಪಾರದರ್ಶಕವಾದ ಭ್ರಷ್ಟಾಚಾರ ರಹಿತ, ಜನಪರವಾದ ಆಡಳಿತವನ್ನು ಕೊಡಬೇಕೆಂದು ಹೇಳಿದರೆ, ನೀವು ದಯವಿಟ್ಟು ಒಂದು ಕೆಲಸವನ್ನು ಮಾಡಿ. ನೀವು ಮಂಥ್ಲೀ ಎಲ್‌ಒಸಿ ಯನ್ನು ರಿಲೀಸ್ ಮಾಡಿ. ಮಂಥ್ಲೀ ವರ್ಕ್‌ಪ್ರೋಗ್ರೆಸ್‌ನ್ನು ತೆಗೆದುಕೊಳ್ಳಿ. ವರ್ಕ್‌ಚಾರ್ಟ್‌ನ್ನು ಮಾಡಿಸಿ.ಆಗ ಎಲ್ಲವೂ ಸರಿಹೋಗುತ್ತದೆ. ಅದನ್ನು ಈ ಸರಕಾರದವರು ಮಾಡಬಹುದಲ್ಲವೆ? ಅದನ್ನು ಎಲೆಕ್ಟ್ರಾನಿಕ್ಸ್ ವಿಡಿಯೋದಲ್ಲಿ ಮಾಡಬಹುದಲ್ಲವೆ? ನನಗನ್ನಿಸಿದ ಪ್ರಕಾರ ಇವರಿಗೆ ಇವರ ಸ್ಥಾನದ ಬಗ್ಗೆ ಬಹಳ ಭಯ ಇದೆ. ಹಣಕಾಸಿನ ಬಗ್ಗೆ, ವೈಟ್‌ಪೇಪರ್ ಬಗ್ಗೆ ನಮ್ಮ ಎಸ್.ಎಸ್. ಪಾಟೀಲ್‌ರವರು ಮಾತನಾಡುತ್ತಾರೆ. ಇಲ್ಲಿ ಕೇಂದ್ರ ಸರಕಾರದವರು ತಪ್ಪು ಮಾಡಿದ್ದಾರೆ. We are partners of the India Government. We continue to be the partners. ಆದರೆ ಬಡವರಿಗೆ ಇಡೀ ರಾಷ್ಟ್ರದಲ್ಲಿ ಅನ್ಯಾಯವಾಗಿದೆ. ನಾವು ಒಂದು ನಿಯೋರಿಚ್‌ಕ್ಲಾಸ್‌ನ್ನು ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಎಲೆಕ್ಟ್ರಾನಿಕ್ಸ್, ಮೊಬೈಲ್ ಟೆಲಿಫೋನ್ಸ್‌ಗಳು, ಈ - ಮೈಲ್, ಕಂಪ್ಯೂಟರ್‌ಗಳು, ಇದರ ಮೂಲಕ ಶೇಕಡಾ 70 ರಷ್ಟು ಅವೊತ್ತಿನ ಅವರ ಜೀವನವನ್ನು ಅವರು ಸಂಪಾದನೆ ಮಾಡತಕ್ಕಂಥ ಜನಗಳ ಹೊಟ್ಟೆಗಳಿಗೆ ತಣ್ಣೀರು ಹಾಕತಕ್ಕಂಥ ಕೆಲಸವನ್ನು ಮಾಡುತ್ತಾ ಇದ್ದೀರಿ. ಕೇಂದ್ರ ಸರಕಾರದವರು ಸಬ್ಸಿಡಿಯನ್ನು ರದ್ದು ಮಾಡಿದರು. ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ರಾತ್ರೋರಾತ್ರಿ ಕೋಟ್ಯಾಧಿಪತಿಗಳಾಗಿ ಹೋಗಿಬಿಡುತ್ತಾರೆ. ಇಂಡಿಯಾ ಟು ಡೇ ನಲ್ಲಿ ಹೋದ ತಿಂಗಳು ಬಂದ ಒಂದು ಆರ್ಟಿಕಲ್‌ನ್ನು ಗಮನಿಸಬೇಕು. ಯಾವ ಯಾವ ಇಂಡಸ್ಟ್ರೀಯವರದ್ದು 3 ಸಾವಿರ ಕೋಟಿ, 4 ಸಾವಿರ ಕೋಟಿ ರೂಪಾಯಿಗಳು ಇದ್ದುದು 15 ಸಾವಿರ ಕೋಟಿ 20 ಸಾವಿರ ಕೋಟಿ ರೂಪಾಯಿಗಳಿಗೆ ಹೋಯಿತು. ಇದು ಶೇರ್ ಬಿಜಿನೆಸ್ ವ್ಯವಹಾರ. ಅವರಿಗೆ ನೀವು ಸಹಾಯ ಮಾಡಲು ಹೊರಟಿದ್ದೀರಾ? ಇವೊತ್ತು ನಮ್ಮ ರಾಷ್ಟ್ರದಲ್ಲಿ 30 ಸಾವಿರ ಟನ್ ಫುಡ್ ಇದೆ. ಅದನ್ನು ಎತ್ತುವವರು ಇಲ್ಲ. ಶ್ರೀಮಾನ್ ಬೈರೇಗೌಡರು ಎಕ್ಸಿಂ ಪಾಲಿಸಿ ಬಗ್ಗೆ ಮಾತನಾಡುತ್ತಾರೆ. ಯಾವ ಕಾರಣದಿಂದ ಇದನ್ನು ಮಾಡಿದರು? ಈಗ ಹಣಕಾಸಿನ ಆಯೋಗವನ್ನು ಮಾಡಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರ ಬಗ್ಗೆ ನಮಗೆ ಬಹಳ ಗೌರವ ಇದೆ. ಅವರು ಇದನ್ನು ಒಪ್ಪಿಕೊಳ್ಳಬಾರದಾಗಿತ್ತು. ಒಂದು ಕಡೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರನ್ನು ಕಟ್ ಮಾಡುವುದು. ಇನ್ನೊಂದು ಕಡೆ ಫೈನಾನ್ಸ್ ಆಯೋಗವನ್ನು ಮಾಡುವುದು. ಒಂದು ಕಡೆ ಕಮಿಟಿಗಳನ್ನು ಮಾಡುವುದು ಇನ್ನೊಂದು ಕಡೆ ಆಡಳಿತ ಸುಧಾರಣೆ ಆಯೋಗವನ್ನು ಮಾಡುವುದು. ನಾನು ಯಾರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಎನ್ನುವ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಇದೆಲ್ಲಾ ನಾನ್ ಪ್ಲಾನ್ ಎಕ್ಸ್‌ಪೆಂಡಿಚರನ್ನು ಕಟ್ ಮಾಡುವುದಕ್ಕೆ ಅಥವಾ ಪೊಲಿಟಿಶಿಯನ್ಸ್‌ಗೆ ರೀಹಾಬಿಲ್‌ಟೇಟ್ ಮಾಡುವುದಕ್ಕೆ ನೀವು ಹೊರಬಿದ್ದೀರಾ? ಇದಾದ ಮೇಲೆ ಈ ನಿಯೊರಿಚ್ ಕ್ಲಾಸ್ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ,

ನಾವು ಪತ್ರ ಬರೆದಿದ್ದೇವೆ, ಈ ಅಧಿವೇಶನದ ನಂತರ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇವೆ. ಪ್ರೊಕ್ಯೂರ್‌ಮೆಂಟ್ ಪ್ರೈಸ್, ಇನ್ನೂ ಪ್ರೈಸ್‌ಗಳನ್ನು ಜಾಸ್ತಿ ಮಾಡಿದಾಗ ನೀವು ಮಿನಿಮಮ್ ವೇಜಸ್‌ನ್ನೂ ಫಿಕ್ಸ್ ಮಾಡಿ. ಅದು ಬಹಳ ಮುಖ್ಯವಾಗಿ ಆಗಬೇಕಾಗಿರತಕ್ಕಂಥದ್ದು. ಅದರ ಬಗ್ಗೆ ಯಾರೂ ಯೋಚನೆ ಮಾಡುವುದಿಲ್ಲ. What is the contribution of this Government towards PDS? ಇವತ್ತು ಪಿಡಿಎಸ್‌ಡಿಸ್ಟ್ರಿಬ್ಯೂಷನ್, ನಮ್ಮದೇನೂ ಇಲ್ಲ ಎಂದು ಹೇಳುತ್ತಾರೆ. ಎಲ್ಲಾ ಕೇಂದ್ರ ಸರ್ಕಾರದವರು ಮಾಡಿದ್ದು ಎಂದು ಇನಾಂದಾರ್‌ರವರು ಉತ್ತರವನ್ನು ಕೊಟ್ಟರು. ಅದಕ್ಕೋಸ್ಕರವಾಗಿ ನೀವೆಲ್ಲಾ ಪಾಸ್ ಆನ್ ಮಾಡಿಬಿಟ್ಟಿದ್ದೀರಿ. ಪಾಸ್ ಆನ್ ಮಾಡಿದವರಿಗೆ ನಿಮಗೇನು ರೈಟ್ಸ್ ಇದೆ ಪ್ರೊಟೆಸ್ಟ್ ಮಾಡುವುದಕ್ಕೆ ಇವತ್ತು ಕೇರಳ ರಾಜ್ಯದ ಮುಖ್ಯಮಂತ್ರಿಗಳಾದ ನಯನಾರ್‌ರವರು ಒಂದು ನಿಯೋಗವನ್ನು ಪ್ರಧಾನಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋಗಿದ್ದಾರೆ. ನೀವು ಮಾಡುವುದಕ್ಕಾಗುತ್ತಿರಲಿಲ್ಲವೇ? ಯುಗಾದಿ ಹಬ್ಬ 5ನೇ ತಾರೀಖು. ಬಡವರೆಲ್ಲಾ ಅಕ್ಕಿ ತೆಗೆದುಕೊಂಡು ಹೋಗಬೇಕು. ಗೋಧಿ ತೆಗೆದುಕೊಂಡು ಹೋಗಬೇಕು. ಸೀಮೆಎಣ್ಣೆ ತೆಗೆದುಕೊಂಡು ಹೋಗಬೇಕು. ಇವರು ಯುಗಾದಿ ಹಬ್ಬಕ್ಕೆ ಬಡವರಿಗೆ ಕೊಟ್ಟ ಬಳುವಳಿ ಎಂದರೆ ಐದು ರೂಪಾಯಿ ಸೀಮೆಎಣ್ಣೆ, ಆರೂವರೆ ರೂಪಾಯಿ ಅಕ್ಕಿ, ಐದೂವರೆ ರೂಪಾಯಿ ಕೆಜಿ ಗೋಧಿ, 12 ರೂಪಾಯಿ ಸಕ್ಕರೆ; ಇದನ್ನು ನೀವು ಏಪ್ರಿಲ್ ಒಂದರಿಂದ ಮುಂದೆ ಹಾಕಬಹುದಾಗಿತ್ತು. ಇವತ್ತಿಗೂ ನಾನು ಮುಖ್ಯಮಂತ್ರಿಗಳನ್ನು ಒತ್ತಾಯಮಾಡುತ್ತಿದ್ದೇನೆ. ನಡೆಯಿರಿ, ಹೋಗೋಣ ಕೇಂದ್ರಸರ್ಕಾರಕ್ಕೆ. You lead a delegation. ಹೋರಾಟ ಮಾಡ್ರಿ. ನಮ್ಮ ರಾಜ್ಯಸರ್ಕಾರ ವಿಧಾನಸಭೆ, ವಿಧಾನಪರಿಷತ್ ಮಾಡಿದಂಥ ಪಂಚಾಯತ್‌ರಾಜ್ ಬಿಲ್‌ಗೆ ಅವತ್ತಿನ ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿರಲಿಲ್ಲ. ಶ್ರೀಮಾನ್ ನಜೀರ್‌ಸಾಬ್ ನಾವೆಲ್ಲಾ ಹೋಗಿ ಪಾರ್ಲಿಮೆಂಟ್ ಭವನದ ಮುಂದೆ ಧರಣಿ ಮಾಡಿದೆವು. ನೀವು ಮಾಡಿ. ನಿಮ್ಮ ಜೊತೆಯಲ್ಲಿ ನಾವು ಬರುತ್ತೇವೆ. ಅದನ್ಯಾಕೆ ನೀವು ಮಾಡುವುದಿಲ್ಲ? ಅದನ್ನು ನೀವು ಮಾಡುವುದಕ್ಕೆ ತಯಾರಿಲ್ಲ ಏಕೆಂದರೆ ಹೋರಾಟದ ಬಗ್ಗೆ ನಿಮಗೆ ಗೊತ್ತಿಲ್ಲ. ಹಾಗಾದರೆ ನಿಮ್ಮ ಮಾತನ್ನು ಏತಕ್ಕೆ ಕೇಂದ್ರ ಸರ್ಕಾರದವರು ಕೇಳುತ್ತಾರೆ. ಇನ್ನು ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ ಬಗ್ಗೆ ಶ್ವೇತಪತ್ರದ ಬಗ್ಗೆ ನಮ್ಮವರು ಮಾತನಾಡುತ್ತಾರೆ. ಇವತ್ತು ಹಣಕಾಸಿನ ಪರಿಸ್ಥಿತಿ. ಕೆಇಬಿ ಬಗ್ಗೆ ದೀರ್ಘವಾಗಿ ಆಮೇಲೆ ಮಾತನಾಡೋಣ. ಕೆಇಬಿ ಬಗ್ಗೆ ಇವತ್ತು ನಾನು ಸ್ವಲ್ಪ ಮಾತ್ರ ಪ್ರಸ್ತಾಪ ಮಾಡುತ್ತೇನೆ. ಟ್ಯಾರಿಫ್ ಕಮಿಟಿ ರಿಪೋರ್ಟ್ ಬಂದಿದೆ. ದಯವಿಟ್ಟು ತಾವು ಆದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ. ನಮ್ಮ ಸರ್ಕಾರ ಬಂದಾಗ ಪವರ್ ರೇಟ್ ಜಾಸ್ತಿ ಮಾಡಿದೆವು. ಕೆಎಸ್‌ಆರ್‌ಟಿಸಿ ರೇಟನ್ನು ಜಾಸ್ತಿ ಮಾಡಿದೆವು. ನಾವು ಮಾಡಲಿಲ್ಲ ಎಂದು ಹೇಳುವುದಿಲ್ಲ. ಅದನ್ನು ಮಾಡಿದಾಗ, ಇವರೇನು ಹೇಳಿದರು ಗೊತ್ತೆ? ದರೋಡೆ ಮಾಡಿದರೂ, ಲೂಟಿ ಮಾಡಿದರೂ ಕೊಳ್ಳೆ ಹೊಡೆದರೂ ಎಂದು ಕೇಳಿದರು. ಇವತ್ತು ಇವುಗಳನ್ನು ಎಲ್ಲಾ ನೀವು ಮಾಡುವುದಕ್ಕೆ ಹೊರಟಿದ್ದೀರಾ? ಅಂಥ ನಾವು ಅದನ್ನೇ ಹೇಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ಹಣಕಾಸಿನ ಪರಿಸ್ಥಿತಿ ಉತ್ತಮವಾಗಬೇಕು. ನಾವು ಇವತ್ತು ನಿಮಗೆ ಸಹಕಾರವನ್ನು ಕೊಟ್ಟಿದ್ದೇವೆ. ಆದರೆ ನೀವು ಮಾಡಿರುವುದೇನು? ಇವತ್ತು ನಾನು ಕೆಎಸ್‌ಆರ್‌ಟಿಸಿ ಒಂದರ ಬಗ್ಗೆ ಮಾತನಾಡುತ್ತೇನೆ. ಶಾಸಕರುಗಳಿಗೆ ಹಾಗೆ ಪ್ರಾರಂಭ ಮಾಡಿದ್ದಾರೆ. ಕ್ಯಾನ್ಸಲೇಷನ್‌ಒಂದಕ್ಕೆ ಎರಡು ಆಗಿದೆ. 23

ಪರ್‌ಸೆಂಟ್ ಇವರು ಫೇರ್ ಜಾಸ್ತಿ ಮಾಡಿದ್ದು. ಆದರಲ್ಲಿ ರಿಯಲೈಸ್ ಆಗಿರುವುದು ಕೇವಲ 10 ಪರ್‌ಸೆಂಟ್ ಮಾತ್ರ. ಏಕೆ? ದುಡ್ಡು ಎಲ್ಲಿ ಹೋಯಿತು? ಏನಾಗುತ್ತಾ ಇದೆ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಸಾರಿಗೆ ಮಂತ್ರಿಗಳು ಸ್ವೀಡನ್‌ಗೆ ಹೋಗಿದ್ದಾರೆ. ಅವರು ಅಲ್ಲಿ ಎಷ್ಟು ರಿಯಲೈಜೇಷನ್ ಆಯಿತು ಎಂದು ತಿಳಿದುಕೊಂಡು ಬರುವುದಕ್ಕೆ ಹೋಗಿದ್ದಾರೆ. ನಾನು ಸ್ವೀಡನ್‌ಗೆ ಹೋಗಿದ್ದೆ. ಸಂತೋಷ. ಈ ಸರ್ಕಾರ ಬಂದಮೇಲೆ ಹೊಸ ಬಸ್‌ಗಳನ್ನು ಕೊಳ್ಳುತ್ತಾ ಇಲ್ಲ.ಈ ಸರ್ಕಾರಕ್ಕೆ ಏತಕ್ಕೆ ಕೊಳ್ಳುತ್ತಿಲ್ಲ ಎಂದು ನಾನು ಕೇಳಬಯಸುತ್ತೇನೆ. ಇವತ್ತೇನು ಇವರು ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾತನಾಡುತ್ತಿದ್ದಾರೆ, ಅಂಥ ಸ್ಥಿತಿ ನಮ್ಮ ಸರ್ಕಾರ ಇದ್ದಾಗ ಇರಲಿಲ್ಲ. ಆದರೆ ನಾವೆಲ್ಲರೂ ಸೇರಿಕೊಂಡು ಇದರ ಬಗ್ಗೆ ನೋಡಬೇಕಾಗತ್ತದೆ. ನೀವು ಆಡಳಿತ ಪಕ್ಷದಲ್ಲಿದ್ದಾಗ ನಾವೆಲ್ಲಾ ನಿಮ್ಮ ಜೊತೆಯಲ್ಲಿ ಕೋ-ಆಪರೇಟ್ ಮಾಡಬೇಕು. ಆಗ ನಾವು ಮಾಡುವುದೆಲ್ಲಾ ಸುಲಿಗೆ. ಈಗ ನೀವು ಮಾಡುತ್ತಿರುವುದು ಸಾಚಾತನ. ಇದಕ್ಕೇನು ಹೇಳುವುದು ಸ್ವಾಮಿ. ಈಗ ಕೇಇಬಿಯವರು ಎಲ್ಲಾ ಕಡೆ ಮೀಟರ್‌ಗಳನ್ನು ಹಾಕುವುದಕ್ಕೆ ಹೊರಟಿದ್ದಾರೆ. ನಾವು ಹಾಕುವುದಕ್ಕೆ ಹೋದಾಗ ಬೈ ರೇಗೌಡರು ಹೇಳುವುದಕ್ಕೆ ಹೋದರೆ ಜನದ್ರೋಹಿಕೆಲಸ, ರೈತ ದ್ರೋಹಿ ಕೆಲಸ, ಈಗ ನೀವು ಮಾಡುತ್ತಿರುವುದು ಯಾರ ದ್ರೋಹಿ ಕೆಲಸ? ಇದಾದ ಮೇಲೆ ಕಾನೂನು ವ್ಯವಸ್ಥೆ. ರಾಜ್ಯಪಾಲರ ಬಾಯಲ್ಲಿ ಇದರ ಬಗ್ಗೆ ತುರುಕಿಬಿಟ್ಟಿದ್ದಾರೆ. ಏನು ಇವರು ಹೇಳಿದ್ದಾರೆ. "ನಮ್ಮ ರಾಜ್ಯವು ಎಲ್ಲಾ ಜಾತಿ ಮತ್ತು ಪಂಗಡಗಳ ಸೌಹರ್ದದ ನೆಲೆವೀಡು ಆದರೂ ಆಗೊಮ್ಮೆ ಈಗೊಮ್ಮೆ ಸಾಮಾಜಿಕ ಶಾಂತಿಯನ್ನು ಕದಡುವ ಘಟನೆಗಳು ಸಂಭವಿಸುತ್ತದೆ ಅದಕ್ಕೆ ಕಠಿಣ ಕ್ರಮ. ಆಗೊಮ್ಮೆ ಈಗೊಮ್ಮೆಯಲ್ಲ. ದಿನಕ್ಕೊಮ್ಮೆ ಆಗುತ್ತಾ ಇದೆ. ಅದು ಮುಖ್ಯವಾಗಿರತಕ್ಕ ವಿಚಾರ. ಇದೊಂದು ವಿಪರ್ಯಾಸ. ಖರ್ಗೆಯವರು ಹೋರಾಟಗಾರರು. ಯಾವ ದುರ್ಬಲವರ್ಗದಿಂದ ಬಂದಿದ್ದಾರೆ, ಆ ವರ್ಗದವರೇ ಇವತ್ತು ಗೃಹಮಂತ್ರಿಗಳಾಗಿದ್ದಾಗ ಆ ವರ್ಗದ ಜನಗಳಿಗೆ ರಕ್ಷಣೆ ಇಲ್ಲ. ಕಾರಣವೇನು ಸ್ವಾಮಿ? ಆ ಭಾಗದಲ್ಲೇ ಇವತ್ತು ನರಮೇಧವಾಗುತ್ತಿದೆ. ಇವತ್ತು ಒಬ್ಬ ಮನುಷ್ಯನನ್ನು ಬೆಂಕಿಯಲ್ಲಿ ಹಾಕಿ ಸುಟ್ಟಿದ್ದಾರೆ. ಬೀದರ್‌ನಲ್ಲಿ ಭಾನುಮತಿ ಪ್ರಕರಣ. ಚಿಂತಾಮಣಿ-ಕಂಬಾಲಪಲ್ಲಿ ಆಯಿತು. ಇನ್ಸ್ಪೆಕ್ಟರ್ ಕೊಲೆಯಾಯಿತು. ಡಿಎಸ್‌ಎಸ್ ಕಾರ್ಯಕರ್ತ ನಾಗರಾಜ್ ಕೊಲೆಯಾಯಿತು. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ಹುಬ್ಬಳ್ಳಿಯಲ್ಲಿ ಪ್ರತಿವಾರ ಕೊಲೆ. ಹಳ್ಳಿಖೇಡ್‌ನಲ್ಲಿ ಕೊಲೆ. ಬೂಕನಕೆರೆಯಲ್ಲಿ ನಿಮ್ಮ ದೌರ್ಜನ್ಯ. ಯಡವನಹಳ್ಳಿಯಲ್ಲಿ ದೌರ್ಜನ್ಯ. ಗುಲ್ಬರ್ಗದಲ್ಲಿ ಬೆತ್ತಲೆ ಸೇವೆ. ಹುಬ್ಬಳ್ಳಿ ಲ್ಯಾಮಿಂಗ್‌ಟನ್ ಶಾಲೆಯಲ್ಲಿ ಮಕ್ಕಳ ಸಾವು. ಬೀದರ್‌ನಲ್ಲಿ, ಧಾರವಾಡದಲ್ಲಿ ಭಾನುಮತಿ ಪ್ರಕರಣವಾಗಿದೆ. ನಿಮ್ಮ ಕಾನೂನು ಪರಿಸ್ಥಿತಿಗೆ ಏನಾಗದೆ? ಏಕೆ ಇದು ಕೆಡುತ್ತಿದೆ? ನಾನು ಗೃಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ನೀವು ಗೃಹಮಂತ್ರಿಗಳಾದ ಮೇಲೆ ಎಷ್ಟು ಜಿಲ್ಲೆಗೆ ಭೇಟಿಕೊಟ್ಟಿದ್ದೀರಿ? ದರೋಡೆಗಳನ್ನು, ಗೂಂಡಾ ಹಾವಳಿಯನ್ನು ನಿಲ್ಲಿಸುವುದಕ್ಕೆ ನೀವು ಮಾಡಿದ್ದೀರಿ? ಏನು ಬೀಟ್ ಹೆಚ್ಚು ಮಾಡಿದ್ದೀರಾ? ಅವರಿಗೆ ವೆಹಿಕಲ್ಸ್ ಕೊಟ್ಟಿದ್ದೀರಾ? ಅವರಿಗೆ ವೈರಲೆಸ್ ಎಕ್ವಿಪ್‌ಮೆಂಟನ್ನು ಜಾಸ್ತಿ ಮಾಡಿದ್ದೀರಾ? ನಮ್ಮ ಕಾಲದಲ್ಲಿ ಆಗಿದ್ದು. ಆದಾದಮೇಲೆ ಆಗಿಲ್ಲ. ಒಂದೂ ಆಗಿಲ್ಲ. ಆ್ಯಂಟಿ ರೌಡೀಸ್ ಸ್ಕ್ವಾಡ್‌ನ್ನು ಏನಾದರೂ ಕಟ್ಟಿದ್ದೀರಾ? ಆ್ಯಂಟಿ ಡಕಾಯಿತಿ ಸ್ಕ್ವಾಡ್‌ನ್ನು ಈ ಮಂತ್ರಿಗಳು ಇನ್ನೂ ರೆವ್ಯೂ ಮಾಡಿಲ್ಲ. ಈಗಾಗಲೇ ಇವರು ಅಧಿಕಾರಕ್ಕೆ ಬಂದು ಆರು ತಿಂಗಳಾಯಿತು. ಒಂದು ಸಾರಿಯಾದರೂ ಗೃಹಮಂತ್ರಿಗಳು ಜಿಲ್ಲೆಗಳಿಗೆ ಹೋಗಿದ್ದಾರಾ? ಶಾಸಕರ

ಸಭೆಗಳನ್ನು ನಡೆಸಿದ್ದಾರಾ? ಬಾರ್ಡರ್ ಏರಿಯಾದಲ್ಲಿ ಎಂಥ ಪ್ರಾಬ್ಲಮ್ಸ್ ಇದೆ? ಅದರ ಬಗ್ಗೆ ಯೇನಾದರೂ ರೆವ್ಯೂ ಮಾಡಿದ್ದಾರಾ? ನಮ್ಮ ಕೋಸ್ಟಲ್ ಏರಿಯಾ ಡಿಸ್ಟ್ರಿಕ್ಟ್‌ನಲ್ಲಿರುವ ಪ್ರಾಬ್ಲಮ್ಸ್‌ನ್ನು ಇವರೇನಾದರೂ ರವ್ಯೂ ಮಾಡಿದ್ದಾರಾ? ಕೊಡಗಿನ ವಿಶೇಷ ಸಮಸ್ಯೆಗಳ ಬಗ್ಗೆ ನಮ್ಮ ನಾಣಯ್ಯನವರು ಹೇಳಿದರು. ನಾನು ಒಪ್ಪುತ್ತೇನೆ. ಅಲ್ಲಿ ಸಮಸ್ಯೆ ಇದೆ. ಮೇಲುನೋಟಕ್ಕೆ ಹಾಗೆ ಕಾಣುತ್ತದೆ. ಬೂದಿಮುಚ್ಚಿದ ಕೆಂಡದ ಹಾಗೆ ಇದೆ ಕೋಪ. ಅದನ್ನು ಸರಿಪಡಿಸಲಿಕ್ಕೆ ಯಾರು ಬರಬೇಕು? ಬರೀ ಟ್ರಾನ್ಸ್‌ಫರ್ ಅಷ್ಟೇನಾ ನಿಮ್ಮ ಕೆಲಸ ಗೃಹಮಂತ್ರಿಗಳದು. Why don't you go into the basics of the problem? ಹೋಗುವುದೇ ಇಲ್ಲ. ಹೋಗಲಿ, ಜಿಲ್ಲೆಗಳಿಗೆ ಹೋಗುತ್ತಾರೆ, ದಲಿತ ಮುಖಂಡರನ್ನು ಕರೆಸಿದ್ದೀರಾ? ಹಿಂದುಳಿದ ವರ್ಗದ ಮುಖಂಡರನ್ನು ಕರೆಸಿದ್ದೀರಾ? ಮಹಿಳೆಯರನ್ನು ಕರೆಸಿದ್ದೀರಾ? ಮಹಿಳಾ ಸಂಘಟನೆಗಳನ್ನು ಕರೆಸಿದ್ದೀರಾ? ದಿನನಿತ್ಯ ಒಂದೊಂದು ವರದಕ್ಷಿಣೆ ಸಾವಾಗುತ್ತಿದೆ. ಇವರು ಮಾತೆತ್ತಿದರೆ ಗುಲ್ಬರ್ಗ, ಅದು ಬಿಟ್ಟರೆ ಬೆಂಗಳೂರು. ಈಗ ಉಜ್ಜಯಿನಿ. ಅದು ಒಳ್ಳೆಯ ಕೆಲಸ ಹೋಗಿ ಬರಲಿ. ಘಟನೆ ನಂತರ ನೀವು ಹೋದರೆ ಏನು ಉಪಯೋಗ? ಮಾನ್ಯ ಮಂತ್ರಿಗಳು ಘಟನಾವಳಿಗಳನ್ನು ತಪ್ಪಿಸಲಿಕ್ಕೆ ಹೋಗಬೇಕು. ಈಗಲಾದರೂ ಈ ಸರ್ಕಾರ ಕಾನೂನಿನ ಪರಿಸ್ಥಿತಿಯನ್ನು ಸರಿಮಾಡಲು ಏನಾದರೂ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಅಂತಹ ಇನ್ನೂ ಪ್ರಮುಖವಾದ ವಿಚಾರವೊಂದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಬಾಗೇಪಲ್ಲಿಗೆ ಕುಡಿಯುವ ನೀರನ್ನು ಒದಗಿಸುವ ಸಂಬಂಧ ಚಿತ್ರಾವತಿ ಹೊಳೆಗೆ ಅಡ್ಡವಾಗಿ ಕಟ್ಟೆಯನ್ನು ಕಟ್ಟುತ್ತಿರುವ ವಿಚಾರದ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ತಕರಾರನ್ನು ಎತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಆಗಿರುವ ಒಪ್ಪಂದವನ್ನು ಇಟ್ಟುಕೊಂಡು ಕುಡಿಯುವ ನೀರಿಗಾಗಿ ಚಿತ್ರಾವತಿ ಹೊಳೆಗೆ ಅಣೆಕಟ್ಟೆಯನ್ನು ಕಟ್ಟಬಾರದು ಎಂಬ ಮಟ್ಟಕ್ಕೆ ಅವರು ಹೋಗಿದ್ದಾರೆ. ನಮ್ಮ ನೀರಾವರಿ ಮಂತ್ರಿಗಳು, ಮುಖ್ಯಮಂತ್ರಿಗಳು ಇದರ ಬಗ್ಗೆ ಮಂಕುತಿಮ್ಮನ ಕಗ್ಗವನ್ನು ತೋರಿಸುತ್ತಾರೆ. ನಾನು ಮೌನವಾಗಿರುತ್ತೇವೆಂದು ಹೇಳುತ್ತಾರೆ. ಏಕೆ ಈ ಮೌನ? ತಾವು ಇದರ ಬಗ್ಗೆ ಏಕೆ ಪ್ರತಿಭಟನೆ ಮಾಡಲಿಲ್ಲ? ಇದರ ಬಗ್ಗೆ ರಾಜ್ಯಸರ್ಕಾರ ತೆಗೆದುಕೊಂಡಿರುವ ಕ್ರಮ ಏನು? ಆಂಧ್ರದವರು ಇದರ ಬಗ್ಗೆ ತಕರಾರು ಹಾಕಿದ್ದಾರೆ, ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಚಿತ್ರಾವತಿ ಹೊಳೆ ವಿವಾಧವೇನಿದೆ ಇದು ಮತ್ತೊಂದು ಆಲಮಟ್ಟಿ ವಿವಾಧವಾಗಬಾರದು, ಆ ದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಇನ್ನು ಮೂರ್ತೆದಾರರ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಹೆಂಡದ ಮಾರಾಟವನ್ನು ನಿಲ್ಲಿಸಬೇಕು, ಬಹಳ ಕುಟುಂಬಗಳು ನಾಶವಾಗಿಹೋಗುತ್ತದೆ ಎಂದು ಕಾನೂನನ್ನು ಮಾಡಿದೆವು. ಹೆಂಡದಲ್ಲಿ ಕ್ಲೋರೈಡ್ ಹೈಡ್ರೇಟ್ ಅಂದರೆ ಸಿ.ಹೆಚ್.4 ನ್ನು ಹಾಕುತ್ತಾರೆ ನಿಜವಾದ ಹೆಂಡ ಸಿಗುವುದಿಲ್ಲವೆಂದು ಹೆಂಡದ ಮಾರಾಟ ನಿಲ್ಲಿಸಬೇಕೆಂದು ಕಾನೂನನ್ನು ಮಾಡಿದೆವು. 1989ರಲ್ಲಿ ಮಾಡಿದ ಬಳುವಳಿ ಇದು ಮಂಗಳೂರು, ಉಡುಪಿ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಲ್ಲಿ ನಿಜವಾದ ಹೆಂಡ ಸಿಗುತ್ತದೆ, ಈಚಲ ಮರಗಳು ಸಿಗುತ್ತದೆ, ಅಲ್ಲಿ ಮೂರ್ತೆದಾರರಿಗೆ ಅಸೋಸಿಯೇಷನ್ ಮಾಡಿ ಅದರ ಮೂಲಕ ಹೆಂಡವನ್ನು ವಿತರಣೆ ಮಾಡುವುದಕ್ಕೆ ನಮ್ಮ ಸರ್ಕಾರ ಬಂದಾಗ ಅವಕಾಶವನ್ನು ಕೊಟ್ಟೆವು. ಆದರೆ ತಾವು ಈಗ ಅದನ್ನು ಹರಾಜು ಮಾಡಲು ಹೊರಟಿದ್ದೀರಾ? ಆ ಮೂರ್ತೆದಾರರು ಏನಾಗಬೇಕು? ಅದು

ಸಹ ಚಿತಾಪುರ್, ಯಾದಗಿರಿ, ಸೇಡಂ, ಚಿಂಚೋಳಿ, ರಾಯಚೂರು, ದೇವದುರ್ಗ ಈ ತಾಲ್ಲೂಕುಗಳಲ್ಲಿರುವ ಹಿಂದುಳಿದ ಮೂರ್ತೆದಾರರು ಇವತ್ತು ಬೀದಿಪಾಲಾಗಿದ್ದಾರೆ. ಅವರ ಸಮಸ್ಯೆಗೆ ತಾವು ಸರ್ಕಾರದಿಂದ ಏನಾದರು ಪರಿಹಾರ ಕೊಡಬೇಕು. (ಶ್ರೀ ಅಂಜನಾಮೂರ್ತಿಯವರು ಪೀಠವನ್ನು ಅಲಂಕರಿಸಿದರು) ಅದಕ್ಕೆ ಬದಲಾಗಿ ತಾವು ಅವರನ್ನು ಬೀದಿಪಾಲು ಮಾಡುವ ಕೆಲಸಕ್ಕೆ ಹೋಗಿದ್ದೀರಾ ಇದು ನಮ್ಮ ಅಪಾದನೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕೇವಲ ಇಮೇಜ್ ಬಿಲ್ಡಿಂಗ್ ಆ್ಯಕ್ಟಿವಿಟೀಸ್‌ನಲ್ಲಿ ತೊಡಗಿದೆ. ಅದು ಸಹ ಪಕ್ಷದಲ್ಲ, ಇಂಡಿವಿಜುಯಲ್ ಆಗಿ ತಮ್ಮ ಇಮೇಜಿನ್ ಡೆವಲಪ್ ಮಾಡಿಕೊಳ್ಳಬೇಕು. ಮತ್ತು ಏನು ಮಾಡಬೇಕು, ಏನು ಮಾಡಬಾರದು ಎಂಬ ಬಗ್ಗೆ ಕಲೆಕ್ಟೀವ್ ಥಿಯಿಂಗ್ ಇಲ್ಲ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರವನ್ನು ಕೊಡುವುದು ಎಂದರೆ ಬಹಳ ಕಷ್ಟವಾಗಿದೆ. ಈ ಸರ್ಕಾರ ಗುಲ್ಬರ್ಗಾದ ಮೂರ್ತೆದಾರರ ಸಮಸ್ಯೆಯನ್ನು ಬಗೆ ಹರಿಸಬೇಕು. ಆ ಭಾಗದ ಶಾಸಕರು ಇದರ ಬಗ್ಗೆ ಒತ್ತಾಯ ಮಾಡಿದ್ದಾರೆ. ವಿದ್ಯುತ್ ವಿತರಣೆಯ ಬಗ್ಗೆ ಅನಂತರ ಮಾತನಾಡಬೇಕೆಂದು ಅಧ್ಯಕ್ಷರು ಹೇಳಿರುವುದರಿಂದ ಅದರ ಬಗ್ಗೆ ಈಗ ಮಾತನಾಡುವುದಿಲ್ಲ. ಇವತ್ತು ಗುಲ್ಬರ್ಗಾ, ಬೀದರ್, ರಾಯಚೂರು ಇಲ್ಲಿ ಬದುಕುವುದು ಕಷ್ಟವಾಗಿದೆ. ಅಲ್ಲಿ ನಮ್ಮ ಸರ್ಕಾರವಿದ್ದಾಗ ಎರಡು ವರ್ಷಗಳಿಂದ ಲೋಡ್‌ಶೆಡ್ಡಿಂಗ್‌ಗೆ ಅವಕಾಶ ಮಾಡಿಕೊಟ್ಟಿದ್ದೇವು. ಅದನ್ನು ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿದ್ದೇನೆ. ಪಡಿತರ ವ್ಯವಸ್ಥೆಯೇನಿದೆ ಅದರ ವಿರುದ್ಧವಾಗಿ ಕೇಂದ್ರ ಸರ್ಕಾರವೇನು ಸಬ್ಸಿಡಿಯನ್ನು ವಾಪಸ್ ತೆಗೆದುಕೊಂಡಿದೆ ಆ ಸಬ್ಸಿಡಿಯನ್ನು ಕೊಡಬೇಕೆಂದು ಒತ್ತಾಯ ಮಾಡಲು ತಾವು ಸರ್ವಪಕ್ಷಗಳ ಡೆಲಿಗೇಷನ್‌ನ್ನು ಕರೆದುಕೊಂಡು ಹೋಗಬೇಕು. ಮತ್ತು ಇದಕ್ಕಾಗಿ ರಾಜ್ಯ ಸರ್ಕಾರದವರು ಮೂನ್ನೂರು ಕೋಟಿ ರೂಪಾಯಿಗಳನ್ನು ಕೊಡಬೇಕು. ಇಪ್ಪತ್ತು ಸಾವಿರ ರೂಪಾಯಿಗಳ ವೆಚ್ಚದ ಬಜೆಟ್‌ನ್ನು ಮಾಡಿರುವವರು ಕೂಲಿ ಮಾಡುವವರಿಗೆ 250 ಕೋಟಿ ರೂಪಾಯಿಗಳನ್ನು ಕೊಡಲು ಆಗುವುದಿಲ್ಲವೆ? ಎಲ್ಲಾದಕ್ಕೂ ಆಯೋಗ ಮಾಡುತ್ತೀರಿ. ಹಣಕಾಸಿನ ಸುಧಾರಣಾ ಆಯೋಗ, ಆಡಳಿತ ಸುಧಾರಣ ಆಯೋಗ, ಈಗ ರಾಜ್ಯ ಅಭಿವೃದ್ಧಿ ಮಂಡಳಿ ಆಯೋಗ, ಅಲ್ಲಿಗೆ ಉಪಾಧ್ಯಕ್ಷರಾಗುವುದಕ್ಕೆ ಕಾಂಪಿಟೇಷನ್, ಅನಂತರ ಟಾಸ್ಕ್ ಫೋರ್ಸ್‌ಗಳು. ಐ.ಟಿ. ಗೆ ಒಂದು ಹೆಲ್ತ್‌ಗೆ ಒಂದು, ಶಿಕ್ಷಣಕ್ಕೆ ಒಂದು ಟಾಸ್ಕಫೋರ್ಸ್‌ಗಳು. ಹೀಗಾದರೆ ಮಂತ್ರಿಗಳು, ಕಾರ್ಯದರ್ಶಿಗಳು ಏನು ಮಾಡಬೇಕು? ಮೂರುನಾಲ್ಕು ಸರ್ಕಾರಗಳು ಇನ್ನು ಇಪ್ಪತ್ತೆರಡು ವರ್ಷಗಳಲ್ಲಿ ಎಷ್ಟು ಆಯೋಗಗಳನ್ನು ಮಾಡಬಹುದಾಗಿತ್ತೋ ಅಷ್ಟನ್ನೂ ಇವರು ಮಾಡಿಬಿಟ್ಟಿದ್ದಾರೆ. ಇನ್ನು ಹೊಸ ಆಯೋಗ ಯಾವುದೂ ಬೇಕಾಗುವುದಿಲ್ಲ. ಈಗ ಮುಖ್ಯ ಸಚೇತಕರೇನಿದ್ದಾರೆ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ಮಾಡಿ ಪ್ರತಿದಿನ ಮಂತ್ರಿಗಳು ಮೊದಲನೇ ಮತ್ತು ಎರಡನೇ ಸಾಲಿನಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡುವುದೊಂದು ಉಳಿದಿದೆ. ಇನ್ನು ಗ್ರಾಮೀಣ ಕೃಪಾಂಕದ ವಿಚಾರದ ಬಗ್ಗೆ ಹೇಳುವುದಾದರೆ, ಅಧಿವೇಶನ ಕರೆಯುವ ಮೊದಲು ಇದರ ಬಗ್ಗೆ ಏನನ್ನೋ ಮಾಡುತ್ತೇವೆ ಎಂದು ನಮಗೆಲ್ಲ ಸಭೆಯನ್ನು ಕರೆಯಿಸಿದರು, ಮೂರು ತಿಂಗಳುಗಳಾಯಿತು, ಆದರೆ ಇದುವರೆಗೆ ಏನೂ ಆಗಿಲ್ಲ, ಆ ಹಳ್ಳಿ ಹುಡುಗರು ಸಾಯುತ್ತಿದ್ದಾರೆ. ಅದರಿಂದ ಏನೂ ಪ್ರಯೋಜನವಾಗಿಲ್ಲ. ಕಾನೂನಿನಲ್ಲೇನು ಬದಲಾವಣೆ ಮಾಡಿಲ್ಲ. ಕ್ಯಾನ್ಸಲೈಜೇಷನ್ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಏಕೆ ಜಾಸ್ತಿಯಾಗಿದೆಯೆಂದರೆ ಅಲ್ಲಿ ನಾಲ್ಕು ಸಾವಿರ ಡ್ರೈವರ್ ಮತ್ತು ಕಂಡಕ್ಟರ್‌ಗಳ ಕೊರತೆ

ಇದೆ. ಇವತ್ತು ಎಲ್ಲಾ ನೇಮಕಾತಿಗಳು ನಿಂತುಹೋಗಿದೆ. ಇದರ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಕುಡಿಯುವ ನೀರಿಗೆ ಬಹಳ ಹಾಹಾಕಾರವಾಗಿದೆ. ನಾಳೆ ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ಏನು ಹೇಳಿದರು ಎಂದರಕ್ಕಿ ವಿ.ಎನ್. ಶುಕ್ಲಾರವರ, ಭಾರತದ ಸಂವಿಧಾನದ ಬಗೆಗಿನ ಪುಸ್ತಕದಲ್ಲಿ ಅವರು ಹೇಳಿರುವ ಕೆಲವು ವಿಚಾರದ ಬಗ್ಗೆ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ಆದೇಶವನ್ನು ಕೊಟ್ಟರು. ಟೆಂಥ್ ಶೆಡ್ಯೂಲ್ ಬಗ್ಗೆ ಚರ್ಚೆಯಾಗಲಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಟೆಂಥ್ ಶೆಡ್ಯೂಲ್ ಏನು ಹೇಳುತ್ತದೆಂದರೆ

" An elected member of a House who has been elected as such otherwise than as a candidate set up by any political party shall be disqualified for being a member of the House if he Joins any political party after such election." ಅಂದರೆ ಒಂದು ರಾಜಕೀಯ ಪಕ್ಷವನ್ನು ಬಿಟ್ಟು ಪಕ್ಷೇತರರಾಗಿ ನಿಂತಿರುವ ಶಾಸಕರುಗಳು ಯಾವುದೇ ಪಕ್ಷವನ್ನು ಸೇರಬಾರದು. ಸೇರಿದರೆ ಡಿಸ್‌ಕ್ವಾಲಿಫೈ ಆಗುತ್ತದೆ ಎಂದು ಅದರಲ್ಲಿ ಹೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಛೇರ್ಮನ್‌ರವರೆ, ನನ್ನದು ಕ್ರಿಯಾಲೋಪ. ನನ್ನ ಸ್ನೇಹಿತರಿಗೆ ತೊಂದರೆ ಕೊಡಬೇಕೆಂದು ನಾನು ಅವರಿಗೆ ಈಲ್ಡ್ ಆಗಬೇಕು ಎಂದು ಹೇಳಲಿಲ್ಲ. ಅವರು ಟೆಂಥ್ ಶೆಡ್ಯೂಲ್‌ನ್ನು ಓದುವುದರ ಮೂಲಕ ಸಂವಿಧಾನಕ್ಕೆ ಅಪಚಾರವನ್ನು ಮಾಡಿದ್ದಾರೆ. ಒಂದು ಸೆಂಟೆನ್ಸ್‌ನ್ನು ಓದಿ ಮುಂದಿನ ಮತ್ತೊಂದು ಸೆಂಟೆನ್ಸ್‌ನ್ನು ಓದಿಲ್ಲ. ಅದು ನನ್ನ ಕ್ರಿಯಾಲೋಪ ನಾನು ಅದನ್ನು ಓದುತ್ತೇನೆ, ಯಾವ ಸಂದರ್ಭದಲ್ಲಿ ಸಂವಿಧಾನದ ಪ್ರಕಾರ ಆ್ಯಂಟಿ ಡಿಫೆಕ್ಷನ್ ಅನ್ವಯವಾಗುತ್ತದೆ ಎಂದು ಅವರು ಓದಿದರು. ಆ್ಯಂಟಿ ಡಿಫೆಕ್ಷನ್ ಯಾವಾಗ ಅನ್ವಯವಾಗುವುದಿಲ್ಲ ಎಂಬುದನ್ನು ಸಹ ಸಂವಿಧಾನದ ರಚನಕಾರರು ಬರೆದಿದ್ದಾರೆ. ಅದನ್ನೂ ಅವರು ಓದಬೇಕೆಂದು ನನ್ನ ಪ್ರಾರ್ಥನೆ ನಾನು ಅದನ್ನು ಓದುತ್ತೇನೆ. ನಾನು ಈ ಪುಸ್ತಕವನ್ನು ಬೆಳಿಗ್ಗೆಯೆ ತರಿಸಿಕೊಂಡು ಓದಿದ್ದೆ. ಇಂಥ ಬ್ಯಾಡ್ ಕೇಸ್ ಬಗ್ಗೆ ಅವರು ಪ್ರಸ್ತಾಪ ಮಾಡಬಹುದೆಂದು ನಿರೀಕ್ಷೆ ಸಹ ಮಾಡಿದ್ದೆ.

" A nominated member of a House shall be disqualified for being a member of the House if he joins any political party after the expiry of six months from the date on which he takes his seat.........." Disqualification on account of split is not applicable. ಇದು ಟೆಂಥ್ ಶೆಡ್ಯೂಲ್‌ನಲ್ಲಿದೆ, ಕ್ಲಾಸ್ ನಂಬರ್ 3.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾನು 'ಸೀಟ್' ಬಗ್ಗೆ ಹೇಳಿಯೇ ಇಲ್ಲ. ಅವರ ಪಾಯಿಂಟ್ ಆಫ್ ಆರ್ಡರ್ ಅಥವಾ ಡಿಸ್ ಆರ್ಡ್‌ರ್ ಎಂಬುದು ಅರ್ಥವಾಗಲಿಲ್ಲ. ಆದ್ದರಿಂದ ಅದರ ಬಗ್ಗೆ ತಾವು ಯಾವುದೆ ತೀರ್ಪನ್ನು ಕೊಡುವುದಿಲ್ಲವೆಂದುಕೊಂಡಿದ್ದೇನೆ. ಇದು ಬಹಳ ಕ್ಲಿಯರ್ ಆಗಿದೆ. I am repeating it again:

" An elected member of a House who has been elected as such otherwise than as a candidate set up by any political party shall be disqualified for being a member of the House if he joins any political party after such election". ಎಂದಿದೆ

ಛೇರ್ಮನ್: ಯಾವುದಾದರೂ ಪಾರ್ಟಿ ಎಂದು ಹೇಳಿದ್ದಾರೆ. ಅದನ್ನು ಅಬ್ಸರ್ವ್ ಮಾಡಿಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನೀವು ಕರೆಕ್ಟಾಗಿ ಅಬ್ಸರ್ವ್ ಮಾಡಿದ್ದೀರಿ. ಎಮ್.ಎನ್. ವೆಂಕಟಾಚಲಯ್ಯನವರು ಫೆಬ್ರವರಿ 9. 1994ರಲ್ಲಿ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಗೋವಾ ಅಸೆಂಬ್ಲೀಯಲ್ಲಿ ಇದ್ದ ಇಬ್ಬರು ಶಾಸಕರ ವಿಚಾರದಜಲ್ಲಿ ಬಹಳ ಕ್ಲಿಯರ್ರಾಗಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಯಾವ ಯಾವ ಸದಸ್ಯರು ಯಾವ ಯಾವ ಪಾರ್ಟಿ ಸೇರುತ್ತಾರೆ. ಅದು ಅವರಿಗೆ ಸಂಬಂಧಪಟ್ಟಿದ್ದು. ನಾನು ತಮಗೆ ಒಂದು ಪಿಟೀಷನ್ ಕೊಡುತ್ತಿದ್ದೇನೆ. ಇಲ್ಲಿ ಒಂದು ಫೋಟೋ ಇದೆ, ತಮಗೆ ಕಳುಹಿಸಿಕೊಡುತ್ತಿದ್ದೇನೆ. ನವದೆಹಲಿಯಲ್ಲಿ ಮಂಗಳವಾರ ಕಾಂಗ್ರೆಸ್ ಪಕ್ಷ ಸೇರಿದ ಕರ್ನಾಟಕದ 11 ಜನ ಶಾಸಕರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರೊಂದಿಗೆ ಇರುವುದು. ಇದು ಆದ ಮೇಲೆ ಬೆಂಗಳೂರಿನಲ್ಲಿ ಬುಧವಾರ ಮುಖ್ಯ ಮಂತ್ರಿ ಎಸ್.ಎಮ್. ಕೃಷ್ಣರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷದ ಸಭೆ ನಡೆಯಿತು. ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಮತ್ತು ಪಂಚಾಯತ್ ರಾಜ್ ಸಚಿವ ಘೋರ್ಪಡೆ ಕಾಂಗ್ರೆಸ್ ಪಕ್ಷಕ್ಕೆ ನೂತನವಾಗಿ ಸೇರಿದ 10 ಜನ ಪಕ್ಷೇತರರು, ಅದು ಆದ ಮೇಲೆ ಸ್ವತಂತ್ರ ್ಯವಾಗಿ ಗೆದ್ದ ಶಾಸಕರು ಕಾಂಗ್ರೆಸ್ ಪಕ್ಷಕ್ಕೆ ಜಾಯಿನ್ ಆದರು. ಇದು ಇಲ್ಲಿ ಇರುವುದು ನಾನು ಇವರಿಗೆ ಕೊಡಲಿಲ್ಲ ಎಂದರೆ, ಈ ಪಿಟಿಷನ್ ಬಗ್ಗೆ ತಾವು ಆ ಪೀಠದಲ್ಲಿ ಕುಳಿತು ಈ ಗೋವಾ ಶಾಸಕರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಆಗಿರತಕ್ಕಂತಹ ತೀರ್ಮಾನ. ಸಂವಿಧಾನದ 10ನೇ ಶೆಡ್ಯೂಲ್ ಇದರ ಬಗ್ಗೆ ಮಾನ್ಯ ಸಭಾ ನಾಯಕರು ಈ ಸದನದಲ್ಲಿ ಚರ್ಚೆಯಾಗಬೇಕೆಂದು ಬಯಸಿದ್ದರಿಂದ ನಾನು ಪ್ರಸ್ತಾಪ ಮಾಡಿದ್ದೇನೆ. ಆ ಪಿಟೀಷನ್ ಕೊಟ್ಟಾಗ ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ವೈ.ಕೆ. ರಾಮಯ್ಯನವರು ಅದರ ಬಗ್ಗೆ ಭಾಗವಹಿಸುವುದಕ್ಕೆ ಅನುಮತಿ ಕೊಡುತ್ತೀರಿ ಎಂದು ನಮಗೆ ವಿಶ್ವಾಸ ಇದೆ. ಈ ಸಭಾ ನಾಯಕರು ಯಾರು ಮೌಲ್ಯಗಳ ಬಗ್ಗೆ ಮಾತನಾಡುತ್ತಾರೆ, ಯಾರು ಪಾರದರ್ಶಕವಾಗಿ ಸರ್ಕಾರದ ಬಗ್ಗೆ ಮಾತನಾಡುತ್ತಾರೆ, ಇವರಿಗೆ 136 ಸೀಟುಗಳು ಬಂದಿದ್ದರು ಸಹಿತ ಯಾವ ಕಾರಣದಿಂದ ಈ ಪಕ್ಷೇತರರನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡರು ಇದು ಬಹಳ ಮುಖ್ಯವಾದ ಪ್ರಶ್ನೆ. ಪಕ್ಷೇತರರಾಗಿ ಗೆದ್ದಿರತಕ್ಕಂತಹ ಶಾಸಕರು ನಮ್ಮ ಸ್ನೇಹಿತರು ಅವರು ಚೆನ್ನಾಗಿ ಇರಲಿ. ಆದರೆ ಅವರಿಗೆ ಯಾವ ಸಂದರ್ಭದಲ್ಲಿ ಎಂದರೆ, ರಾಜ್ಯ ಸಭಾ ಚುನಾವಣೆಗಳು ನಡೆಯುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಂಡರು. ಅವರಿಗೆ ಆಡಳಿತ ಪಕ್ಷದವರಿಂದ ಅವವ ಕ್ಷೇತ್ರದಲ್ಲಿ ಕೆಲಸವಾಗಬೇಕು. ಅವರಲ್ಲಿ ಏನು ತಪ್ಪು ಕಂಡುಹಿಡಿಯುವುದಕ್ಕೆ ಹೋಗುತ್ತಿಲ್ಲ. ದುರ್ದೈವದಿಂದ ಇವರು ಅವರ ಸ್ಥಾನದ ಅಭದ್ರತೆ ಇವತ್ತು ಈ ಸರ್ಕಾರಕ್ಕೆ ಬಹಳ ಮುಖ್ಯವಾಗಿರತಕ್ಕಂತಹ ಕಾಯಿಲೆ ಎಂದರೆ ಸರ್ಕಾರದ ಅಭದ್ರತೆ ಮಂತ್ರಿಮಂಡಲದಲ್ಲಿ ಸಾಮರಸ್ಯ ಇಲ್ಲ, ಅದಕ್ಕೋಸ್ಕರ ಇವರಿಗೆ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಮೂಲಕ ಏನು ಭಾಷಣ

ಮಾಡಿದ್ದಾರೆ ಇದು ಬಹಳ ನಿರಾಶಾದಾಯಕ. ಯಾವ ಸರ್ಕಾರ ಜನಗಳ ಮ್ಯಾಂಡೇಟ್ ಆಗಿ 133 ಜನ ಶಾಸಕರನ್ನು ಪಡೆದು ಸರ್ಕಾರ ಕೊಡುತ್ತದೆ ಎಂದು ಹೇಳಿ ಚುನಾವಣಾ ಪ್ರಣಾಳಿಕೆ ಮೂಲಕ ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದಿದ್ದಾರೆ, ಆ ನಿಟ್ಟಿನಲ್ಲಿ ಇವರು ಹೋಗುತ್ತಿಲ್ಲ. ಈ ರಾಜ್ಯಪಾಲರ ಭಾಷಣ ಮತ್ತು ಇದಕ್ಕೆ ಪೂರಕವಾಗಿ ಮಂಡನೆಯಾಗಿರತಕ್ಕಂತಹ ಬಡೆಜೆಟ್ ಇವೆರಡು ಸಹಿತ ಕೇವಲ ಘೋಷಣೆಗಳು. ಕೇವಲ ಟಾಸ್ಕ್‌ಫೋರ್ಸ್. ಕೇವಳ ಯೋಜನೆಗಳು ಇವುಗಳನ್ನು ಹೇಳಿರತಕ್ಕಂತಹ ಭಾಷಣ ಆಗಿದೆ ಹೊರತು, ಇದರಲ್ಲಿ ಸತ್ಯ ಇಲ್ಲ. ಮತ್ತು ಈ ಸರ್ಕಾರಕ್ಕೆ ಬಹಳ ಮುಖ್ಯವಾದ ಕಾಯಿದೆ ನಮ್ಮ ಸರ್ಕಾರಕ್ಕೆ ನಾಲ್ಕು, ವರ್ಷದ ನಂತರ ಬಂದಿತ್ತು, ಈ ಕಾಯಿಲೆ ಇವರಿಗೆ ನಾಲ್ಕು ತಿಂಗಳಲ್ಲಿ ಪ್ರಾರಂಭವಾಗಿರುವುದು ಕರ್ನಾಟಕದ ಜನತೆಯ ದುರ್ದೈವ ಎಂದು ಹೇಳಬಯಸುತ್ತೇನೆ. ಇವರು ಐದು ವರ್ಷಗಳು ಆಳಬೇಕೆಂದು ಬಯಸುವವರು ನಾವು ಸರ್ಕಾರ ಕರ್ನಾಟಕ ಸಂವೃದ್ಧಿ ಆಗಬೇಕೆಂದು ಬಯಸತಕ್ಕಂತಹವರು ನಾವು. ಆ ದಿಸೆಯಲ್ಲಿ ಈ ಸರ್ಕಾರ ಹೋಗುತ್ತಿಲ್ಲ. ಇದು ಬಹಳ ದುರ್ದೈವದ ವಿಚಾರವೆಂದು ಹೇಳಿ ನಾನು ಈ ಸದನದ ಅಧಿವೇಶನದ ಸಂದರ್ಭದಲ್ಲಿ ಯಾವ ಪಕ್ಷಾಂತರದ ಮೂಲಕ ಈ ಸಂವಿಧಾನಕ್ಕೆ ಅಪಪ್ರಚಾರ ಮಾಡಿದ್ದಾರೆ ಈ ಪಕ್ಷೇತರ ಶಾಸಕರನ್ನು ಸೇರಿಸಿಕೊಳ್ಳುವುದರ ಮೂಲಕ ನಾನು ಕೊಡತಕ್ಕಂತಹ ಅರ್ಜಿಯನ್ನು ತಾವು ಪರಿಶೀಲಿಸಿ ಸಂವಿಧಾನ ಬದ್ಧವಾಗಿ ಅದಕ್ಕೆ ಒಂದು ತೀರ್ಪು ಕೊಡುತ್ತೀರಿ ಎಂದು ವಿಶ್ವಾಸ ವ್ಯಕ್ತಮಾಡಿ ಈ ಸರ್ಕಾರದ ಧೋರಣೆಯನ್ನು ಖಂಡನೆ ಮಾಡಿ, ಕನ್ನಡದಲ್ಲಿ ಮಾತನಾಡಿದ ರಾಜ್ಯಪಾಲರಿಗೆ ಅಭಿನಂದನೆ ಸಲ್ಲಿಸಿ ನನಗೆ ಕಾಲಾವಕಾಶ ಕೊಟ್ಟಿದ್ದೀರಿ, ಅದಕ್ಕೋಸ್ಕರ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ನಾನು ಅವರು ಹೇಳಿದ ಭಾಷಣಕ್ಕೆ ಯಾವುದಕ್ಕೂ ವಿರೋಧ ವ್ಯಕ್ತಮಾಡುವುದಿಲ್ಲ. ಯಾವುದೂ ಕಾಂಟ್ರಡಿಕ್ಟ್ ಮಾಡುವುದಕ್ಕೆ ಹೋಗುವುದಿಲ್ಲ ಇವರು ಏಕೆ ಹೋರಾಟ ಮಾಡುವುದಿಲ್ಲ, ಅವರಿಗೆ ಹೋರಾಟ ಗೊತ್ತಿಲ್ಲವೆಂದು ಹೇಳಿದಾಗ ನಾನು ಇಲ್ಲಿ ಏನೋ ಓದುತ್ತಾ ಕೂತಿದ್ದೆ. ಹೋರಾಟ ಎಂಬುದು ಯಾರೂ ಕಸಿಯಲಾಗದ ಒಂದು ಮನಸ್ಥಿತಿ. ಇದನ್ನು ಯಾವ ಗೂಂಡಾಗಳು ಕಸಿಯಲಾರವು. ಯಾವ ಬೇಟೆ ನಾಯಿಗಳು ಈ ಹೆಜ್ಜೆಯ ಗುರುತನ್ನು ಪತ್ತೆ ಹಚ್ಚಲಾರವು. ಇದನ್ನು ಹೇಳಿದ್ದು ನಾನಲ್ಲ. ಹೋರಾಟ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದು ನಾನೆಲ್ಲ. ಇದು ಯಾರೂ ಕದಿಯಲಾಗದ ಒಂದು ಮನಸ್ಥಿತಿ. ಯಾವ ಬೇಟೆ ನಾಯಿಗಳೂ ಈ ಹೆಜ್ಜೆ ಗುರುತು ಹಿಡಿಯಲಾಗದ ಪರಿಸ್ಥಿತಿ. ಯಾವ ಗುಂಡು ಹಾಕಲಾಗದ ಒಂದು ಮನಸ್ಥಿತಿ. ಇದನ್ನು ಹೇಳಿದ್ದು ನಾನಲ್ಲ. ಲೋಹಿಯಾರವರು ರಾಷ್ಟ್ರದ ಸ್ವಾತಂತ್ರ್ಯ ಪೂರ್ವದಲ್ಲಿ ಹೋರಾಟದ ಸಮಯದಲ್ಲಿ ಜೈಲಿನಿಂದ ಅಂದಿನ ಭಾರತದ ಗವರ್ನರ್ ಜನರಲ್‌ಗೆ ಬರೆದಂತಹ ಪತ್ರದಲ್ಲಿ ಈ ಮಾತನ್ನು ಅವರು ಬರೆಯುತ್ತಾರೆ. ಈ ರಾಷ್ಟ್ರದ ಹೋರಾಟಗಾರರ ಉತ್ಸಾಹವನ್ನು , ಹೋರಾಟವನ್ನು ತಡೆಯುವುದಕ್ಕೆ ನಿಮಗೆ ಆಗುವುದಿಲ್ಲ. ಏಕೆ ಅದು ಒಂದು ಮನಸ್ಥಿತಿ. ಆದ್ದರಿಂದ ನಾವು ಯಾರೂ ಹೋರಾಟಕ್ಕೆ ಬರುವುದಿಲ್ಲವೆಂದು ತಾವು ಹೇಳಿದಿರಿ. ನಾವು ಯಾರೂ ನಂಬುವುದಿಲ್ಲ ಎಂದು ಹೇಳಲಿಕ್ಕೆ ಅಷ್ಟೆ ತಮಗೆ ಈಲ್ಡ್ ಆಗಿ ಎಂದು ಪ್ರಾರ್ಥನೆ ಮಾಡಿದೆ. ಆದರೆ ತಾವು ಆಗಲಿಲ್ಲ ಈಗ ಹೇಳುತ್ತಿದ್ದೇನೆ.

ಛೇರ್ಮನ್: ಈಗ ಸಭೆಯು ಮುಕ್ತಾಯವಾಗಿ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರುವುದು.

(ಸದನವು 1.10ಕ್ಕೆ ಮುಕ್ತಾಯವಾಗಿ ಮತ್ತೆ ಉಪಹಾರದ ನಂತರ 2.30 ಕ್ಕೆ ಸೇರಲು ನಿರ್ಧರಿಸಿತು.)

(ಸದನವು ಮತ್ತೆ 2.50ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

+ ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ):- ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮೊದಲನೆಯದಾಗಿ ಬಹಳ ವರ್ಷಗಳು ಆದಮೇಲೆ ಜಯಚಾಮ ರಾಜೇಂದ್ರ ಒಡೆಯರ್ ಆದಮೇಲೆ ನಮ್ಮ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಓದಿದ್ದಾರೆ. ಅದಕ್ಕೆ ಮೊದಲನೆಯದಾಗಿ ನನ್ನ ಅಭಿನಂಜನೆ ವ್ಯಕ್ತಪಡಿಸುತ್ತಾ ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಹೊಸ ಸರ್ಕಾರ ಬಂದ ಮೇಲೆ ಬಹಳಷ್ಟು ಆಧ್ಯತೆಗಳಿಗೆ ಒತ್ತು ಕೊಟ್ಟಿದ್ದಾರೆ. ಮೊದಲನೆಯದಾಗಿ ಪಾರದರ್ಶಕ, ಮೌಲ್ಯಾಧಾರಿತ, ಕಂಕಣಬದ್ಧ, ಕಟಿ ಬದ್ಧ, ಇಶ್ಯೂ ಬೇಸ್ಡ್ ಇಂತಹ ಒಳ್ಳೆಯ ಶಬ್ದಗಳನ್ನು ಉಪಯೋಗಿಸಿದ್ದಾರೆ. ಕಿವಿಗಳಿಗೆ ಇಂಪಾಗಿ ಕೇಳುವಂತಹ ಮಾತುಗಳನ್ನು ಸರ್ಕಾರ ಆಡಿದೆ. ಆದರೆ ಹಿಂದಿನ ಚರಿತ್ರೆ ನೋಡಿದಾಗ ಇವು ಮೌಲ್ಯಾಧಾರಿತ ರಾಜಕಾರಣ ಆಗಿರಬಹುದು, ಅಥವಾ ಇಶ್ಯೂ ಬೇಸ್ಡ್ ಆಗಿರಬಹುದು, ಇವೆಲ್ಲವೂ ಕೂಡ ಮಾಡುವುದಕ್ಕಾಗಲಿಲ್ಲವೆಂದು ಹಿಂದಿನ ಚರಿತ್ರೆ ಹೇಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಾರದರ್ಶಕ ಕೇವಲ ವಿಧಾನಸೌಧದ ಮಟ್ಟದಲ್ಲಿ ಮಾಡಿದರೆ ಸಾಲದು. ಒಬ್ಬ ಚೀಫ್ ಸೆಕ್ರೆಟರಿ, ಒಬ್ಬ ರೆವಿನ್ಯೂ ಸೆಕ್ರೆಟರಿ ಅಥವಾ ಒಬ್ಬ ಫೈನಾನ್ಸ್ ಸೆಕ್ರೆಟರಿ ಮಟ್ಟದಲ್ಲಿ ಮಾಡಿದರೆ ಆಗದು. 100ಕ್ಕೆ 80 ಜನ ಹಳ್ಳಿಗಳಲ್ಲಿ ಏನು ಜೀವನ ಮಾಡುತ್ತಿದ್ದಾರೆ, ಆ 80 ಪರ್ಸೆಂಟ್ ಇರುವಂತಹ ಜನಸಂಖ್ಯೆಗೆ ಪಾರದರ್ಶಕ ಆಗಬೇಕು. ಇವತ್ತು ಕೇವಲ 20 ಪರ್ಸೆಂಟ್‌ನಲ್ಲಿ ಪಾರದರ್ಶಕ ತೋರಿಸಿದ್ದರಲ್ಲಿ 10 ಜನ ವ್ಯಾಪಾರಸ್ಥರು, ನಾಲ್ಕೈದು ಜನ ಬೇರೆ ಬೆರೆ ಹುದ್ದೆಗಳು ಮಾಡುವವರು.ಈ ನಾಲ್ಕೈದು ಜನರಿಗೆ ಪಾರದರ್ಷಕ ಅನುವಾಗಲಾರದು. ಇದು ಹಳ್ಳಿಯಲ್ಲಿ ಸಾಮಾನ್ಯ ಒಬ್ಬ ರೈತ ಹಾಗೂ ಕೂಲಿ ಕಾರ್ಮಿಕನಿಗೂ ಕೂಡ ಪಾರದರ್ಶಕ ಸಿಕ್ಕರೆ ಮಾತ್ರ ಈ ಆಡಳಿತ ಪಾರದರ್ಶಕವಾಗಿ ನಡೆಯುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಳ್ಳಿಯ ಜೀವನ ಮೊದಲನೆಯದಾಗಿ ಕಂದಾಯ ಇಲಾಖೆಯಲ್ಲಿ ಇವತ್ತು ಯಾವ ರೈತನಿಗೆ 50 ರೂಪಾಯಿ ಇಲ್ಲದೆ, ಆರ್‌ಟಿಸಿ, ಪಹಣಿ ಸಿಗುತ್ತದೆ ಅವನಿಗೆ ದುಡ್ಡು ಕೊಡದೆ ಪಹಣಿ ಸಿಕ್ಕರೆ ಅದು ಪಾರದರ್ಶಕ. ಯಾವುದೋ ಒಂದು ಚೀಫ್ ಸೆಕ್ರೆಟರಿ ಅಥವಾ ರೆವಿನ್ಯೂ ಸೆಕ್ರೆಟರಿ, ಅಥವಾ ಫೈನಾನ್ಸ್ ಸೆಕ್ರೆಟರಿ ಹತ್ತಿರ ಒಂದು ಫೈಲ್ ಒಂದು ವಾರದಲ್ಲಿ ಬಂದ ಮಾತ್ರಕ್ಕೆ ಅದು ಪಾರದರ್ಶಕ ಆಗುವುದಿಲ್ಲ. ಪಾರದರ್ಶಕ 100ಕ್ಕೆ 80 ಭಾಗ ಜನಸಂಖ್ಯೆ ಇರುವ ಈ ಹಳ್ಳಿಗಾಡಿನಲ್ಲಿ ಆ ರೈತನಿಗೆ ಒಂದು ಪೈಸೆ ಕೊಡದೆ ಪಹಣಿ ಸಿಗುವ ಕಾಲ ಬರಬೇಕು. ಏನು ಕಂದಾಯ ಇಲಾಖೆಯಲ್ಲಿ ವಿಲೇಜ್ ಅಕೌಂಟೆಂಟ್ ಪ್ರತಿ ದಿವಸ ಐದು, ಆರು, ಏಳು ಹಳ್ಳಿಗಳು ಏನು ಪಂಚಾಯಿತಿವ್ಯಾಪ್ತಿಗೆ ಬರುತ್ತವೆ ಆ ಹಳ್ಳಿಯಲ್ಲಿ ಜೀವನ ಮಾಡುವ ಕೆಲಸ ಮಾಡಬೇಕು. ಆ

ರೈತನಿಗೆ ಅವನು ಯಾರು ವಿಲೇಜ್ ಅಕೌಂಟೆಂಟ್ ಇದ್ದಾರೆ ಅವನು ಪ್ರತಿ ದಿವಸ ಸಿಗುವಂತಹ ವ್ಯವಸ್ಥೆ ಮಾಡಬೇಕು. ಅದು ಪಾರದರ್ಶಕವಾಗುತ್ತದೆ. ಇವತ್ತು ದೊಡ್ಡ ರಾದ್ಧಂತ ಇದೆ, ತಂದೆ ಸತ್ತ ಮೇಲೆ ಮಕ್ಕಳಿಗೆ ಆ ಜಮೀನನ್ನು ಮಕ್ಕಳ ಹೆಸರಿನಲ್ಲಿ ಮಾಡಬೇಕಾದರೆ ಹಲವಾರು ವರ್ಷಗಳು ಹಿಡಿಯುತ್ತವೆ. ಅದಕ್ಕೆ ಅಲ್ಲಿನ ರಾಜಕಾರಣಗಳು ಬಹಳಷ್ಟು ಒತ್ತು ಕೊಟ್ಟ ಮೇಲೆ ತಂದೆ ಹೆಸರಿನ ಜಮೀನನ್ನು ಇವರ ಪಾಲಿಗೆ ಬರೆಯುವಂತಹ ಕೆಲಸ ಆಗುತ್ತದೆ. ಇಲ್ಲಿ ಪಾರದರ್ಶಕ ಆಗಬೇಕು. ಇವತ್ತು ಗ್ರಾಮದಲ್ಲಿ ರೈತನಿಗೆ ಏನೂ ಕಷ್ಟ ಇಲ್ಲದೆ ಸುಖ ಸಿಗಬೇಕಾದರೆ ಈ ಕೆಲಸ ಅಲ್ಲಿ ಆಗಬೇಕು. ಇತ್ತೀಚೆಗೆ ಸುಮಾರು ಒಂದು ವರ್ಷ ಅಥವಾ ಎರಡು ವರ್ಷಗಳ ಹಿಂದೆ ಭೂ ದಾಖಲೆಗಳ ಒಂದು ರಾಕೆಟ್ ಇದೆ, ಯಾರು ಬೇಕಾದರೂ ಪಹಣಿ ಬರೆಯುತ್ತಾರೆ. ಇವರು ಇಂತಹ ಜಾಗದಲ್ಲಿ ಸೀಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಇಂತಹ ಜಾಗದಲ್ಲಿ ಕಡತಗಳನ್ನು ಇಟ್ಟುಕೊಂಡಿದ್ದಾರೆ. ಒಬ್ಬ ಹೆಣ್ಣು ಮಗಳು ಜಿಲ್ಲಾಧಿಕಾರಿಗಳಿದ್ದರು. ನಾನು ಹೋಗಿ ನೇರವಾಗಿ ಹೇಳಿದೆ, ಇಂತಹ ಜಾಗದಲ್ಲಿದೆ ನೀವು ಹೋಗಿ ಇದನ್ನು ವಶಕ್ಕೆ ತೆಗೆದುಕೊಳ್ಳಿ ಎಂದು ಹೇಳಿದೆ. ನನ್ನ ಪಕ್ಕದ ಹಳ್ಳಿ ರೈತನಿಗೆ 1939ನೇ ಇಸವಿಯಲ್ಲಿ ಯಾವುದೋ ಒಂದು ಪತ್ರ ಹಾಕಿರುವುದನ್ನು ಕಿತ್ತು ಆಗಿನ ತಹಶೀಲ್ದಾರ್ ಸೈನ್ ಹಾಕಿದ ಪತ್ರ ನನಗೆ ತೋರಿಸಿದರು. ಇದು ಯಾರು ಮಾಡಿದರು ಎಂದು ಹೇಳಿದರೂ ಕೂಡ, ಇದು ಕೋಲಾರ ತಾಲ್ಲೂಕಿನಲ್ಲಿ ಅಲ್ಲ, ಎಲ್ಲ ಜಿಲ್ಲೆಗಳಲ್ಲಿದೆ. ಒಂದು ಸಾರಿ ನಾನು ಅಕ್ರಮ ಸಕ್ರಮ ಸಾಗುವಳಿ ಅಧ್ಯಕ್ಷನಾಗಿದ್ದಾಗ ಮೂರು ನಾಲ್ಕು ವರ್ಷಗಳಲ್ಲಿ ಒಬ್ಬ ರೈತ ಸಾಗುವಳಿ ಚೀಟಿ ತೆಗೆದುಕೊಂಡು ಬಂದ ನಮ್ಮ ಲಿಸ್ಟ್‌ನಲ್ಲಿ ನಾವು ಅದನ್ನು ಸ್ಯಾಂಕ್ಷನ್ ಮಾಡಿಲ್ಲ. ಅಕ್ರಮ ಸಕ್ರಮ ಸಾಗುವಳಿ ಚೀಟಿಯಲ್ಲಿ ಸ್ಯಾಂಕ್ಷನ್ ಆರ್ಡರ್ ತೆಗೆದುಕೊಂಡು ಸಾಗುವಳಿ ಚೀಟಿ ನನಗೆ ಕೊಟ್ಟಿದ್ದಾರೆ, ಮತ್ತೆ ಇನ್ನೊಬ್ಬರು ಅರ್ಜಿ ಹಾಕಿದ್ದಾರೆ, ಇದನ್ನು ಮಾಡಬಾರದು ಎಂದು ಅರ್ಜಿ ತೆಗೆದುಕೊಂಡು ಬಂದರು. ನಾನು ಮತ್ತು ಸಂಬಂಧಪಟ್ಟ ತಹಶೀಲ್ದಾರವರಿಗೆ ಕೇಳಿದೆ, ಸಾಗುವಳಿ ಚೀಟಿ ಇದೆ ಎಂದು ಹೇಳಿದರೆ, ತಹಶೀಲ್ದಾರ್‌ರವರು ಬೋಗಸ್ ಸಾಗುವಳಿ ಚೀಟಿ ಕೊಟ್ಟಿದ್ದಾರೆ ಎಂದು ಹೇಳಿದರು. ನಾನು ಆಗಲೇ ಪೊಲೀಸ್‌ನವರಿಗೆ ಕರೆಸಿ ಅವರನ್ನು ಆರೆಸ್ಟ್ ಮಾಡುವ ಕೆಲಸ ಮಾಡಿದೆ. ಇವೊತ್ತು ವಿದ್ಯಾವಂತರಲ್ಲಿದ ಮುಗ್ಧರೈತರಿಗೆ ಈ ತರಹದ ಕಿರುಕುಳ ಪ್ರತಿ ಹಂತದಲ್ಲಿ ನೀಡುತ್ತಿದ್ದಾರೆ. ಅಲ್ಲಿ ಪಾರದರ್ಶಕತೆ ಆಗಬೇಕು. ಅವನಿಗೆ ಯಾವುದೇ ದಾಖಲೆಗಳು ಸಿಗಬೇಕಾದರೆ ಪಾರದರ್ಶಕವಾಗಿ ಸಿಗುವುದಾದರೆ ಅನುಕೂಲವಾಗುತ್ತದೆ. ಇವತ್ತು ಹಳ್ಳಿ ಮಟ್ಟದಲ್ಲಿ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳನ್ನು ನೀವು ಮಾಡಿದ್ದೀರೀ, ಪಂಚಾಯಿತಿಯಲ್ಲಿ ಅವನು ಮನೆ ಕಟ್ಟಬೇಕಾದರೆ ಒಂದು ರಾಪಾಯಿಖರ್ಚು ಮಾಡದೆ ಪಂಚಾಯಿತಿ ಲೈಸನ್ಸ್ ಸಿಗಬೇಕು, ಒಂದು ರೂಪಾಯಿ ಖರ್ಚಿಲ್ಲದೆ ಅವನ ಮನೆಗೆ ಕರೆಂಟ್ ಬರಬೇಕು. ಒಂದು ರೂಪಾಯಿ ಖರ್ಚಿಲ್ಲದೆ ಅವನ ಹೊಲಕ್ಕೆ ಕರೆಂಟ್ ಕೊಡುವ ಕೆಲಸ ಆಗಬೇಕು. ಇಲ್ಲಿ ಪಾರದರ್ಶಕವಾಗಿ 100 ಕ್ಕೆ 80 ಭಾಗದಷ್ಟು ಜನ ಏನು ರೈತರು ಹಳ್ಳಿ ಗಾಡಿನಲ್ಲಿ ಬದುಕುತ್ತಿದ್ದಾರೆ, ಆ ಹಳ್ಳಿಗಾಡಿನಲ್ಲಿ ಈ ಕೆಲಸವಾಗಬೇಕು. ಇವತ್ತು ಆರೋಗ್ಯ ಇಲಾಖೆ, ಇವತ್ತು ತಾವೇ ಆಯವ್ಯಯದಲ್ಲಿ ಹೇಳಿದ ಹಾಗೆ ಹೆರಿಗೆಗೆ ಹಣ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದೀರಿ. ಆರೋಗ್ಯ ಇಲಾಖೆಯಲ್ಲಿ ಬಹಳ ವರ್ಷಗಳಿಂದ ಎಎನ್‌ಎಮ್‌ಗಳನ್ನು ಅಪಾಯಿಂಟ್ ಮಾಡಿ ಅವರಿಗೆ ಉಳಿಯಲಿಕ್ಕೆ ಕೂಡ ಸರ್ಕಾರದವವು ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಎಷ್ಟು ಜನ ಹಳ್ಳಿಗಳಲ್ಲಿ ಉಳಿಯುತ್ತಿದ್ದಾರೆ, ಸ್ವಾತಂತ್ರ್ಯ ಪೂರ್ವದಲ್ಲಿ ಯಾವ

ಪರಿಸ್ಥಿತಿ ಇತ್ತು ಅದೇ ಪರಿಸ್ಥಿತಿ ಇವತ್ತಿಗೂ ಹಳ್ಳಿಗಳಲ್ಲಿ ಇದೆ. ನಿರ್ಮಲೀಕರಣ ಹಳ್ಳಿಯಲ್ಲಿ ನಾವು ಹೇಗೆ, ನಮ್ಮ ಸಭಾ ನಾಯಕರು ಬೆಂಗಳೂರನ್ನು ಸಿಂಗಾಪೂರ್ ಮಾಡಬೇಕೆಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಆ ಹಳ್ಳಿಯಲ್ಲಿಯೂ ಕೂಡ ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕು. ಅದೂ ಪಾರದರ್ಶಕ. ಆಡಳಿತದಲ್ಲಿ ಪಾರದರ್ಶಕ ಎನ್ನುವ ಮಾತನ್ನು ಮಾತನಾಡಿದಾಗ 100ಕ್ಕೆ 80 ಭಾಗ ಹಳ್ಳಿಯಲ್ಲಿ ಜೀವನ ಮಾಡುತ್ತಾರೆ ಅದನ್ನು ನಾವು ನೋಡಬೇಕು. ಆರೋಗ್ಯ ಇಲಾಖೆಯಲ್ಲಿ ಪಿಹೆಚ್‌ಇ, ಪಿಹೆಚ್.ಸಿಎಲ್ಲ ಇದೆ, ಅಲ್ಲಿ ಯಾರಾದರೂ ರೋಗಿ ಹೋದರೆ ಮಾತ್ರೆ ಕೂಡ ಸಿಗುವುದಿಲ್ಲ. ನಾನು ಅದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ನರ್ಸ್‌ಗಳಿಗೆ, ಡಾಕ್ಟರ್‌ಗಳಿಗೆ ಸಂಬಳ ಕೊಡುವುದಕ್ಕೆ ಮಾತ್ರ ಸೀಮಿತವಾಗಿದೆ, ಅಲ್ಲಿ ಬರುವ ರೋಗಿಗೆ ಶುಶ್ರೂಷೆ ಕೊಡುವ ಕೆಲಸವಾಗುತ್ತಿಲ್ಲ. ಇಲ್ಲಿ ಪಾರದರ್ಶಕವಾಗಿ ಮಾಡುವ ಕೆಲಸವನ್ನು ಮಾಡಬೇಕು. ಸರ್ಕಾರ ಈ ದಿಕ್ಕಿನಲ್ಲಿ ಯೋಚನೆ ಮಾಡಬೇಕು ಇಲ್ಲಿ ನಾವು ಮಾಡಬೇಕಾದ ಕೆಲಸ ಅಂದರೆ ಪಶುಸಂಗೋಪನೆ, ನನ್ನದೆ 180 ಕುರಿಗಳಿದ್ದವು. ರೋಗ ಬಂದಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದರೆ, ಏನೂ ಪ್ರಯೋಜನವಾಗಲಿಲ್ಲ ಕಡೆಗೆ 40 ಕುರಿಗಳು ಉಳಿದವು, ಅನಂತರ ಒಂದು ವಾರದಲ್ಲಿ ಎಲ್ಲ ಕುರಿಗಳು ಸತ್ತು ಹೋದವು. ಒಬ್ಬ ಶಾಸಕನಾದ ನನಗೆ ಈ ಕೆಲಸ ಆದರೆ ಸಾಮಾನ್ಯ ರೈತನ ಗತಿ ಏನು, ಒಬ್ಬ ಬರೀ ಕುರಿಕಾಯುವವನು, ಬರೀ ಕುರಿಗಳನ್ನೇ ಸಾಕಿ ಜೀವನ ಮಾಡುವವನ ಗತಿ ಏನು ಎಂದು ನಾವು ಈ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗುತ್ತದೆ. ಈ ಸಾರಿ ಬಡ್ಜೆಟ್‌ನಲ್ಲಿ ಮಾನ್ಯ ಪಶುಸಂಗೋಪನಾ ಮಂತ್ರಿಗಳು 1999-2000ನೇ ಸಾಲಿಗೆ ಔಷಧಿಗಳಿಗೆ ಮೀಸಲಿಟ್ಟ ಒಟ್ಟು ಮೊತ್ತ ಐದು ಕೋಟಿ ರೂಪಾಯಿಗಳು ಖರೀದಿ ಮಾಡಿದ ಐದು ಕೋಟಿ ರೂಪಾಯಿಗಳು ಮಾರ್ಚ್ 31ಕ್ಕೆ ಲ್ಯಾಪ್ಸ್ ಆಯಿತು. ಆ ಐದು ಕೋಟಿ ರೂಪಾಯಿಗಳನ್ನು ಈ ಮೂಕ ಜೀವಿಗಳಿಗೆ ಖರ್ಚು ಮಾಡಲಿಲ್ಲ. ನಾನು ಆ ಸರ್ಕಾರ ಈ ಸರ್ಕಾರ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ಪಾರದರ್ಶಕವಾಗಿ ಕೆಲಸ ಮಾಡಬೇಕಾಗಿರುವುದು ಮುಖ್ಯ ಇದೆ ಈ ರಾಜ್ಯದಲ್ಲಿ ಐದು ಕೋಟಿ ರೂಪಾಯಿಗಳು ಔಷಧಿಗಳನ್ನು ಖರೀದಿ ಮಾಡುವ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಇದರ ಬಗ್ಗೆ ಪಿಡಿಎ ಅಕೌಂಟ್‌ನಲ್ಲಿ ಇಟ್ಟು ಠೇವಣಿ ಮಾಡಿ ಏಪ್ರಿಲ್‌ನಲ್ಲಿ ರಿಲೀಸ್ ಮಾಡಿಸುತ್ತೇವೆ ಎಂದು ಆಗಿನ ಮಂತ್ರಿಗಳು ಹೇಳಿದರು. ಅದು ಇವತ್ತು 1999-2000 ನೇ ಇಸವಿಯಲ್ಲಿ ಯಾವುದೇ ಪಶು ಚಿಕಿತ್ಸಾಲಯ ಪ್ರಾರಂಭವಾಗಲಿಲ್ಲ. ಐದು ಕೋಟಿ ರೂಪಾಯಿಗಳು ಲ್ಯಾಪ್ಸ್ ಆಯಿತು, ಇವತ್ತು ಹಳ್ಳಿಗಳಲ್ಲಿ, ತಾಲ್ಲೂಕು ಮಟ್ಟಗಳಲ್ಲಿ ಜಿಲ್ಲಾ ಮಟ್ಟದಲ್ಲಿರುವ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಅಲ್ಲಿ ಬರೀ ಪಶು ಸಂಗೋಪನಾ ಡಾಕ್ಟರ್‌ಗಳು, ಮತ್ತು ಉಳಿದ ಪಶು ಸಂಗೋಪನಾ ಅಧಿಕಾರಿಗಳಿದ್ದು ಔಷಧಿಗಳಿಲ್ಲದಿದ್ದರೆ ಏನು ಮಾಡುವುದು? ಮನುಷ್ಯನಿಗೆ ಏನಾದರೂ ಕಾಯಿಲೆ ಬಂದರೆ ಮನುಷ್ಯ ಹೇಳಿಕೊಳ್ಳುತ್ತಾನೆ. ಆದೇ ಪಶುಗಳಿಗೆ ಬಂದರೆ ಅವು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಪಶುಗಳ ಕಾಲಿಗೆ ಹುಳ ಬಿದ್ದರೆ ರೈತರು ಬೇವಿನ ಸೊಪ್ಪು ಉಪಯೋಗಿಸುವ ಕೆಲಸ ಸ್ವಾತಂತ್ರ್ಯ ಬಂದು 53 ವರ್ಷಗಳಾದರೂ ಕೂಡ ಇದು ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಆಗುತ್ತಿದೆ. ಇಲ್ಲಿ ಕೆಲಸಗಳು ಪಾರದರ್ಶಿಕವಾಗಿರಬೇಕು. 5 ಕೋಟಿ ರೂಪಾಯಿಗಳೇನು ಲ್ಯಾಪ್ಸ್ ಆಗಿದೆ ಅದನ್ನು ಪಿ.ಡಿ. ಅಕೌಂಟ್‌ನಲ್ಲಿಡಬೇಕಾಗಿತ್ತು. ಅದನ್ನು ಇಟ್ಟಿಲ್ಲ. ಇದನ್ನು ಪಿ.ಡಿ. ಅಕೌಂಟ್ ನಲ್ಲಿಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇನ್ನು 1988-89ರಲ್ಲಿ 100 ಪಶು ಚಿಕಿತ್ಸಾ ಆಸ್ಪತ್ರೆಗಳನ್ನು

ಪ್ರಾರಂಭಿಸುವುದರ ಜೊತೆಗೆ 50 ಪ್ರಾಥಮಿಕ ಪಶು ಚಿಕಿತ್ಸಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಯಿತು. ಆದರೆ 1999-2000 ನೇ ಸಾಲಿನಲ್ಲಿ ಯಾವುದೇ ಪಶು ಚಿಕಿತ್ಸಾ ಆಸ್ಪತ್ರೆಗಳನ್ನು ಪ್ರಾರಂಭಿಸಲಿಲ್ಲ. ಈ ಸಾಲಿನಲ್ಲೂ ಕೂಡ ಅದರ ಬಗ್ಗೆ ಆಯವ್ಯಯದಲ್ಲಾಗಲಿ ಅಥವಾ ರಾಜ್ಯಪಾಲರ ಭಾಷಣದಲ್ಲಾಗಲಿ ಆಸ್ಪತ್ರೆ ತೆರೆಯುವ ಬಗ್ಗೆ ಹೇಳಿಯೇ ಇಲ್ಲ. ಜಿಲ್ಲೆಯ ರೈತರು ಹಾಲು ಹಾಗೂ ರೇಷ್ಮೆ ಉದ್ಯೋಗಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ನಮ್ಮ ಕಡೆ ಇದ್ದಕ್ಕಿದ್ದ ಹಾಗೆ ಒಂದೊಂದು ಲೀಟರ್ ಹಾಲಿಗೆ 40 ರಿಂದ 45 ಪೈಸೆಯಷ್ಟು ಬೆಲೆಯನ್ನು ಇಳಿಸುವುದಕ್ಕೆ ಹೋಗುತ್ತಿದ್ದಾರೆ. ಇದರ ಬಗ್ಗೆ ಅಲ್ಲಿರುವ ಡೈರಿಯವರನ್ನು ಕೇಳಿದರೆ ನಮಗೆ ಒಂದು ಲೀಟರ್‌ಗೆ 7-40 ರೂಪಾಯಿಗಳನ್ನು ಕೊಟ್ಟು ಬೆಂಗಳೂರಿನಲ್ಲಿ 10-00 ರೂಪಾಯಿಗಳಿಗೆ ಮಾರುತ್ತಿದ್ದಾರೆ ಎನ್ನುವಂಥ ಮಾತನ್ನು ಹೇಳುತ್ತಾರೆ. ಪ್ರತಿ ದಿನ ಬೆಳಿಗ್ಗೆಯಿಂದಲೇ ಹಸುವಿನ ಚಾಕರಿಯನ್ನು ಮಾಡಿ ಅದಕ್ಕೆ ಹುಲ್ಲನ್ನು ತಂದು ಕಷ್ಟಪಟ್ಟು ದುಡಿಯುವ ರೈತರಿಗೆ ಸಿಗಬೇಕಾದ ಲಾಭ ಸಿಗದೇ ಕೆ.ಎಂ.ಎಫ್.ನವರಿಗೆ ಹೆಚ್ಚು ಲಾಭ ಹೋಗುತ್ತಿದೆ. ಹೆಚ್ಚು ಲಾಭ ನಿಜವಾಗಿ ರೈತನಿಗೆ ಏನು ಸಿಗಬೇಕೋ ಅದು ಅವನಿಗೆ ಸಿಗುವಂತೆ ಮಾಡುವಲ್ಲಿ ಸರ್ಕಾರ ಪಾರದರ್ಶಕವಾಗಿ ಕೆಲಸವನ್ನು ಮಾಡಬೇಕು. ಇದರ ಬಗ್ಗೆ ನಾಯಕರು ಗಮನವನ್ನು ಹಸಿಸಬೇಕು. ಹಿಂದೆ ನಮ್ಮ ಹಳ್ಳಿಯಲ್ಲಿ ಪ್ರತಿಯೊಂದು ಮನೆಯಲ್ಲೂ ಕನಿಷ್ಠ 100 ಕುರಿಗಳು ಇರುತ್ತಿದ್ದವು. ಇಂದು ಇಡೀ ಹಳ್ಳಿಗೆ ಸುಮಾರು 200 ರಿಂದ 300 ಕುರಿಗಳು ಇರುವಷ್ಟೆ. ನನ್ನ ಹಳ್ಳಿಯಲ್ಲಿಯೇ ಈ ಪರಿಸ್ಥಿತಿ ಇದೆ. ಇದಕ್ಕೆ ಕಾರಣ ಹುಲ್ಲುಗಾವಲು ಪ್ರದೇಶವಿಲ್ಲದೇ ಇರುವುದೇ ಆಗಿದೆ. ಪಶು ಸಾಕಾಣಿಕೆಗೆ ಕುರಿ ಸಾಕಾಣಿಕೆಗೆ ಹುಲ್ಲುಗಾವಲು ಪ್ರದೇಶವಿಲ್ಲದೇ ಇರುವುದರಿಂದ ರೈತರುಗಳು ಇದ್ದ ಪರಿಸ್ಥಿತಿಯಲ್ಲಿಯೇ ಇವುಗಳನ್ನು ಸಾಕಲು ಬಹಳ ಕಷ್ಟಪಡುತ್ತಿದ್ದಾರೆ ಎಂಬುದನ್ನು ಸರ್ಕಾರ ಮನಗಾಣಬೇಕು. ಇನ್ನು ಸ್ವಚ್ಛ ಗ್ರಾಮ ಯೋಜನೆಯನ್ನು ಈ ಸರ್ಕಾರ ಹಾಕಿಕೊಂಡಿದೆ. ಈ ನಿಟ್ಟಿನಲ್ಲಿಯೇ ನಮ್ಮ ಸರ್ಕಾರವಿದ್ದಾಗ ಹಳ್ಳಿಯಲ್ಲಿ ಪಂಚಾಯಿತಿ ಸದಸ್ಯರಾಗಬೇಕಾದರೆ ಶೌಚಾಲಯವನ್ನು ಹೊಂದಿರಲೇಬೇಕೆಂದು ಮಾಡಲಾಗಿತ್ತು. ಆದರೆ ಅದನ್ನು ಸರಿಯಾಗಿ ಜಾರಿಗೆ ತರುವುದಕ್ಕೆ ಆಗಲಿಲ್ಲ. ಇಂದಿಗೂ ಕೂಡ ಹಳ್ಳಿಗಳ ಕಡೆ ಬೆಳಗಾದರೆ ಚೆಂಬನ್ನು ಹಿಡಿದುಕೊಂಡು ಮರದ ಕೆಳಗೆ ಮರೆಯಲ್ಲಿ ಮಲಮೂತ್ರ ವಿಸರ್ಜನೆಯನ್ನು ಮಾಡಿಕೊಳ್ಳುವ ಪರಿಸ್ಥಿತಿ ಇದೆ. ಹೆಣ್ಣುಮಕ್ಕಳೂ ಕೂಡ ಇದೇ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. 100 ಕ್ಕೆ 80 ಜನರಿರುವ ಹಳ್ಳಿಗಳ ಪ್ರದೇಶಗಳಲ್ಲಿ ಶೌಚಾಲಯವನ್ನು ಕೊಡಬೇಕಾದರೆ ಯಾವ ಯೋಜನೆಯನ್ನು ಹಾಕಿಕೊಳ್ಳಬೇಕೆನ್ನುವ ಕಡೆ ಕ್ರಮ ಕೈಗೊಳ್ಳಲು ಪಾರದರ್ಶಕವಾಗಿ ಚಿಂತನೆ ಮಾಡಬೇಕಾದ ಅಗತ್ಯವಿದೆ. ಹಿಂದಿನ ಮುಖ್ಯಮಂತ್ರಿಗಳು ಇದರ ಬಗ್ಗೆ ಸವಿರಾಗಿ ಹಾಸ್ಯಮಯವಾಗಿ ಒಂದು ಉದಾಹರಣೆಯನ್ನು ಕೊಟ್ಟಿದ್ದರು. ಒಂದು ಬಾರಿ ಜೆ.ಹೆಚ್. ಪಟೇಲ್‌ರವರು ಮಾತನಾಡುತ್ತಾ ರಷ್ಯಾ ದೇಶದ ಅಧ್ಯಕ್ಷರು ಭಾರತಕ್ಕೆ ಬಂದಿದ್ದಾಗ ಅವರ ಜೊತೆ ಜವಹರ್‌ಲಾಲ್ ನೆಹರೂರವರು ಕೂಡ ಉತ್ತರ ಪ್ರದೇಶದ ಹಳ್ಳಿಯಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿನ ಜನರು ಬೆಳಿಗ್ಗೆಯೇ ಚೆಂಬನ್ನು ಹಿಡಿದುಕೊಂಡು ಹೋಗುತ್ತಿದ್ದರಂತೆ. ಇದರ ಬಗ್ಗೆ ರಷ್ಯಾ ಅಧ್ಯಕ್ಷರು ವಿವರಣೆ ಕೇಳಿದಾಗ ಚೆಂಬನ್ನು ಹಿಡಿದುಕೊಂಡು ಹೋಗುವುದು ನಮ್ಮ ದೇಶದ ಸಿಸ್ಟಂ ಎಂದು ನೆಹರೂರವರು ಹೇಳಿದರಂತೆ. ಜವಹರ್‌ಲಾಲ್ ನೆಹರೂರವರು ಒಮ್ಮೆ ರಷ್ಯಾ ದೇಶಕ್ಕೆ ಹೋಗಿದ್ದಾಗ ಅಲ್ಲೂ ಕೂಡ ಒಬ್ಬರು ಬೆಳಿಗ್ಗೆಯೇ ಚೆಂಬನ್ನು ಹಿಡಿದುಕೊಂಡು ಹೋಗುತ್ತಿರುವುದನ್ನು ನೋಡಿ ರಷ್ಯಾ

ದೇಶದಲ್ಲೂ ಕೂಡ ಚೆಂಬನ್ನು ಹಿಡಿದುಕೊಂಡು ಹೋಗುವವರು ಇದ್ದಾರಾ ಎಂದು ರಷ್ಯಾ ದೇಶದ ಅಧ್ಯಕ್ಷರನ್ನು ಕೇಳಿದಾಗ ತಕ್ಷಣ ಆತನನ್ನು ಹಿಡಿದುಕೊಂಡು ಬಂದು ನೋಡಿದರೆ ಆತನೂ ಕೂಡ ಇಂಡಿಯನ್ ಎಂಬುದು ಗೊತ್ತಾಯಿತಂತೆ. 53 ವರ್ಷಗಳು ಕಳೆದರೂ ಕೂಡ ಇನ್ನೂ ಹಳ್ಳಿಗಳಲ್ಲಿ ಇದೇ ಪರಿಸ್ಥಿತಿ ಇದೆ. ಇದರ ಬಗ್ಗೆ ಇನ್ನೂ ಸರಿಯಾದ ವ್ಯವಸ್ಥೆಗಳನ್ನು ಹಳ್ಳಿಗಳಲ್ಲಿ ಮಾಡಿಲ್ಲ. ಇತ್ತೀಚೆಗೆ ಚರಂಡಿಗಳನ್ನು ನಿರ್ಮಾಣ ಮಾಡುವ ಕೆಲಸವನ್ನು ಹಳ್ಳಿಗಳಲ್ಲಿ ಮಾಡಿದ್ದಾರೆ. ಆದರೆ ಅದನ್ನು ಸ್ಲೋಪ್ ಕೊಟ್ಟು ಸರಿಯಾದ ಚರಂಡಿ ನಿರ್ಮಾಣ ಮಾಡದೇ ಇರುವುದರಿಂದ ಇಂದು ನಾವೇ ಸೊಳ್ಳೆಗಳನ್ನು ಬೆಳೆಸಲು ಅವಕಾಶ ಮಾಡಿಕೊಟ್ಟ ಹಾಗಿದೆ. ಚರಂಡಿಯಲ್ಲಿ ಕಸ ಕಡ್ಡಿ ಬಿದ್ದು ಸೊಳ್ಳೆ ಜಾಸ್ತಿಯಾಗುತ್ತಿರುವುದನ್ನು ನೋಡಿದರೆ ಏಕಾದರೂ ಚರಂಡಿ ಕಟ್ಟಿದರೋ ಎನ್ನುವಂತಾಗಿದೆ. ಇದನ್ನು ಸ್ವಚ್ಛಗೊಳಿಸುವಂಥ ಕೆಲಸವನ್ನು ಮಾಡಬೇಕಾಗಿದೆ. ಇಂದು ಸದನದಲ್ಲಿ 224 ಶಾಸಕರೇನಿದ್ದಾರೆ ಅವರುಗಳು ಹಳ್ಳಿಗಳಲ್ಲಿ ಜೀವನ ನಡೆಸುತ್ತಿದ್ದರೆ ಎಷ್ಟು ಜನರು ಶೌಚಾಲಯವನ್ನು ಹೊಂದಿದ್ದೇವೆ ಎನ್ನುವ ಬಗ್ಗೆ ಬೇರೆ ಯಾರು ಕೇಳದಿದ್ದರೂ ನಮಗೆ ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಇಂದು ಸ್ವಚ್ಛ ಗ್ರಾಮ ಯೋಜನೆಯನ್ನು ಏನು ಹಾಕಿಕೊಂಡಿದ್ದಾರೆ ಇದನ್ನು ಜಾರಿಗೆ ತರುವಲ್ಲಿ ಕೂಡ ಸರ್ಕಾರ ಪಾರದರ್ಶಕವಾಗಿ ಕೆಲಸ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಕಾರ್ಯ ಮಾಡಿ ಊರಿನ ನೈರ್ಮಲ್ಯವನ್ನು ಕಾಪಾಡಬೇಕು. ಇನ್ನು ಪರಿಸರದ ಬಗ್ಗೆ ಹೇಳಬೇಕೆಂದರೆ ಇಂದು ರಾಜ್ಯದಲ್ಲಿ ಕೆಟ್ಟ ಪರಿಸರದಿಂದಾಗಿ ಜಲ ಕ್ಷಾಮ, ಆಹಾರ ಕ್ಷಾಮ, ವಸತಿ ಕ್ಷಾಮ, ಆರೋಗ್ಯ ಕ್ಷಾಮ ಮತ್ತು ವಿದ್ಯಾ ಕ್ಷಾಮಗಳು ಪಂಚಭೂತಗಳಾಗಿ ನಮ್ಮನ್ನು ಕಾಡುತ್ತಿವೆ. 1893 ರಲ್ಲಿ ಶಿವನಸಮುದ್ರದಿಂದ ಕೆ.ಜಿ.ಎಫ್.ಗೆ ವಿದ್ಯುತ್ ಸಂಪರ್ಕ ಒದಗಿಸಲು ಲೈನ್ ಹಾಕುವಲ್ಲಿ ಎಷ್ಟೋ ಮರಗಳನ್ನು ಆಹುತಿ ತೆಗೆದುಕೊಂಡರು ಎಂಬ ಮಾತನ್ನು ಕೇಳಿದ್ದೇವೆ. ನಾನು ನಮ್ಮ ಊರಿನಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ಜಿಂಕೆಗಳನ್ನು, ನವಿಲುಗಳನ್ನು ಕಣ್ಣಾರೆ ನೋಡುತ್ತಿದ್ದೆ. ಈಗ ನಮ್ಮ ಹುಡುಗರಿಗೆ ಜಿಂಕೆ ನವಿಲು, ಅಳಿಲು ಎಂದು ಅವುಗಳ ಚಿತ್ರಗಳನ್ನು ಪುಸ್ತಕದಲ್ಲಿ ತೋರಿಸುವಂಥ ಪರಿಸ್ಥಿತಿಗೆ ಬಂದಿದ್ದೇವೆ. ಇವತ್ತು ಅರಣ್ಯವನ್ನು ಬೆಳೆಸಲು ಹಣ ಖರ್ಚು ಮಾಡುತ್ತಿದ್ದರೂ ಕೂಡ ಯಾವ ಪ್ರಮಾಮದಲ್ಲಿ ಅರಣ್ಯವನ್ನು ಬೆಳೆಸಬೇಕಾಗಿತ್ತೋ ಆ ಪ್ರಮಾಮದಲ್ಲಿ ಬೆಳೆಸುತ್ತಿಲ್ಲ. ಪ್ರತಿ ವರ್ಷ ಕೇವಲ ದಾಖಲೆ ಪುಸ್ತಕದಲ್ಲಿ ಮಾತ್ರ ಕೋಟ್ಯಾಂತರ ಮರಗಳು ಬೆಳೆಯುತ್ತಿವೆ. ಆದರೆ ಪ್ರಾಕ್ಟಿಕಲಿ ಭೂಮಿಯ ಮೇಲೆ ಎಷ್ಟು ಮರಗಳು ಬೆಳೆಯುತ್ತಿವೆ ಎಂಬ ಬಗ್ಗೆ ಸರ್ಕಾರಕ್ಕಾಗಲಿ ಅಥವಾ ಅರಣ್ಯ ಇಲಾಖೆಗಾಗಲಿ ಲೆಕ್ಕವೇ ಇಲ್ಲವಾಗಿದೆ. ಕಳೆದ ಹತ್ತು ವರ್ಷಗಳಿಂದ ಕೆರೆಗಳ ಅಕ್ಕಪಕ್ಕದಲ್ಲಿ ಹಾಗೂ ರಸ್ತೆಗಳ ಅಕ್ಕಪಕ್ಕಗಳಲ್ಲಿ ಗಿಡಗಳನ್ನು ನೆಟ್ಟು ಮರಗಳನ್ನು ಬೆಳೆಸುವ ಕೆಲಸವನ್ನು ಅರಣ್ಯ ಇಲಾಖೆ ಮೂಲಕ ಮಾಡಿಸಿದ್ದಾರೆ. ಇದು ಚೆನ್ನಾಗಿ ಬಂದಿವೆ. ಆದರೆ ಬೇರೆ ಕಡೆಗಳಲ್ಲೂ ಕೂಡ ಅರಣ್ಯವನ್ನು ಏನು ಬೆಳೆಸಬೇಕಾಗಿತ್ತೋ ಅಷ್ಟು ಅರಣ್ಯವನ್ನು ಬೆಳೆಸಿಲ್ಲ. ಈ ನಿಟ್ಟಿನಲ್ಲಿಯೂ ಕೂಡ ಸರ್ಕಾರ ಪಾರದರ್ಶಕವಾಗಿ ಕೆಲಸವನ್ನು ಮಾಡಬೇಕಾದ ಅವಶ್ಯಕತೆ ಇದೆ. ಒಂದು ಗಿಡವನ್ನು ಬೆಳೆಸಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ಎಂಬ ಬಗ್ಗೆ ಲೆಕ್ಕವನ್ನು ಹಾಕಬೇಕು. ಆ ರೀತಿಯಲ್ಲಿ ಕಟ್ಟುನಿಟ್ಟಾಗಿ ಲೆಕ್ಕ ಹಾಕಿದಾಗ ಮಾತ್ರ ಪಾರದರ್ಶಕವಾಗಿ ಅರಣ್ಯವನ್ನು ಬೆಳೆಸಲು ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ತೋಟಗಾರಿಕೆ ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮೊನ್ನೆ ಕೆಟ್ಟ ಕಾಯಿಲೆಗೆ ತುತ್ತಾಗಿರುವ ತೆಂಗಿನಕಾಯಿಯನ್ನು ಸದನದಲ್ಲಿ

ತೋರಿಸಿದಾಗ ಕಾಗೋಡು ತಿಮ್ಮಪ್ಪನವರಿಗೆ ಕೋಪ ಬಂದುಬಿಟ್ಟಿತು. ಕೋಲಾರ ಜಿಲ್ಲೆಯಲ್ಲಿ ಇಂಡೋ-ಅಮೆರಿಕನ್ ಸೀಡ್ಸ್ ತಂದು ಟೊಮೋಟೋ ಬೆಳೆದು ಅದರಿಂದ ಸ್ವಲ್ಪ ಹಣವನ್ನು ರೈತ ಪಡೆಯಲು ಅನುಕೂಲವಿತ್ತು. ಈ ಬೆಳೆಗೂ ಕೂಡ ಇಂದು ವೈಟ್‌ವರ್ಮ್ಸ್, ಕಾಯಿಲೆ ಬಂದಿದೆ. ಇದರಿಂದಾಗಿ ಕೋಲಾರದಲ್ಲಿ ಟಮೋಟೋವನ್ನು ಬೆಳೆಯುವುದೂ ಕೂಡ ಕಷ್ಟಕರವಾಗಿದೆ. ಇದಕ್ಕೆ ವಿಜ್ಞಾನಿಗಳು ಸರಿಯಾದ ಔಷಧಿಯನ್ನು ಕಂಡುಹಿಡಿಯುತ್ತಿಲ್ಲವೋ ಅಥವಾ ರೈತರಿಗೆ ಕೊಡುವಂಥ ಔಷಧಿಗಳೇ ಕೆಟ್ಟಿರುತ್ತವೆಯೋ ಎಂಬ ಬಗ್ಗೆ ಸರ್ಕಾರ ಪಾರದರ್ಶಕವಾಗಿ ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇದೆ. ಇಂದು ಒಂದು ಬೆಳೆಗೆ ಒಳ್ಳೆ ಬೆಲೆ ಸಿಗುತ್ತಿದೆ ಎಂದರೆ ಇಡೀ ಜಿಲ್ಲೆಯಲ್ಲೆಲ್ಲಾ ರೈತರುಗಳು ಅದೇ ಬೆಳೆಯನ್ನು ಬೆಳೆಯುತ್ತಿದ್ದಾರೆ. ಕಡೆಗೆ ಹೆಚ್ಚು ಬೆಳೆ ಬೆಳೆದು ಬೆಲೆ ಕಡಿಮೆಯಾಗುತ್ತದೆ ಮತ್ತು ರೈತರಿಗೆ ನಷ್ಟವಾಗುತ್ತಿದೆ. ಇದನ್ನು ತಪ್ಪಿಸಲು ಸರ್ಕಾರ ಗಮನಹರಿಸಿ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಇಂಥಿಂಥ ಕೃಷಿ ಉತ್ಪಾದನೆಗಳು ಇಷ್ಟಿಷ್ಟು ಬೇಕಾಗುತ್ತದೆ ಎಂಬ ಬಗ್ಗೆ ಮತ್ತು ಯಾವ ಸೀಸನ್‌ನಲ್ಲಿ ಯಾವ ಬೆಳೆಯನ್ನು ಎಲ್ಲಿ ಬೆಳೆಯಬಹುದು ಎಂಬ ಬಗ್ಗೆ ರೈತರಿಗೆ ಮಾಹಿತಿಯನ್ನು ಒದಗಿಸಬೇಕು. 100 ಕ್ಕೆ 80 ಪರ್ಸೆಂಟ್ ರೈತರು ಏನು ಇದ್ದಾರೆ ಆ ರೈತರು ಬೆಳೆದ ಭತ್ತವಾಗಬಹುದು, ರಾಗಿಯಾಗಬಹುದು, ಟಮೋಟೋವಾಗಿರಬಹುದು ಅಥವಾ ಮತ್ತೊಂದು ಕೃಷಿ ಉತ್ಪಾದನೆ ಇರಬಹುದು, ಇಂಥ ಬೆಳೆಗಳಿಗೆ ವೈಜ್ಞಾನಿಕವಾಗಿ ಬೆಲೆಯನ್ನು ನಿರ್ಧಾರ ಮಾಡಿ ಆ ಬೆಲೆ ರೈತರಿಗೆ ಸಿಗುವಂತೆ ಮಾಡಲು ಸೂಕ್ತ ಏರ್ಪಾಡನ್ನು ಸರ್ಕಾರ ಮಾಡಬೇಕಾಗುತ್ತದೆ. ನಮಗೆ ಎಷ್ಟು ಹಣ ಬರಬೇಕೊ ಅಷ್ಟು ಸಂದಾಯುವಾಗುವಂತಹ ಕೆಲಸವನ್ನು ಮಾಡಬೇಕು. ನಾವು ನಾಲ್ಕೈದು ವರ್ಷಗಳ ಹಿಂದೆ ಮಾನ್ಯ ಬೈರೇಗೌಡರ ಜೊತೆಯಲ್ಲಿ ಇಸ್ರೇಲ್‌ಗೆ ಹೋಗಿದ್ದೆ. ಮಾನ್ಯ ಧ್ಯಕ್ಷರೆ, ಮೂವತ್ತು ವರ್ಷಗಳ ಹಿಂದೆ ಒಬ್ಬ ಕೇರಳದವರು ಅಲ್ಲಿ ಸೆಟಲ್ ಆಗಿದ್ದರು. ಅವರು ಮನೆಗೆ ಟೀ ಕುಡಿಯಲಿಕ್ಕೆ ಕರೆದುಕೊಂಡು ಹೋದರು. ಅವರು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಒಬ್ಬ ರೈತನಾಗಿ ನನಗೆ ಆದ ಆನಂದ ಅಷ್ಟಿಷ್ಟಲ್ಲ, "From one inch of land, from one drop of water I will earn one dollar" ಅವರು ಎಂದು ಹೇಳಿದರು. ಇದು ನಿಜವಾಗಿಯೂ ನಮ್ಮ ದೇಶದಲ್ಲಿ ಹುಟ್ಟಿ, ಅದು ನಮ್ಮ ಕರ್ನಾಟಕ ರಾಜ್ಯದ ಪಕ್ಕದ ಕೇರಳದಲ್ಲಿ ಹುಟ್ಟಿ ಮೂವತ್ತು ವರ್ಷಗಳಿಂದ ಇಸ್ರೇಲ್ ದೇಶದಲ್ಲಿ ಇದ್ದರೂ ಇವತ್ತು ಒಂದು ಇಂಚು ಜಮೀನು, ಒಂದು ಡ್ರಾಪ್ ನೀರಿಗೆ ಒಂದು ಡಾಲರ್ ಹಣವನ್ನು ಸಂಪಾದನೆ ಮಾಡುತ್ತೇನೆನ್ನುವಂತಹ ಎದೆಗಾರಿಕೆ ಇದ್ದರೆ ನಮ್ಮಲ್ಲಿ ಬೇಕಾದಷ್ಟು ಜಮೀನು ಇದೆ, ಬೇಕಾದಷ್ಟು ನೀರು ಇದೆ. ಆದರೆ ಇವತ್ತು ನಾವು ಏನು ಮಾಡುತ್ತಿದ್ದೇವೆ. ನಾನು ಆಗಲೇ ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದೆ. ಮೊದಲು ನಮ್ಮಲ್ಲಿ ಹದಿನೆಂಟು ಅಡಿಗೆ ಯಥೇಚ್ಛವಾಗಿ ಬಾವಿಗಳಲ್ಲಿ ನೀರು ಸಿಗುತ್ತಾ ಇತ್ತು ಇವತ್ತು ನಾವು ಏಳುನೂರು ಅಡಿ ಆಳಕ್ಕೆ ಹೋಗಿದ್ದೇವೆ. ಇಲ್ಲಿ ವಿದ್ಯುತ್ ಇದ್ದರೆ ನೀರು ಸಿಗುತ್ತದೆ, ಇಲ್ಲದಿದ್ದರೆ ನೀರು ಇಲ್ಲವೆನ್ನುವಂತಹ ಪರಿಸ್ಥಿತಿ ಇದೆ. ಆದರೆ ಅಲ್ಲಿ ಇಸ್ರೇಲ್‌ನಲ್ಲಿ ಜೋಲ್ ನಾಮ್ ರಿವರ್‌ನಿಂದ ಕುಡಿಯುವ ನೀರು, ವ್ಯವಸಾಯಕ್ಕೆ ಎಲ್ಲಕ್ಕೂ ಉಪಯೋಗಿಸುತ್ತಿದ್ದಾರೆ. ಇವತ್ತು ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ಯಾರು ಈ ಐವತ್ತಮೂರು ವರ್ಷಗಳಲ್ಲಿ ಯೋಜನೆಯನ್ನು ಮಾಡಲಿಲ್ಲ, ಚಿಂತನೆಯನ್ನು ಮಾಡಲಿಲ್ಲ. ಅದು ಎಲ್ಲೋ ನದಿಗಳ ಪಕ್ಕಗಳಲ್ಲಿ ಇರುವವರಿಗೆ ಅನುಕೂಲವಾಗಬಹುದು,

ಮತ್ತೆ ಯಥೇಚ್ಛವಾಗಿ ಅರಣ್ಯಗಳಿರುವ ಅದರ ಪಕ್ಕದಲ್ಲಿರುವಂತಹ ಗ್ರಾಮಗಳಲ್ಲಿ, ಜಿಲ್ಲೆಗಳಲ್ಲಿ ಅನುಕೂಲವಾಗಬಹುದು. ಆದರೆ ನಮ್ಮಂತಹ ಜಿಲ್ಲೆಗಳಾದ ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ, ಗುಲ್ಬರ್ಗಾ, ಬೀದರ್, ಇಂತಹ ಜಿಲ್ಲೆಗಳಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ಮಾಡುವಂತಹ ಕೆಲಸವನ್ನು ರೈತರಿಗೆ ಕಲಿಸಬೇಕು. ಇವತ್ತು ಕೆರೆಗಳು ತುಂಬಿವೆ ಎಂದರೆ ನಾವು ಭತ್ತವನ್ನು ಹಾಕುತ್ತೇವೆ. ಇದನ್ನು ತಪ್ಪಿಸಿ ವ್ಯವಸಾಯ ಇಲಾಖೆಯವರು ಭತ್ತ ಬೇಡ, ಕಡಲೆ, ನೆಲಗಡಲೆ ಹಾಕು ಎಂದು ಕೇಳಿ ಈ ರೀತಿಯ ಬೆಳೆಗಳನ್ನು ಬೆಳೆಸುವಂತಹ ಕೆಲಸವನ್ನು ಮಾಡಬೇಕು. ನಾವು ಇವತ್ತು ವಾಟರ್ ಮ್ಯಾನೇಜ್‌ಮೆಂಟ್ ಮಾಡಬೇಕು. ಗುಜಾರಾತ್‌ನಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ನೂರಾರು ಕೆರೆಗಳಿಗೆ ನೀರನ್ನು ಚಾರ್ಜ್ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆ ಕೆಲಸವನ್ನು ನಮ್ಮ ರಾಜ್ಯದವರು ಮಾಡುತ್ತಿಲ್ಲ, ಇಲ್ಲಿ ಪಾರದರ್ಶಕವಾಗಿ ಯೋಚನೆ ಮಾಡಬೇಕು. ಈಗ ನೀರು ಏನು ಪಾತಾಳಕ್ಕೆ ಹೋಗಿದೆ, ಮತ್ತೆ ಹದಿನೆಂಟು ಅಡಿಯಿಂದ ನೀರು ತರುವಂತಹ ಕೆಲಸವನ್ನು ಮಾಡಿದಾಗ ಹಳ್ಳಿಯಲ್ಲಿ ನೂರಕ್ಕೆ ಎಂಭತ್ತು ಭಾಗ ಜನರು ಜೀವನ ಮಾಡುತ್ತಾರೆ. ವರಿಗೆ ಸಹಾಯವಾಗುತ್ತದೆನ್ನುವ ಮಾತನ್ನು ಹೇಳುವುದಕ್ಕಿಚ್ಛಿಸುತ್ತೇನೆ. ಇವತ್ತು ಹಳ್ಳಿ ಎಂದರೆ ಅವರು ಒಂದು ಕಣ ಮಾಡಲಿಕ್ಕೆ ಜಾಗಬೇಕಾಗುತ್ತದೆ. ರೈತ ಬೆಳೆಗಳನ್ನು ಉಳಿಸಿಕೊಳ್ಳುವಂಥಾದ್ದಕ್ಕೆ ಅವಕಾಶ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ. ಬೈರೇಗೌಡರು ಮತ್ತು ಮಾನ್ಯ ಶ್ರೀ ಕೆ. ಶ್ರೀನಿವಾಸಗೌಡರು ಇಸ್ರೇಲ್ ದೇಶವನ್ನು ಸುತ್ತಾಡಿಕೊಂಡು ಬಂದಿದ್ದಾರೆ. ತಾವು ಅಲ್ಲಿ ಯಾವುದೋ ನದಿಯಿಂದ ನೀರನ್ನು ಕುಡಿಯುವುದಕ್ಕೆ ಮತ್ತು ಕೃಷಿಗೆ ಮಾಡಿದ್ದಾರೆಂದು ಹೇಳಿದ್ದೀರಿ. ತಾವು ಅದನ್ನು ಯಾವ ರೀತಿಯಲ್ಲಿ ಮಾಡಿದ್ದಾರೆ, ಅದನ್ನು ನಮ್ಮಲ್ಲಿ ಮಾಡುವುದಕ್ಕೆ ಆಗುತ್ತದೆಯೇ, ಏನು, ಏನಾಗಬಹುದು, ಎಂಬುದನ್ನು ಹೇಳಿ. ತಾವು ಇಬ್ಬರೇ ಅದನ್ನು ನೋಡಿರುವಂಥಾದ್ದು, ಅದನ್ನು ತಾವು ಹೇಳಿದರೆ ಪ್ರಯತ್ನವನ್ನು ಮಾಡಬಹುದು.

ಶ್ರೀ ಕೆ.ಶ್ರೀನಿವಾಸಗೌಡ:- ನೀವು ಹೋಗಿ ಬಂದರೆ ಬಹಳ ತಿಳಿದುಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ:- ಮಾನ್ಯ ಕಾಗೋಡು ತಿಮ್ಮಪ್ಪನವರೆ, ನಿಮ್ಮ ಊರ ಪಕ್ಕದಲ್ಲಿ ಹರಿಯುವಂತಹ ವರದಾ ನದಿ, ಆ ನದಿಯಲ್ಲಿ ಹರಿಯುವಂತಹ ನೀರು ಇದೆಯಲ್ಲಾ, ಅದು ಇಡೀ ಸಾಗರ ತಾಲ್ಲೂಕಿಗೆ ಮುಳುಗಡೆಯಾಗಿರುವಂತಹ ಪ್ರದೇಶವನ್ನು ಬಿಟ್ಟು ಪ್ರತಿ ಅಂಗುಲವನ್ನು ನೀರಾವರಿ ಪ್ರದೇಶವನ್ನು ಮಾಡುವಂಥ ಸಾಧ್ಯತೆಗಳು ಇವೆ. ಆದರೆ ಅಲ್ಲಿ ಒಂದು ತೊಟ್ಟು ನೀರು ಕೂಡ ಬಳಕೆಯಾಗುತ್ತಿಲ್ಲ. ನಾನು ಹಿಂದೆ ಹೋಗಿದ್ದಾಗ ನನಗೆ ಅಲ್ಲಿ ನೀರನ್ನು ನೋಡಿ ಆಶ್ಚರ್ಯವಾಯಿತು. ಆಗ ನಾನು ಮಾನ್ಯ ತಿಮ್ಮಪ್ಪನವರಿಗೆ ಏನು ಹೇಳಿದೆ ಎಂದರೆ ನಾವು ಇಷ್ಟು ನೀರು ಇದ್ದರೆ ಬಂಗಾರದ ರಾಶಿಯನ್ನು ಮಾಡಿ ಬಿಡುತ್ತೇವೆಂದು ಹೇಳಿದೆ. ನೀವು ಏನು ಇಷ್ಟು ನೀರು ಹರಿಯುತ್ತಿದ್ದರೂ ನೋಡುತ್ತಾ ಕುಳಿತ್ತಿದ್ದೀರಲ್ಲಾ ಎಂದು ಹೇಳಿದೆ. ನಾನು ಆ ರೀತಿ ಹೇಳಿ ಬಂದ ಮೇಲೆ ಪಂಪ್‌ಸೆಟ್‌ಗಳು ಬಂತು, ಈಗ ಎಷ್ಟು ಬಂದಿದೆಯೋ ಗೊತ್ತಿಲ್ಲ. ಆದುದರಿಂದ ಅವರಿಗೆ ಅದೇ ಒಂದು ಅನುಭವ ಸಾಕು, ನೀರನ್ನು ಯಾವ ರೀತಿಯಲ್ಲಿ ಬಳಸಬೇಕೆಂಬ ಬಗ್ಗೆ ನಾನು ತೋರಿಸಿಕೊಂಡಿರುವಂಥಾದ್ದೆ ಸಾಕು. ಆದುದರಿಂದ ದಯಮಾಡಿ ನಿಮ್ಮ ಕ್ಷೇತ್ರದಲ್ಲಿ ಆ ಕೆಲಸವನ್ನು ಮಾಡಿಸಿ, ಆಗ ತಮಗೆ ಗೊತ್ತಾಗುತ್ತದೆ.

ಶ್ರೀ ಕೆ. ಶ್ರೀನಿವಾಸ ಗೌಡ:- ಮಾನ್ಯ ಅಧ್ಯಕ್ಷರೆ, ಈ ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ನಾನು ಮತ್ತೆ ಹೇಳುವುದಕ್ಕಿಚ್ಚಿಸುತ್ತೇನೆ. ಇವತ್ತು ಡ್ರಿಪ್ ಇರಿಗೇಷನ್‌ನಲ್ಲಿ ತೆಂಗಿನ ಗಿಡಗಳನ್ನು ಬೆಳೆಯುವಂಥಾದ್ದು ಇರಬಹುದು. ಮಾನ್ಯ ಜಯಚಂದ್ರರವರು ತೆಂಗಿನ ಬೆಳೆಯನ್ನು ಬೆಳೆಯುವಂತಹ ಭಾಗದಿಂದ ಬಂದವರಾಗಿದ್ದಾರೆ. ಇವತ್ತು ನಾವು ಕಾಲುವೆಗಳ ಮೂಲಕ ನೀರಿನ ಹರಿಸಿ ಬೆಳೆಸುವಂತಹ ತೆಂಗಿನ ಗಿಡಗಳನ್ನು ಡ್ರಿಪ್ ಇರಿಗೇಷನ್‌ನಲ್ಲಿ ಹಾಕಿದರೂ ಇದು ಚೆನ್ನಾಗಿ ಬರುತ್ತದೆ. ಇವತ್ತು ಟೊಮೋಟೊ ಕೂಡ ಚೆನ್ನಾಗಿ ಇದರಿಂದ ಬರುತ್ತದೆ. ನಾನು ಒಮ್ಮೆ ನಾಸಿಕ್‌ಗೆ ಹೋಗಿದ್ದೆ, ಅಲ್ಲಿ ದ್ರಾಕ್ಷಿ ಬೆಳೆಗೆ ಡ್ರಿಪ್ ಇರಿಗೇಷನ್ ಮಾಡಿದ್ದಾರೆ. ಅದು ಕೂಡ ಚೆನ್ನಾಗಿ ಬರುತ್ತಿದೆ. ಇತ್ತೀಚೆಗೆ ಬಿಜಾಪುರದಲ್ಲೂ ಇದಾಗಿದೆ ಎಂದು ಹೇಳುತ್ತಾರೆ; ಆದರೆ ನಾನು ಅಲ್ಲಿಗೆ ಹೋಗಿಲ್ಲ. ಈ ಡ್ರಿಪ್ ಇರಿಗೇಷನ್‌ನಿಂದ, ಕಾಲುವೆಗಳಲ್ಲಿ ಹರಿಯುವಂತಹ ನೀರು ವೇಸ್ಟ್ ಆಗುವಂಥಾದ್ದನ್ನು ಕಡಿಮೆ ಮಾಡಬಹುದು. ರೈತರು 5-10 ಎಕರೆಗೆ ನೀರನ್ನು ಉಪಯೋಗ ಮಾಡುತ್ತಾರೆ. ಅದರ ಮೂರರಷ್ಟು ನೀರನ್ನು ಈ ಡ್ರಿಪ್ ಇರಿಗೇಷನ್, ಸ್ಪ್ರಿಂಕ್ಲರ್‌ಗಳನ್ನು ಅಳವಡಿಸುವುದರ ಮೂಲಕ ಅದನ್ನು ನಾವು ಜಾಸ್ತಿ ಮಾಡಬಹುದು. ನೀವು ಸಬ್ಸಿಡಿ ಶೇ. 50 ರಷ್ಟು ಕೊಡುತ್ತೀರಿ. ಅದನ್ನು ಶೇ. 100 ರಷ್ಟು ಮಾಡಿ ಈ ಡ್ರಿಪ್ ಇರಿಗೇಷನ್‌ಗೆ ಕೊಡಿ. ಇದು ದೇಶದ ಸ್ವತ್ತು ರೈತನ ಬೆನ್ನೆಲುಬಿಗೆ ಒತ್ತು ಕೊಡಬೇಕೆಂದು ಏನು ಇಚ್ಚಿಸುತ್ತೀರಿ, ಇದಕ್ಕೆ ಶೇ. 100ಕ್ಕೆ 100 ರಷ್ಟು ಸಬ್ಸಿಡಿಯನ್ನು ಕೊಡಿ ಎಂದು ಹೇಳುತ್ತೇನೆ. ಅವರು ಸಣ್ಣ ರೈತರು ಇರಬಹುದು ದೊಡ್ಡ ರೈತರು ಇರಬಹುದು, ಎಲ್ಲರಿಗೂ ಕೂಡ ಈ ಡ್ರಿಪ್ ಇರಿಗೇಷನ್, ಸ್ಪ್ರಿಂಕ್ಲರ್ ಉಪಯೋಗವಾಗುತ್ತದೆ. ಇದನ್ನು ಸರ್ಕಾರ ಮಾಡುವಂತಹ ಕಾರ್ಯ ಈಗ ನಾವು ಏಳುನೂರು, ಎಂಟುನೂರು ಪಾತಾಳಕ್ಕೆ ನೀರಿಗೋಸ್ಕರ ಹೋಗುತ್ತಿದ್ದೇವೆ. ಅದು ಕುಡಿಯುವ ನೀರಿಗೋಸ್ಕರ ಇರಬಹುದು, ನೀರಾವರಿಗೋಸ್ಕರ ಇರಬಹುದು, ಇದು ನಿಲ್ಲುತ್ತದೆ. ಇದು ಆರ್ಥಿಕವಾಗಿ ಕೆಳಮಟ್ಟದಲ್ಲಿರುವಂತಹ ಜನರು ಡ್ರಿಪ್ ಇರಿಗೇಷನ್ ಹಾಕಿಕೊಳ್ಳಬೇಕಾದರೆ ಇವತ್ತು ಕೊಡುವಂತಹ ಸಬ್ಸಿಡಿ ಸಾಕಾಗುವುದಿಲ್ಲ. ಆದಕ್ಕೆ ಅಂಥವರಿಗೆ ನೀವು ಶೇ. 100 ಕ್ಕೆ ನೀರು ಭಾಗ ಸಬ್ಸಿಡಿಯನ್ನು ಕೊಡಬೇಕು. ಯಾರು 20-30 ಎಕರೆಯನ್ನು ಇಟ್ಟುಕೊಂಡಿದ್ದಾರೆ ಅಂಥವರಿಗೆ ಶೇ.50 ರಷ್ಟು ಸಬ್ಸಿಡಿ ಕೊಡಿ. 5 ಎಕರೆ, ಎರಡೂವರೆ ಎಕರೆ ಇರುವಂಥವರಿಗೆ ಶೇ. 100 ರಷ್ಟು ಸಬ್ಸಿಡಿ ಕೊಡಿ. ಮತ್ತೆ ಈ ಹಿಪ್ಪನೇರಳೆ, ಮಲಬರಿಗೂ ಕೂಡ ಡ್ರಿಪ್ ಇರಿಗೇಷನ್ ಅನ್ನು ಕೋಲಾರ ಜಿಲ್ಲೆಯಲ್ಲಿ ಮಾಡುತ್ತಿದ್ದೇವೆ. ನಮಗೆ ನೀರಿನಲ್ಲದೇ ಯಾವ್ಯಾವ ದಿಕ್ಕಿನಲ್ಲಿ ನೋಡುತ್ತಿದ್ದೇವೆಂದರೆ ಇವತ್ತು ನೀರು ನಮಗೆ ತೀರ್ಥವೆನ್ನುವಂತಹ ರೀತಿಯಲ್ಲಿ ಆಗಿದೆ. ನಮಗೆ ದೇವಸ್ಥಾನದಲ್ಲಿ ತೀರ್ಥವನ್ನು ಕೊಟ್ಟರೆ ಅದು ಅಪವಿತ್ರವಾಗಬಾರದೆಂದು ಹೇಗೆ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಆ ಒಂದು ಪರಿಸ್ಥಿತಿಯಲ್ಲಿ ನೀರನ್ನು ನೋಡುವಂತಹ ಕೆಲಸ ನಮ್ಮ ಕೋಲಾರ ಜಿಲ್ಲೆಯಲ್ಲಿ ಆಗಿದೆ. ಆದುದರಿಂದ ಈ ಡ್ರಿಪ್ ಇರಿಗೇಷನ್‌ನ್ನು ಅಲ್ಲಿ ಮಾಡಬೇಕಾಗಿದೆ. ಇದಕ್ಕೆ ನೀರಕ್ಕೆ ನೀರರಷ್ಟು ಸಬ್ಸಿಡಿಯನ್ನು ಕೊಡುವುದರ ಮೂಲಕ ವಾಟರ್ ಮ್ಯಾನೇಜ್‌ಮೆಂಟ್ ಮಾಡುವಂತಹ ಕೆಲಸವನ್ನು ಮಾಡಿದರೆ ಉಪಯೋಗವಾಗುತ್ತದೆನ್ನುವಂತಹ ಮಾತನ್ನು ಹೇಳಲಿಚ್ಚಿಸುತ್ತೇನೆ. ಇನ್ನು ನಾನು ಆಗಲೇ ಹೇಳಿದಂತೆ ಒಬ್ಬ ರೈತ ಎಂದರೆ ತಿಪ್ಪೆ, ಕಣ, ಇವೆಲ್ಲದ್ದರ ಅಗತ್ಯವಿದೆ. ಇವತ್ತು ಹಳ್ಳಿಗಳಲ್ಲಿ ಕಣಗಳು, ತಿಪ್ಪೆಗಳು ಇದ್ದಂತಹ ಸರ್ಕಾರಿ ಜಮೀನುಗಳು ಆದರಲ್ಲಿ ಇವತ್ತು ಮನೆಗಳನ್ನು ಕಟ್ಟಿದ್ದೀರಿ. ಇದರಿಂದ ಇದಕ್ಕೆ ಎಲ್ಲೂ ಜಾಗವಿಲ್ಲದಾಗಿದೆ, ಇವತ್ತು ಕಣ ಮಾಡಬೇಕೆಂದರೆ

ಟಾರ್ ರಸ್ತೆಗೆ ರೈತರು ಬಂದಿದ್ದಾರೆ, ತಾವು ಸಹ ಇದನ್ನು ನೋಡಿರಬಹುದು. ರೈತರು ಭತ್ತ, ರಾಗಿ, ಜೋಳ, ತುಳಿಯುವಂತಹ ಯಾವುದೇ ಬೆಳೆ ಇರಬಹುದು ಇದೆಲ್ಲವನ್ನು ಅವರು ಟಾರ್ ರೋಡಿನಲ್ಲಿ ಮಾಡುವಂತಹ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ಇವತ್ತು ನಾವು ಈ ಕಣಗಳು, ತಿಪ್ಪೆಗಳು ಇದ್ದಂತಹ ಜಾಗಗಳಲ್ಲೆಲ್ಲಾ ಮನೆಗಳಾಗಿ ಪರಿವರ್ತನೆಯಾಗಿದೆ. ಈ ದಿಕ್ಕಿನಲ್ಲಿ ಸರ್ಕಾರ ಪಾರದರ್ಶಕ ಮಾಡಬೇಕಾಗಿರುವಂಥದ್ದು. ರೈತ ನೂರಕ್ಕೆ ಎಂಭತ್ತು ಭಾಗ ಈ ಕೆಲಸವನ್ನು ಮಾಡುತ್ತಿದ್ದು ದೇಶಕ್ಕೋಸ್ಕರ ಜನರಿಗೋಸ್ಕರ, ದುಡಿಯುತ್ತಿದ್ದಾನೆ. ಅವನನ್ನು ಪಾರದರ್ಶಕವಾಗಿ ಮಾಡುವಂತಹ ಕೆಲಸವನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕಿಚ್ಛಿಸುತ್ತೇನೆ. ನಾನು ಹಳ್ಳಿಗಳ ವಿಚಾರವನ್ನು ಬಿಟ್ಟು ಹೆಚ್ಚಿಗೆ ಮುಂದೆ ಹೋಗುವುದಕ್ಕಿಚ್ಛಿಸುವುದಿಲ್ಲ. ಇವತ್ತು ಪಿ.ಸಿ.ಆರ್.ಅನ್-ಟಚಿಬಲ್ ಕೇಸ್‌ಗಳು ಬಂದಿದೆ. ಇವತ್ತು ಕೇಸ್ ಮತ್ತು ಕೌಂಟರ್ ಕೇಸ್‌ಗಳು ಇದರ ಬಗ್ಗೆ ಹೇಳುವುದಾದರೆ ರಾಮಪ್ಪನ ಭೀಮಪ್ಪನ ಜಗಳವಾಗುತ್ತದೆ. ಅದು ಪಿ.ಸಿ.ಆರ್. ಕೇಸು ಆಗುತ್ತದೆ. ಅಲ್ಲಿ ನಿಜವಾಗಲು ನೂರಕ್ಕೆ ತೊಂಭತ್ತೊಂಭತ್ತು ಪರ್ಸೆಂಟ್ ನಿಜವಾಗಿ ಪಿ.ಸಿ.ಆರ್. ಆ್ಯಕ್ಟ್‌ನಲ್ಲಿ ಆಗುವಂತಹ ಕೇಸ್ ಅಲ್ಲ. ಇದನ್ನು ಪಾರದರ್ಶಕವನ್ನಾಗಿ ನೋಡಬೇಕು. ಸಾಮಾನ್ಯ ಜನರಿಗೆ ಆಗುವಂತಹ ಕಿರುಕುಳವನ್ನು ನಿಲ್ಲಿಸಬೇಕೆಂದು ಅದನ್ನು ಯಾವ ರೀತಿಯಾಗಿ ಪಾರದರ್ಶಕವಾಗಿ ಮಾಡಬೇಕೆಂಬುದನ್ನು ನೋಡಬೇಕು. ಇದು ಕೇಸ್, ಕೌಂಟರ್ ಕೇಸ್ ಆಗಿ ಸೀಮಿತವಾಗಬಾರದು. ರೈತನನ್ನು ಗೋಳು ಇಡುವಂತೆ ಮಾಡಬಾರದೆನ್ನುವಂತಹ ದಿಕ್ಕಿನಲ್ಲಿ ಈ ಸರ್ಕಾರ ಪಾರದರ್ಶಕತೆಯಿಂದ ಕೆಲಸ ಮಾಡಬೇಕು. ಇನ್ನು ಇವತ್ತು ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಮೈನಾರಿಟಿ ಕ್ಲಾಸ್ ಜನಾಂಗದವರಿಂದೇ ಸಾರಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ; ಎಂದು ಅವರೇ ಹೇಳುತ್ತಿದ್ದಾರೆ; ಇದನ್ನು ನಾನು ಹೇಳುತ್ತಿಲ್ಲ. ಆದರೆ ಅವರು ಏನು ಧ್ಯೇಯೋದ್ದೇಶಗಳನ್ನು ಮಾಡಿದ್ದಾರೆಂದರೆ ಬರೀ ಸೊನ್ನೆ. ನಮ್ಮ ಸರ್ಕಾರ ಮಾಡಿರುವುದರಲ್ಲಿ ಕನಿಷ್ಟ ಕಾಲು ಭಾಗ ಕೂಡ ಮಾಡಿಲ್ಲ. ನೀವು ನಿಮ್ಮ ಮ್ಯಾನಿಫಸ್ಟೋದಲ್ಲಿ ಹೇಳಿದ್ದೀರಿ. ನೀವು ಡೈವರ್ಸ್ ಮಾಡಿದಂತಹ ಮುಸ್ಲೀಂ ಹೆಣ್ಣು ಮಗಳಿಗೂ ಅವರದೇ ಆದಂತಹ ಒಂದು ಕಾರ್ಪೋರೇಷನ್ ಮಾಡಿ ಅಂಥವರಿಗೆ ಸವಲತ್ತುಗಳನ್ನು ಕೊಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿದ್ದೀರಿ; ಆದರೆ ಅದು ಏನು ಮಾಡಿಲ್ಲ. ಆದರೆ ಓಟಿಗೆ ಏನು ಬೇಕೊ ಅಷ್ಟೆಲ್ಲಾ ನೀವು ಹೇಳುತ್ತೀರಿ, ಈ ಮುಸ್ಲೀಂ ಜನಾಂಗದಲ್ಲಿ ನೂರಕ್ಕೆ ಎರಡು ಭಾಗ ಮಾತ್ರವಿದ್ಯಾವಂತರು ಇರುವಂಥಾದ್ದು, ಅದಕ್ಕೆ ನೀವು ಒತ್ತು ಕೊಡುವುದಿಲ್ಲ. ಅವರು ಎಲ್ಲಿಯವರೆಗೆ ಅವಿದ್ಯಾವಂತರಾಗಿರುತ್ತಾರೆ, ಅಲ್ಲಿಯವರೆಗೆ ನಿಮ್ಮ ಕಾಂಗ್ರೆಸ್ ಪಕ್ಷಕ್ಕೆ ಓಟು ಹಾಕುತ್ತಾರೆ. ಆದುದರಿಂದ ಶೇ. 2 ಭಾಗ ವಿದ್ಯಾವಂತರಾಗಿ ಏನು ಇಟ್ಟಿದ್ದೀರಿ ಅದನ್ನು ನೂರಕ್ಕೆ ನೂರು ಭಾಗ ವಿದ್ಯಾವಂತರನ್ನಾಗಿ ಮಾಡುವಂತಹ ಕೆಲಸ ಸತತವಾಗಿ ಐವತ್ತು ವರ್ಷಗಳಿಂದ ಹಾಗೆ ಇಟ್ಟಿದ್ದೀರಿ. ಕೇವಲ ಓಟುಗೋಸ್ಕರ ಅವರನ್ನು ವಿದ್ಯಾವಂತರನ್ನಾಗಿ ಮಾಡದೇ ಇರುವಂಥ ಕೆಲಸವನ್ನು ಕಾಂಗ್ರೆಸ್‌ನ ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿವೆ. ಒಂದೆರಡು ಸರ್ಕಾರಗಳಲ್ಲ ನಿಜವಾಗಲೂ ಅದಕ್ಕಿಂತ ಹೆಚ್ಚಿಗೆ ಆಗಿದ್ದರೆ ನೀವೇ ಹೇಳಿ, ನಾನು ಕೇಳುತ್ತೇನೆ.

3.20 ಪಿ.ಎಂ

ಶ್ರೀ ಎ. ಎಂ.ಹಿಂಡಸಗೇರಿ:- ನಮ್ಮ ಸರ್ಕಾರ ಬಂದ ಮೇಲೆ ಮೈನಾರಿಟೀಸ್‌ಗೆ ಐದು ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ಕೊಡಬೇಕು ಎಂದು ಮಾಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ:- ಅದನ್ನು ನೀವು ಕೊಟ್ಟಿದ್ದಲ್ಲ, ನಮ್ಮ ಸರ್ಕಾರ ಇದ್ದಾಗ ಕೊಟ್ಟಿದ್ದು.

ಶ್ರೀ ಎ.ಎಂ. ಹಿಂಡಸಗೇರಿ:- ನೀವು ಕೊಟ್ಟಿದ್ದು ಬಿಟ್ಟು, ಹೊಸದಾಗಿ ಕೊಟ್ಟಿದ್ದೇವೆ. ನೀವು ಕೊಟ್ಟಿದ್ದು ಹೋಯಿತು. ಯಾರುಯಾರೋ ಟ್ರಸ್ಟ್ ಮಾಡಿಕೊಂಡು ಅವುಗಳನ್ನು ಹೊಡೆದುಕೊಂಡು ಹೋದರು. ಮಾನ್ಯ ಸಿಂಧ್ಯಾರವರಿಗೂ ಅದು ಗೊತ್ತಿದೆ. ಆದರೆ ನಾವು ಹಾಗೆ ಮಾಡಲು ಹೋಗುವುದಿಲ್ಲ. ಮೈನಾರಿಟೀಸ್‌ಗೆ ಐದು ಹಾಸ್ಟೆಲ್ ಕೊಡಬೇಕು ಎಂದು ಅಶ್ಯೂರೆನ್ಸ್ ಕೊಟ್ಟಿದ್ದೇವೆ, ಐದು ರೆಸಿಡೆನ್‌ಷಿಯಲ್ ಸ್ಕೂಲುಗಳನ್ನು ಕೊಡಬೇಕು ಎಂದು ಹೇಳಿದ್ದೇವೆ. ಹಂತಹಂತವಾಗಿ ನಾವು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ನೀವು ಐದು ವರ್ಷಗಳ ಹಿಂದೆ ಕೈಕೊಟ್ಟ ಹಾಗೆ ನಾವು ಕೊಡಲು ಹಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ನೀವು ಐದು ಶಾಲೆಗಳನ್ನು ಕೊಟ್ಟರೆ ರಾಜ್ಯದ ಹಿಂದುಳಿದ ಹಣ್ಣುಮಕ್ಕಳೆಲ್ಲಾ ವಿದ್ಯಾವಂತರಾಗುವುದಿಲ್ಲ. ಅವರು ಹೇಳಿದ್ದು ಏನೆಂದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಎಲ್ಲ ಹಣ್ಣುಮಕ್ಕಳಿಗೂ ಸೌಕರ್ಯವಾಗುವಂಥ ಶಿಕ್ಷಣ ವ್ಯವಸ್ಥೆಯನ್ನು ಮಾಡಿ ಎಂದು ಹೇಳಿದ್ದಾರೆ. ಅದನ್ನು ಮಾಡಬೇಕೇ ವಿನಃ ನಾವು ಐದು ಸ್ಕೂಲ್ ಕೊಡುತ್ತೇವೆ ಎಂದರೆ, ನೀವು ಐದು ಸ್ಕೂಲ್ ಕೊಟ್ಟು ಕೂಡಲೇ ಎಲ್ಲರೂ ಉದ್ಧಾರವಾಗುವುದಿಲ್ಲ. ನೀವು ಈಗ ಹೇಳಿದಿರಲ್ಲ, ಹಿಂದೆ ನೀವು ಐದು ಸ್ಕೂಲ್ ಕೊಟ್ಟಿರಿ, ಅವುಗಳನ್ನು ಯಾರ್‍ಯಾರೋ ಹೊಡೆದುಕೊಂಡು ಹೋದರು ಎಂದು, ನಿಮ್ಮದು ಅದರಪ್ಪ ಆಗುತ್ತದೆ. ಆದರೆ ನೀವು ಇದನ್ನು ನೋಡಬೇಕು. ಹಳ್ಳಿಗಾಡಿನಲ್ಲಿರತಕ್ಕಂಥ ನಮ್ಮ ಶಾಲಾಕಾಲೇಜುಗಳಲ್ಲಿ ಅಲ್ಪಸಂಖ್ಯಾತರು, ಹಿಂದುಳಿದವರು ಪ್ರುಕ್ಕಟೆಯಾಗಿ ಓದುವಂಥ, ಎಲ್ಲರೂ ಶಾಲೆಗೂ ಹೋಗುವಂಥ ವ್ಯವಸ್ಥೆ ಮಾಡಬೇಕು ಎನ್ನುವುದು ಅವರ ಉದ್ದೇಶ.

ಶ್ರೀ ಎ.ಎಂ.ಹಿಂಡಸಗೇರಿ:- ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಕಳಕಳಿ ಇದೆ. ಆದರೆ ಕಳೆದ ಐದು ವರ್ಷಗಳಲ್ಲಿ ನೀವು ಮಾಡಿರುವ ಅನುಭವ ನಮಗೂ ಇದೆ. ಆ ಅನುಭವವನ್ನು ಪುನಃ ನಾವು ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಅನುಭವದಲ್ಲಿ ನಾವು ಸಾಕಷ್ಟು ಉಂಡಿದ್ದೇವೆ. ನೀವು ಅಲ್ಲಿಗೆ ಹೋಗಿ ಮತ್ತೆ ಹಿಂದೆ ಬರುತ್ತೀರಿ. ನಾವು ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸೇವೆಯನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡಲು ಇಚ್ಛಿಪಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ:-ಮಾನ್ಯ ಉಪಾಧ್ಯಕ್ಷರೇ, ಇವತ್ತು ನೀವು ಅಲ್ಪಸಂಖ್ಯಾತರ ಮತಗಳಿಂದ ಗೆದ್ದು ಬಂದಿದ್ದೀರಿ. ನೀವು ಡಿಫೆಂಡ್ ಮಾಡಿಕೊಲ್ಲಲೇಬೇಕು. ಏಕೆಂದರೆ, ನೀವು ಆ ಪಕ್ಷದಿಂದ ಗೆದ್ದಿದ್ದೀರಿ. ನೀವು ಈ ಜನಗಳಿಗೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಹೇಳಿ. ನನ್ನ ಪ್ರಶ್ನೆ ಎಂದರೆ, ಬೇರೆ ಜಾತಿಗಳಲ್ಲಿ ನೂರಕ್ಕೆ ಶೇ. 60ರಿಂದ 65ರಷ್ಟು ವಿದ್ಯಾವಂತರಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಏನು ಮಾಡಬೇಕು ಎಂದು ಹೇಳಿ.

ಶ್ರೀ ಕೆ. ಶ್ರೀನಿವಾಸಗೌಡ:- 53 ವರ್ಷ ದೇಶವನ್ನು ಆಳಿದಂಥ ನಿಮ್ಮ ಪಕ್ಷಕ್ಕೆ ಏನು ಮಾಡಬೇಕು ಎನ್ನುವುದನ್ನು ಕಂಡುಹಿಡಿಯಲು ಆಗಲಿಲ್ಲವೆಂದರೆ ಮತ್ತೇನು ಮಾಡುತ್ತೀರಿ? ಏನಾಗಬೇಕು ಎಂದು ನಾವು ಹೇಳುತ್ತೇವೆ. ಏನು ಮಾಡಲಿಲ್ಲ ಎನ್ನುವುದನ್ನು ನೀವು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಕೇವಲ ದೇಶವನ್ನು ಆಳಿದರೆ ದೇಶದಲ್ಲಿರುವ ಆ ಪಂಗಡದವರೆಲ್ಲರೂ ಮುಂದೆ ಬರುತ್ತಾರೆ ಎನ್ನುವುದು ತಪ್ಪು ಕಲ್ಪನೆ ಎಂದು ಮೊನ್ನೆ ಒಂದು ಆರ್ಟಿಕಲ್ ಓದಿದಾಗ ನನಗೂ ಮನವರಿಕೆಯಾಯಿತು. ಅದು ಹೇಗೆಂದರೆ, ಉದಾಹರಣೆಗಾಗಿ ಹೇಳುತ್ತಿದ್ದೇನೆ, ಇದನ್ನು ಯಾರೂ ಬೇರೆ ಅರ್ಥದಲ್ಲಿ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಈ ದೇಶವನ್ನು ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಪ್ರತಿಯೊಬ್ಬರೂ ಆಳಿದ್ದಾರೆ. ಉದಾಹರಣೆಗೆ, ಛತ್ರಪತಿ ಶಿವಾಜಿಯವರ ಆಳ್ವಿಕೆಗೆ 100-150 ವರ್ಷಗಳ ಇತಿಹಾಸವಿದೆ. ಮುಂದೆ ಬಂದಂಥ ಅವರ ಸಕ್ಸಸರ್‌ಗಳಾದ ಸಂಭಾಜಿಯೇ ಇರಬಹುದು, ಮತ್ತೊಬ್ಬರು ಇರಬಹುದು ಅಥವಾ ಬೇರೆ ಬೇರೆಯವರು ಇರಬಹುದು, ಅವರು ಅಷ್ಟು ವರ್ಷ ಆಳಿದ್ದಾರೆ ಎಂದ ತಕ್ಷಣ ಮರಾಠಾ ಜನರು ಶ್ರೀಮಂತರಾಗಲಿಲ್ಲ, ಅವರ ಬಡತನ ಹೋಗಲಿಲ್ಲ. ಸುಮಾರು 750 ವರ್ಷಗಳ ಕಾಲ ಮೊಘಲರು ಆಳಿದರು. ಅವರ ನಂತರ ಅನೇಕ ಜನ ಮುಸಲ್ಮಾನರು ಆಳಿದರು ಎಂದ ತಕ್ಷಣ ಲಿಟರೆಸಿ ಪರ್ಸೆಂಟೇಜ್ ನೂರರಷ್ಟು ಆಗಲಿಲ್ಲ, ಅವರೆಲ್ಲರ ಬಡತನವೂ ಹೋಗಲಿಲ್ಲ. ಸುಮಾರು 150 ವರ್ಷಗಳ ಕಾಲ ಕ್ರಿಶ್ಚಿಯನ್ನರು ಮತ್ತು ಅವರ ಸಮಾಜಕ್ಕೆ ಸಂಬಂಧಪಡದೇ ಇದ್ದರೂ ಕೂಡ ಆ ಹೆಸರಿನಲ್ಲಿ ಆಳಿದರೂ ಕೂಡ ಇವತ್ತು ಅವರೆಲ್ಲರೂ ಬಡತನದಲ್ಲಿದ್ದಾರೆ ಎಂದು ನಾವು ನೀವು ಮಾತನಾಡುತ್ತಿದ್ದೇವೆ. ಅದೇ ರೀತಿ, ನಾವು ಅನೇಕ ರಾಜಮಹಾರಾಜರುಗಳ ಹೆಸರುಗಳನ್ನು ತೆಗೆದುಕೊಂಡು ಹೇಳುತ್ತೇವೆ. ನಾಯಕರಿರಬಹುದು, ಪಾಳೇಗಾರರಿರಬಹುದು, ಕೆಂಪೇಗೌಡರು ಇರಬಹುದು. ಅವರೆಲ್ಲರ ಆಳ್ವಿಕೆಗೆ ಸುಮಾರು 30-40-50-100 ಹೀಗೆ ನೂರಾರು ವರ್ಷಗಳ ಇತಿಹಾಸ ಇದೆ. ಪೇಶ್ವೆಯವರೂ ಆಳಿದರು. ಆದರೂ ಕೂಡ ಈಗಲೂ ಬ್ರಾಹ್ಮಣರೂ ಸಹ ನೌಕರಿ ಬೇಕು ಎಂದು ಓಡಾಡುತ್ತಾರೆ. ಅಂದರೆ, ಈಗ ನಾನು ಹೇಳಿದಂಥ ತಾತ್ಪರ್ಯವೆಂದರೆ, ನಾವು ಸಮಗ್ರವಾಗಿ ಇಡೀ ಸಮಾಜವನ್ನು ತೆಗೆದುಕೊಂಡು ಹೋಗದೇ ಇದ್ದರೆ ಖಂಡಿತವಾಗಿ ಯಾವ ದೇಶವೂ ಕೂಡ ಮುಂದೆ ಬರಲು ಸಾಧ್ಯವಿಲ್ಲ. ನಾವು ಒಬ್ಬೊಬ್ಬರಿಗೇ ಬಿಡಿಸಿ ಬಿಡಿಸಿ ಹೇಳಿದರೂ ಕೂಡ, ಈ ದೇಶದಲ್ಲಿ ಸಮಾಜದಲ್ಲಿ ಕೆಳಹಂತದಲ್ಲಿರುವವರನ್ನು ಮೇಲೆತ್ತಿದಾಗ, ಆ ರೀತಿ ಬದಲಾವಣೆ ಮಾಡಿದಾಗ ಮಾತ್ರ ಏನಾದರೂ ಆಗಬಹುದೇ ಹೊರತಾಗಿ ಒಬ್ಬೊಬ್ಬರೂ ತಮ್ಮ ತಮ್ಮ ಜನಾಂಗದ ಬಗ್ಗೆಯೇ ಮಾತನಾಡಿದರೆ ಮುಂದೆ ಬರಲು ಸಾಧ್ಯವಾಗುವುದಿಲ್ಲ ಎನ್ನುವುದು ಐತಿಹಾಸಿಕ ದಾಖಲೆ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ:- ಹಾಗಿದ್ದರೆ, ಪಕ್ಕದ ರಾಜ್ಯವಾದ ಕೇರಳದಲ್ಲಿ ಏಕೆ ನೂರಕ್ಕೆ ನೂರು ಭಾಗ ವಿದ್ಯಾವಂತರಾಗಿದ್ದಾರೆ. ಅಲ್ಲಿಯೂ ಅಲ್ಪಸಂಖ್ಯಾತರಿದ್ದಾರೆ, ಬೇರೆಬೇರೆ ಜನಾಂಗದವರಿದ್ದಾರೆ. ನಮಗೆ ಆ ರೀತಿಯ ರಾಜಕೀಯ ಇಚ್ಛಾಶಕ್ತಿ ಬೇಕು. ನಾವು ಕೇವಲ ಭಾಷಣ ಮಾಡಿ ಓಟು ತೆಗೆದುಕೊಳ್ಳುವಷ್ಟಕ್ಕೇ ಸೀಮಿತವಾಗಬಾರದು ಅದು ಯಾವುದೇ ರಾಜಕೀಯ

ಪಕ್ಷವಿರಬಹುದು, ಅದಕ್ಕೆ ಇಚ್ಛಾಶಕ್ತಿ ಬೇಕು. ಅದು ಇಲ್ಲದೇ ಇರುವುದರಿಂದ ಇವತ್ತೀಗೂ ಕೂಡ ಅಲ್ಪಸಂಖ್ಯಾತರಲ್ಲಿ ವಿದ್ಯಾವಂತರ ಸಂಖ್ಯೆ ರಡಿಮೆ ಇದೆ. ನನ್ನ ಪ್ರಕಾರ ಶೇ. 2 ರಷ್ಟು ಅಥವಾ ಖರ್ಗೆಯವರ ಪ್ರಕಾರ ಶೇ. 6 ರಷ್ಟು ವಿದ್ಯಾವಂತರಿರಬಹುದು ಅಲ್ಪಸಂಖ್ಯಾತರಲ್ಲಿ ವಿದ್ಯಾವಂತ ಸಂಖ್ಯೆ ಏಕೆ ಕಡಿಮೆಯಾಗುತ್ತದೆ ಎಂದರೆ, ಅವರು ಮಕ್ಕಳಿಗೆ ಐದು ವರ್ಷವಾಗುತ್ತಿದ್ದ ಹಾಗೆ ಅವರ ಕೈಗೆ ಸ್ಪಾನರ್ ಕೊಡುತ್ತಾರೆ, ಇಲ್ಲದಿದ್ದರೆ ಕಡಲೆಕಾಯಿ ಮಾರುವುದಕ್ಕೆ ಬುಟ್ಟಿ ಕೊಡುತ್ತಾರೆ, ಇಲ್ಲದಿದ್ದರೆ ಕೋಳಿಮೊಟ್ಟೆ ಮಾರಲು ಕಳುಹಿಸುತ್ತಾರೆ. ಅವರು ಆರ್ಥಿಕವಾಗಿ ಕೆಳಗೆ ಬಿದ್ದಿರುವುದರಿಂದ ಇವತ್ತು ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾತ ವಿದ್ಯಾವಂತರ ಸಂಖ್ಯೆ ಶೇ. 2 ಅಥವಾ ಶೇ. 6ಕ್ಕೇ ಸೀಮಿತವಾಗಿದೆ. ಆದರೆ, ಇದೇ ರಾಜ್ಯದಲ್ಲಿ, ಬೇರೆ ಜಾತಿಗಳಲ್ಲಿ ವಿದ್ಯಾವಂತರ ಸಂಖ್ಯೆ ಶೇ. 65 ರಷ್ಟು ಇದೆ. ಕೇರಳದಲ್ಲಿ ಶೇ. 100 ರಷ್ಟು ವಿದ್ಯಾವಂತರಾಗಿದ್ದಾರೆ. ಇದನ್ನು ನಾವು ಸಮಗ್ರವಾಗಿ ಯೋಚನೆ ಮಾಡಬೇಕು. ಇವತ್ತು ತಾವು ಹೇಳಿದ ತಾತ್ಪರ್ಯ ಇಲ್ಲಿ ಎಲ್ಲಿಯೂ ಇಲ್ಲ. ನಮ್ಮಲ್ಲಿ ಪೊಲಿಟಿಕಲ್ ವಿಲ್ ಬಂದಾಗ ಮಾತ್ರ ಅದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಬಡತನದ ರೇಖೆಗಿಂತ ಕೆಳಗಿರುವ ಅಲ್ಪಸಂಖ್ಯಾತರು ವಿದ್ಯಾವಂತರಾಗಲು ಸಾಧ್ಯವಿಲ್ಲ. ಇದಕ್ಕೆ ಇನ್ನೊಂದು ಕಾರಣವೆಂದರೆ, ಅವರಲ್ಲಿ ಪಾಪ್ಯುಲೇಷನ್ ಹೆಚ್ಚು, ಮಕ್ಕಳು ಸಿಕ್ಕಾಪಟ್ಟೆ ಇರುತ್ತಾರೆ. ಅದನ್ನು ಕಂಟ್ರೋಲ್ ಮಾಡುವಂಥ ಕೆಲಸ ಆಗುತ್ತಿಲ್ಲ. ನಿಮಗೆ 2-3 ಮಕ್ಕಳು ಸಾಕು ಎಂದು ಅವರನ್ನು ಒಪ್ಪಿಸುವಂಥ ಕೆಲಸವನ್ನು ಯಾವ ಸರ್ಕಾರಗಳೂ ಮಾಡಲಿಲ್ಲ. ಸ್ವಾತಂತ್ರ್ಯ ಬಂದಾಗ ನಮ್ಮ ದೇಶದಲ್ಲಿ ಕೇವಲ 35 ಕೋಟಿ ಇದ್ದಂಥ ಜನಸಂಖ್ಯೆ ಇವತ್ತು 100 ಕೋಟಿ ರೂಪಾಯಿಗೆ ಏರಿದೆ ಅದೇ ಚೈನಾ ದೇಶದಲ್ಲಿ ಆವತ್ತು 100 ಕೋಟಿ ರೂಪಾಯಿಗಳು ಇತ್ತು, ಇವತ್ತೂ ಸಹ ಅದರ ಆಸುಪಾಸಿನಲ್ಲೇ ಇದೆ. ನಾನು ಮೂರು ಸಲ ಚೈನಾ ದೇಶಕ್ಕೆ ಹೋಗಿಬಂದಿದ್ದೇನೆ. ಅಲ್ಲಿ, ಒಂದು ಹೆಣ್ಣು ಮಗುವಾದರೆ ಇನ್ನೊಂದು ಮಗುವಾಗುವುದಕ್ಕೆ ಅವಕಾಶ ಇದೆ, ಒಂದು ಗಂಡು ಮಗುವಾದರೆ ಒಂದೇ, ಮತ್ತೊಂದಕ್ಕೆ ಅವಕಾಶವಿಲ್ಲ, ಮತ್ತೆ ಇನ್ನೊಂದು ಮಗುವಾದರೆ ಅವರಿಗೆ ಶಿಕ್ಷೆಯಾಗುತ್ತದೆ. ಹಿಂದೆ ನಮ್ಮ ದೇಶಕ್ಕಿಂತಲೂ ಹೆಚ್ಚು ಜನಸಂಖ್ಯೆ ಇದ್ದಂಥ ದೇಶದಲ್ಲಿ ಈಗ ಜನಸಂಖ್ಯೆ ಸ್ಟ್ಯಾಗ್‌ನೇಟ್ ಆಗಿದೆ; ಅಂದರೆ ಅಷ್ಟೇ ಇದೆ. ಆದರೆ 35 ಕೋಟಿ ರೂಪಾಯಿಗಳು ಇದ್ದಂಥ ನಮ್ಮ ದೇಶದಲ್ಲಿ ಇವತ್ತು 100 ಕೋಟಿ ರೂಪಾಯಿಗಳು ಆಗಿದೆ. ನಮ್ಮ ಹಳ್ಳಿಗಳ ಕಡೆ ಹೇಳುತ್ತಾರೆ, ರಾಕ್ಷಸನಿಗೆ ಆರು ಕಾಸಿನ ಮಜ್ಜಿಗೆ ಸಾಲದು ಎಂದು. ಅದೇ ರೀತಿ, ಇವತ್ತು ನಾವು ಏನೇನು ಅಭಿವೃದ್ಧಿ ಕೆಲಸಗಳನ್ನು ಹಾಕಿಕೊಂಡರೂ, ಯಾವಯಾವ ರೀತಿಯಲ್ಲಿ ಯಾವ ಯಾವ ದಿಕ್ಕಿನಲ್ಲಿ ಕೆಲಸ ಮಾಡಿದರೂ ಕೂಡ ಅದು ಗೌಣವಾಯಿತೇ ವಿನಃ ಅಭಿವೃದ್ಧಿಯಾಗಲಿಲ್ಲ. ನಾವು ಎಲ್ಲಿಯವರೆಗೆ ಈ ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದಿಲ್ಲ ಅಲ್ಲಿಯವರೆಗೆ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಈ ಜನಸಂಖ್ಯೆಯನ್ನು ನಿಯಂತ್ರಣ ಮಾಡಬೇಕಾದರೆ ಅವರನ್ನು ನಾವು ವಿದ್ಯಾವಂತರನ್ನಾಗಿ ಮಾಡಬೇಕು. ವಿದ್ಯಾವಂತರನ್ನಾಗಿ ಮಾಡಿದಾಗ ಅವರೇ ತಿಳಿದುಕೊಳ್ಳುತ್ತಾರೆ. ಈ ದೇಶದ ಆರ್ಥಿಕ ವ್ಯವಸ್ಥೆಗೆ ರಾಮಾಯಣವಾಗಲೀ ಬೈಬಲ್ ಆಗಲೀ, ಕುರಾನ್ ಆಗಲೀ ಅಡ್ಡ ಬರಬಾರದು, ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಗಾಗಿ ಜನಸಂಖ್ಯೆಗೆ ಕಡಿವಾಣ ಹಾಕಬೇಕು ಎನ್ನುವುದು ಎಲ್ಲರಿಗೆ ಮನದಟ್ಟಾಗಿದೆ. ಆಗ ಸಂಜಯ ಗಾಂಧಿಯವರು ಇರಲಿಲ್ಲ. ಅವರು ಕೈಹಾಕಿದ್ದೇ, ನಮ್ಮ ದೇಶದಲ್ಲಿ ಅದೇನು ಗ್ರಹಚಾರವೋ ಏನೋ, ನಿಮ್ಮ ಪಕ್ಷವನ್ನೇ ಮುಗಿಸಿಬಿಟ್ಟರು. ಯಾವ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕು ಎನ್ನುವ ಅರಿವು

ಪ್ರತಿಯೊಬ್ಬರಿಗೂ ಇದೆ. ಆದರೆ ನಾವು ಕೇವಲ ರಾಜಕೀಯಕ್ಕೋಸ್ಕರ, ಓಟುಗೋಸ್ಕರ ದುಂಬಾಲು ಬೀಳುವಂಥ ಪರಿಸ್ಥಿತಿ ಇದೆ. ನಮಗೆ ಓಟು ಬೇಕೇ ವಿನಃ ದೇಶದ ಅಭಿವೃದ್ಧಿ ಚಿಂತನೆ ಮಾಡುವಂಥ ಕೆಲಸವನ್ನು ಮಾಡುತ್ತಿಲ್ಲ. ಎಲ್ಲ ರಾಜಕಾರಣಿಗಳು ಅದನ್ನು ಮಾಡಿದರೆ ಮಾತ್ರ ಜನಸಂಖ್ಯೆಯನ್ನು ನಿಯಂತ್ರಣ ಮಾಡಬಹುದು. ಈ ಜನಸಂಖ್ಯೆಯನ್ನು ನಿಯಂತ್ರಣ ಮಾಡುವಂಥ ಕಾರ್ಯಕ್ರಮಗಳು ನಿಮ್ಮ ಬಜೆಟ್‌ನಲ್ಲೂ ಇಲ್ಲ, ರಾಜ್ಯಪಾಲರ ಭಾಷಣದಲ್ಲೂ ಇಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಎಲ್ಲಿ ನೀವು ಹಣವನ್ನು ಉಳಿಸಲು ಅವಕಾಶ ಇದೆ, ಅಲ್ಲಿ ಜನಸಂಖ್ಯೆಯನ್ನು ನಿಯಂತ್ರಣ ಮಾಡದೇ ಇರುವುದರಿಂದ ಉಳಿಸಲು ಅವಕಾಶವಿಲ್ಲ. ಯಾರು ಎಷ್ಟು ಮಕ್ಕಳನ್ನು ಬೇಕಾದರೂ ಹೆರಬಹುದು ಎನ್ನುವಂತಾಗಿದೆ. ಆದ್ದರಿಂದ ಜನಸಂಖ್ಯೆಯನ್ನು ನಿಯಂತ್ರಣದಲ್ಲಿಡುವಂಥ ಕೆಲಸವನ್ನು ಮಾಡಬೇಕು. ಇದರ ಜೊತೆಗೆ, ಮಾನ್ಯ ಕಾಗೋಡು ತಿಮ್ಮಪ್ಪನವರು ನನಗೆ ಬಹಳ ಆಪ್ತರು, ಅವರು ಸಮಾಜ ಕಲ್ಯಾಣ ಸಚಿವರಾಗಿರುವುದರಿಂದ ಇದಕ್ಕೆ ಏನಾದರೊಂದು ಒತ್ತು ಕೊಡುತ್ತಾರೆ ಎಂದು ನಾನು ಅಂದುಕೊಳ್ಳುತ್ತೇನೆ. ಕೋಲಾರದಲ್ಲಿ ಒಬ್ಬ ಬ್ಯಾಕ್‌ವರ್ಡ್ ಕ್ಲಾಸ್ ಅಧಿಕಾರಿ ಇದ್ದರು. ಅವರ ಮೇಲೆ ಬಹಳ ದೂರುಗಳು ಬರುತ್ತಿವೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ನಾನು ತಿಮ್ಮಪ್ಪನವರಿಗೆ ಹೇಳಿದೆ. ಕೂಡಲೇ ಕ್ರಮ ತೆಗೆದುಕೊಂಡರು, ಅವನನ್ನು ಸಸ್ಪೆಂಡ್ ಮಾಡಿದರು. ಆದರೆ ಅದಕ್ಕೆ ಸಂಬಂಧಪಟ್ಟವರು ಕೆಲವರು ಬಂದು ಒತ್ತಡ ತಂದು ಮತ್ತೆ ರೀಇನ್‌ಸ್ಟೇಟ್ ಮಾಡಿದರು ಮತ್ತೆ ಅವನನ್ನು ಅಲ್ಲಿಗೇ ಪೋಸ್ಟ್ ಮಾಡಿದರು ಮರ್‍ಯಾರೋಷನ್ ಬೇಗ್‌ರವರು ಮಂತ್ರಿಗಳಾಗಿದ್ದಾಗ, ನಮ್ಮ ಸರ್ಕಾರ ಇದ್ದಾಗಲೂ ನಾನು ಹೇಳಿದ್ದೆ. ಅಲ್ಪ ಸಂಖ್ಯಾತರ ಅರ್ಜಿ ಕೊಡಬೇಕಾದರೆ ಅವನು ಅವರಿದಂದ ಎರಡು ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಾನೆ. ಇದನ್ನು ವಿಷದವಾಗಿ ಮಾನ್ಯ ತಿಮ್ಮಪ್ಪನವರಿಗೆ ಹೇಳಿದೆ. ಇಲ್ಲಿ ರಾಜಕೀಯ ಬೆರೆಸಬಾರದು. ಏಕೆಂದರೆ ಆ ಅಧಿಕಾರಿಯನ್ನು ಆ ಸ್ಥಳಕ್ಕೆ ನಮ್ಮ ಸರ್ಕಾರ ಇದ್ದಾಗ ನಿಯೋಜನೆ ಮಾಡಿರುವುದು. ಇಲ್ಲವೆಂದು ಹೇಳುತ್ತಿಲ್ಲ. ನಾವು ಅವನನ್ನು ಅಲ್ಲಿಗೆ ನಿಯೋಜನೆ ಮಾಡುವಾಗ ಬಹಳ ನಿಯತ್ತಿನ ಮನುಷ್ಯ ಎಂದು ಭಾವಿಸಿಕೊಂಡು ಆ ಸ್ಥಳಕ್ಕೆ ಹಾಕುತ್ತೇವೆ. ಆದರೆ ಇಂಥ ತಪ್ಪು ಮಾಡುತ್ತಾನೆಂದು ಅವನನ್ನು ಸಸ್ಪೆಂಡ್ ಮಾಡಿದರೂ ಕೂಡ ಪುನಃ ಅದೇ ಸ್ಥಳಕ್ಕೆ ರಿ-ಇನ್‌ಸ್ಟೇಟ್ ಮಾಡುತ್ತೀರಿ ಎಂದು ಹೇಳುವುದಾದರೆ ನಿಮ್ಮ ಸರ್ಕಾರದ ಆಡಳಿತದ ವೈಖರಿ, ಪಾರದರ್ಶಕತೆ ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ಇವರ ಆಡಳಿತದಲ್ಲಿ ಪಾರದರ್ಶಕತೆ ಇದ್ದಿದ್ದರೆ ಇಂಥ ಅಧಿಕಾರಿಗಳ ಮೇಲೆ ಕಠಿಣವಾದ ಕ್ರಮವನ್ನು ಜರುಗಿಸಬೇಕಿತ್ತು.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ಸಿನ ಪದಕೋಶದಲ್ಲಿ ಪಾರದರ್ಶಕ ಎಂದರೆ ಶ್ರೀ ಶ್ರೀನಿವಾಸಗೌಡರು ಹೇಳಿದ್ದೇ ಅರ್ಥ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ಅಲ್ಲಿ ಆ ಅಧಿಕಾರಿ ನೇಮಕಾತಿ ಮಾಡಿಕೊಂಡು ಅವ್ಯವಹಾರ ಮಾಡಿದ್ದಾನೆ, ಅವನನ್ನು ಅಲ್ಲಿಂದ ವರ್ಗಾಯಿಸಬೇಕು ಎಂದು ಹೇಳಿದ್ದಕ್ಕೆ ನಾನು ವರದಿಯನ್ನು ತರಿಸಿ ಅವನನ್ನು ಸಸ್ಪೆಂಡ್ ಮಾಡಿದ್ದು ಹೌದು. ಅನಂತರ ಅದರ ಪರಿಶೀಲನೆ ಮಾಡಿದಾಗ ಹಿಂದೆ ಅಡಿಗೆಯವರನ್ನು ಮತ್ತು 'ಡಿ' ಗ್ರೂಪ್ ನೌಕರರನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಅವ್ಯವಹಾರ ನಡೆದಿದೆ ಎಂದು

ಕಂಡುಬಂತು. ಈ ಅಧಿಕಾರಿ ಇದ್ದಾಗ ನೇಮಕ ಮಾಡಿದ್ದಲ್ಲ. ಹಿಂದೆ ಇದ್ದಂಥ ಅಧಿಕಾರಿ ನೇಮಕ ಮಾಡಿ ಆದೇಶ ಕೊಟ್ಟಿದ್ದರು. ನಿಮ್ಮ ಸರ್ಕಾರ ಇದ್ದಾಗಲೇ ಹೊರಡಿಸಿದಂಥ ಆಜ್ಞೆ ಪ್ರಕಾರ ಈ ಅಧಿಕಾರಿ ಕೊನೆಗೆ 9 ಜನಕ್ಕೆ ಮಾತ್ರ ಆರ್ಡ್‌ರ್ ಕೊಟ್ಟಿರುವಂಥದ್ದು. ಈ ಜನರಿಗೆ ಆದೇಶ ಕೊಡುವಾಗಲೂ ಸಹ ಹೊಸ ಸಿ.ಒ.ರವರಿಗೆ ತೋರಿಸಿ ಆಜ್ಞೆ ಇಶ್ಯೂ ಮಾಡಬೇಕಿತ್ತು. ಇದು ಮಾಡದಿರುವುದರಿಂದ ಒಂದು ಸಣ್ಣ ತಪ್ಪು ಆಗಿತ್ತು. ಆದರೆ ಆಯ್ಕೆ ಮಾಡಿರತಕ್ಕಂಥದ್ದು ಇವರಿಗಿಂತ ಹಿಂದೆ ಇದ್ದಂಥ ಅಧಿಕಾರಿ. ನಾವು ಒಂದು ಶಿಕ್ಷೆ ಕೂಡ ಬೇಕಾದರೆ ಹುಷಾರಾಗಿರಬೇಕಾಗುತ್ತದೆ. ಅವನೇ ಖುದ್ದು ನೇಮಕ ಮಾಡಿದ್ದರೆ ಅದು ತಪ್ಪು. ಸಿ.ಒ.ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ, ಆ ಕಮಿಟಿ ನೇಮಕ ಮಾಡಬೇಕಾಗಿತ್ತು. ಆ ಕಮಿಟಿಯಿಂದ ನೇಮಕ ಮಾಡುವಂಥ ಆಜ್ಞೆ ಹೊರಡುವುದಕ್ಕೆ ಮುಂಚೆ ಹಿಂದೆ ಇದ್ದಂಥವರು. ನೇಮಕ ಮಾಡಿ ಅಪಾಯಿಂಟ್‌ಮೆಂಟ್‌ಗೆ ಅನುವು ಕೊಟ್ಟಿದ್ದಾರೆ. ಆದ್ದರಿಂದ ಈ ಅಧಿಕಾರಿಯನ್ನು ವಾಪಸ್ಸು ತೆಗೆದುಕೊಂಡಿರುವುದು. ಆದರೂ ಕೂಡ ಕೆಲವು ದೂರುಗಳು ಆ ಅಧಿಕಾರಿಯ ಮೇಲೆ ಬಂದಿದೆ. ಆ ಅಧಿಕಾರಿಯನ್ನು ಹೊರಗಡೆಗೆ ಕಳುಹಿಸುತ್ತೇವೆ. ಅವನನ್ನು ಅಲ್ಲಿಯೇ ಇಟ್ಟುಕೊಳ್ಳಬೇಕೆಂದೇನೂ ಇಲ್ಲ. ಆ ಅಧಿಕಾರಿ ಸರಿಯಿಲ್ಲ ಎಂದು ಹೇಳುವವರು ನೀವು ನಿಮ್ಮ ಸರ್ಕಾರ ಇದ್ದಾಗ ಅವನನ್ನು ಅಲ್ಲಿ ಏಕೆ ಇಟ್ಟುಕೊಂಡಿದ್ದೀರಿ?

ಶ್ರೀ ಕೆ. ಶ್ರೀನಿವಾಸಗೌಡ:- ಅದೇ ನಾನು ಹೇಳಿದ್ದು. ಆ ಅಧಿಕಾರಿ ತಪ್ಪು ಮಾಡುತ್ತಿದ್ದಾರೆಂದು ಗೊತ್ತಾದ ಮೇಲೆ ಅಲ್ಲಿಂದ ಆತನನ್ನು ತೆಗೆದುಹಾಕಬೇಕೆಂದು ನಾವು ಒತ್ತಾಯ ಮಾಡುವುದಕ್ಕೆ ಪ್ರಾರಂಭ ಮಾಡಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ರಾಮ ಇದ್ದಾಗ ರಾವಣ ಇದ್ದ, ದುರ್ಯೋಧನ ಇದ್ದಾಗ ದುಶ್ಯಾಸನ ಇದ್ದ, ಹಾಗೆಯೇ 'ನಮ್ಮ ಸರ್ಕಾರ ಇದ್ದಾಗ ಇಂಥವರು ಇರುವುದು ಮಾಮೂಲು' ಎಂದು ಮಾನ್ಯ ತಿಮ್ಮಪ್ಪನವರು ಹೇಳಲಿ

ಶ್ರೀ ಕಾಗೋಡು ತಿಮ್ಮಪ್ಪ:- ನಿಮ್ಮ ಸರ್ಕಾರ ಇದ್ದಾಗಲೂ ಇಟ್ಟುಕೊಂಡಿದಿರಿ. ಆದರೂ ಸಹ ನೀವು ಹೇಳಿದರೂ ಕೂಡ ತಪ್ಪಿತಸ್ಥ ಅಧಿಕಾರಿ ಇದ್ದಾನೆಂದರೆ ಅವನ ವಿರುದ್ಧ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮಧ್ಯದಲ್ಲಿ ವರ್ಗಾವಣೆ ಮಾಡಿದರೆ ಆ ಸ್ಥಳಕ್ಕೆ ಮತ್ತೊಬ್ಬರು ಬರುವವರು ಇರುವುದಿಲ್ಲ. ಅದಕ್ಕೋಸ್ಕರ ಈ ಸಲದ ವರ್ಗಾವಣೆಯಲ್ಲಿ ಅವನನ್ನು ಅಲ್ಲಿಂದ ಬೇರೆ ಕಡೆಗೆ ತೆಗೆದುಹಾಕುತ್ತೇವೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿ ನಮ್ಮ ಸರ್ಕಾರ ಇದ್ದಾಗ ಆ ಸ್ಥಳಕ್ಕೆ ಪೋಸ್ಟ್ ಮಾಡಿಸಿಕೊಂಡರು. ಈ ಸರ್ಕಾರದಲ್ಲಿ ಸಸ್ಪೆನ್ಸ್‌ನ್ ಮಾಡಿ ಪುನಃ ಈ ಸರ್ಕಾರದಲ್ಲಿ ಅದೇ ಸ್ಥಳಕ್ಕೆ ರಿ-ಇನ್‌ಸ್ಟೇಟ್ ಮಾಡಿಸಿಕೊಳ್ಳತಕ್ಕಂಥ ಪ್ರವೃತ್ತಿ ಅಧಿಕಾರಿಗಳಲ್ಲಿ ಇದ್ದರೆ ಎಷ್ಟರಮಟ್ಟಿಗೆ ಈ ಸರ್ಕಾರ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯ? ಇದನ್ನು ನೀವು ಯೋಜನೆ ಮಾಡಬೇಕು.

ಶ್ರೀ ಕೆ. ಶ್ರೀನಿವಾಸ ಗೌಡ:- ಮಾನ್ಯ ಅಧ್ಯಕ್ಷರೆ, ಇನ್ನು ಆಹಾರ ಇಲಾಖೆ ಬಗ್ಗೆ ಹೇಳುವುದಾದರೆ ನ್ಯಾಯಬೆಲೆ ಅಂಗಡಿಯ ಮೂಲಕ ಹಳ್ಳಿಗರಿಗೆ ಕೊಡುವಂಥ ಅಕ್ಕಿ ಗೋಧಿ

ಸಕ್ಕರೆ ಸೀಮೆಎಣ್ಣೆ ಮುಂತಾದವು ಪೂರ್ತಿಯಾಗಿ ಹಳ್ಳಿಗೆ ತಲುಪುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನು ಇತ್ತೀಚಿನ ಸರ್ಕಾರಗಳು ಗಮನಹರಿಸಿ ನೋಡಬೇಕು. ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟಸಂಘದ ಅಧ್ಯಕ್ಷನಾಗಿ ಕಳೆದ 20-25 ವರ್ಷಗಳ ಹಿಂದೆ ಕೆಲಸ ಮಾಡಿದ್ದೆ. ನ್ಯಾಯಬೆಲೆ ಅಂಗಡಿಯವರು ಅಲ್ಲಿಯೇ ಸಕ್ಕರೆ, ಅಕ್ಕಿ ಮಾರಿಕೊಂಡು ಹೋಗುತ್ತಾರೆ. ಸರ್ಕಾರದಿಂದ ಬಡವರಿಗಾಗಿ ಕೊಟ್ಟಿರತಕ್ಕಂಥ ಹಸಿರು ಕಾರ್ಡುಗಳಲ್ಲಿ ಶೇಕಡ 50 ರಿಂದ 60 ರಷ್ಟು ಕಾರ್ಡುಗಳು ಖಾಸಗಿ ಎಫ್.ಪಿ.ಡಿ ಗಳಲ್ಲಿ ಇರುತ್ತವೆ. ಇದನ್ನು ನಾವು ನಿಲ್ಲಿಸಬೇಕಾಗುತ್ತದೆ. ಇದನ್ನು ನಿಲ್ಲಿಸಬೇಕಾದರೆ ಆ ಎಫ್.ಪಿ.ಡಿ.ಗಳನ್ನು ಕ್ಲೋಸ್ ಮಾಡಿ ಸಹಕಾರ ಸಂಘಗಳಿಗೆ ಅಕ್ಕಿ, ಗೋಧಿ ಸಕ್ಕರೆ ಇತ್ಯಾದಿಗಳನ್ನು ಕೊಡಬೇಕು. ಸಹಕಾರಿ ಸಂಘಗಳು ನೂರಕ್ಕೆ ನೂರಷ್ಟು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತವೆ ಎಂದು ನಾನು ಹೇಳುವುದಿಲ್ಲ. ನಾವು ಇಲ್ಲಿರುವಂಥ 224 ಜನ ಸದಸ್ಯರೆಲ್ಲರೂ ಸತ್ಯಹರಿಶ್ಚಂದ್ರರು ಎಂದು ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಸಹಕಾರ ಸಂಸ್ಥೆಯಲ್ಲಿ ಕೂಡ ತಪ್ಪುಗಳು ನಡೆಯುತ್ತಿವೆ. ಸಹಕಾರ ಕ್ಷೇತ್ರದಲ್ಲಿ ಕೂಡ ಏರುಪೇರುಗಳು ಇವೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ಸಹಕಾರಿ ಸಂಘದಲ್ಲಿ ಪಡಿತರ ವಸ್ತುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಿದರೆ ಅಲ್ಲಿ ಒಬ್ಬ ಸಾಮಾನ್ಯ ರೈತ ಕೂಡ ಸಕ್ಕರೆ ಬಂದಿಲ್ಲ ಸೀಮೆಎಣ್ಣೆ ಬಂದಿಲ್ಲ ಇತ್ಯಾದಿ ಕೇಳುವಂಥ ಅವಕಾಶ ಸಿಗುತ್ತದೆ. ಆದ್ದರಿಂದ ಆಹಾರ ಇಲಾಖೆಯಿಂದ ಕೊಡುವಂಥ ಪಡಿತರ ವ್ಯವಸ್ಥೆಯನ್ನು ರಾಜ್ಯದಾದ್ಯಂತ ಸಹಕಾರಿ ಸಂಘಗಳ ಮೂಲಕ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಒಂದು ಊರಿನಲ್ಲಿ 63 ಕೆ.ವಿ. ಅಥವಾ 100 ಕೆ.ರಿ.ಯ ಒಂದು ಟಿ.ಸಿ. ಇದ್ದರೆ ಆ ಊರಿಗೆಲ್ಲ ವ್ಯವಸಾಯ ಮಾಡಲಿಕ್ಕೆ ಕೂಡ ಬೋರ್‌ವೆಲ್‌ಗೆ ವಿದ್ಯುಚ್ಛಕ್ತಿ ಕನೆಕ್ಷನ್ ಕೊಟ್ಟಿರುತ್ತಾರೆ. ಆದರೆ ಅಲ್ಲಿ ನೀರು ಎತ್ತಲಿಕ್ಕೆ ಹೇಳಿದರೆ ಈ ಕಡೆಗೆ ನೀರು ಬರುವುದಿಲ್ಲ. ಏಕೆಂದರೆ ಅಲ್ಲಿ ಮೋಟರ್‌ಗಳು ಕಳಪೆ ದರ್ಜೆಯದು ಇರುತ್ತವೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಯಾವ ಹಳ್ಳಿಗೆ ಕುಡಿಯುವ ನೀರು ಬೇಕಾಗುತ್ತದೆ ಅಲ್ಲಿಗೆ ಪ್ರತ್ಯೇಕವಾಗಿ 25 ಕೆ.ವಿ.ಯ ಟಿ.ಸಿ. ಯನ್ನು ಅಳವಡಿಸಿ ವಿದ್ಯುತ್ ಕೊಡಬೇಕು. ಅಲ್ಲಿಂದ ಬೇರೆ ಕಡೆಗೆ ಸಂಪರ್ಕ ಕೊಡಬಾರದು. ಅದು ಆದಾಗ ಕನಿಷ್ಠ ಅಲ್ಲಿ ಕುಡಿಯುವ ನೀರಿಗೆ ಒತ್ತು ಕೊಡುವಂಥ ಕೆಲಸ ಆಗುತ್ತದೆ. ಕೆ.ಇ.ಬಿ. ವಿಚಾರವಾಗಿ ಬಹಳಷ್ಟು ಮಾತನಾಡುವುದಿದ್ದರೂ ಸಹ ಇದೇ ವಿಷಯವಾಗಿ ಪ್ರತ್ಯೇಕವಾಗಿ ಮಾತನಾಡಬಹುದೆಂದು ಹೇಳಿರುವುದರಿಂದ ನಾನು ಈ ವಿಚಾರವಾಗಿ ಇಷ್ಟಕ್ಕೆ ಮಾತನಾಡಿ ನಿಲ್ಲಿಸುತ್ತೇನೆ. ಇನ್ನು ಗ್ರಾಮೀಣ ಸಾಲ ಯೋಜನೆ ಬಗ್ಗೆ ಹೇಳುವುದಾದರೆ ಹಿಂದೆ ಒಂದು ಬಾವಿ ತೋಡಬೇಕಾಗಿದ್ದರೆ 3 ಸಾವಿರ ರೂಪಾಯಿಗಳು ಕೈಯಲ್ಲಿ ಇದ್ದರೆ ಸಾಕಾಗುತ್ತಿತ್ತು. ಇವತ್ತು ಬೋರ್‌ವೆಲ್ ಕೊರೆದು ಅದಕ್ಕೆ ಪಂಪುಸೆಟ್ಟು ಅಳವಡಿಸಿ ನೀರು ಎತ್ತಬೇಕಾದರೆ ಒಬ್ಬ ರೈತನಿಗೆ ಕನಿಷ್ಠ ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಷ್ಟೆಲ್ಲಾ ಕೊರೆದು ಅಲ್ಲಿ ನೀರು ಯಥೇಚ್ಛವಾಗಿ 20 ವರ್ಷ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈ ವರ್ಷ 700 ಅಡಿ ಕೊರೆದು ನೀರು ಸಿಕ್ಕಿದರೆ ಮುಂದಿನ ವರ್ಷ ಅದೇ ಜಾಗದಲ್ಲಿ 800 ಅಡಿ ಕೊರೆದರೆ ಮಾತ್ರ ನೀರು ಸಿಗುವಂಥ ಪರಿಸ್ಥಿತಿ ಉಂಟಾಗುತ್ತಿದೆ. ನಾನು ಆಗಲೇ ಹೇಳಿದ ಹಾಗೆ ಕೆರೆಗಳಿಂದ ಹೂಳೆತ್ತುವ ಕೆಲಸವನ್ನು ಯದ್ಧೋಪಾದಿಯಲ್ಲಿ ಮಾಡದೇ ಇದ್ದರೆ ಮತ್ತು ನೀರಿನ ಮಟ್ಟ ದಿನದಿಂದ

ದಿನಕ್ಕೆ ಕೆಳಕ್ಕೆ ಹೋಗದಿರುವ ಹಾಗೆ ಇನ್ನಿತರ ಮಾರ್ಗೋಪಾಯಗಳನ್ನು ಕಂಡುಹಿಡಿಯದಿದ್ದರೆ ಕೊನೆಗೆ ಕುಡಿಯುವ ನೀರನ್ನು ಹುಡುಕಿಕೊಂಡು ಕಾವೇರಿ, ಕೃಷ್ಣಾ ನದಿ ದಡವನ್ನು ಹುಡುಕಿಕೊಂಡು ಹೋಗುವಂಥ ಪರಿಸ್ಥಿತಿ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬರಬಹುದು ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಹಿಂದೆ ಶ್ಯಾನುಭೋಗರಿಗೆ ನಾಲ್ಕು ಬಳೆಎಲೆ ಮತ್ತು ಒಂದು ಬೂದುಕುಂಬಳ ಕಾಯಿ ಕೊಟ್ಟರೆ 4 ಎಕರೆ ಜಮೀನನ್ನು ನಮ್ಮ ಹೆಸರಿಗೆ ಮಾಡಿಕೊಡುತ್ತಿದ್ದರು. ಗುಣಕ್ಕೆ ಮತ್ಸರ ಬೇಡ. ನಾವು ಯಾವುದೇ ಜಾತಿಯನ್ನು ಕಾಮಾಲೆ ಕಣ್ಣಿನಿಂದ ನೋಡಬಾರದು. ಜಾತಿ ಮುಖ್ಯ ಅಲ್ಲ. ಹಿಂದೆ ಶ್ಯಾನುಭೋಗರು ಎಷ್ಟು ಪಾರದರ್ಶಕವಾಗಿರುತ್ತಿದ್ದರು ಎನ್ನುವುದಕ್ಕೆ ಮೇಲೆ ಹೇಳಿದ ಉದಾಹರಣೆಯೇ ಸಾಕ್ಷಿ ಆದರೆ ನಾವು ಈಗ ಅಕ್ರಮ ಸಕ್ರಮ ಸಮಿತಿಯ ಅಧ್ಯಕ್ಷರಾಗಿದ್ದೇವೆ. ಇದಕ್ಕೆ ಸಂಬಂಧಪಟ್ಟ ರೆಕಾರ್ಡುಗಳು ಗ್ರಾಮ ಲೆಕ್ಕಾಧಿಕಾರಿಯಿಂದ ತಾಲ್ಲೂಕು ಕಛೇರಿವರೆಗೆ ಬರಬೇಕಾದರೆ ರೈತರು ಪಡುವಂಥ ಕಷ್ಟ ಅಷ್ಟಿಷ್ಟಲ್ಲ. ಹಿಂದೆ ಯಾವ ರೀತಿ ಗ್ರಾಮ ಮಟ್ಟದಲ್ಲಿ ಕೆಲಸಗಳು ಆಗುತ್ತಿತ್ತು ಆ ರೀತಿ ಮಾಡುವುದಕ್ಕೆ ನಾವು ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಿಸಿಕೊಂಡು ಅವರಿಗೆ ಯಥೇಚ್ಛವಾಗಿ ಸಂಬಳವನ್ನು ಕೊಟ್ಟರೂ ಕೂಡ ಆ ಕೆಲಸವನ್ನು ಸರಿಯಾಗಿ ಗ್ರಾಮ ಲೆಕ್ಕಾಧಿಕಾರಿಗಳು ಮಾಡುತ್ತಿಲ್ಲ. ಅವರು ಮಾಡಬೇಕಾದ ಕೆಲಸವನ್ನು ಸರಿಯಾಗಿ ಮಾಡಿದಾಗ ಮಾತ್ರ ಅದು ಪಾರದರ್ಶಕ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಮಾನ್ಯ ದೇವರಾಜು ಅರಸು ಅವರು ಇದ್ದಂಥ ಕಾಲದಲ್ಲಿ ಅವರು ಟೆನೆನ್ಸಿ ಆ್ಯಕ್ಟ್ ಮತ್ತು ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ತಂದವರು. ನಿಜ. ಟೆನೆನ್ಸಿ ಆ್ಯಕ್ಟ್‌ನಲ್ಲಿ ಉಳುವವನೇ ಭೂಮಿ ಒಡೆಯ ಎನ್ನುವಂಥ ನೀತಿಯಲ್ಲಿ ಅವರವರಿಗೇ ಜಮೀನು ಸಿಕ್ಕಿತ್ತು. ಲ್ಯಾಂಡ್ ಸೀಲಿಂಗ್‌ನಲ್ಲಿ ಯಾವುದಾದರೂ ಜಮೀನುದಾರರಿಂದ ಜಮೀನನ್ನು ತೆಗೆದುಕೊಂಡು ಬಡವರಿಗೆ ಬೇರೆಯವರಿಗೆ ಕೊಟ್ಟಿದ್ದಾರೆಯೇ? ಬಹುಶಃ 1972-73 ರಲ್ಲಿ ಟೆನೆನ್ಸಿ ಆ್ಯಕ್ಟ್ ಮತ್ತು ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ತಂದಾಗ ಟೆನೆನ್ಸಿ ಆ್ಯಕ್ಟ್ ಇಂಪ್ಲಿಮೆಂಟ್ ಆಯಿತು ಆದರೆ ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ಇಲ್ಲಿಯವರೆಗೆ ಕೂಡ ಇಂಪ್ಲಿಮೆಂಟ್ ಆಗಲಿಲ್ಲ. ಜಮೀನ್ದಾರಿ ಪದ್ಧತಿಯಲ್ಲಿ ಜಮೀನ್ದಾರರ ಒಡೆತನದಲ್ಲಿಯೇ ಜಮೀನು ಇದೆ. ಲ್ಯಾಂಡ್ ಸೀಲಿಂಗ್ ಆ್ಯಕ್ಟ್‌ನಲ್ಲಿ ಜಮೀನ್ದಾರರಿಂದ 5-10 ಎಕರೆ ಜಮೀನುಗಳನ್ನು ತೆಗೆದುಕೊಳ್ಳುವಂಥ ಕೆಲಸವನ್ನು ಸತತವಾಗಿ ಎಲ್ಲಾ ಸರ್ಕಾರಗಳು ಪ್ರಯತ್ನ ಮಾಡಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ಕೆಳಗೆ ಜಮೀನುದಾರರಿಂದ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದನ್ನು ಬಡವರಿಗೆ ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಇನ್ನು ಅಸ್ಪೃಷ್ಯತೆ ಬಗ್ಗೆ ಹೇಳುವುದಾದರೆ, ಇವತ್ತು ಕೂಡ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಇದೆ. ಅಸ್ಪೃಶ್ಯತೆ ಕಾರಣದಿಂದ ಹರಿಜನರನ್ನು ದೇವಸ್ಥಾನದ ಒಳಗೆ ಬಿಟ್ಟುಕೊಳ್ಳುವುದಿಲ್ಲ. ಅಸ್ಪೃಶ್ಯತೆ ನಿವಾರಣೆಗೆ ಕಾನೂನು ಇದೆ. ಆದರೂ ಸಹ ಹಳ್ಳಿಗಳಲ್ಲಿ, ದೇವಸ್ಥಾನದ ಪ್ರವೇಶ ವಿಷಯ ಬಂದಾಗ ಅಲ್ಲಿ ಅಸ್ಪೃಶ್ಯತಾ ಧೋರಣೆ ತಲೆದೋರುತ್ತದೆ. ಇದಕ್ಕೆ ಹರಿಜನರನ್ನು ವಿದ್ಯಾವಂತರನ್ನಾಗಿ ಮಾಡುವುದರ ಮೂಲಕ ಅವರಿಗೆ ತಿಳುವಳಿಕೆ ಕೊಟ್ಟು ಮುಂದೆ ಬರುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ರೂಪಿಸಬೇಕು. ಇವತ್ತು ನಮ್ಮ ದೇಶದಲ್ಲಿ ಸಮಗ್ರತೆ ಕಾಪಾಡಬೇಕಾದರೆ ಈ ಹೀನ ಪದ್ಧತಿಯನ್ನು ಹೊರಗಟ್ಟಬೇಕು. ಸ್ವತಂತ್ರ ಬಂದು 53 ವರ್ಷಗಳಾದರೂ, ಡಾ: ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನ ಬರೆದು ಇದನ್ನು ಹೋಗಲಾಡಿಸಬೇಕು ಎಂದರೂ ಕೂಡ ಇವತ್ತು

ಹೋಗಲಾಡಿಸುವುದಕ್ಕಾಗುತ್ತಿಲ್ಲ. ಈ ದೇಶವನ್ನು ನಾವು ಸತತವಾಗಿ 53 ವರ್ಷಗಳಿಂದಲೂ ಆಳಿಕೊಂಡು ಬಂದರೂ ಕೂಡ ಆ ಅಸ್ಪೃಶ್ಯತೆಯನ್ನು ಹೋಗಲಾಡಿಸಿಲ್ಲ ಇವತ್ತು ಹಳ್ಳಿಗಾಡಿನಲ್ಲಿ ಈ ಹೀನ ಪದ್ಧತಿಯನ್ನು ನಾವು ಕಾಣಬಹುದು. ಈ ಹೀನ ಪದ್ಧತಿಯನ್ನು ನಿಲ್ಲಿಸುವಂತ ಕೆಲಸ ಮಾಡಬೇಕು ಎಂದು ಈ ಸಮಯದಲ್ಲಿ ಹೇಳುತ್ತಾ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳನ್ನು ರಾಜ್ಯಸಭಾ ಚುನಾವಣೆಯ ಸಂದರ್ಭದಲ್ಲಿ ಆಗಿರುವ ಪಕ್ಷಾಂತರದ ಬಗ್ಗೆ ಪ್ರಶ್ನಿಸಿದಾಗ ಟೆನ್ತ್ ಷೆಡ್ಯೂಲ್‌ನಲ್ಲಿ ಅವಕಾಶವಿರುವುದರಿಂದ ಅವರು ಪಕ್ಷಾಂತರ ಮಾಡಿದ್ದಾರೆಂದು ಹೇಳಿದರು. ಹಾಗಾದರೆ ನಮ್ಮ ಚುನಾವಣಾ ಆಯೋಗದ ಪ್ರಕಾರ ನಾವು ಇಂತಿಷ್ಟೇ ಚುನಾವಣೆಗೆ ಖರ್ಚು ಮಾಡಬೇಕು ಎನ್ನುವ ನಿಯಮವಿದೆ. ಇಲ್ಲಿರುವ ಎಲ್ಲಾ 224 ಸದಸ್ಯರು ತಮ್ಮ ತಮ್ಮ ಆತ್ಮದ ಮೇಲೆ ಕೈಯಿಟ್ಟುಕೊಂಡು ಮಾತಾನಾಡುವುದಾದರೆ, ನಾವುಗಳೆಲ್ಲರೂ ನಿಗದಿಪಡಿಸಿದಷ್ಟೇ ಹಣವನ್ನು ಖರ್ಚು ಮಾಡಿದ್ದೇವೆಯೇ? ನಮ್ಮ ನಾಯಕರಿಗೆ ಇಲ್ಲಿ ಮಾತ್ರ ಟೆನ್ತ್ ಷೆಡ್ಯೂಲ್ ಜ್ಞಾಪಕ ಬರುತ್ತದೆ.

ಶ್ರೀ ಡಿ. ಕೆ. ಶಿವಕುಮಾರ್: ನಾವು ನಡೆಸಿದ್ದೇವೆ. ನೀವು ನಡೆಸಿಲ್ಲವೆ?

ಶ್ರೀ ಕೆ. ಶ್ರೀನಿವಾಸ ಗೌಡ:- ಹಾಗಿದ್ದರೆ ನಿಮಗೆ ನೋಬೆಲ್ ಪ್ರಶಸ್ತಿ ಕೊಡಬೇಕು. ನಾವು ನಡೆಸಿಲ್ಲ. ಆದ್ದರಿಂದ, ಆತ್ಮದ ಮೇಲೆ ಕೈಯಿಟ್ಟುಕೊಂಡು ಮಾತನಾಡುತ್ತೇನೆಂದು ನಾನು ಹೇಳಿದ್ದು. ನೀವು ಆತ್ಮದ ಮೇಲೆ ಕೈಯಿಟ್ಟುಕೊಂಡು ಮಾತನಾಡಿ, ಸುಮ್ಮನೆ ಏಕೆ ಮಾತನಾಡುತ್ತೀರಿ?

ಶ್ರೀ ಡಿ. ಕೆ. ಶಿವಕುಮಾರ್:- ನಾವು ನಡೆಸಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ:- ನೀವು ಮನಿ ಪವರ್‌ನಲ್ಲಿ ಗೆದ್ದಿಲ್ಲ ಮಜಲ್‌ಸ್ ಪವರ್‌ನಲ್ಲಿ ಗೆದ್ದಿದ್ದೀರಿ ಎಂದು ಸದಾನಂದ ಗೌಡರವರು ಹೇಳುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಹಾಗಾದರೆ ನೀವು ಚುನಾವಣೆಯಲ್ಲಿ ಗೆದ್ದನಂತರ ಡಿಕ್ಲೇರೇಷನ್ ಕೊಟ್ಟಿದ್ದು ತಪ್ಪು ಎಂದು, ನಿಮ್ಮ ಮಾತಿನಿಂದ ಗೊತ್ತಾಗುತ್ತದೆ. ಚುನಾವಣಾ ಆಯೋಗದ ಮಿತಿಯ ಪ್ರಕಾರ ನೀವು ಖರ್ಚು ಮಾಡಿಲ್ಲ ಜಾಸ್ತಿ ಮಾಡಿದ್ದೀರಿ ಎಂದು ತಾವೇ ಹೇಳುವುದಾದರೆ, ನೀವು ತಹಸೀಲ್ದಾರ್‌ರವರಿಗೆ ಕೊಟ್ಟಿರುವ ಡಿಕ್ಲೇರೇಷನ್ ತಪ್ಪಲ್ಲವೇ? It gives an impression that whatever information/declaration you have given to the Deputy Commissioner/Election Commission is false ಸದನದಲ್ಲಿ ಹೇಳಿಕೆ ಕೊಡುವುದರ ಮೂಲಕ ತಾವು ತಪ್ಪು ಮಾಹಿತಿಯನ್ನು ಕೊಟ್ಟಿದ್ದೇವೆ ಎನ್ನುವ ಮಾತನ್ನು ಇಲ್ಲಿ ಹೇಳಿದಿರಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸ್ ಗೌಡ:- ನಾನು ಆ ರೀತಿ ಹೇಳಲಿಲ್ಲ. ನಾನು ಏನು ಹೇಳಿದ ಎಂದರೆ, ನಮ್ಮ ಆತ್ಮದ ಮೇಲೆ ಕೈಯಿಟ್ಟುಕೊಂಡು ಮಾತನಾಡಬೇಕು, ಯಾರ್ಯಾರು ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರೆಂಬುದನ್ನು ಅವರು ತಮ್ಮ ಆತ್ಮ ಮುಟ್ಟಿಕೊಂಡು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಜಯಪ್ರಕಾಶ್ ಹೆಗಡೆ:- ಫಾಲ್ಸ್ ಡಿಕ್ಲೆರೇಷನ್ ಮಾಡಿದ್ದೇವೆಂದು ಸದನದಲ್ಲಿ ಅವರೇ ಒಪ್ಪಿಕೊಂಡಿದ್ದಾರೆ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ:- ಡಿಕ್ಲೆರೇಷನ್ ಬಗ್ಗೆ ನಂತರ ಮಾತನಾಡೋಣ;

(ಗೊಂದಲ)

ಉಪಾಧ್ಯಕ್ಷರು:- ಆ ವಿಷಯ ಬಿಟ್ಟು ಬಿಡಿ, ಬೇರೆ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ:- ರಾಜ್ಯ ಸಭಾ ಚುನಾವಣೆಯ ಸಂದರ್ಭದಲ್ಲಿ ಟೆನ್ತ್ ಷೆಡ್ಯೂಲ್ ಪ್ರಕಾರ ಪಕ್ಷಾಂತರ ಆದಿಗೆ ಎನ್ನುವ ಮಾತನ್ನು ಅವರು ಹೇಳಿದರು, ಮಾನ್ಯ ಶಿವಕುಮಾರ್‌ರವು ಇದಕ್ಕೆಲ್ಲಾ ಆಪರೇಟರ್ ಆಗಿದ್ದರು.

ಶ್ರೀ ಡಿ.ಕೆ. ಶಿವಕುಮಾರ್:- ಹಿಂದೆ ಮಾನ್ಯ ಬಂಗಾರಪ್ಪನವರು ಇಲ್ಲಿ ನಾಯಕರು ಆಗಿದ್ದರು, 10 ಜನ ಸದಸ್ಯರು ತಾವು ಏನು ಇದ್ದೀರಿ, ಇದೇ ಮಾನ್ಯ ಗುತ್ತೇದಾರ್‌ರವರನ್ನು ಬ್ರೇಕ್ ಮಾಡಿ ಐದು ಜನ ಬೇರ್ಪಡಿಸಿದರಿ, ಆಗ ಎಲ್ಲಿ ಹೋಗಿತ್ತು ನಿಮ್ಮ ನೀತಿಯ ತತ್ವ? ನಿಮ್ಮ ಪಕ್ಷದ ತತ್ವ ಏನಾಯಿತು? ಏಕೆ ಬ್ರೇಕ್ ಮಾಡಿದಿರಿ? ನಿಮಗೆ ವಿಧಾನ ಸಭೆಯಲ್ಲಿ ಬೆಂಬಲ ಕೊಡುತ್ತಿದ್ದವರನ್ನು ಏಕೆ ಬ್ರೇಕ್ ಮಾಡಿದಿರಿ? ಆಗ ನಿಮಗೆ ಟೆನ್ತ್ ಷೆಡ್ಯೂಲ್ ಇರಲಿಲ್ಲವೆ?

ಕೆ. ಶ್ರೀನಿವಾಸ ಗೌಡ:- ಆಗಿನ ಮುಖ್ಯಮಂತ್ರಿಗಳು ಇದು ಟೆನ್ತ್ ಷೆಡ್ಯೂಲ್‌ನಲ್ಲಿ ಇದೆ ಎಂದು ಹೇಳಿರಲಿಲ್ಲ. ಇವತ್ತು ನಿಮ್ಮ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್:- ರಾಜ್ಯಂಗದಲ್ಲಿ ಈ ರೀತಿ ಅವಕಾಶವಿದೆ ಎನ್ನುವ ಮಾತನ್ನು ಅವರು ಹೇಳಿದರು. ನಾವು ಮಾಡಿದ್ದೇ ಸರಿ ಎಂದು ಅವರು ಹೇಳಲಿಲ್ಲ. ನಿಮ್ಮ ಕೈ ಬಹಳ ಕ್ಲೀನ್ ಆಗಿದ್ದರೆ ನೀವು ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ:- ನಾನು ಒಪ್ಪುತ್ತೇನೆ. ಆದರೆ.......

ಶ್ರೀ ಬಿ. ಸೋಮಶೇಖರ್: ನಮ್ಮ ಮುಖ್ಯಮಂತ್ರಿಗಳು ಆಗ ನಾವು ಬಹಳ ಪಾರದರ್ಶಕವಾದ ಸರ್ಕಾರ ಕೊಡುತ್ತೇವೆ, ನೀತಿಯ ಸರ್ಕಾರ ಕೊಡುತ್ತೇವೆಂದು ಹೇಳಲಿಲ್ಲ, ಅವರು ಇದನ್ನು ಜಸ್ಟಿಫೈ ಕೂಡ ಮಾಡಿಕೊಳ್ಳಲಿಲ್ಲ. ವರು ಪೊಲಿಟಿಕಲ್ ಕನ್‌ವೀನಿಯನ್ಸ್ ಪ್ರಕಾರ ಮಾಡಿದರು. ಆದರೆ ನಿಮ್ ಮುಖ್ಯಮಂತ್ರಿಗಳ ದಾಟಿ ಏನು ಇದೆ, ವರು ಹೇಳುವುದು ಒಂದು ನಡೆದುಕೊಳ್ಳುವುದು ಒಂದು, ಎಂದು ಅವರು ಹೇಳುತ್ತಿದ್ದಾರೆ. ಮತ್ತೊಂದು ವಿಷಯ ಏನೆಂದರೆ, ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಡಿಕ್ಲೆರೇಷನ್ ಕೊಡುವಂಥ ಸಂದರ್ಭದಲ್ಲಿ ಹೇಳಿದಂಥ ಮಾತುಗಳು ಕೇವಲ ಅವರ ವೈಯಕ್ತಿಕವಾಗಿ ಹೇಳಿಲ್ಲ, ಇದು ಎಲ್ಲಾ ಸದಸ್ಯರಿಗೆ ಸಂಬಂಧಪಟ್ಟಂಥ ವಿಚಾರ. ಪ್ರತಿಯೊಬ್ಬರು ನಾವು ಆತ್ಮ ಮುಟ್ಟಿಕೊಂಡು

ಹೇಳಿಕೊಳ್ಳೋಣ ಇದರಲ್ಲಿ ಸತ್ಯಾಂಶ ಇಲ್ಲ. ನಾವು ಇವತ್ತು ಸತ್ಯವಾಗಿ ಚರ್ಚೆ ಮಾಡಿದರೆ ಏನೂ ತಪ್ಪಿಲ್ಲ ಆ ಷಡ್ಯೂಲ್‌ನಲ್ಲಿ ಏನಾದರೂ ತಪ್ಪಾಗಿದ್ದರೆ ಅದಕ್ಕೆ ಪ್ರಾವಿಜನ್ ತಂದು ನಾವು ತಿದ್ದುಪಡಿ ಮಾಡೋಣ. ಏಕೆಂದರೆ ನಮಗೆ ಅಧಿಕಾರವಿದೆ. ಆದರೆ ಅವರು ಹೇಳಿರುವ ಅಂಶ ಏನಿದೆ, I don't think it attracts any disqualification because he is giving an honest assessment of the election system.

SRI S.P. MUDDAHANUMEGOWDA:- The statment before the House may not attract disqualification, but his statment makes it clear that the information given to the Election Commission is false.

ಶ್ರೀ ಬಿ. ಸೋಮಶೇಖರ್: ಅವರು ಜನರಲ್ಲಾಗಿ ಈ ಮಾತನ್ನು ಹೇಳಿದ್ದಾರೆ. He has not referred to his case. He is referring to all the members.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಶಿವಕುಮಾರ್‌ರವರು ಕೇಳಿದ್ದಕ್ಕೆ ಅವರು ನಾನು ಕೊಟ್ಟಿಲ್ಲ ಎಂದು ಹೇಳಿದರು ಇದು ರೆಕಾರ್ಡ್‌ನಲ್ಲಿ ಇದೆ. ಇದು ತಪ್ಪಾಗುತ್ತದೆ.

ಶ್ರೀ ಕೆ.ಶ್ರೀನಿವಾಸ ಗೌಡ:- ಅದು ಆ ರೀತಿ ಅಲ್ಲ, ನಾನೇನು ಹೇಳಿದೆ ಎಂದರೆ ಇಲ್ಲಿರುವ ಎಲ್ಲಾ 224 ಜನ ಸದಸ್ಯರು ತಮ್ಮ ಆತ್ಮಮುಟ್ಟಿಕೊಂಡು, ಆಯೋಗ ನಿಗದಿಪಡಿಸಿದಷ್ಟೇ ಹಣವನ್ನು ನಾವು ಖರ್ಚು ಮಾಡಿದ್ದೇವೆಯೇ? ನಾನು ಡಿಕ್ಲೆರೇಷನ್ ಕೊಟ್ಟಿದ್ದೇನೆ ಇಲ್ಲವೆಂದು ಹೇಳಲಿಲ್ಲ.

ಉಪಾಧ್ಯಕ್ಷರು:- ಆ ವಿಚಾರವನ್ನು ಬಿಟ್ಟು ಬಿಡಿ, ಬೇರೆ ವಿಚಾರದ ಬಗ್ಗೆ ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ:- ಆಯಿತು, ಮಾನ್ಯ ಉಪಾಧ್ಯಕ್ಷರೆ, ಅನೇಕ ಹಿರಿಯರು ಹೇಳುತ್ತಿರುವುದರಿಂದ ನಾನು ಈ ವಿಚಾರವನ್ನು ಇಲ್ಲಿಗೆ ಬಿಡುತ್ತೇನೆ. ನಾನು ಏಕೆ ಪಕ್ಷಾಂತರದ ಬಗ್ಗೆ ಹೇಳುತ್ತೇನೆಂದರೆ........

ಉಪಾಧ್ಯಕ್ಷರು:- ಮಾನ್ಯ ಶ್ರೀನಿವಾಸ ಗೌಡರೆ, ದಯಮಾಡಿ ವಿಷಯಾಂತರಕ್ಕೆ ಹೋಗಬೇಡಿ.

ಶ್ರೀ ವೈ.ಕೆ. ರಾಮಯ್ಯ:- ಸುಮಾರು ದಿವಸಗಳಿಂದ ಈ ಪಕ್ಷಾಂತರದ ಬಗ್ಗೆ ಇಲ್ಲಿ ಏನೇಕ ಸದಸ್ಯರು ಪ್ರಸ್ತಾಪಿಸಿರುವುದರಿಂದ, ಇದಕ್ಕೆ ಮಂಗಳ ಹಾಡಬೇಕು ಎನ್ನುವ ಉದ್ದೇಶದಿಂದ ನಾನು ಇಲ್ಲಿ ಎದ್ದು ನಿಂತಿದ್ದೇನೆ. ಇಲ್ಲಿರುವ ಎಲ್ಲಾ ಸ್ನೇಹಿತರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನನ್ನನ್ನು ಸೇರಿಸಿಕೊಂಡೆ ನಾವು ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ಎಲ್ಲರೂ ಪಕ್ಷಾಂತರಿಗಳೆ, ಇದಕ್ಕೆ ಬಿ.ಜೆ.ಪಿ. ಯವರು ಸೇರಿದ್ದಾರೆ.

ಶ್ರೀ ಡಿ.ವಿ.ಸದಾನಂದ ಗೌಡ:- ಸ್ವಾಮಿ ನಿಮ್ಮ ತಪ್ಪನ್ನು ನಮ್ಮ ಮೇಲೆ ಏಕೆ ಹಾಕುತ್ತಿದ್ದೀರಿ? ನಿಮ್ಮ ಬಗ್ಗೆ ನೀವು ಮಾತನಾಡಿ, ನಮ್ಮ ಬಗ್ಗೆ ಮಾತನಾಡುವ ಅವಶ್ಯಕತೆ ನಿಮಗಿಲ್ಲ. ಬಿ.ಪಿ.ಪಿ. ಯವರು ಯಾವತ್ತು ಪಕ್ಷಾಂತರಿಗಳಲ್ಲ. ನೀವು ಹೇಳಿದ್ದನ್ನು ಕೇಳಬೇಕಾಗಿಲ್ಲ.

ಶ್ರೀ ವೈ.ಕೆ. ರಾಮಯ್ಯ:- ನಾನು ಹೇಳಿ ಇದನ್ನು ಪ್ರೂಫ್ ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಬೇಕು. ಮಾನ್ಯ ಸದಾನಂದ ಗೌಡರವರು ಜನಸಂಘದಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಮೇ 1 ರಂದು ಪ್ರೋರ್ಟ್‌ಕ್ಲಬ್‌ನಲ್ಲಿ ಈ ರಾಷ್ಟ್ರದ ಎಲ್ಲಾ ಪಕ್ಷಗಳು ಒಂದುಗೂಡಿ ಜನತಾ ಪಕ್ಷ ಆದ ದಿವಸ ಏನಾಯಿತು ಎಂದು ಹೇಳಬಯಸುತ್ತೇನೆ. ನಾನು ಕೇವಲ ಸತ್ಯವನ್ನು ಮಾತ್ರ ಹೇಳುತ್ತೇನೆಯೇ ಹೊರತು, ಯಾವ ಪಕ್ಷವನ್ನು, ಯಾವ ವ್ಯಕ್ತಿಯನ್ನು ನಾನು ದೋಷಿಸುವುದಕ್ಕೆ ಇಲ್ಲಿ ನಿಂತುಕೊಂಡಿಲ್ಲ. ಆ ದಿವಸ ಪ್ರೋರ್ಟ್‌ಕ್ಲಬ್‌ನಲ್ಲಿ ನಿಮ್ಮ ಪಕ್ಷದ ಅಂದಿನ ಗುರುತಾದ ದೀಪವನ್ನು ಆರಿಸುವಾಗ ನಿಮ್ಮ ಪಕ್ಷದವರ ಮನಸ್ಥಿತಿಯನ್ನು ನೀವು ಜ್ಞಾಪಿಸಿಕೊಳ್ಳುವುದಕ್ಕೆ ಆಗ ನೀವು ಇರಲಿಲ್ಲ. ಬಹುಶಃ ಮಾನ್ಯ ಶಿವಪ್ಪನವರು ಆಗ ಇದ್ದಿರಬಹುದು, ಎತ್ತಣ ಎತ್ತಣ ಸಂಬಂಧ ಸ್ವಾಮಿ ಇವತ್ತು ನಿಮ್ಮ ಜೊತೆಯಲ್ಲಿ ಕೃಷ್ಣಪ್ಪನವರು ಕುಳಿತುಕೊಂಡಿದ್ದಾರೆ, ನಾನು ಬಂದು ಈ ಕಡೆ ಕುಳಿತಿದ್ದೇನೆ. ಬೆಲ್ಲದ ಪಾಪಣ್ಣ ಹೋಗಿ ಆ ಕಡೆ ಕುಳಿತಿದ್ದಾರೆ. ಬಿ.ಜೆ.ಪಿ.ಗೂ ಬೆಲ್ಲದ ಪಾಪಣ್ಣನವರಿಗೆ ಏನಾದರೂ ಸಂಬಂಧವಿದೆಯೇ? ಇದಕ್ಕಾಗಿಯೇ ನಾನು ಹೇಳುತ್ತಿರುವುದು, ದಯಮಾಡಿ ಉದ್ವೇಗಕ್ಕೆ ಒಳಗಾಗ ಬೇಡಿ ಸತ್ಯಕ್ಕೆ ನಾವೆಲ್ಲರೂ ತಲೆ ಬಾಗೋಣ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಸದಾನಂದ ಗೌಡರವರೇ , ಕೃಷ್ಣಪ್ಪನವರು, ಬಸವರಾಜ್ ಯಾವ ಪಾರ್ಟಿಯಲ್ಲಿ ಇದ್ದರು.

ಶ್ರೀ ಡಿ.ವಿ. ಸದಾನಂದಗೌಡ:- ನಾನು 1980 ರಲ್ಲಿ ಭಾರತೀಯ ಜನತಾ ಪಕ್ಷ ಅಸ್ತಿತ್ವಕ್ಕೆ ಬಂದ ಮೇಲೆಯೇ ನಾನು ರಾಜಕೀಯಕ್ಕೆ ಸೇರಿದವನಾಗಿರುವುದರಿಂದ, ನಾನು ಪಕ್ಷಾಂತರಿ ಅಲ್ಲವೆಂದು ಸ್ಪಷ್ಟಪಡಿಸುತ್ತೇನೆ. ನೀವು ಎಲ್ಲರನ್ನೂ ಜನರಲೈಸ್ ಮಾಡಿಲಿಕ್ಕೆ ಆಗುವುದಿಲ್ಲ. ತಾವು ಎಲ್ಲರ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಅಧಿಕಾರಕ್ಕಾಗಿ ನಿಮಗೆ ಪಕ್ಷದಿಂದ ಪಕ್ಷಕ್ಕೆ ಹೋಗಿ ಅಭ್ಯಾಸ ಇರಬಹುದು. ಎಲ್ಲರನ್ನೂ ಆ ಕ್ಯಾಟಗರಿಗೆ ಸೇರಿಸಬೇಡಿ. ನಿಮಗೆ ಅಧಿಕಾರಕ್ಕಾಗಿ ಯಾವುದೇ ರಾಜಕೀಯ ವಿಚಾರಗಳಿಗೆ ತಿಲಾಂಜಲಿ ಕೊಡುವಂಥ ವ್ಯವಸ್ಥೆಗಳು ನಿಮಗಿರಬಹುದು. ಆದರೆ ನನಗೆ ಆ ರೀತಿ ಇಲ್ಲ. ನಿಮ್ಮಂಥ ಹಿರಿಯ ವ್ಯಕ್ತಿಗಳಿಗೆ, ರಾಜಕೀಯ ವಿಚಾರಗಳಿಗೆ ತಿಲಾಂಜಲಿ ಕೊಟ್ಟು ಅಧಿಕಾರದ ಕುರ್ಚಿಗೆ ಆಸೆಪಟ್ಟು ಪಕ್ಷಾಂತರ ಮಾಡುವ ವ್ಯಕ್ತಗಳಿಗೆ ಮಾತ್ರ ಬರುತ್ತದೆ ವಿನಾಃ ಬಾಕಿಯವರಿಗೆ ಬರುವುದಿಲ್ಲ.

3.50 ಪಿ.ಎಂ

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಸದಾನಂದಗೌಡರಿಗೆ ಸಂಬಂಧಪಟ್ಟಂತೆ ನಾನು ಹೇಳುತ್ತಿಲ್ಲ. ನಾನು ಸಾರ್ವತ್ರಿಕವಾಗಿ ಹೇಳುತ್ತಿದ್ದೇನಷ್ಟೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ವೈ.ಕೆ. ರಾಮಯ್ಯನವರು ಯಾವುದಾದರೊಂದು ಆರೋಪವನ್ನು ಮಾಡುವಾಗ ಅದರ ಬಗ್ಗೆ ಸ್ವಲ್ಪ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ನಮ್ಮ ರಾಜಕೀಯ ಪಾರ್ಟಿ ಅಸ್ತಿತ್ವಕ್ಕೆ ಬಂದ ಮೇಲೆ ನಾನು ಈ ರಾಜಕೀಯ ಪಾರ್ಟಿಯ ಸದಸ್ಯನಾಗಿ ಇಲ್ಲಿಯವರೆಗೂ ಮುಂದುವರಿಯುತ್ತಾ ಹೋಗುತ್ತಿದ್ದೇನೆ. ಈ ಸದನದಲ್ಲಿರತಕ್ಕಂಥ ಎಲ್ಲಾ ರಾಜಕಾರಣಗಳು ನಿಮ್ಮ ತರಹ ಅಧಿಕಾರಕ್ಕಾಗಿ ಅಂಟಿಕೊಂಡವರಲ್ಲ.

ಶ್ರೀ ವೈ.ಕೆ. ರಾಮಯ್ಯ:- ನೀವು ಹೇಳುವುದನ್ನೆಲ್ಲಾ ಕೇಳುವುದಕ್ಕೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ:- ನನ್ನನ್ನು ಯಾರು ಕೂಡ ಆ ರೀತಿ ಭಾವಿಸತಕ್ಕಂಥ ಅವಸ್ಯಕತೆ ಬೇಡ. ಇವತ್ತಿನದಿವಸ ನಿಮ್ಮಲ್ಲಿರತಕ್ಕಂಥ ವ್ಯವಸ್ಥೆಗಳು ಸಮಾಜಕ್ಕೆ ಭಾದಕವಾಗಿ, ಇಡೀ ಸಮಾಜವನ್ನು ತುಲನೆ ಮಾಡುವಾಗ ಯಾರು ಒಳ್ಳೆಯ ರೀತಿಯಲ್ಲಿ ನಡೆದುಕೊಂಡಿರುತ್ತಾರೆಯೊ ಅಂಥವರಿಗೆ ಗೌರವ ಕೊಡತಕ್ಕಂಥದನ್ನು ಮಾನ್ಯ ಹಿಂರಿಯ ಸದಸ್ಯರು ಮೊದಲು ಕಲಿತುಕೊಳ್ಳಬೇಕು. ತಾವು ಎಲ್ಲರನ್ನು ಜನರಲೈಜ್ ಆಗಿ ಏಕೆ ಮಾಡುತ್ತೀರಿ? 1980 ನೇ ಇಸವಿಯಲ್ಲಿ ಬಿ.ಜೆ.ಪಿ. ಪಾರ್ಟಿ ಪ್ರಾರಂಭವಾದ ಮೇಲೆ ನಾನು ಈ ಪಾರ್ಟಿಯ ಸದಸ್ಯನಾಗಿದ್ದೇನೆ. ಆದ್ದರಿಂದ ಅವರ ಮಾತನ್ನು ನಾನು ನಿಜವೆಂದು ತಿಳಿದುಕೊಳ್ಳಬೇಕೆ? ಮಾನ್ಯ ಸದಸ್ಯರು ನೇರವಾಗಿ ಸದಾನಂದಗೌಡರೆಂದು ಪ್ರಸ್ತಾಪ ಮಾಡಿದ್ದಾರೆ. ಕೆಲವು ವ್ಯಕ್ತಿಗಳು ಅಧಿಕಾರಕ್ಕಾಗಿ ದಿನನಿತ್ಯ ಬಣ್ಣವನ್ನು ಬದಲಾವಣೆ ಮಾಡತಕ್ಕಂಥರವು ಇದ್ದಾರೆ. ಅಂಥವರ ಬಗ್ಗೆ ಬೇಕಾದರೆ ಮಾತನಾಡಲಿ. ಆದರೆ ಸಚ್ಚಾರಿತ್ರ್ಯವುಳ್ಳ ಬಿ.ಜೆ.ಪಿ. ಪಾರ್ಟಿ ಅಸ್ತಿತ್ವಕ್ಕೆ ಬಂದ ಮೇಲೆ ಯಾರು ರಾಜಕಾರಣ ಮಾಡುತ್ತಿದ್ದಾರೆ, ಅವರ ಮೇಲೆ ಮಾತನಾಡುವುದಿಲ್ಲವೆಂದು ಮೊದಲು ಮಾನ್ಯ ಸದಸ್ಯರು ಹೇಳಿ ನಂತರ ತಮ್ಮ ಮಾತನ್ನು ಮುಂದುವರಿಸಬಹುದು.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ರಾಮಯ್ಯನವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಯಾರ್‍ಯಾರಿಗೂ ಚರ್ಚೆ ಇತ್ತು. ಆದರೆ ಇವರು ಸುಮ್ಮನೆ ಕುಳಿತುಕೊಂಡಿರುವವರನ್ನು ಎಬ್ಬಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದರಿಂದ ಅವರು ಏನು ಸಾಧನೆ ಮಾಡಿದಂತಾಗುತ್ತದೆ?

ಡಾಃ ಭಾರತಿ ಶಂಕರ್:- ಪಶ್ಚಿಮ ಬಂಗಾಳದಲ್ಲಿ ನಿಮ್ಮ ಪಕ್ಷ ಏನು ಮಾಡಿದ್ದಾರೆಂಬುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ಆದ್ದರಿಂದ ನೀವು ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಶ್ರೀ ವೈ. ಕೆ. ರಾಮಯ್ಯ:- ಯಾರನ್ನೂ ತೆಗಳಬೇಕೆಂದು ನಾನು ಇಲ್ಲಿ ಮಾತನಾಡುತ್ತಿಲ್ಲ. ನಾನು ಸತ್ಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1977 ಮೇ 1 ನೇ ತಾರೀಖು ಮಾನ್ಯ ಸದಾನಂದಗೌಡರು ಆ ಪಕ್ಷದಲ್ಲಿ ಇಲ್ಲದಿದ್ದರೆ ಈ ಒಂದು ಅಪಾದನೆ ಅವರಿಗೆ ಆಗುವುದಿಲ್ಲ. ಹಾಗೆಯೇ ನಾನು ಮಾತನಾಡಿರತಕ್ಕಂಥ ವಿಷಯ ಅವರಿಗೆ ಅಪ್ಲೈ ಆಗುವುದಿಲ್ಲ. ಆ ಸಂದರ್ಭದಲ್ಲಿ ಯಾರಿದ್ದರು ಅವರಿಗೆ ಮಾತ್ರ ಇದು ಅಪ್ಲೈ ಆಗುತ್ತದೆಯ ಸ್ವಾತಂತ್ರ್ಯ ಬಂದ ನಂತರ ಒಂದಲ್ಲೊಂದು ಹಂತದಲ್ಲಿ ಪಕ್ಷಗಳು ಒಡೆಯುವುದು ಮತ್ತು ಪಕ್ಷಗಳು ಒಂದಾಗತಕ್ಕಂಥದ್ದು ಒಂದು ಸಹಜ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಬಹುತೇಕ ಎಲ್ಲಾ ಪಕ್ಷಗಳು ಮತ್ತು ನಾವೆಲ್ಲರೂ ಸೇರಿಕೊಂಡಿದ್ದೇವೆಂದು ನನ್ನ ಮಟ್ಟಿಗೆ ನಾನು ಹೇಳಿಕೊಳ್ಳುತ್ತಿದ್ದೇನೆ. ಇದು ನಿಮಗೆ ಒಪ್ಪುತ್ತದೆಯೋ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ. 1977 ನೇ ಇಸವಿಯಲ್ಲಿ ದೀಪವನ್ನು ಆರಿಸಿ ನೇಗಿಲು ಹೊತ್ತ ರೈತನನ್ನು ಹೆಗಲ ಮೇಲೆ ಹೋತ್ತುಕೊಂಡವರಲ್ಲಿ ನೀವು ಒಬ್ಬರು. ನನ್ನನ್ನು ಸೇರಿಸಿಕೊಂಡೆ ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ಜನತಾದಳದವರು

ಪಕ್ಷಾಂತರಿಗಳಲ್ಲವೇನು? ಪಕ್ಷಾಂತರಿಗಳು ಅಲ್ಲದೇ ಇದ್ದರೆ ನಮ್ಮ ನೂಲುವ ಚರಕ ಹಾಗೂ ಈಗಿನ ಚಕ್ರ ಮತ್ತು ಕಾಂಗ್ರೆಸಿನ ಜೋಡಿ ಎತ್ತು ಎಲ್ಲಿಗೆ ಹೋಯಿತು? ಚಿಹ್ನೆಯನ್ನು ಬದಲಾಯಿಸುವುದರಿಂದಲೇ ಪಕ್ಷಾಂತರ ಎನ್ನತಕ್ಕಂಥ ವಾದವನ್ನು ನೀವು ಹೇಳುವುದಾದರೆ ಸ್ವಾತಂತ್ರ್ಯ ಬಂದ ನಂತರ ಆಗಿರತಕ್ಕಂಥ ಆಮೂಲಗ್ರಾವಾದ ಬದಲಾವಣೆಯಲ್ಲಿ ಒಂದೊಂದು ವಿಷಯದಲ್ಲಿ ನಾವೆಲ್ಲರೂ ಪಕ್ಷಾಂತರಿಗಳೆ ಎಂದು ನನ್ನ ಅಭಿಪ್ರಾಯವಾಗಿದೆ. ಇದನ್ನು ತಾವು ಒಪ್ಪಿಕೊಳ್ಳಲೇಬೇಕೆಂದು ನಾನು ಹೇಳುತ್ತಿಲ್ಲ. ಆದ್ದರಿಂದ ಮಾನ್ಯ ಸದಾನಂದಗೌಡರು ನನ್ನ ಬಗ್ಗೆ ಉದ್ವೇಗಗೊಳ್ಳಬೇಕಾಗಿಲ್ಲ. ನನ್ನ ವಾದವನ್ನು ತಾವು ದಯಮಾಡಿ ಕೇಳಬೇಕು. ಏಕೆಂದರೆ ಪ್ರತಿ ದಿವಸ ಪಕ್ಷಾಂತರ ಆಗಿದ್ದಾರೆಂದು ಯಾರಾದರೊಬ್ಬರು ಪ್ರಸ್ತಾಪ ಮಾಡುತ್ತಲೇ ಬರುತ್ತಿದ್ದಾರೆ. ಯಾರೂ ಮಾಡದೇ ಇರತಕ್ಕಂಥ ಪಕ್ಷಾಂತರವನ್ನು ನಾವು ಮಾಡಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ಸದನದಲ್ಲಿ ನಾನು ಸೇರಿದಂತೆ ಬಹುತೇಕ ಎಲ್ಲಾ ಸದಸ್ಯರು ಒಂದಲ್ಲೊಂದು ವಿಧದಲ್ಲಿ ಚಿಹ್ನೆಯನ್ನು ಬದಲಾಯಿಸುವುದರಿಂದಲೇ ಪಕ್ಷಾಂತರ ಎನ್ನತಕ್ಕಂಥ ವಾದವನ್ನು ಆಧಾರವಾಗಿ ತೆಗೆದುಕೊಂಡರೆ ಒಂದಲ್ಲಾ ಒಂದು ವಿಧದಲ್ಲಿ ನಾವು ಪಕ್ಷಾಂತರಿಗಳೆ ಆದರೆ ಇವತ್ತಿನದಿವಸ ಅಧಿಕಾರಕ್ಕಾಗಿ ಮತ್ತು ಹಣಕ್ಕಾಗಿ ಮತ್ತು ರಾಜ್ಯಸಭಾ ಸದಸ್ಯತ್ವಕ್ಕೋಸ್ಕರ ಯಾರಾದರೂ ಮಾಡಿದ್ದರೆ ಅದು ಬೇರೆ ವಿಷಯ. ಇದಕ್ಕೆ ಬೇಕಾದರೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಆದರೆ ಪಕ್ಷದ ಚಿಹ್ನೆಯನ್ನು ಬದಲಾಯಿಸುವುದೇ ಪಕ್ಷಾಂತರ ಎಂದು ತಾವು ವಾದಿಸುವುದಾದರೆ ನಾವೆಲ್ಲರೂ ಒಂದಲ್ಲೊಂದು ವಿಧದಲ್ಲಿ ಪಕ್ಷಾಂತರಿಗಳೆ. ಆದ್ದರಿಂದ ಈ ವಿಷಯದಲ್ಲಿ ವಾದ ಬೇಡವೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಹೊರತು ನನ್ನ ಯಾವ ಸ್ನೇಹಿತರುಗಳ ಮೇಲೆ ಅಪವಾದ ಮಾಡಲಿಕ್ಕೆ ಅಥವಾ ಕೆಟ್ಟದಾದ ಒಂದು ದೊಡ್ಡ ಕೆಲಸವನ್ನು ಮಾಡಿದ್ದಾರೆಂದು ಹೇಳುವುದು ನನ್ನ ಉದ್ದೇಶ ಅಲ್ಲ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ ಮಾನ್ಯ ಸಚಿವರಾಗಿರುವಂಥ ಶ್ರೀ ಶಿವಕುಮಾರ್‌ರವರ ಕಾಟ ತಡೆಯುವುದಕ್ಕೆ ಆಗದೇ ನಾವು ಈ ಕಡೆ ಬರಬೇಕಾಗಿತ್ತು.

(ಗೊಂದಲ)

ಶ್ರೀ ಹೆಚ್. ಸಿ. ಬಸವರಾಜು:- ಸಮಾಜದ ಹಾಗೂ ಬಡಬಗ್ಗರ ಹಿತದೃಷ್ಟಿಯಿಂದ ನಾವು ಪಕ್ಷವನ್ನು ಬದಲಾಯಿಸಿದ್ದೇವೆ ವಿನಃ ಬೇರೆ ಉದ್ದೇಶದಿಂದಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಪಕ್ಷಾಂತರದ ಬಗ್ಗೆ ಮತ್ತು ಪಕ್ಷೇತರರು ಕಾಂಗ್ರೆಸ್ ಪಕ್ಷವನ್ನು ಸೇರಿರುವ ಬಗ್ಗೆ ಮಾನ್ಯ ಸಿಂಧ್ಯಾರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಹಾಗೆಯೇ ಪಕ್ಷೇತರರು ಕಾಂಗ್ರೆಸ್‌ನಲ್ಲಿ ಸೇರಿಕೊಂಡಿದ್ದಾರೆಂದು ಮಾನ್ಯ ಸಿಂಧ್ಯಾರವರು ಹೇಳಿರತಕ್ಕಂಥದ್ದು ಕಡತಕ್ಕೆ ಕಾಂಗ್ರೆಸ್‌ನಲ್ಲಿ ಸೇರಿಸಿಕೊಂಡಿದ್ದಾರೆಂದು ಮಾನ್ಯ ಸಿಂಧ್ಯಾರವು ಹೇಳಿರತಕ್ಕಂಥದ್ದು ಕಡತಕ್ಕೆ ಹೋಗಿದೆ; ಆದ್ದರಿಂದ ಇದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಪಕ್ಷೇತರರು ಕಾಂಗ್ರೆಸ್‌ನಲ್ಲಿ ವಿಲೀನವಾಗಿಲ್ಲ, ಸಹ ಸದಸ್ಯರಾಗಿದ್ದಾರಷ್ಟೆ. ಆದ್ದರಿಂದ ಸಹ ಸದಸ್ಯರಾಗಿ ಕಾಂಗ್ರೆಸ್ ಸರ್ಕಾರಕ್ಕೆ ನಮ್ಮ ಬೆಂಬಲವನ್ನು ಕೊಟ್ಟಿದ್ದೇವೆ. ಮಾನ್ಯ ಸಿಂಧ್ಯಾರವರು

ಪತ್ರಿಕೆಯಲ್ಲಿ ಬಂದಿರುವುದನ್ನು ಅಲ್ಲಿ ತೋರಿಸಿ ಪಕ್ಷೇತರರು ಕಾಂಗ್ರೆಸ್ ವಿಲೀನರಾಗಿದ್ದಾರೆಂದು ಪ್ರಸ್ತಾಪ ಮಾಡಿದರು, ಇದು ಸರಿಯಲ್ಲ. ಇದು ಕಾನೂನಿಗೆ ವ್ಯತಿರಿಕ್ತವೆಂದು ಸಹ ಹೇಳಿದರು. ಕಾನೂನು ಬದ್ಧವಾಗಿ ನಾವು ಸಹ ಸದಸ್ಯರಾಗಿ ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದೇವೆ. ಮಾನ್ಯ ಸಿಂಧ್ಯಾರವರ ಸರ್ಕಾರ ಇದ್ದಾಗ ಪಕ್ಷೇತರ ಅಭ್ಯರ್ಥಿಯಾಗಿ ಆರಿಸಿಬಂದಂಥ ಮಾನ್ಯ ಶಿವಪ್ಪನವರು ಸಹ ಸದಸ್ಯರಾಗಿ ಇವರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಅಂದರೆ ಮಾನ್ಯ ಸಿಂಧ್ಯಾರವರ ಸರ್ಕಾರದಲ್ಲಿಯೂ ಕೂಡ ಪಕ್ಷೇತರರರನ್ನು ಪಕ್ಷಾಂತರ ಮಾಡಿಸಿಕೊಂಡಿದ್ದರು.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ಪಕ್ಷಾಂತರ ವಿಚಾರದಲ್ಲಿ ಟೆನ್ತ್ ಷಡ್ಯೂಲ್ ಪ್ರಕಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ದೇಶದಲ್ಲಿ ಚರ್ಚೆ ಪ್ರಾರಂಭವಾಗಬೇಕೆಂದು ಹೇಳಿದರು. ಆದ್ದರಿಂದ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಈ ವಿಷಯವನ್ನು ಪ್ರಸ್ತಾಪ ಮಾಡಿದೆನೆಯೋ ಹೊರತು ಬೇರೇನು ಮಾಡಿಲ್ಲ. ಏಕೆಂದರೆ, ಟೆನ್ತ್ ಷೆಡ್ಯೂಲ್‌ನಲ್ಲಿ ಆ್ಯಂಟಿ ಡಿಫೆಕ್ಷನ್ ಆ್ಯಕ್ಟ್‌ನ ಪ್ರಕಾರ ಈ ಸದನದಲ್ಲಿ ವಿಧಾನ ಸಭೆಗೆ ಸಂಬಂಧಪಟ್ಟಂತೆ ಮತ್ತು ವಿಧಾನ ಪರಿಷತ್ತಿಗೆ ಸಂಬಂಧಪಟ್ಟಂತೆ ಒಂದು ರೂಲ್ಸ್‌ನ್ನು ಮಾಡಿಕೊಂಡಿದ್ದೇವೆ. ಅದರ ಪ್ರಕಾರ ಇಲ್ಲಿ ಚರ್ಚೆಗೆ ಅವಕಾಶ ಇಲ್ಲ. ಈ ಎಲ್ಲಾ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಅರ್ಜಿಯನ್ನು ತಮಗೆ ಕೊಟ್ಟಿದ್ದೇನೆ. ತಾವು ಈ ಅರ್ಜಿಯ ಮೇಲೆ ಮೊದಲು ತೀರ್ಮಾನ ತೆಗೆದುಕೊಳ್ಳಬೇಕು. ಆದ್ದರಿಂದ ಈಗ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಸಿಂಧ್ಯಾರವರು ಈಗಾಗಲೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿರುವುದರಿಂದ ನಾನು ಕೆಲವು ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತಿನದಿವಸ ಪಕ್ಷೇತರರು ಕಾಂಗ್ರೆಸ್ ಪಕ್ಷಕ್ಕೆ ಸೇರಿಲ್ಲ ಕಾನೂನು ಪ್ರಕಾರ ಸಹ ಸದಸ್ಯರಾಗಿದ್ದೇವೆ ಮಾನ್ಯ ಸಿಂಧ್ಯಾರವು ತಮ್ಮ ಸರ್ಕಾರದಲ್ಲಿ ಮಾನ್ಯ ಶಿವಪ್ಪನವರನ್ನು ಸಹ ಸದಸ್ಯರನ್ನಾಗಿ ಮಾಡಿಕೊಂಡು ಮಂತ್ರಿ ಸ್ಥಾನವನ್ನು ಕೊಟ್ಟಿದ್ದರು. ಆದ್ದರಿಂದ ಕಾನೂನು ಬಾಹಿರ ಎನ್ನತಕ್ಕಂಥ ಮಾತನ್ನು ಅವರು ಹೇಳುವುದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಸರ್ಕಾರ ಇದ್ದಾಗ ವಿರೋಧಪಕ್ಷದಲ್ಲಿದ್ದಂಥವರು ಜವಾಬ್ದಾರಿಯಿಂದ ಮಾನ್ಯ ಅಧ್ಯಕ್ಷರಿಗೆ ಈ ವಿಷಯದ ಬಗ್ಗೆ ಅರ್ಜಿಯನ್ನು ಕೊಡಬೇಕಾಗಿತ್ತು. ನಾವು ಈಗ ವಿರೋಧಪಕ್ಷದಲ್ಲಿದ್ದೇವೆ, ಆದ್ದರಿಂದ ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ. ಇದನ್ನು ಯಾರು ತಡೆಯಲಾರರು. ಈ ವಿಷಯದ ಬಗ್ಗೆ ಅರ್ಜಿ ಕೊಡಲು ಸದನ ನನಗೆ ಅನುಮತಿ ಕೊಟ್ಟಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರಿಗೆ ಅರ್ಜಿಯನ್ನು ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಇದೊಂದು ನೈತಿಕ ಪ್ರಶ್ನೆಯಾಗಿದೆ. ಬಹುಶಃ ಇದೇ ಸದನದಲ್ಲಿ ಹೋದ ಬಾರಿ ಒಂದು ಆದರ್ಶ ನಡೆದಿದೆ. ಇದು ಮಾನ್ಯ ಶಿವಕುಮಾರ್‌ರವರಿಗೂ ಸಹ ಗೊತ್ತು. ಈಗ ಅರ್ಜಿ ಕೊಡುವುದರಿಂದ ಕಾಯಿದೆಯಲ್ಲಿ ಏನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾವು ಸಹ ಸದಸ್ಯರಾಗಿಯೇ

ಉಳಿದುಕೊಳ್ಳಬಹುದು ಎನ್ನತಕ್ಕಂಥ ಮಾತು ಬೇರೆ. ಹಾಗೆಯೇ ಮುಂದೆ ಇದು ಏನಾಗುತ್ತದೆಂದು ತಿಳಿದುಕೊಂಡು ಚರ್ಚೆ ಮಾಡೋಣ. ಮಾನ್ಯ ಜೀವರಾಜ್ ಆಳ್ವರವರು ಬಿ.ಜೆ.ಪಿ. ಪಕ್ಷ ಬಿಟ್ಟು ಪಕ್ಷಾಂತರ ಮಾಡಿದ ತಕ್ಷಣವೇ ತಾವು ಆರಿಸಿ ಬಂದಂಥ ಜಾಗಕ್ಕೆ ರಾಜಿನಾಮೆ ನೀಡಿರತಕ್ಕಂಥದ್ದು ಇವತ್ತಿನ ದಿವಸ ಒಂದು ಉದಾಹರಣೆಯಾಗಿದೆ. ಆದ್ದರಿಂದ ಅವರಿಗೆ ನಾವು ಅಭಿನಂದಿಸಬೇಕು. ಅವರು ತಮ್ಮ ನೈತಿಕತೆಯನ್ನು ತೋರಿಸಿಕೊಂಡಿದ್ದಾರೆ ಆದ್ದರಿಂದ ಇವತ್ತಿನ ದಿವಸ ಯಾರಿಗಾದರೂ ಶಕ್ತಿ ಇದ್ದರೆ ರಾಜಿನಾಮೆ ಕೊಟ್ಟು ಮತ್ತೊಮ್ಮೆ ಜನರಿಂದ ಆರಿಸಿ ಬನ್ನಿ, ಆಗ ನಿಜವಾದ ನಿಮ್ಮ ನೈತಿಕತೆ ತಿಳಿಯುತ್ತದೆ.

ಶ್ರೀ ಎಸ್. ಶಿವಣ್ಣ:- ಮಾನ್ಯ ಜೀವರಾಜ್ ಆಳ್ವರವರು ರಾಜ್ಯಸಭಾ ಸದಸ್ಯರಾಗುವುದಕ್ಕೋಸ್ಕರ ರಾಜಿನಾಮೆ ಕೊಟ್ಟರು. ಬೇಕಾದರೆ ನೀವು ಹೋಗಿ ಕೇಳಬಹುದು.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಜೀವರಾಜ್ ಆಳ್ವರವರು ಕಾನೂನು ಬದ್ಧವಾಗಿ ರಾಜೀನಾಮೆಯನ್ನು ಕೊಟ್ಟಿರಲಿಲ್ಲ. ಅವರೊಬ್ಬರೆ ಪಕ್ಷಾಂತರ ಮಾಡಿದ್ದರಿಂದ ಅವರ ಸದಸ್ಯತ್ವ ರದ್ದಾಗುತ್ತದೆಂದು ರಾಜಿನಾಮೆ ಕೊಟ್ಟರೆ ವಿನಃ ಬೇರೆ ಯಾವುದರಿಂದಲೂ ಅಲ್ಲ.

ಉಪಾಧ್ಯಕ್ಷರು:- ಈಗ ಪಕ್ಷಾಂತರದ ಬಗ್ಗೆ ಮಾತನಾಡುವುದು ಬೇಡ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತ್ರ ದಯಮಾಡಿ ಮಾತನಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ(ಕೋಲಾರ):- ಮಾನ್ಯ ಉಪಾಧ್ಯಕ್ಷರೆ, ಈ ಪಕ್ಷಾಂತರ ಏಕಾಗಿದೆ ಎಂದರೆ, ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಮಾನ್ಯ ಗುಂಡುರಾಯರ ಸಲುವಾಗಿ ನಮ್ಮ ಈಗಿನ ಕಂದಾಯ ಸಚಿವರಾದ ಶ್ರೀ ಶ್ರೀಕಂಠಯ್ಯನವರ ನೇತೃತ್ವದಲ್ಲಿ ರಾತ್ರೋರಾತ್ರಿ 80 ಜನ ಪಕ್ಷಾಂತರ ಮಾಡಿದರು. ಆ 80 ಜನರಲ್ಲಿ ಈ ಶ್ರೀಕಂಠಯ್ಯನವರು ಮಾತ್ರ ಒಬ್ಬರೇ ಮಂತ್ರಿಯಾಗಿದ್ದರು. ನನಗೆ ಜ್ಞಾಪನ ಇದೆ, ತಾವು ಆಗ ಸಹಕಾರ ಮಂತ್ರಿಗಳಾಗಿದ್ದು ಇರುತ್ತದೆ. ಆಗ ನಾನು ಹುಡುಗನಾಗಿದ್ದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಆಗ ನಾವು ಆಗಿರಲಿಲ್ಲ, ಅದನ್ನು ಮಾಡಿದ್ದೇವು.

ಶ್ರೀ ಕೆ. ಶ್ರೀನಿವಾಸಗೌಡ:- ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಪಕ್ಷಾಂತರ ಮಾಡಿದಂಥ ಶ್ರೀ ಗುಂಡುರಾಯರು ಕೇವಲ 3 ವರ್ಷಗಳಲ್ಲಿ ಅವರ ಅಧಿಕಾರ ಅವಧಿ ಮುಗಿದು ಹೋಯಿತು. ಮೂರು ವರ್ಷಗಳ ಮೇಲೆ ಏನಾಯಿತು?

ಉಪಾಧ್ಯಕ್ಷರು:- ಒಂದು ನಿಮಿಷ ತಾವು ಈಲ್ಡ್ ಆಗಬೇಕು, ಶ್ರೀ ರಾಜಣ್ಣನವರು ಏನೋ ಹೇಳುತ್ತಾರೆ.

ಶ್ರೀ ವಡ್ನಾಳ ರಾಜಣ್ಣ (ಚನ್ನಗಿರಿ):- ಮಾನ್ಯ ಉಪಾಧ್ಯಕ್ಷರೆ, ನಾನು ಮಧ್ಯದಲ್ಲಿ ಯಾವಾಗಲೂ ಅಡ್ಡಿ ಮಾಡುವುದಿಲ್ಲ, ಒಂದು ನಿಮಿಷ ಮಾತನಾಡುತ್ತೇನೆ. ಜನತಾದಳದವರಿಗೆ ಈಗ ಜ್ಞಾನೋದಯವಾಗಿದೆ ಎಂದು ಕಾಣಿಸುತ್ತದೆ. ಕಳೆದ ಸಲ 102 ಜನ ಇದ್ದವರು ಇವವು

12 ಜನರನ್ನು ಮಾಡಿಕೊಂಡವರು ಇವರು. ಇವತ್ತು ನಮಗೆ ಬುದ್ಧಿಯನ್ನು ಹೇಳುವುದಕ್ಕೆ ಬರುತ್ತಿದ್ದಾರೆ. ನಾವು ಪಕ್ಷೇತರರಾಗಿ ಸ್ಪರ್ಧೆ ಮಾಡಿ ಗೆದ್ದು ಬಂದಿರುವವರು. ನಾವು ಇವತ್ತು ಆ ಕ್ಷೇತ್ರದ ಜನರ ಬೆಂಬಲವನ್ನು ತೆಗೆದುಕೊಂಡು, ಅವರ ವಿಶ್ವಾಸವನ್ನು ತೆಗೆದುಕೊಂಡು, ಅವರು ಎಲ್ಲಿ ಸೇರಬೇಕೆಂದು ಹೇಳಿದ್ದಾರೆ, ಅವರ ಅಪೇಕ್ಷೆಯಂತೆ ಸೇರಿದ್ದೇವೆಯೇ ಹೊರತು ನಾವು ಸಹ ಸದಸ್ಯರಾಗಿದ್ದೇವೆ ಕಾಂಗ್ರೆಸ್ ಪಕ್ಷದ ಸಹ ಸದಸ್ಯರಾಗಿ ಇವೊತ್ತು ನಮ್ಮಕ್ಷೇತ್ರದ ಜನರ ಅಭಿಲಾಷೆಯಂತೆ ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮ ಹಿರಿಯರಾದಂಥ ಶ್ರೀ ಪಿ.ಜಿ. ಆರ್. ಸಿಂಧ್ಯಾರವರು ಇವತ್ತು ಬಹಳ ಚೆನ್ನಾಗಿ ಹೇಳುತ್ತಿದ್ದಾರೆ. ಅವರು ಹೇಳತಕ್ಕಂಥ ಮಾತು, ಅವರು ನಡೆದುಕೊಳ್ಳತಕ್ಕಂಥ ರೀತಿಯನ್ನು ನೋಡಿದರೆ, ವರು ಒಂದೊಂದು ಸಲ ವ್ಯತ್ಯಾಸವಾಗಿ ಮಾತನಾಡುತ್ತಾರೆ ಎನ್ನುವಂಥ ಭಾವನೆ ಬರುತ್ತಿದೆ. ಇನ್ನೊಂದು ಮಾತನ್ನು ನಮ್ಮಶ್ರೀ ಎಸ್.ಎಸ್. ಪಾಟೀಲರು ನೈತಿಕ ಹೊಣೆ ಹೊತ್ತು ರಾಜಿನಾಮೆ ಕೊಡಬೇಕೆಂದು ಹೇಳಿದರು. ರಾಜಿನಾಮೆ ಕೊಡತಕ್ಕಂಥ ಅವಶ್ಯಕತೆ ಇಲ್ಲಿ ಬರುವುದಿಲ್ಲ. ನಾವು ಪಕ್ಷೇತರರಾಗಿ ಗೆದ್ದಿದ್ದೇವೆ, ನಾನು ನನ್ನ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿಗಳ ವಿರುದ್ಧ ಗೆದ್ದು ಬಂದಿರತಕ್ಕಂಥವನು, ನನ್ನ ಕ್ಷೇತ್ರದ ಜನರ ಅಭಿಲಾಷೆಯಂತೆ ಕಾಂಗ್ರೆಸ್ ಪಕ್ಷದ ಸದಸ್ಯನಾಗಿ ಕೆಲಸವನ್ನು ಮಾಡುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು: ರಾಜಣ್ಣ ನೀವು ಹೇಳಿದ್ದು ಆಯಿತು, ದಯಮಾಡಿ ನೀವು ಕುಳಿತುಕೊಳ್ಳಿ, ನಾನು ಅವಕಾಶವನ್ನು ಕೊಡುವುದಿಲ್ಲ ಮಾನ್ಯ ಪಾಟೀಲ್, ಶ್ರೀನಿವಾಸಗೌಡರೇ ನೀವು ಮಾತನಾಡಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ಯಾವ ಪಕ್ಷಗಳು ಬೇಡ. ಜನರಿಗೆ ಬೇಜಾರಾದ ಪಕ್ಷವನ್ನು ನೀವು ಸೇರಿಕೊಂಡಿರುತ್ತೀರಿ.

(ಗೊಂದಲ)

ಉಪಾಧ್ಯಕ್ಷರು: ಇಲ್ಲಿ ಪಕ್ಷಾಂತರದ ವಿಚಾರ ಬಂದಿರುವುದಿಲ್ಲ. ಆ ವಿಷಯವನ್ನು ಏಕೆ ಮಾತನಾಡುತ್ತೀರಿ.

ಶ್ರೀ ವಡ್ನಾಳ್ ರಾಜಣ್ಣ:- ಒಬ್ಬ ಮುಖ್ಯಮಂತ್ರಿಯನ್ನು ಪಕ್ಷೇತರ ಅಭ್ಯರ್ಥಿ ಈ ರಾಜ್ಯದಲ್ಲಿ ಇನ್ನೂವರೆಗೆ ಸೋಲಿಸಿರುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ:- ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ಮಾನ್ಯ ಗುಂಡುರಾಯರ ಕಾಲದಲ್ಲಿ, ಮೂರು ವರ್ಷಗಳಲ್ಲಿ ವರ್ಗಾವಣೆ ಚೆನ್ನಾಗಿ ನಡೆಯಿತು, ಒಬ್ಬ ಶಾಸಕನು ಹೋಗಿ ಒಂದು ಕಾಗದವನ್ನು ಕೊಡಲಿಲ್ಲ. ಅವರು ಒಳ್ಳೆಯ ಆಡಳಿತವನ್ನು ಕೊಟ್ಟರು. ಆದರೆ ಅವರು 1983 ರಲ್ಲಿ ಸೋತರು, ಯಾರು ಈ ಪಕ್ಷಾಂತರಕ್ಕೆ ಪ್ರಚೋದನೆ ಮಾಡುತ್ತಾರೆ, ಅದು ಅವರಿಗೆ ಉದಾಹರಣೆಯಾಗಿ ನೋಡಬೇಕು. ಪಕ್ಷಾಂತರಕ್ಕೆ ಯಾರು ಪ್ರಚೋದನೆ ಕೊಡುತ್ತಾರೆ, ಅವರು ಗುಂಡುರಾಯರನ್ನು ನೆನೆಸಿಕೊಂಡು ಕೆಲಸ ಮಾಡಬೇಕು ಎನ್ನುವ ಮಾತನ್ನು

ಈ ಸಮಯದಲ್ಲಿ ನಾನು ಹೇಳುವುದಕ್ಕೆ ಹೊರಟಿದ್ದೇನೆ. ಅದು ಆದನಂತರ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾದ ಸಮಯದಲ್ಲಿ 180 ಜನ ಕಾಂಗ್ರೆಸ್‌ನಿಂದ ಗೆದ್ದಿದ್ದರು. ಇದು ಸಾಲದು ಎಂದು ಇನ್ನೊಂದಿಷ್ಟು ಜನರನ್ನು ಪಕ್ಷಕ್ಕೆ ಸೇರಿಸಿಕೊಂಡರು. 5 ವರ್ಷಗಳು ಆದ ಮೇಲೆ ಏನಾಯಿತು? ನೀವು 132 ಜನ ಪಕ್ಷದಿಂದ ಗೆದ್ದು ಬಂದ ಮೇಲೆ ನಿಮಗೆ ಹೆಚ್ಚಿನ ಶಾಸಕರು ಏಕೆ ಬೇಕು? ಕೇವಲ ಒಬ್ಬ ರಾಜ್ಯಸಭಾ ಸದಸ್ಯನನ್ನು ಗೆಲ್ಲಿಸುವುದಕ್ಕೆ ಇಷ್ಟೊಂದು ಪ್ರಚೋದನೆಯನ್ನು ಮಾಡಿ ನೀವು ಪಕ್ಷಾಂತರ ಮಾಡಿಕೊಳ್ಳುವ ಅವಶ್ಯಕತೆ ಏನಿತ್ತು. ನಾನು ಈಲ್ಡ್ ಆಗಿರುವುದಿಲ್ಲ. ಪಕ್ಷಾಂತರದ ಬಗ್ಗೆ ನಾವು 10ನೇ ಷಡ್ಯೂಲ್ ಹೇಳುವುದು. ಇನ್ನೊಂದು ಕಡೆ ಪಕ್ಷಾಂತರಕ್ಕೆ ಪ್ರಚೋದನೆಯನ್ನು ಕೊಡುವುದು. ಈ ಕೆಲಸ ಆಗಬಾರದು. ಅದು ಯಾವುದೇ ಪಕ್ಷವಾಗಿರಬಹುದು, ಇವತ್ತು ನಮ್ಮ ಪಕ್ಷವೇ ಮಾಡಿದ್ದರೂ ಅದು ತಪ್ಪಾಗಿರುತ್ತದೆ ನಾನು ಇಲ್ಲವೆಂದು ಹೇಳುತ್ತಿಲ್ಲ. ಇವತ್ತು ಈ ಪಕ್ಷಾಂತರ ಮಾಡುವ ಜನಕ್ಕೆ, ಜನಪ್ರತಿನಿಧಿಗಳು ಅವರಿಗೆ ತೋರಿಸಿದ್ದಾರೆ. ಇವತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಗುಂಡುರಾಯರಿಗೆ, ಶ್ರೀ ವೀರೇಂದ್ರಪಾಟೀಲರಿಗೆ, ಶ್ರೀ ವೀರಪ್ಪಮೊಯಿಲಿ ಮತ್ತು ಶ್ರೀ ಎಸ್. ಬಂಗಾರಪ್ಪನವರಿಗೆ ಜನರು ತೋರಿಸಿದಂತಹ ಪಾಠ, ಮುಂದೊಂದು ದಿನ ನಿಮಗೂ ಸಹ ಕಲಿಸುವಂತಹ ದಿನಗಳು ಬಹಳ ದೂರವಿಲ್ಲ, ಇದು ಬಹಳ ಹತ್ತಿರ ಬರುತ್ತಿದೆ ಎನ್ನುವ ಮಾತನ್ನು ಈ ಸಮಯದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಅಧಿಕಾರಿಗಳ ಟ್ರಾನ್ಸ್‌ಫರೆನ್ಸಿಯ ಬಗ್ಗೆ ನಾನು ಆಗಲೆ ಹಳ್ಳಿಗೂ ಮತ್ತು ಪಟ್ಟಣಕ್ಕೂ ಹ್ಯಾಗಿಕಬೇಕೆಂದು ಹೇಳಿದ್ದೇನೆ. ಇವತ್ತು ಅಧಿಕಾರಿಗಳಿಗೂ ಮತ್ತು ರಾಜಕಾರಣಿಗಳಿಗೂ ಎರಡಿದೆ ಸ್ವಾಮಿ, ಈ ಅಧಿಕಾರಿಗಳು ಸಪೋಟ್ ಮರವಿದ್ದಹಾಗೆ, ಈ ರಾಜಕಾರಣಿಗಳು ತೆಂಗಿನ ಮರವಿದ್ದ ಹಾಗೆ, ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ, ತೆಂಗಿನಮರಕ್ಕೆ ನೀವು ಎಷ್ಟೇ ಗೊಬ್ಬರವನ್ನು ಹಾಕಿದರೆ ಅದು ಒಂದೇ ತರಹದ ಈಲ್ಡ್, ಅದು ಸಾಯುವವರೆಗೂ ಗಿಡವಾಗಿರುತ್ತದೆ. ಆದರೆ ಸಪೋಟ ಗಿಡಗಳು ಬೆಳೆದಂತೆಲ್ಲಾ ಬಹಳಷ್ಟು ಫಲಸು ಜಾಸ್ತಿಯಾಗುತ್ತದೆ. ಇವತ್ತು ಅಧಿಕಾರಿಗಳಿಗೆ ನಾವು ಸರ್ಕಾರಿ ದೂರವಾಣಿಯನ್ನು ಕೊಟ್ಟಿರುತ್ತೇವೆ, ಆ ದೂರವಾಣಿಯ ವೆಚ್ಚವನ್ನು ಸಹ ಸರ್ಕಾರ ಪಾವತಿ ಮಾಡುತ್ತದೆ. ಯಾರಾದರೂ ಒಬ್ಬ ಸಾರ್ವಜನಿಕನು ದೂರವಾಮಿಯಲ್ಲಿ ಮಾತನಾಡಿದರೆ, ಅವನ ಕೆಲಸವಾಗಬೇಕು. ಅವರು ದೊಡ್ಡ ಐಎಎಸ್ ಅಧಿಕಾರಿಗಳಿರಬಹುದು, ಸಣ್ಣ ಸಬ್‌ಇನ್ಸ್‌ಪೆಕ್ಟರ್, ಕಾನ್‌ಸ್ಟೇಬಲ್‌ವರೆಗೂ ಕೂಡ ಯಾರೇ ಸಾರ್ವಜನಿಕರೂ ದೂರವಾಣಿಯನ್ನು ಮಾಡಿದಾಗ ಅವರು ದೂರವಾಣಿಯನ್ನು ಎತ್ತಿಕೊಂಡು ಉತ್ತರವನ್ನು ಕೊಡುವಂತಹ ಕೆಲಸವಾದಾಗ ಅದು ಪಾರದರ್ಶಕವಾಗುತ್ತದೆ. ಇವತ್ತು ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ತೆಂಗಿನ ಮರ ಮತ್ತು ಸಪೋಟ ಮರದ ಬಗ್ಗೆ ಅಂದರೆ ಇವತ್ತು ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಶಾಸಕರಾಗಿ ತಮ್ಮ ರಾಜಕೀಯ ಜೀವನವನ್ನು 35 ವರ್ಷಗಳಿಂದ ಕಳೆದಿದ್ದಾರೆ. ಅವರು 7 ಅವಧಿಗೆ ಶಾಸಕರಾಗಿ ಆಯ್ಕೆಯಾಗಿ ತಮ್ಮ ಕ್ಷೇತ್ರದಲ್ಲಿ ಗೆದ್ದು ಬಂದಿದ್ದಾರೆ, ಅವರು ತೆಂಗಿನಮರ ಬೆಳೆದ ಹಾಗೆ ಬೆಳೆದಿದ್ದಾರೆ. ತೆಂಗಿನಮರಕ್ಕೆ ಗೊಬ್ಬರವನ್ನು ಹಾಕಬೇಕು, ಅದೇ ರೀತಿಯಾಗಿ 5 ವರ್ಷವಾದ ನಂತರ ಅದೇ ಜನರ ಎದುರು ಚುನಾವಣೆ ಪರೀಕ್ಷೆಗೆ ಹೋಗಬೇಕು. ನಾವು ಜನಗಳ ಮುಂದೆ ಚುನಾವಣೆ ಎಂಬ ಪರೀಕ್ಷೆಯಲ್ಲಿ ನಾವು 5 ವರ್ಷಕ್ಕೊಂದು ಸಾರಿ ಪಾಸಗಬೇಕು ನಾವು ಆ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರ ನಾವು ಈ ಮೇಲ್ಮನೆಗೆ ಎಂಟ್ರಿ ಆಗುತ್ತೇವೆ. ಆದರೆ ಅಧಿಕಾರಿಗಳು

ಒಂದು ಸಾರಿ ಅವರು ಪರೀಕ್ಷೆ ಕುಳಿತುಕೊಂಡು ಪಾಸಾದರೆ ಅವರುಗಳು ಐಎಎಸ್ ಕೆಎಎಸ್ ಇರಬಹುದ ಅಥವಾ ಇನ್ನೊಂದು ಅಧಿಕಾರವಿರಬಹುದು, ಜವಾನ ಇರಬಹುದು, ಅವರಿಗೆ 30 ರಿಂದ 35 ವರ್ಷದವರೆಗೆ ಪರವಾನಾಗಿಯನ್ನು ಕೊಡುತ್ತೇವೆ. ಇವತ್ತು ಇದರ ಬಗ್ಗೆ ಇರುವಂತಹ ಡಿಫರೆನ್ಸ್ ಆಗಿದೆ. ಇದರ ಅಂತರವವನ್ನು ಪರವಾನಗಿಯನ್ನು ಯೋಚನೆ ಮಾಡಬೇಕು. ನಾವು ಏನು 5 ವರ್ಷಕ್ಕೆ ಚುನಾವಣೆಯ ಮೂಲಕ ಪರೀಕ್ಷೆಗೆ ಕುಳಿತುಕೊಳ್ಳುತ್ತೇವೆ, ಈ ಫಲಿತಾಂಶದ ಬಗ್ಗೆ ಜನರು ತಮಗೆ ಮಾರ್ಕ್ಸ್‌ನ್ನು ಹಾಕುತ್ತಾರೆ. ಇವರಿಗೆ ಯಾರು ಸ್ವಾಮಿ ಮಾರ್ಕ್ಸ್ ಹಾಕುವವರು? ಈ ಅಧಿಕಾರಿಗಳಿಗೆ ಮಾರ್ಕ್ಸ್ ಹಾಕುವವರು ಇವತ್ತು ಕೂಡ ಅನೇಕ ಸರ್ಕಾರಗಳು ಅವರು ಹೇಳಿದ ಹಾಗೆ ಹೆಚ್ಚಿಗೆ ನಡೆಯುತ್ತದೆ. ಅವರು ಬರೆದುಕೊಟ್ಟಂತಹ ಟಿಪ್ಪಣಿಗಳನ್ನೇ ಮಾನ್ಯ ಮಂತ್ರಿಗಳು ಸದನದಲ್ಲಿ ಓದುವುದು, ಹೊಸದಾಗಿ ಹೇಳುವವರು ಬಹಳ ಕಡಿಮೆ ಇದ್ದಾರೆ, ಇಲ್ಲವೆಂದು ನಾನು ಹೇಳಲಿಲ್ಲ. ಇದ ಕೂಡ ತಪ್ಪಬೇಕು, ಇದು ಪಾರದರ್ಶಕವಾಗಬೇಕಾದರೆ ಅವರ ಮೇಲೆ ಒಂದು ಹಿಡಿತವಿರಬೇಕು, ಆ ಹಿಡಿತ ನಮ್ಮ ರಾಜಕಾರಣದ ಮೇಲೆ ನಮ್ಮ ಸರ್ಕಾರದ ಮೇಲೆ, ಸರ್ಕಾರದ ಮಂತ್ರಿಗಳ ಮೇಲೆ ಇದ್ದಾಗ ಮಾತ್ರ ಪಾರದರ್ಶಕವಾಗುತ್ತದೆ. ಇವತ್ತು ಸರ್ಕಾರ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಮಾಡಿದೆ. ನಮ್ಮ ಸರ್ಕಾರವು ಅಧಿಕಾರದಲ್ಲಿದ್ದಾಗ 1997-98 ರಿಂದ ಸುಮಾರು 2392 ಕೋಟಿ ರೂಪಾಯಿಗಳ ಬಡ್ಡಿಯನ್ನು ಪಾವತಿ ಮಾಡಿದ್ದೇವೆ. ಈಗ ಅಧಿಕಾರಕ್ಕೆ ಬಂದಂತಹ ಪಾರದರ್ಶಕವೆಂದು ಹೇಳುವಂತಹ ಸರ್ಕಾರ 2000-2001 ಸಾಲಕ್ಕೆ ಎಷ್ಟು ಎಂದರೆ, 2,382 ಕೋಟಿ ರೂಪಾಯಿಗಳಾಗುತ್ತದೆ. ನಾವು ಒಂದು ಕಡೆ ರಿಸೋರ್ಸ್ ಮೊಬಲೈಜೇಶನ್ ಆಗಬೇಕೆಂದು ಹೇಳುತ್ತೇವೆ. ಇನ್ನೊಂದು ಕಡೆ ಸಿಕ್ಕ ಕಡೆಯಲ್ಲಿ ಸಾಲವನ್ನು ತೆಗೆಯುತ್ತಿದ್ದೇವೆ. ಈ ಸಾಲವನ್ನು ಸರಿಯಾಗಿಸಲು ಇವತ್ತು ಬಡ್ಡಿ ಇಷ್ಟಾದರೆ, ನಾಳೆ ಈ ಅಭಿವೃದ್ಧಿ ಕಾರ್ಯಗಳು ಎಷ್ಟು ಆಗಬಹುದು ಎನ್ನುವ ಮಾತನ್ನು ಈ ಸಮದಲ್ಲಿ ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಸಾಲಕ್ಕೆ ಸಮನಾದ ಕ್ರೂರ ವಿಷ ಬೇರೊಂದಿಲ್ಲ ವಿಷಯವನ್ನು ಸೇವಿಸಿದವನನ್ನು ಕೊಂದರೆ ಸಾಲ ಮುಂದಿನ ಪೀಳಿಗೆಯನ್ನು ಕೊಲ್ಲುತ್ತದೆ. ಇದನ್ನು ಎಲ್ಲರೂ ಅರಿಯಬೇಕೆಂದು ನಾನು ಹೇಳಿ, ಇವತ್ತು ಮಾಹಿತಿ ತಂತ್ರಜ್ಞಾನ ನಿಜವಾಗಲೂ ಕೂಡ ಆಗಬೇಕಾದಂಥದ್ದು. ಆಂಧ್ರಪ್ರದೇಶದ ಕಾಪಿಯನ್ನು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮಾಡಿದರೆ ಒಳ್ಳೆಯದಾಗುತ್ತದೆ. ಆಂಧ್ರ ಪ್ರದೇಶದ ಮಾನ್ಯ ಮುಖ್ಯ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎನ್ನುವುದಕ್ಕೆ ಹೋದ ಸಲ ಚುನಾವಣೆಯಲ್ಲಿ ಅವರು ಗೆದ್ದು ಬಂದ ದಿಕ್ಕು ಹೇಳುತ್ತದೆ. ಅದನ್ನು ಮಾಡಲಿ, ಆದರೆ 100ಕ್ಕೆ 80 ಭಾಗ ಜನ ಹಳ್ಳಿಯಲ್ಲಿ ಜೀವನವನ್ನು ಮಾಡುತ್ತಾರೆ ಅಲ್ಲಿ ಟ್ರಾನ್ಸ್‌ಫರೆನ್ಸಿ ಇರಬೇಕು. ಅವರಿಗೆ ಏನು ಅಧಿಕಾರ ಬೇಕು, ಸಾಲವನ್ನು ಕೇಳಿದಾಗ, ಬ್ಯಾಂಕಿಗೆ ಫೋನ್ ಮಾಡಿದಾಗ ಅವನ ಸಾಲ ಮನೆಗೆ ತಲುಪುವ ರೀತಿ ಬಂದಾಗ ಆಗ ಪಾರದರ್ಶಕತೆ ಆಗುತ್ತದೆ. ಒಬ್ಬ ಕೂಲಿಯವನಿಗೆ ಲೇಬರ್ ಆ್ಯಕ್ಟ್ ಪ್ರಕಾರ ಎಷ್ಟು ಕೂಲಿ ಸಿಗಬೇಕು ಅಷ್ಟು ಸಿಕ್ಕರೆ ಅದು ಪಾರದರ್ಶಕತೆ ಆಗುತ್ತದೆ. ಇದನ್ನು ಟ್ರಾನ್ಸ್‌ಫರೆನ್ಸಿ ಮಾಡದೇ ಕೇವಲ ವಿಧಾನಸೌಧಕ್ಕೆ ಪಾರದರ್ಶಕತೆ ಸೀಮಿತವಾದರೆ ಸಾಲದು ಎನ್ನುವ ಮಾತನ್ನು ನಾನು ಈ ಸಮಯದಲ್ಲಿ ಹೇಳಿ, ಇವತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ, "ಲ್ಲಾ ವಿಷಯಗಳ ಮೇಲೆ ಹೇಳುವಾಗ ಯೋಜನೆ ಮಾಡಬೇಕಾದದ್ದು ಇವತ್ತು ಬಹಳ ಇದೆ. ನಾನು ಬಹಳ ಹೇಳುವುದಕ್ಕೆ ಹೋಗುವುದಿಲ್ಲ. ಸಾರಾಯಿ ಇದರ ಬಗ್ಗೆ ನಾನು ಹೋದ ಸಲ ಹೇಳಿದೆ.

ಒಂದು ಲೀಟರ್ ಸ್ಪಿರಿಟ್ 28 ರೂಪಾಯಿ, ಇದರಿಂದ ನಮಗೆ ಬರುವುದು, ಎಲ್ಲಿ ಸೋರಿ ಹೋಗುತ್ತದೆ ಎನ್ನುವ ಬಗ್ಗೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಒಂದು ಲೀಟರ್ ಸ್ಪಿರಿಟ್ 28 ರೂಪಾಯಿ, ಒಂದು ಲೀಟರ್ ಸಾರಾಯಿ 21 ರೂಪಾಯಿ, ಒಂದು ಲೀಟರ್ ಸ್ಪಿರಿಟಿಗೆ ಎರಡು ಲೀಟರ್ ನೀರು ಸೇರಿಸಬಹುದು. ಅಂದರೆ ಇದರಿಂದ ಮೂರು ಲೀಟರ್ ಸಾರಾಯಿ ಆಗುತ್ತದೆ. ಒಂದು ಲೀಟರ್ ಸಾರಾಯಿಯ ಬೆಲೆ 10 ರೂಪಾಯಿಗಳು, 3 ಲೀಟರ್ ಸಾರಾಯಿಗೆ 60 ರೂಪಾಯಿಗಳು ಉಳಿಯುತ್ತದೆ. ಈ 60 ರೂಪಾಯಿಗಳು ಎಲ್ಲಿಗೆ ಹೋಗುತ್ತದೆ? ಇವತ್ತು ನಾನು ಎಕಾನಮಿ ವರ್ಕ್‌ಓಟ್ ಮಾಡಿಹ ಹೇಳುತ್ತಿರುವುದು, ನಾನು ಬೇರೆ ಏನನ್ನು ಹೇಳುತ್ತಿಲ್ಲ. ಪ್ರತಿಯೊಂದು ಲೀಟರ್ ಸಾರಾಯಿಗೆ ಎಷ್ಟು ಲೀಟರ್ ನೀರನ್ನು ಹಾಕಬಹುದೋ ಅದರ ಜೆತೆಗೆ ಪ್ಯಾಕ್ ಮಾಡುವಾಗಲೂ ಕೂಡ 10 ರಿಂದ 15 ಮಿಲಿಗ್ರಾಂನ್ನು ಕಳ್ಳತನ ಮಾಡುತ್ತಾರೆ. ಇವತ್ತು ಉಳಿಯುವ 60 ರೂಪಾಯಿಗಳು ಎಲ್ಲಿಗೆ ಹೋಗಿ ಸೇರುತ್ತದೆ. ಇದು ಯಾವ ಅಧಿಕಾರಿಯ ಕೈಗೆ ಹೋಗಿ ಸೇರುತ್ತದೆ. ಯಾವ ರಾಜಕಾರಣಿಗೆ ಸೇರುತ್ತದೆ. ಇದು ಯಕ್ಷ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ನಾರು ಹಾಕಿಕೊಂಡಾಗ ನಾವು ಇಷ್ಟು ಬಡ್ಡಿಯನ್ನು ಕೊಡುವ ಅವಶ್ಯಕತೆ ಇಲ್ಲ. ನಾನು ಹಿಂದೆ ಹೇಳಿದ ಹಾಗೆ, ಐಎಂಎಫ್‌ಎಲ್ ಒಂದರಲ್ಲಿ ಮಾತ್ರ ಪ್ರತಿದಿವಸ 2 ಕೋಟಿ ರೂಪಾಯಿಗಳ ಹಣವನ್ನು ಸಿಂಗಲ್‌ಪಾಯಿಂಟ್ ಟ್ಯಾಕ್ಸ್ ಮಾಡಿದರೆ ಉಳಿಸಬಹುದು. ಮಾನ್ಯ ಉಪಾಧ್ಯಕ್ಷರೆ, ಇವತ್ತು ಅಲ್ಲಿಂದ ಏನು ಲೋಡ್ ಹೊರಗಡೆ ಹೋಗುತ್ತದೆ, ಉದಾಹರಣೆಗೆ ಹೇಳುವುದಾದರೆ ಒಂದು ಕಂಪನಿಯ ಹೆಸರನ್ನು ಹೇಳಬಹುದು ಅಥವಾ ಹೇಳುತ್ತೇನೆ, ತಪ್ಪಿದ್ದರೆ ಅದನ್ನು ರೆಕಾರ್ಡ್ ಮಾಡುವುದು ಬೇಡವೆಂದರೆ ಬೇಡ, ಬೇಕಾದರೆ ಮಾತ್ರ ರೆಕಾರ್ಡ್ ಮಾಡಿಕೊಳ್ಳಬಹುದು. ಕೋಲಾರಕ್ಕೆ 600 ಕೇಸ್ ಹೋಗಬೇಕಾದರೆ ಆ ಕಂಟ್ರಾಕ್ಟರ್‌ರವರು ಅವರಿಗೆ ಕೂಡ ಬೇಕಾಗುತ್ತದೆ. ಒಂದು ಕ್ರೇಟ್‌ಗೆ 35 ರೂಪಾಯಿಗಳನ್ನು ಅಂದರೆ 12 ಬಾಟಲುಗಳು ಇರುವಂತಹ ಐಎಂಎಫ್‌ಎಲ್ ವಿಸ್ಕಿ ಅಥವಾ ಬ್ರಾಂದಿ ಕೋಲಾರಕ್ಕೆ ಒಂದು ಕೇಸ್ ಹೋಗಬೇಕಾದರೆ 35 ರೂಪಾಯಿಗಳಾಗುತ್ತದೆ ಹಾಗಾದರೆ 600 ಕೇಸ್‌ಗಳು ಹೋಗಬೇಕಾದರೆ ಎಷ್ಟಾಗುತ್ತದೆ ಸ್ವಾಮಿ, ಇವರು ಅದನ್ನು ತೆಗೆದುಕೊಂಡು 40 ರಿಂದ 70 ಕಿಲೋಮೀಟರ್ ಹೋಗಿ ಅಲ್ಲಿ ಡಂಪ್ ಮಾಡುವುದಕ್ಕೆ 20 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಈ ಹಣವು ಎಲ್ಲಿಗೆ ಹೋಗುತ್ತದೆ? ನೀವು ಐಎಂಎಫ್‌ಎಲ್ ಮತ್ತು ಸಾರಾಯಿ ಇವೆರಡರ ವಿಚಾರದಲ್ಲಿ ಸರಿಯಾಗಿ ವಸೂಲಿಯನ್ನು ಮಾಡಿದ್ದೇ ಆದರೆ ಇವತ್ತು ನೀರು ಯಾರು ಸಾಲಕ್ಕೆ ಹೋಗಬೇಕಾಗಿಲ್ಲ. ಇವತ್ತು ನೀವು ಅಧಿಕಾರಿಗಳಿಗೆ ಹೆಚ್ಚಿಗೆ ಸಂಬಳವನ್ನು ಕೊಡಬಹುದು, ಇಲ್ಲಿ ಸೋರಿಹೋಗುವಂತದ್ದನ್ನು ತಡೆಗಟ್ಟಿದರೆ ಆಗುತ್ತದೆ. ಇವತ್ತು ಅಭಿವೃದ್ಧಿಯ ಕೆಲಸಗಳನ್ನು ಸಾಲ ಮಾಡುವುದರ ಮೂಲಕ ಮಾಡುತ್ತಿದ್ದೇವೆ. ನಾವು ವಲ್ಡ್‌ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಳ್ಳಬೇಕು,ಹುಡ್ಕೋನಿಂದ ತೆಗೆದುಕೊಳ್ಳಬೇಕು. ಎನ್‌ಸಿಡಿಸಿಯಿಂದ ತೆಗೆದುಕೊಳ್ಳಬೇಕು ಎಂಬ ಚಿಂತನೆಯು ನಮ್ಮ ಎಲ್ಲಾ ಸರ್ಕಾರಗಳಿಗೂ ಬಂದಿದೆ. ಇವತ್ತು ಒಂದು ಲೀಟರ್ ಸಾರಾಯಿಗೆ 60 ರೂಪಾಯಿಗಳನ್ನು ಉಳಿಸುವಂತಹ ಹಣ ಏನಿದೆ ಅದು ಸಾರಾಯಿ ಮಾರಾಟ ಮಾಡುವ ವರ್ತಕನಿಗೆ ಎಲ್ಲಿ ಹೋಗುತ್ತದೆ, 60 ರೂಪಾಯಿಗಳನ್ನು ಆತನಿಗೆ ಬಿಡುತ್ತೀರಾ? ಇದು ಯಕ್ಷಪ್ರಶ್ನೆಯಾಗಿ ಉಳಿಯಬಾರದು, ಈ ದಿಕ್ಕಿನಲ್ಲಿ ಸರ್ಕಾರವು ಚಿಂತನೆಯನ್ನು ಮಾಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತಿದ್ದೇನೆ. ಇನ್ನು ಕಡೆಯದಾಗಿ

ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು 26ನೇ ಮಾರ್ಚ್ 1965 ರಲ್ಲಿ ಒಂದು ಮಾತನ್ನು ಹೇಳಿದ್ದಾರೆ. "ಈಗ ಸರ್ಕಾರದವರು ಜನತಂತ್ರದ ಚೌಕಟ್ಟಿನಲ್ಲಿ ಮತ್ತು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ" ಎಂಬುದನ್ನು 1937 ರ ಆ್ಯಕ್ಟ್ ಪ್ರಕಾರ ಎಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಶ್ರೀನಿವಾಸಗೌಡರೆ, ಎಂಥೆಂಥ ಒಳ್ಳೆಯ ಸಲಹೆಗಳನ್ನು ನಿಮ್ಮಲ್ಲೇ ಇಟ್ಟುಕೊಂಡರೆ ಹೇಗೆ? ಹಿಂದೆ ಇದ್ದಂತಹ ಸರ್ಕಾರಕ್ಕೆ ನೀವು ಇಂಥ ಒಳ್ಳೆಯ.ಸಲಹೆಯನ್ನು ಕೊಟ್ಟಿದ್ದರೆ ಎಷ್ಟು ಚೆನ್ನಾಗಿರತ್ತಿತ್ತು, ಆ ಸರ್ಕಾರದವರು ಇಲ್ಲಿಯವರೆವಿಗೂ ಸಾಲವನ್ನು ಮಾಡುತ್ತಿರಲಿಲ್ಲ. 3,200 ಕೋಟಿ ರೂಪಾಯಿಗಳ ಬಡ್ಡಿಯನ್ನು ಸಹ ಕೊಡುತ್ತಿರಲಿಲ್ಲ; ನಮಗೂ ಸಹ ಅದರ ಹೊರೆಯು ಬರುತ್ತಿರಲಿಲ್ಲ. ನೀವು ಒಳ್ಳೆಯ ಸಲಹೆಯನ್ನು ನಿಮ್ಮಲ್ಲೇ ಇಟ್ಟುಕೊಂಡು ಬರೀ ಅವರಿಗೆ ಬೆಂಬಲವನ್ನು ನೀಡುತ್ತಾ ಹೋದರೆ ಹೇಗೆ ಆಗುತ್ತದೆ?

ಶ್ರೀ ಕೆ. ಶ್ರೀನಿವಾಸಗೌಡ:- ಮಾನ್ಯ ಮುಖ್ಯಮಂತ್ರಿಗಳು ಹಿಂದೆ ವಿರೋಧಪಕ್ಷದಲ್ಲಿದ್ದಾಗ ಆಗಿನ ವಿರೋಧಪಕ್ಷದ ಸದಸ್ಯರಾದ ಶ್ರೀ ಎಸ್.ಎಂ.ಕೃಷ್ಣರವರು ಒಂದೆರಡು ಮಾತುಗಳನ್ನಾಡಿದ್ದಾರೆ, ಅದನ್ನು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. "ಈಗ ಸರ್ಕಾರದವರು ಜನತಂತ್ರದ ಚೌಕಟ್ಟಿನಲ್ಲಿ ಮತ್ತು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ" ಎಂಬುದನ್ನು 1935 ರ ಆ್ಯಕ್ಟಿನ ಪ್ರಕಾರ ಕೂಡ ಗೌರ್ನರ್ ಶಾಸನ ಸಭೆಯನ್ನುದ್ದೇಶಿಸಿ ಭಾಷಣ ಮಾಡುವಾಗ ಈಗ ಇಲ್ಲಿ ಕುಳಿತುಕೊಂಡಿರತಕ್ಕ, ಅಂದರೆ ಅವರ ಕಡೆ ನೋಡಿ ಜನ ಯಾವ ಮನೋಭಾವನೆಯನ್ನು ಒಂದು ರಾಜ್ಯಪಾಲರ ಮೇಲೆ ಜನಗಳ ಪರವಾಗಿ ಹೋರಾಟ ಮಾಡತಕ್ಕಂತಹ ಕಾಲದಲ್ಲಿ ಎಂತಹ ಮನೋಭಾವನೆಯನ್ನು ಪ್ರತಿಬಿಂಬಿಸಿದರು, ಅದನ್ನು ಅವರು ಈಗ ಸ್ವಲ್ಪ, ಜ್ಞಾಪಕಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಕೃಷ್ಣಾಜಿಯವರು ವಿರೋಧಪಕ್ಷದಲ್ಲಿದ್ದಾಗ ಅವರು ಹೇಳಿದಂತಹ ಮಾತು ಇದು, ಇವತ್ತು ಅವರು ಆಡಳಿತ ಪಕ್ಷದ ಕಡೆಗೆ ಹೋಗಿದ್ದಾರೆ. ಅವರು ವಿರೋಧಪಕ್ಷದಲ್ಲಿದ್ದಾಗ 1965ನೇ ಇಸವಿಯಲ್ಲಿ ಏನು ಹೇಳಿದ್ದಾರೆಂದು ಅವರು ಜ್ಞಾಪಿಸಿಕೊಳ್ಳಬೇಕು. ನಾವು ಆವಾಗ ಕಾಲೇಜಿನ ಹುಡುಗರಾಗಿದ್ದೆವು, ಅದನ್ನು ಮಾನ್ಯ ಮಲ್ಲಿಕಾರ್ಜುನಖರ್ಗೆಯವರು ಇದನ್ನು ಮುಖ್ಯಮಂತ್ರಿಗಳವರಿಗೆ ಹೇಳಬೇಕೆಂದು ಹೇಳುತ್ತಿದ್ದೇನೆ. ಅವತ್ತು ಅವರು ಆಹಾರದ ವಿಷಯದಲ್ಲಿ ಹೇಳಿದ್ದರು, ಇವತ್ತು ಮಾನ್ಯ ಸಿಂಧ್ಯಾರವರು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಂಡು ಬಂದು ಕೇಂದ್ರ ಸರ್ಕಾರದವರು ಬೆಲೆ ಜಾಸ್ತಿ ಏರಿಸಿರುವುದರಿಂದ ನಾವು ಏನು 3-50 ಪೈಸೆಗೆ ಅಕ್ಕಿಯನ್ನು ಕೊಡುತ್ತಿದ್ದೆವು ಇವತ್ತು ಅದರ ಮೂರರಷ್ಟು ಮಾಡಿದ್ದೀರಿ ಎಂದು ಹೇಳಿದರು. ಇವತ್ತು ಅವರೇ ಮಾತನಾಡಿದಂತಹ ಮಾತುಗಳಲ್ಲಿ ಹೇಳುವುದಾದರೆ, ಈ ರಾಜ್ಯದಲ್ಲಿ ಮಾನ್ಯ ಶ್ರೀ ಬಿ.ಡಿ.ಜತ್ತಿಯವರ ಬಜೆಟ್ ಭಾಷಣದಲ್ಲಿ ಎಷ್ಟು ಲಕ್ಷ ಟನ್ ಆಹಾರೋತ್ಪನ್ನ ಆಯಿತು ಎಂದು ಹೇಳಿದ್ದರೋ ಅದಕ್ಕೆ ಒಂದೂವರೆಯಷ್ಟು ಜಾಸ್ತಿಯಾಗಬೇಕು, ಅವರು ಉತ್ಪತ್ತಿಯ ಮೇಲೆ ಮಾತನಾಡಿದ್ದರು. ಈವರೆವಿಗೆ ವಾಸ್ತವಿಕತೆಯ ಸಂಗತಿಗಳು ಬುನಾದಿಯ ಮೇಲೆ ನಿಂತಿಲ್ಲ, ಇದು ಉತ್ಪ್ರೇಕ್ಷೆಯಾದದ್ದು ಇದು ಅವರು ಅರ್ಥ ಮಾಡಿಕೊಳ್ಳಬೇಕೆಂದು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದಲ್ಲಿದ್ದಾಗ ಮಾತನಾಡಿದಂತಹ ಮಾತುಗಳು ಏಕೆಂದರೆ, ನಾವು ವಿರೋಧಪಕ್ಷದಲ್ಲಿದ್ದುಕೊಂಡು ಮಾತನಾಡುತ್ತಿದ್ದೇವೆ, ನಾವು ನಾಳೆ ದಿನ ಅಧಿಕಾರಕ್ಕೆ ಬಂದಾಗ ನಾನು ಮರೆತು ಹೋಗಿಬಿಡಬಹುದು.

ಆದರೆ ಅದು ಮರೆತು ಹೋಗಬಾರದು ನಾನು ಇವತ್ತು ಅಲ್ಲಿ ಏನು ಮಾತನಾಡಿದ್ದೇನೋ ಅದನ್ನು ನಾನು ಜ್ಞಾಪಕಕ್ಕೆ ಇಟ್ಟುಕೊಳ್ಳಬೇಕು ಅದು ಟ್ರಾನ್ಸ್‌ಫರೆನ್ಸಿ, ನೀವು ಪಾರದರ್ಶಕದ ಬಗ್ಗೆ ಮಾತನಾಡುತ್ತೀರಿ.

> "Unfortunately... leave it to me, attitude of Government of Mysore has not paid any dividends."

ಎಲ್ಲಾ ಪ್ರತಿಯೊಂದನ್ನು ನನಗೆ ಬಿಡಿ ನಾನು ಮಾಡುತ್ತೇನೆ ಎನ್ನುವುದಕ್ಕೆ ಯಾವುದು ಡಿವಿಡೆಂಡ್ಸ್ ಸಿಗುವುದಿಲ್ಲ. ಇದರ ಬಗ್ಗೆ 3ನೇ ಫೆಬ್ರವರಿ 1966 ರಲ್ಲಿ ಮಾನ್ಯ ಕೃಷ್ಣರವರು ಮಾತನಾಡಿದ್ದಾರೆ

> "Some of the problems can be solved in the coming few years and some of the problems may not be solved during our life time

ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಇವತ್ತು ಅಧಿಕಾರದಲ್ಲಿದ್ದಾಗ ಎಲ್ಲಾ ಮಾಡುತ್ತೇವೆ ಎನ್ನುವ ಮಾತನ್ನು ಹೇಳದೆ ಮಾನ್ಯ ಶ್ರೀ ಬಿ.ಡಿ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಒಂದು ಪದವನ್ನು ಉಪಯೋಗಿಸಿದ್ದಾರೆ, ಅದನ್ನು ಕೂಡ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

> "Mr. Jatti is a juggler in figure and in words also."

ಈ ತರಹ ಮಾತುಗಳನ್ನು ಅವರ ಬಗ್ಗೆಯೇ ಮಾತನಾಡಿ ಹೇಳಿದ್ದಾರೆ. ಅದರ ಜೊತೆಗೆ ಇವತ್ತು ಸಹಕಾರ ಮಂತ್ರಿಗಳಿದ್ದಾರೆ, ಸಹಕಾರ ವ್ಯವಸ್ಥೆಯಲ್ಲಿ ಕೂಡ ಇವತ್ತು ಅಥವಾ ನಾಳೆ ದಿವಸ ಬಿಲ್‌ನ್ನು ತರುವುದಕ್ಕೆ ಇಚ್ಛೆಪಡುತ್ತಾರೆ, ಇದರ ಬಗ್ಗೆ 3ನೇಫೆಬ್ರವರಿ 1966ರಲ್ಲಿ ಅವರು ಮಾತನಾಡಿದಂತಹ ಮಾತುಗಳನ್ನು ಇವತ್ತು ಅವರ ಜ್ಞಾಪಕಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

> "Sir, let me go the co-operative sector. This is an area which is developed so far. May learned friend Mr. Deve Gowda, others they pointed out that the Co-operation Department is expanding beyond all reasonable imagination. ಒಂದೊಂದು ಹೇಳುತ್ತಿದ್ದೇನೆ.
>
> "Co-operative institutions, they own that for ever as long as they can have a comfortable majority among the shareholders." ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದಲ್ಲಿದ್ದಾಗ ಕಂಫರ್ಟ್‌ಬಲ್ ಮೆಜಾರಿಟಿ ಷೇರು ಹೋಲ್ಡರ್ಸ್ ಇದ್ದಾಗ ಯಾರು ಬೇಕಾದರೂ ಆಗಬಹುದು ಎನ್ನುವ ಮಾತನ್ನು 3ನೇ ತಾರೀಖು ಫೆಬ್ರವರಿ 1966ರಲ್ಲಿ ಏನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಮಾಡಿಸಿದಂತಹ ನಮ್ಮ ಈಗಿನ ಮುಖ್ಯಮಂತ್ರಿಗಳು, ಇವತ್ತು ಮಾನ್ಯ ಮಂತ್ರಿಗಳಾದ ಶ್ರೀ ಶಿವಕುಮಾರ್‌ರವರ

ಮೂಲಕ ಅವರಿಗೂ ಒಂದು ಮಾತನ್ನು ಹೇಳಿದ್ದಾರೆ. ಈ ಒಂದು ಬಿಲ್‌ನ್ನು ತರಿಸುತ್ತಿದ್ದಾರೆ, ಆ ಬಿಲ್ ನಿಲ್ಲಬೇಕೆಂದು ತಮ್ಮ ಮೂಲಕ ಆಗ್ರಹಪಡಿಸುತ್ತಿದ್ದೇನೆ, ಏಕೆಂದರೆ ಅವರು ಅದನ್ನು ವಾಪಸ್ಸು ಪಡೆದುಕೊಳ್ಳುತ್ತಾರೆ, ಈ ಮಾತುಗಳನ್ನೆಲ್ಲಾ ಮುಖ್ಯಮಂತ್ರಿಗಳೇ ಹೇಳಿದಮೇಲೆ, ನಾವು ಮುಖ್ಯಮಂತ್ರಿಗಳಿಗೆ ಗೌರವವನ್ನು ಕೊಡಬೇಕು ಎನ್ನುವ ಆಸೆ ಬಂದು ಆ ಬಿಲ್‌ನ್ನು ವಾಪಸ್ಸು ತೆಗೆದುಕೊಳ್ಳಬಹುದು, ಅವರು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ಆಸೆ ನನಗಿದೆ. ಅವರು ಇನ್ನು ಮುಂದೆ ಹೋಗಿ ಹೇಳುತ್ತಾರೆ.

"The Officers in the co-operative sector sometimes are obliged to leader of a partioular political party.

ಅವರು ಅವತ್ತೆ ಹೀಗೆ ಹೇಳಿ ಸರ್ಕಾರವನ್ನು ಚುಚ್ಚಿ ಮಾತನಾಡಿದ್ದಾರೆ. ಆವತ್ತಿನ ಸರ್ಕಾರದ ಮೇಲೆ ಅವರ ಮಾತುಗಳನ್ನು ಕೇಳುತ್ತಾರೆಂದು ಆಗಲೇ ಮಾನ್ಯ ಕೃಷ್ಣಾಬಿಯವರು ಹೇಳಿದ್ದಾರೆ. ಅದನ್ನು

"..... in the district and even taluk levels."

ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಡಿ. ಕೆ. ಶಿವಕುಮಾರ್:- ಅದಕ್ಕೆ ಅರ್ಥವೇನೆಂದರೆ ಮಾತು ಗುರುಪಾದಪ್ಪನವರನ್ನು ಇಳಿಸಿ ಶ್ರೀನಿವಾಸಗೌಡರನ್ನು ಅಧಿಕಾರಕ್ಕೆ ಕೂರಿಸಿದ ಹಾಗೆ ಬರುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ:- ಅದನ್ನು ನಾವುಗಳು ಮಾಡಿದ ಹಾಗೆ ಆಗುತ್ತದೆ.

ಶ್ರೀ ಡಿ. ಕೆ. ಶಿವಕುಮಾರ್:- ಅದು ಹಾಗೆ ತಾನೇ ಪಾಲಿಟಿಕ್ಸ್. ಗುರುಪಾದಪ್ಪನವರನ್ನು ಇಳಿಸಿ ಶ್ರೀನಿವಾಸಗೌಡರನ್ನು ಕೂರಿಸಿದ ಹಾಗೆ ಆಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ:- ಅದಕ್ಕಾಗಿ ನಾನು ರಾಜಕಾರಣದ ಬಗ್ಗೆ ಹೇಳುತ್ತಿರುವುದು. ನಾನು ರಾಜಕಾರಣಕ್ಕೆ ಬರುವುದಿಲ್ಲ, ಅದು ಸಹಕಾರದ ವ್ಯವಸ್ಥೆ ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ, ಒಬ್ಬ ಎಜುಕೇಷನ್ ಮಿನಿಸ್ಟರ್ ಶ್ರೀ ಎಸ್.ಆರ್. ಕಂಠಿಯವರನ್ನು ಸೂಚನೆ ಮಾಡಿ, ಇವತ್ತು ನಾನು ಸಹಕಾರ ಮಂತ್ರಿಗಳಿಗೆ ಹೇಳುತ್ತೇನೆ.

"The co-operative Minister simply because he becomes the head of the portfolio in the Ministry. becomes an expert overnight."ಏಕೆಂದರೆ, ಮಂತ್ರಿಗಳಾಗುತ್ತಿದ್ದಂತೆ ಅವರ ಪೋರ್ಟ್‌ಫೋಲೀಯೋನಲ್ಲಿ ಅವರು ಬಹಳ ಎಕ್ಸ್‌ಪರ್ಟ್ಸ್ ಆಗುತ್ತಾರೆಂದು ನಾನು ಹೇಳಲಿಲ್ಲ ನಿಮ್ಮ ಮುಖ್ಯಮಂತ್ರಿಗಳು, ನಿಮ್ಮ ಇವತ್ತಿನ ನಾಯಕರುಗಳು ಹೇಳಿದ್ದಾರೆ ಆದ್ದರಿಂದ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ನಾನು ಕೋ-ಆಪರೇಟೀವ್ ಬಿಲ್ ಬಂದಾಗ ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಈ ಬಿಲ್ ನಾಡಿದ್ದು ಬಂದರೆ ನಾನು ಇನ್ನು ಮಾತನಾಡುವುದು ಬಹಳ ಇದೆ. ಇದನ್ನು ನೀವು ಯೋಚನೆ ಮಾಡಿ,

ಇವತ್ತು ನಮ್ಮ ರಾಜ್ಯಪಾಲರು ಏನು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ ಅದಕ್ಕಾಗಿ ಮತ್ತೊಮ್ಮೆ ನಾನು ವರಿಗೆ ವಂದಿಸಿ ಇವತ್ತು ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

7. ಪ್ರಕಟಣೆ

ಉಪಾಧ್ಯಕ್ಷರು:- ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡುವಳಿ ನಿಯಮ 118 ರ ಮೇರೆಗೆ ವಿಧಾಪರಿಷತ್ತು ದಿನಾಂಕ: 18-04-2000 ದಂದು ಬಯಲುಸೀಮೆ ಪ್ರದೇಶಾಬಿವೃದ್ಧಿ ಮಂಡಳಿಯ 'ತಿದ್ದುಪಡಿ' ವಿಧೇಯಕ 2000 ವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ತಿಳಿಸುತ್ತಿದ್ದೇನೆ.

4.20 ಪಿ.ಎಂ

8. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ.

+ ಶ್ರೀ ಕೆ. ಗೋಪಾಲ ಪೂಜಾರಿ:(ಬೈಂದೂರು):- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದ ವಂದನಾರ್ಪಣ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ಸನ್ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ ರೂಪಿಸಿದ ಯೋಜನೆಗಳ ಬಗ್ಗೆ ವಿವರವಾಗಿ ತೋಟಗಾರಿಕೆ, ಮೀನುಗಾರಿಕೆ ಕೃಷಿ, ಬೃಹತ್ ನೀರಾವರಿಯ ಬಗ್ಗೆ ಹೆಚ್ಚಿನ ಒತ್ತನ್ನು ನಮ್ಮ ಸರ್ಕಾರ ಕೊಟ್ಟಿದೆ. ಪಂಚಾಯತ್ ರಾಜ್ ಕಾನೂನಿಗೆ ತಿದ್ದುಪಡಿಯನ್ನು ತಂದು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ತರುವ ಮೂಲಕ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಕ್ಕೆ ನ್ಯಾಯವನ್ನು ದೊರಕಿಸಿಕೊಟ್ಟು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಸರ್ಕಾರಕ್ಕೆ ಇರುವ ಕಾಳಜಿಯನ್ನು ತೋರಿಸಿಕೊಟ್ಟಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ ಬಹುಶಃ ವಿಶೇಷವಾಗಿ ಕೃಷಿಯ ಬಗ್ಗೆ ಹೆಚ್ಚಿನ ಒತ್ತನ್ನು ಕೊಟ್ಟಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಹಿಂದಿನ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಬೀಜ ನಿಗಮದ ಏನು ಸೇಲ್ಸ್ ಪಾಯಿಂಟ್ ಇದೆ ಅದನ್ನು ರದ್ದು ಮಾಡಿತ್ತು. ಇದರಿಂದ ನಮ್ಮ ಜಿಲ್ಲೆಯ ಎಲ್ಲಾ ರೈತರಿಗೆ ತೊಂದರೆಯಾಗಿತ್ತು. ಮಂಗಳೂರು ಮತ್ತು ಕುಂದಾಪುರದಲ್ಲಿ ಇದ್ದಂತಹ ಸೇಲ್ಸ್ ಪಾಯಿಂಟ್‌ನ್ನು ರದ್ದು ಮಾಡಿದ್ದರಿಂದ ಅಲ್ಲಿ ಕಳಪೆ ದರ್ಜೆಯ ಬೀಜಗಳ ಬಿತ್ತನೆಯಿಂದ ಅಲ್ಲಿನ ರೈತರಿಗೆ ಬಹಳ ಅನ್ಯಾಯವಾಗಿದೆ. ನಾವು ಬಹಳಷ್ಟು ಸಾರಿ ಹಿಂದಿನ ಕೃಷಿ ಸಚಿವರಲ್ಲಿಗೆ ಹೋಗಿ ತಿಳಿಸಿದ್ದೇನೆ. ಆದರೂ ಸಹ ಅಲ್ಲಿ ಲಾಭ ಇಲ್ಲವೆನ್ನುವ ದೃಷ್ಟಿಯಿಂದ ಕುಂದಾಪುರ ಮತ್ತು ಮಂಗಳೂರಿನಲ್ಲಿದ್ದಂತಹ ಸೇಲ್ಸ್‌ಪಾಯಿಂಟ್ ಅನ್ನು ಹಿಂದಿನ ಸರ್ಕಾರ ರದ್ದು ಮಾಡಿತ್ತು. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ ನಾವು ಇದರ ಬಗ್ಗೆ ಬೇಡಿಕೆಯನ್ನು ಇಟ್ಟನಂತರ ನಮ್ಮ ಸಾರ್ಕರ ಸೇಲ್ಸ್ ಪಾಯಿಂಟ್‌ನ್ನು ಅಲ್ಲಿ ಓಪನ್ ಮಾಡಿದೆ. ಆ ಸೇಲ್ಸ್ ಪಾಯಿಂಟ್‌ನಲ್ಲಿ ಹಿಂದಿನ ಗುಮಾಸ್ತ ಮತ್ತು ಎಫ್‌ಡಿಸಿ ಇಟ್ಟಿದ್ದಾರೆ. ಅಲ್ಲಿ ಫಲ್ಗುಣ ಬೀಜ ಏನಿದೆ. ರಾಶಿಬೀಜ, ನಲಗಡಳೆಬೀಜ ನಮ್ಮ ಜಿಲ್ಲೆಯಲ್ಲಿ

ಅತಿವೃಷ್ಟಿ ಇರುವುದರಿಂದ ಇದರ ಅವಶ್ಯಕತೆ ಇದೆ. ಹಿಂದೆ ಲಾಭ ಬಾರದೆ ಇರಲಿಕ್ಕೆ ಕಾರಣ ಏನೆಂದರೆ ಅಲ್ಲಿ ಯಾವ ಬೀಜದ ಬೇಡಿಕೆಯಿದೆ ಫಲ್ಗುಣ, ಜಯ ಅಥವಾ ಕಾಶಿ ಬೀಜ ಇರಬಹುದು. ಅದನ್ನು ಅಲ್ಲಿ ತಾರದೆ ಕಳಪೆಬೀಜವನ್ನು ಕೊಟ್ಟಿದ್ದರಿಂದ ಅಲ್ಲಿನ ರೈತರು ತೆಗೆದುಕೊಳ್ಳಲಿಲ್ಲ. ಅಲ್ಲಿನ ಸೇಲ್ಸ್‌ಪಾಯಿಂಟ್‌ನಲ್ಲಿ ಸೇಲ್ಸ್ ಆಗದೆ ಅದು ನಷ್ಟಕ್ಕೆ ಬಂದಾಗ, ಅವೊಂದು ಸೇಲ್ಸ್‌ಪಾಯಿಂಟ್‌ನ್ನು ರದ್ದು ಮಾಡಿದರು. ಇವತ್ತು ಯಾವ ಸೇಲ್ಸ್ ಪಾಯಿಂಟ್ ಲಾಭ ಇಲ್ಲವೆನ್ನುವ ದೃಷ್ಟಿಯಿಂದ ರದ್ದಾಗಿದೆ ಇವತ್ತು ಅದು ಉದ್ಘಾಟನೆಯಾಗಿದೆ. ಅಲ್ಲಿ ಫಲ್ಗುಣ, ರಾಶಿ, ಜಯ ಎಲ್ಲ ಬೀಜವನ್ನು ಒಂದು ಸಾವಿರ ಕ್ವಿಂಟಾಲ್‌ನ ಅವಶ್ಯಕತೆಯಿದೆ. ಆ ಸೇಲ್ಸ್‌ಪಾಯಿಂಟ್‌ನಲ್ಲಿಡಬೇಕೆಂದು ನಮ್ಮ ಸರ್ಕಾರವನ್ನು ಅಧ್ಯಕ್ಷರ ಮೂಲಕ ಒತ್ತಾಯಿಸುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಕರಾವಳಿ ಪ್ರದೇಶವನ್ನು ಆವರಿಸಿರತಕ್ಕ ಕ್ಷೇತ್ರದ ಶಾಸಕ. ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ, ಇವತ್ತು ರಾಜ್ಯಪಾಲರ ಭಾಷಣದಲ್ಲಿ ಮೀನುಗಾರ ಡೀಸಲ್‌ನ ಸಬ್ಸಿಡಿ ಬೇಡಿಕೆ ಏನಿದೆ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ನಮ್ಮ ಸರ್ಕಾರ ಕೊಟ್ಟಿದೆ. ಈವೊಂದು ಡೀಸಲ್ ಸಬ್ಸಿಡಿಯಿಂದ ಮೀನುಗಾರ ತೊಂದರೆಯನ್ನು ಬಹಳಷ್ಟು ನಿಭಾಯಿಸತಕ್ಕ ವ್ಯವಸ್ಥೆಯಾಗಿದೆ. ಕ್ಷೇತ್ರದಲ್ಲಿ ಸುಮಾರು 500 ನಾಡದೋಣಿ ಮೀನುಗಾರರ, ಈ ನಾಡದೋಣಿ ಮೀನುಗಾರರು ಸೀಮೆಎಣ್ಣೆಯ ಮೂಲಕ ಸಮುದ್ರಕ್ಕೆ ಹೋಗಿ ಮೀನುಗಾರಿಕೆಯನ್ನು ಮಾಡುತ್ತಾರೆ. ಇವತ್ತು ಈ ಮೀನುಗಾರಿಕೆಗೆ ಕೊಡುವಂತಹ 150 ಲೀಟರ್ ಸೀಮೆಎಣ್ಣೆಯನ್ನು 120 ಲೀಟರ್ ಸೀಮೆಎಣ್ಣೆ ಕೊಡುವಂತಹ ಪರಿಸ್ಥಿತಿ ಬಂದಿದೆ. ಕಾಳಸಂತೆಯಲ್ಲಿ ಒಂದು ಲೀಟರ್‌ಗೆ 16 ರೂಪಾಯಿ ಕೊಟ್ಟು ಸೀಮೆಎಣ್ಣೆಯನ್ನು ತೆಗೆದುಕೊಂಡು ಮೀನುಗಾರಿಕೆಗೆ ಬಹಳ ಕಷ್ಟದ ವಾತಾವರಣ ಸೃಷ್ಟಿಯಾಗಿದೆ. ಹಿಂದಿನ ಸರ್ಕಾರ ಇರುವ ಜಸಂದರ್ಭದಲ್ಲಿ ನಾವು ಇದರ ಬಗ್ಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. 150 ಲೀಟರ್ ಬದಲಿಗೆ ಕೇರಳ ಸರ್ಕಾರದಲ್ಲಿ 400 ಲೀಟರ್ ಸೀಮೆಎಣ್ಣೆಯನ್ನು ಕೊಡುತ್ತಿದ್ದಾರೆ. ನಮಗೂ ಸಹ ಅದೇ ಮಾದರಿಯಲ್ಲಿ ನಮ್ಮ ಮೀನುಗಾರರಿಗೆ ನಾನೂರು ಲೀಟರ್ ಸೀಮೆಎಣ್ಣೆಯನ್ನು ಕೊಡಬೇಕೆನ್ನುವ ಒತ್ತಾಯವನ್ನು ನಾವು ಮಾಡಿದ್ದೇವೆ. ಆ ಹಿಂದಿನ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೊಟ್ಟಿದೆ. ಕೇಂದ್ರದಲ್ಲಿ ನಮ್ಮ ಸಾರ್ಕರ ಇಲ್ಲ. ವಿರೋಧಪಕ್ಷದವರ ಸರ್ಕಾರ ಇದೆ. ಅವರ ಸರ್ಕಾರ ಇರುವಂತಹ ಸಂದರ್ಭದಲ್ಲಿ ಒತ್ತಡವನ್ನು ಏರಿ ನಮಗೆ ನಾನೂರು ಲೀಟರ್ ಸೀಮೆಎಣ್ಣೆಯನ್ನು ಕೊಡಲಿಲ್ಲ. ತಮ್ಮ ಮೂಲಕ ನಾನು ಹೇಳುವುದೇನೆಂದರೆ, ನಮ್ಮ ಮೀನುಗಾರಿಕೆ ಸಚಿವರು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಏರಿ ನಮ್ಮ ಮೀನುಗಾರಿಕೆಯ ಜನರ ಆಸೆ ಏನಿದೆ ನಾನೂರು ಲೀಟರ್ ಸೀಮೆಎಣ್ಣೆಯನ್ನು ಕೊಟ್ಟು ಅವರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆನ್ನುವ ಒತ್ತಾಯವನ್ನು ಸದನದ ಮೂಲಕ ಮಾಡುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಹಳಷ್ಟು ದೊಡ್ಡ ದೊಡ್ಡ ಯೋಜನೆಗಳನ್ನು ಎಲ್ಲಾ ಜಿಲ್ಲೆಗಳಿಗೆ ಹಮ್ಮಿಕೊಂಡಿದೆ. ಆದರೆ ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ, ಸುಮಾರು 25ವರ್ಷಗಳಿಂದ ವರಾಹಿ ಯೋಜನೆ ಕಾರ್ಯಕ್ರಮಗು ನಡೆಯುತ್ತಿವೆ. ವರಾಹಿ ಯೋಜನೆಯ ಹಿಂದೆ ನಮ್ಮ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಇದೆ. ಬಹುಶಃ ನಾನು ಇದನ್ನು ಏಕೆ ಹೋಳುತ್ತಿದ್ದೇನೆಂದರೆ, ಇವತ್ತು ನಮ್ಮ ರೈತರು ಬಹಳಷ್ಟು ಜನ

ಜಾಗವನ್ನು ಕಳೆದುಕೊಂಡು ಆ ಜಾಗವನ್ನು ಸರ್ಕಾರಕ್ಕೆ ಬಿಟ್ಟನಂತರವೂ ಅವರ ದೃಷ್ಟಿಯಲ್ಲಿ ಪರಿಹಾರ ಸಿಕ್ಕಿಲ್ಲ. ಒಂದು ದೃಷ್ಟಿಯಲ್ಲಿ ವರಾಹಿ ಯೋಜನೆಯ ಕಾರ್ಯಗತ ಆಗುತ್ತದೋ ಇಲ್ಲವೋ ಎನ್ನುವ ಅಂಜಿಕೆ ಅವರಲ್ಲಿ ಬಂದಿದೆ. ಇವತ್ತು ಅಲ್ಲಿ ಪಂಪ್ ಹೌಸ್ ಈಗಲೇ ರೆಡಿಯಾಗಿ ನಿಂತಿದೆ. ಆರು ಮೇಲ್ಗಾಲುವೆ ಅವಶ್ಯಕತೆಯಿದೆ. ಇದು ಕಾರ್ಯಗತವಾಗದೆ ಪಂಪ್‌ಹೌಸ್ ರೆಡಿಯಾದರೆ ಅದನ್ನು ಇವತ್ತು ರೈತರು ನೋಡುತ್ತಿದ್ದಾರೆ. ಸಕ್ಕರೆ ಕಾರ್ಖಾನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ವರಾಹಿ ಯೋಜನೆ ಏನು ಕುಂಠಿತವಾಗಿದೆ ಅದು ಅತ್ಯಂತ ಶೀಘ್ರವಾಗಿ ಆಗದಿದ್ದರೆ, ಸಕ್ಕರೆ ಕಾರ್ಖಾನೆಯನ್ನು ಮುಚ್ಚುವ ಪರಿಸ್ಥಿತಿ ಬರುತ್ತದೆ. ಕಬ್ಬು ಬೆಳೆಗಾರರು ಕಬ್ಬು ಬೆಳೆಯಲಾರದ ವಾತಾವರಣ ಸೃಷ್ಟಿಯಾಗಿದೆ. ನಾನು ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುತ್ತೇನೆ. ಈವೊಂದು ವರಾಹಿ ಯೋಜನೆ ಅತ್ಯಂತ ಶೀಘ್ರವಾಗಿ ಚುರುಕಾಗಿ ಕೆಲಸವನ್ನು ಕಾರ್ಯಾರಂಭ ಮಾಡುವ ರೀತಿಯಲ್ಲಿ ಕೆಲಸ ಆಗಬೇಕೆಂದು ಈಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ವಸತಿ ಬಗ್ಗೆ ಹೇಳುವುದಾದರೆ, ವಿಶೇಷವಾಗಿ ನಮ್ಮ ಸರ್ಕಾರ ಎರಡು ಮನೆಗಳನ್ನು ಕೊಡುವಂತಹ ಯೋಜನೆಯನ್ನು ರೂಪಿಸಿದೆ. ಒಳ್ಳೆಯ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಮ್ಮಿಕೊಂಡಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಮ್ಮಲ್ಲಿ ಅತೀವೃಷ್ಟಿ ಆದರಲ್ಲೂ ಉಡುಪಿ ಜಿಲ್ಲೆಗೆ ಬಂದಿದೆ. ಈ ವರ್ಷದ ಅತಿವೃಷ್ಟಿಯಲ್ಲಿ ಏನಾಗಿದೆ, ನನ್ನ ಕ್ಷೇತ್ರದಲ್ಲಿ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಸುಮಾರು ಆರುನೂರು ಮನೆ ಸಂಪೂರ್ಣವಾಗಿ ನಾಶವಾಗಿದೆ. ಇದೇ ರೀತಿಯ ಅತಿವೃಷ್ಟಿ 1982ನೇ ಇಸವಿಯಲ್ಲಿ ದಿವಂಗತ ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದಾಗ ಅತಿವೃಷ್ಟಿಯಾಗಿತ್ತು. ಆಗಿನ ಸರ್ಕಾರ ಅತಿವೃಷ್ಟಿ ಬಂದ ಸಂದರ್ಭದಲ್ಲಿ ಯಾರು ಮನೆ ಕಳೆದುಕೊಂಡಿದ್ದಾರೆ ಅವರಿಗೆ ಸಂಪೂರ್ಣರಾಗಿ ಸರ್ಕಾರವೇ ಮನೆ ಕಟ್ಟಿ ಪುನರ್ ವಸತಿಯನ್ನು ನಿರ್ಮಿಸಿಕೊಟ್ಟಿತು. ನಾನು ಈ ಸಂದರ್ಭದಲ್ಲಿ ನಮ್ಮ ಸರ್ಕಾರವನ್ನು ಒತ್ತಾಯಿಸುವುದು ಇಷ್ಟೆ, ಯಾರು ವಸತಿಹೀನರಾಗಿದ್ದಾರೆ ಅವರಿಗೆ ಸಂಪೂರ್ಣವಾಗಿ ಪುನರ್ ವಸತಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಿದ್ಯುಚ್ಛಕ್ತಿಯ ಬಗ್ಗೆ ಬಹಳಷ್ಟು ಕಾಳಜಿಯನ್ನು ವಹಿಸಿ ಕಡಿಮೆ ದರದಲ್ಲಿ ಜನರಿಗೆ ರೈತರಿಗೆ ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇವತ್ತು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಹಿಂದಿನ ಸರ್ಕಾರ ನಮ್ಮ ತಾಲ್ಲೂಕಿನಲ್ಲಿ ವಿದ್ಯುತ್‌ಚ್ಛಕ್ತಿ ದಾಸ್ತಾನು ಮಳಿಗೆ ಇದ್ದುದನ್ನು ಅಲ್ಲಿ ತೊಂದರೆಯಾಗುತ್ತದೆನ್ನುವ ದೃಷ್ಟಿಯಿಂದ ಅದನ್ನು ಉಡುಪಿಗೆ ಹಸ್ತಾಂತರ ಮಾಡಿತು. ಆಗ ನಾವು ಸರ್ಕಾರವನ್ನು ಒತ್ತಾಯಿಸಿದ್ದೇವೆ, ನಮಗೆ ನ್ಯಾಯ ಸಿಗಲಿಲ್ಲ. ಇಡೀ ಜಿಲ್ಲೆಗೆ ನನ್ನ ಕ್ಷೇತ್ರ ಬಹಳಷ್ಟು ದೊಡ್ಡ ಕ್ಷೇತ್ರ. ಸುಮಾರು 70 ಕಿಲೋಮೀಟರ್ ದೂರದ ಉಡುಪಿಗೆ ಬರಬೇಕಾಗುತ್ತದೆ. ಬಹುಶಃ ಇದರಿಂದ ನಮ್ಮ ರೈತರಿಗೆ ಅನ್ಯಾಯವಾಗಿದೆ. ಯಾವ ದಾಸ್ತಾನು ಮಾಲು ಉಡುಪಿಗೆ ವರ್ಗಾವಣೆಯಾಗಿದೆ. ಅದರ ಬದಲಿಗೆ ನಮ್ಮ ಸರ್ಕಾರ ಡಿವಿ ಜನರಲ್ ಅಫೀಸ್ ಏನಿದೆ, ಕುಂದಾಪುರಕ್ಕೆ ಇದ್ದ ಉಪವಿಭಾಗವನ್ನು ಬೈಂದೂರಿಗೆ ಬದಲಾವಣೆ

ಮಾಡಿ ರೈತರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಬೇಕೆಂದು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿ ನಾನು ಹೆಚ್ಚಿಗೆ ಮಾತನಾಡದೆ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

+ಶ್ರೀ ಎಸ್.ಅಂಗಾರ (ಸುಳ್ಯ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮೊಟ್ಟಮೊದಲನೆಯದಾಗಿ ವಂದಿಸುತ್ತ ರಾಜ್ಯಪಾಲರು ಪ್ರಪ್ರಥಮವಾಗಿ ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿ ನಮಗೆಲ್ಲರಿಗೂ ತುಂಬಾ ಸಂತೋಷವನ್ನು ಉಂಟುಮಾಡಿದ್ದಾರೆ. ಈ ಒಂದು ಭಾಷಣದಲ್ಲಿ ಆರ್ಥಿಕಾಭಿವೃದ್ಧಿ ಆಗಬೇಕು ಎನ್ನತಕ್ಕಂಥ ಮಾತನ್ನು ಪ್ರಾರಂಭದಲ್ಲಿ ಉಲ್ಲೇಖ ಮಾಡಿದ್ದಾರೆ. ರಾಜ್ಯದ ಯಾವುದಾದರೂ ಒಂದು ಅಭಿವೃದ್ಧಿ ಆಗಬೇಕಾದರೆ ಪ್ರಥಮ ಹಂತದಲ್ಲಿ ಆರ್ಥಿಕಾಭಿವೃದ್ಧಿ, ಅದಕ್ಕೆ ಪೂರಕವಾಗಿ ಆರ್ಥಿಕ ಉತ್ಪನ್ನ ಕೂಡ ಮಾಡಬೇಕು. ಮಾನ್ಯ ಉಪಾಧ್ಯಕ್ಷರೇ, ಒಂದು ಕಡೆಯಿಂದ ಆರ್ಥಿಕವಾಗಿ ಉತ್ಪನ್ನ ಮಾಡಬೇಕಾದರೆ ಯಾರು ಆರ್ಥಿಕವಾಗಿ ಉತ್ಪನ್ನವನ್ನು ಮಾಡುತ್ತಾರೆ, ಸರ್ಕಾರಕ್ಕೆ ಉತ್ಪನ್ನವನ್ನು ತಂದುಕೊಡುತ್ತಾರೆ, ಅಂತಹ ವ್ಯಕ್ತಿಗಳ ಮೇಲೆ ಸರ್ಕಾರ ಕೆಲವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತದೆ. ಇನ್ನೊಂದು ಕಡೆಯಿಂದ ಯಾರು ಸರ್ಕಾರದ ಪರವಾಗಿಯಿಲ್ಲದೆ, ಆರ್ಥಿಕ ಉತ್ಪನ್ನವನ್ನು ಕಳ್ಳರ ಜೊತೆಯಲ್ಲಿ ಸೇರಿ ವಂಚಿಸುವ ಅಧಿಕಾರಿಗಳು ಇದ್ದಾರೆ, ಅಂತಹವರಿಗೆ ರಕ್ಷಣೆ ಕೊಡುವಂಥ ಕೆಲಸ ನಡೆದಿದೆ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ದಿನಾಂಕ 12-8-1999ರಂದು ಮಂಗಳೂರು, ಪುತ್ತೂರು ಹಾಗೂ ಉಡುಪಿಯಿಂದ ಎಂಟು ಸರಕುಸಾಗಾಣಿಕೆದಾರರ ಗೋದಾಮಿನಲ್ಲಿ ತಪಾಸಣೆ ಮಾಡಿ ಸುಮಾರು 151.36 ಕೋಟಿ ರೂಪಾಯಿಯಷ್ಟು ಬಚ್ಚಿಟ್ಟ ವಹಿವಾಟನ್ನು ಪತ್ತೆಹಚ್ಚಲಾಯಿತು. ಆದ ಮೇಲೆ ಸುಮಾರು 6.89 ಕೋಟಿ ರೂಪಾಯಿಗಳ ತೆರಿಗೆಗಳ್ಳತನ ಮಾಡಲಾಗಿರುವುದು ಸಂಬಂಧಪಟ್ಟಂಥ ಮಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಆಗಿದೆ. ಈ ಇಲಾಖೆಯಲ್ಲಿ ಆಗಿದೆ. ಈ ಇಲಾಖೆಯಲ್ಲಿ ಈ ರೀತಿಯಿಂದ ಅವ್ಯವಹಾರ ಆಗಿದೆ. ಅಂದರೆ 151.36 ಕೋಟಿ ರೂಪಾಯಿಗಳ ಬಚ್ಚಿಟ್ಟ ವಹಿವಾಟು ಏನಿದೆ, ಅದನ್ನು ಯಾರು ಅಲ್ಲಿಯ ಅಧಿಕಾರಿ ಕಮಿಷನರ್ ಆಫ್ ಅಡ್ಮಿನಿಸ್ಟ್ರೇಶನ್ ಯಾರು ಇದ್ದಾರೆ, ಅವರು, ಇದ್ದಾರೆ, ಅವರು ನಿಜವಾಗಿಯೂ ಇಲ್ಲಿ ಈ ರೀತಿಯ ಒಂದು ಬಚ್ಚಿಟ್ಟಂಥ ಮಾಲುಗಳಿಗೆ ಅದನ್ನು ಕಂಡುಹಿಡಿಯವುದರಲ್ಲಿ ತಮ್ಮ ಎಲ್ಲ ರೀತಿಯ ಪ್ರಯತ್ನ ಮಾಡಿ ಇದನ್ನು ಕಂಡುಹಿಡಿದು ಸರ್ಕಾರಕ್ಕೆ ಇಷ್ಟೊಂದು ಅನುದಾನವನ್ನು ಒದಗಿಸುವಂಥ ಕೆಲಸವನ್ನು ಅವರು ಮಾಡಿದರೆ, ಅದೇರೀತಿಯಲ್ಲಿ ಜಾಯಿಂಟ್ ಕಮಿಷನರ್ - ಇಂಜಟಲಿಜೆನ್ಸ್ ಅವರು ಯಾರು ಈ ರೀತಿಯ ಬಚ್ಚಿಟ್ಟ ವಹಿವಾಟುದಾರರು ಇದ್ದಾರೆ, ಆ ವ್ಯಕ್ತಿಗಳಿಗೆ ಸಹಕಾರ ಮಾಡಿ ಅವರು ಯಾವ ರೀತಿ ತಪ್ಪಿಸಿಕೊಳ್ಳಬೇಕು ಎಂದು ಹೇಳಿಕೊಟ್ಟು ಆ ರೀತಿಯ ಕೆಲಸಕ್ಕೆ ಆ ಇಂಟಲಿಜೆನ್ಸ್ ಕಮಿಷನರ್ ಅವರು ಸಹಕಾರ ಮಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಈ ರೀತಿಯ ಕಳ್ಳರಿಗೆ, ಮೋಸ ಮತ್ತು ವಂಚನೆ ಮಾಡಿರತಕ್ಕಂಥ ಆ ವಹಿವಾಟುದಾರರು ಯಾರಿದ್ದಾರೆ, ಅವರಿಗೆ ಇಂಟಲಿಜೆಟ್ಸ್ ಕಮಿಷನರ್ ಅವರು ಯಾರು ಇದ್ದಾರೆ, ಅವರು ಈ ರೀತಿಯಾಗಿ ಅವರಿಗೆ ಸಹಕಾರ ಮಾಡಿದರೆ ಆ ವ್ಯಕ್ತಿಯನ್ನು 20.2.2000 ರಂದು ವರ್ಗಾವಣೆ ಮಾಡಲಾಯಿತು. ಇನ್ನೊಂದು ಕಡೆಯಿಂದ ಯಾರು ಸರ್ಕಾರ ಬೊಕ್ಕಸಕ್ಕೆ,

ಲೂಟಿಯಾಗುವುದನ್ನು ಕಂಡುಹಿಡಿದು ಸರ್ಕಾರಕ್ಕೆ ಹಣವನ್ನು ತಂದುಕೊಡುವಂಥ ಕೆಲಸ ಮಾಡಿದ್ದಾರೆ, ಕಮಿಷನರ್ ಆಫ್ ಆಡ್ಮಿನಿಸ್ಟ್ರೇಶನ್ - ಅಂತಹ ವ್ಯಕ್ತಿಗೆ ವರ್ಗಾವಣೆ. ಇದರಲ್ಲಿ ಬಹಳ ಮುಖ್ಯವಾದ ವಿಚಾರ ಏನೆಂದರೆ, ಯಾರು ಇಂಟಲಿಜೆನ್ಸ್ ಕಮಿಷನರ್ ಇದ್ದಾರೆ, ಅವರಿಗೂ 20.2.2000 ರಂದು ವರ್ಗಾವಣೆ ಮಾಡಲಾಯಿತು. ಆದರೆ ಅಲ್ಲಿಯ ಕಾಂಗ್ರೆಸ್ ಕಾರ್ಯಕರ್ತರ, ಮಂತ್ರಿಗಳ ಒತ್ತಡದಿಂದಾಗಿ ಯಾರು ಈ ರೀತಿ ಕಳ್ಳಸಾಗಾಣಿಕೆ ಮಾಡಿ ವಹಿವಾಟನ್ನು ಬಚ್ಚಿಟ್ಟಂಥ ವ್ಯಕ್ತಿಗಳು ಇದ್ದಾರೆ, ಅವರ ಜತೆಯಲ್ಲಿ ಶಾಮಿಲಾಗಿರತಕ್ಕಂಥ ಇಂಟಲಿಜೆನ್ಸ್ ಆಫ್ ಕಮಿಷನರ್ ಯಾರು ಇದ್ದರು, ಅವರಿಗೆ ಪುನಃ 23.3.2000 ರಂದು ಮಂಗಳೂರಿಗೆ ವರ್ಗಾವಣೆ ಮಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಈ ರೀತಿಯಲ್ಲಿ ಒಂದುಕಡೆಯಿಂದ ಆರ್ಥಿಕವಾಗಿ ಕ್ರೋಢೀಕರಣ ಮಾಡಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದರು. ಇನ್ನೊಂದು ಕಡೆಯಿಂದ ಯಾರು ಆರ್ಥಿಕವಾಗಿ ಕ್ರೋಢೀಕರಣ ಕೆಲಸ ಮಾಡಿದ ಅಧಿಕಾರಿ ಇದ್ದಾರೆ, ಅವರಿಗೆ ವರ್ಗಾವಣೆ. ಯಾರು ಕಳ್ಳತನದಲ್ಲಿ ಸರ್ಕಾರಕ್ಕೆ ಮೋಸ ಮಾಡಿರತಕ್ಕಂಥ ವಹಿವಾಟುದಾರರು ಇದ್ದಾರೆ, ಅವರಿಗೆ ಸಹಕಾರ ಕೊಟ್ಟಂಥ ಇಂಟಲಿಜೆನ್ಸ್ ಅಧಿಕಾರಿಗೆ ವರ್ಗಾವಣೆ ಆಗಿರುವುದುನ್ನು ರದ್ದುಪಡಿಸಿ ಪುನಃ ಮಂಗಳೂರಿಗೆ ನೇಮಕ ಮಾಡಿದ್ದಾರೆ. ನನಗೆ ಇಲ್ಲಿ ಕಾಣ ಕಾಣುವಂಥಾದ್ದು ಯಾರು ತಪ್ಪು ಮಾಡಿದ್ದಾರೆ, ಅಂತಹ ವ್ಯಕ್ತಿಯ ಮೇಲೆ ಹೊಣೆಗಾರಿಕೆಯನ್ನು ಹೊರಸಿದ್ದು ಏನು? ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.-

"………. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಬೇಕಾದ ತೀವ್ರ ಅಗತ್ಯವಿದೆ. ನನ್ನ ಸರ್ಕಾರವು ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ಹೋಗಲಾಡಿಸಿ ಜನಪರ ಆಡಳಿತವನ್ನು ನೀಡಲು ಪ್ರಯತ್ನಿಸುತ್ತದೆ….."

ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಮಾನ್ಯ ಉಪಾಧ್ಯಕ್ಷರೇ, ನನಗನ್ನಿಸುತ್ತದೆ ಏನೆಂದರೆ ಯಾರು ಈ ರೀತಿ ಸರ್ಕಾರಕ್ಕೆ ಮೋಸ ಮಾಡುವಂಥ ಅಧಿಕಾರಿಗಳು ಇದ್ದಾರೆ, ಅವರಿಗೆ ಒಂದು ರಕ್ಷಣೆಯನ್ನು ಸರ್ಕಾರ ಮಾಡುವುದಾದರೆ ಯಾವರೀತಿ ಸರ್ಕಾರ ವ್ಯಕ್ತಿಯನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಾಗುತ್ತದೆ? ಇನ್ನೊಂದು ಕಡೆಯಿಂದ ಪ್ರಮಾಣಿಕವಾಗಿ ತನ್ನ ಸೇವೆ, ಕರ್ತವ್ಯವನ್ನು ಮಾಡಿ ಸರ್ಕಾರದ ಬೊಕ್ಕಸಕ್ಕೆ ಹಣವನ್ನು ತಂದುಕೊಟ್ಟ ಅಧಿಕಾರಿ ಯಾರು ಇದ್ದಾರೆ, ಅವರಿಗೆ ವರ್ಗಾವಣೆ ಎಂದಾದರೆ ಅವರು ಯಾವರೀತಿ ಅಧ್ಯಕ್ಷತೆಯನ್ನು ತೋರಿಸಿದರು? ಈ ರೀತಿಯಲ್ಲಿ ಸರ್ಕಾರ ಒಂದು ರೀತಿಯಲ್ಲಿ ಹೇಳುವುದು, ಇನ್ನೊಂದು ರೀತಿಯಲ್ಲಿ ಬೇರೆ ರೀತಿಯಿಂದ ನಡೆದುಕೊಳ್ಳುವುದು ನಡೆದಿದೆ. ನಾವು ಎರಡನೇ ಬಾರಿಗೆ ಈ ಸದನಕ್ಕೆ ಆಯ್ಕೆಯಾಗಿ ಬರುತ್ತಿದ್ದೇವೆ. ಪ್ರಾರಂಭದಲ್ಲಿ ನಮ್ಮಲ್ಲಿ ತುಂಬ ಕುತೂಹಲ ಇತ್ತು. ನಾನು ಸದನದಲ್ಲಿ ಆಯ್ಕೆಯಾದಮೇಲೆ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತದೆ, ಒಳ್ಳೆಯ ಭರವಸೆಯನ್ನು ಕೊಡಬಹುದು ಎನ್ನತಕ್ಕಂಥ ನಂಬಿಕೆ ನಮಗೆ ಇತ್ತು. ಆದರೆ ಇಲ್ಲಿ ಬಂದು ಸದನದಲ್ಲಿ ಭಾಗವಹಿಸಿದಾಗ, ಸರ್ಕಾರದ ಆಡಳಿತ ವ್ಯವಸ್ಥೆಯನ್ನು ನೋಡಿದಾಗ ನಮಗೆ ತುಂಬಾ ನೋವಾಗುತ್ತದೆ. ಇದೇ ರೀತಿ ಇಂತಹ ಘಟನೆಗಳು ಅನೇಕ ಇವೆ. ರಾಜ್ಯಪಾಲರ ಭಾಷಣದಲ್ಲಿ ಒಂದು ಕಡೆ ಹೀಗೆ ಹೇಳುತ್ತಾರೆ.

"... ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ನಿರುದ್ಯೋಗಿ ಯುವಜನರು ಉದ್ಯೋಗ ರಂಗದಲ್ಲಿ ಸ್ಪರ್ದಿಸಿ ಯಶಸ್ವಿಯಾಗುವಂತೆ ಮಾಡಲು ಅವರಿಗೆ ವಿಶೇಷ ಕೌಶಲ್ಯಗಳನ್ನು ಕಲ್ಪಿಸಿಕೊಡಲು ನನ್ನ ಸರ್ಕಾರವು ಉದ್ದೇಶಿಸಿದೆ"

ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಭಾರಿ ವಿಷಯ 34 ಫಲಾನುಭವಿಗಳಿಗೆ ಐಸ್ಸಾರ್ ಮ್ಯಾಕ್ಸಿಕ್ಯಾಬ್ ಪ್ಯಾಸೆಂಜರ್ ವಾಹನಗಳನ್ನು ಕೊಡುವುದಾಗಿ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದರು. ಅದಕ್ಕೆ ಸುಮಾರು 34 ಮಂದಿ ಫಲಾನುಭವಿಗಳು ಯಾರು ಇದ್ದಾರೆ ಅವರು ಅರ್ಜಿಯನ್ನು ಹಾಕಿದ್ದರು. ಅರ್ಜಿ ಹಾಕಿದ ಸಮಯದಲ್ಲಿ ಅವರಿಗೆ ಯಾವ್ಯಾವ ವಾಹನಗಳು ಬೇಕು, ಅದಕ್ಕೆ ಸಂಬಂಧಪಟ್ಟ ಹಾಗೆ ಕೊಟೇಶನ್ ಪಡೆದುಕೊಂಡು ಅವರು ಅರ್ಜಿಯನ್ನು ಸಲ್ಲಿಸಿದರು. ಆದರೆ ಈ ಎಸ್‌ಸಿ:ಎಸ್‌ಟಿ ಅಭಿವೃದ್ಧಿ ನಿಗಮ ಏನಿದೆ, ಅಲ್ಲಿಯ ಸಂಬಂಧಪಟ್ಟ ಎಂ.ಡಿ. ಯಾರು ಇದ್ದಾರೆ, ಅವರು ಅರ್ಜಿದಾರರ ಅಪೇಕ್ಷೆಗೆ ತಕ್ಕಂತೆ ವಾಹನಗಳನ್ನು ಕೊಡಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಉಪಾಧ್ಯಕ್ಷರೇ, ಇಂತಹ ಗಂಭೀರವಾದ ಆರೋಪವವನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ. ಎಸ್‌ಸಿ:ಎಸ್‌ಟಿ ಅಭಿವೃದ್ಧಿ ನಿಗಮದಲ್ಲಿ ಏನು ಅವ್ಯವಹಾರವಾಗಿದೆ, ಹೇಗೆ ಅಲ್ಲಿ ಅನ್ಯಾಯವಾಗಿದೆ ಎಂಬುದನ್ನು ಹೇಳುತ್ತಿದ್ದಾರೆ. ಯಾರಾದರೂ ಅದನ್ನು ಕೇಳಿಸಿಕೊಂಡು ಅದಕ್ಕೆ ಸಮರ್ಥವಾದ ಉತ್ತರ ಕೊಡುವ ಅಗತ್ಯ ಇದೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಅಂಗಾರ:- ಮಾನ್ಯ ಉಪಾಧ್ಯಕ್ಷರೇ, ನನ್ನ ಮನಸ್ಸಿನಲ್ಲಿ ಅವರು ಕೇಳುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅವರು ನಿಜವಾಗಿಯೂ ಕೇಳುತ್ತಿದ್ದಾರೆಯೋ ಎಂದು ಗೊತ್ತಿಲ್ಲ. ನಾನಂತೂ ಈ ನಿಗಮ ಏನಿದೆ, ಅದರಲ್ಲಿ ಆಗಿರುವಂಥ ಅವ್ಯವಹಾರ ಏನಿದೆ, ಅದರ ಬಗ್ಗೆ ಒಬ್ಬ ಎಸ್: ಸಿ ಚುನಾಯಿತ ಪ್ರತಿನಿಧಿಯಾಗಿ ಹೇಳುವಂಥ ನನ್ನ ಪ್ರಾಮಾಣಿಕ ಕೆಲಸವನ್ನು ಮಾಡುತ್ತಿದ್ದೇನೆ. ಈ ರೀತಿಯಲ್ಲಿ ಯಾವ ವ್ಯಕ್ತಿಗಳು ಅವರವರ ಅಪೇಕ್ಷೆಗೆ ತಕ್ಕಂತೆ ಅವರಿಗೆ ಯಾವ ವಾಹನಗಳು ಬೇಕೆಂದು ಕೊಟೇಶನ್ ಪಡೆದುಕೊಂಡು ಅರ್ಜಿಯನ್ನು ಸಲ್ಲಿಸಿದ್ದರೋ, ಅಂತಹ ವ್ಯಕ್ತಿಗಳಿಗೆ ಅವರ ಅಪೇಕ್ಷೆಗೆ ತಕ್ಕಂತೆ ವಾಹನಗಳನ್ನು ಕೊಟ್ಟಿಲ್ಲ. ಇಸ್ಸಾರ್ ಕಂಪನಿಯ 1060 ಮಾದರಿಯ 27 ವೀಲ್ ಬೇಸ್ ಉಳ್ಳ ಆರು ಚಕ್ರದ ಡೀಲಕ್ಸ್ ಬಾಡಿಯಿಂದ ಮಾಡಿ ಕೂಡಿದ ಮಾದರಿಯ ವಾಹನವನ್ನು ಎಂ.ಡಿ.ಯವರು ತೋರಿಸಿದ್ದರು. ಈ ಮಾದರಿಯ ವಾಹನವನ್ನು ತೋರಿಸಿ ಅದೇ ರೀತಿಯ ವಾಹನಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಸಂಬಂಧಪಟ್ಟ ಎಂ.ಡಿ.ಯವರು ಫಲಾನುಭವಿಗಳಿಗೆ ತೋರಿಸಿದಾಗ ಸಂಬಪಂಧಟ್ಟ ಫಲಾನುಭವಿಗಳು ಒಪ್ಪಿಕೊಂಡರು. ಆದರೆ ಇಲ್ಲಿ ಭಾರೀ ವಿಷಯ ಏನೆಂದರೆ 1060ರ ಮಾದರಿ 27 ವೀಲ್ಸ್ ಬೇಸ್ ಉಳ್ಳ 6 ಚಕ್ರಗಳ ಡೀಲಕ್ಸ್ ಬಾಡಿಯ ಮಾದರಿ ವಾಹನವನ್ನು ತೋರಿಸಿ ಅವರು ಕೊಟ್ಟಿರುವಂಥದ್ದು 1050- ನಾಲ್ಕು ಚಕ್ರದ ಇಸ್ಸಾರ್ ಮ್ಯಾಕ್ಸಿ ಕ್ಯಾಬ್.

ಉಪಾಧ್ಯಕ್ಷರೇ, ಈ ಒಂದು 4 ಚಕ್ರದ ಮ್ಯಾಕ್ಸಿಕ್ಯಾಬ್ ವಾಹನ ಏನಿದೆ ಇದು ಕರ್ನಾಟಕ ರಾಜ್ಯದಲ್ಲಿ ಪ್ಯಾಸೆಂಜರ್ ವಾಹನ ಎಂದು ಮಾನ್ಯತೆಯನ್ನು ಪಡೆದಿಲ್ಲ. ಈ ವಾಹನವನ್ನು ಉಪಯೋಗಿಸಬಾರದು ಎನ್ನತಕ್ಕ ರಿಚಾರ ಕೂಡ ಅಲ್ಲಿ ಉಲ್ಲೇಖವಾಗಿತ್ತು 10-50ರ ಈ ಲಯಸಾಗ್ ಕಂಪನಿಯ ಮ್ಯಾಕ್ಸಿಕ್ಯಾಬ್ ಕರ್ನಾಟಕದಲ್ಲಿ ಪ್ಯಾಸೆಂಜರ್ ವಾಹನವಾಗಿ ಪರವಾನೆಯನ್ನು ಪಡೆಯದೇ ಇರುವುದರಿಂದ ಮತ್ತು ಇದನ್ನು ಬೇರೆ ರಾಜ್ಯದಿಂದ ತರಿಸಿರುವುದರಿಂದ, ರಾಜ್ಯದ ಪ್ರವೇಶ ತೆರಿಗೆ ಶೇಕಡ 8 ಅಂದರೆ, 42,200 ರೂಪಾಯಿಗಳನ್ನು ತುಂಬ ಬೇಕಾಗಿರುತ್ತದೆ. ಆದ್ದರಿಂದ ನಿಮ್ಮ ವಾಹನವನ್ನು ನೋಂದಾಯಿಸುವುದಿಲ್ಲವೆಂದು ಆರ್.ಟಿ.ಓ ಕಚೇರಿಯ ಆಯುಕ್ತರು ಸಂಬಂಧಪಟ್ಟ ಫಲಾನುಭವಿಗಳಿಗೆ ಹೇಳಿದ್ದಾರೆ. ಈ ವಿಷಯವನ್ನು ಸಂಬಂಧಪಟ್ಟ ಎಂ.ಡಿ.ಯವರಿಗೆ ಹೇಳಿದಾಗ, ಮತ್ತೆ ನೀವು ಸಾರಿಗೆ ಆಯುಕ್ತರನ್ನು ಕಾಣಬೇಕೆಂದು ಹೇಳಿದ್ದಾರೆ. ಮತ್ತೆ ಹೆಚ್ಚು ಅಂದರೆ 42,200 ರೂಪಾಯಿಗಳ ಪ್ರವೇಶ ತೆರಿಗೆಯನ್ನು ತುಂಬಿ ಆಯಾ ಜಿಲ್ಲೆಯಲ್ಲಿ ನೋಂದಾಯಿಸುವಂತೆ ಸಂಬಂಧಪಟ್ಟ ಎಂ.ಡಿ.ಯವರು ಮಾಡಿರತಕ್ಕಂಥಾದ್ದು. ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ನಾವು ಗಮನಿಸಿದಾಗ ನಮಗೆ ತುಂಬಾ ನೋವಾಗುತ್ತದೆ. ಆ ಎಸ್.ಸಿ:ಎಸ್.ಟಿ. ಅಭಿವೃದ್ಧಿ ನಿಗಮ ಏನಿದೆ, ಇದು ಈ ಜನಗಳಿಗೆ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬೇಕಾಗಿತ್ತು. ಆದರೆ ಆ ರೀತಿ ಮಾಡಿಲ್ಲ.ಈ 1060ರ ಮಾದರಿ 27 ವೀಲ್ಸ್ ಬೇಸ್ ಉಳ್ಳಂಥ 6 ಚಕ್ರದ ಡಿಲಕ್ಸ್ ಗಾಡಿಯ ಒಟ್ಟು ಬೆಲೆ ಎಂದರೆ 5 ಲಕ್ಷದ 15 ಸಾವಿರ ರೂಪಾಯಿಗಳ ಆದರೆ, ಅವರು ಈ 1060ರ ಗಾಡಿಯನ್ನು ಕೊಡದೇ 1050ರ 4 ಚಕ್ರದ ಲಯಾಸಾನ್ ಕಂಪನಿಯ ಪ್ಯಾಸೆಂಜರ್ ವಾಹನವನ್ನು ಕೊಟ್ಟಿರತಕ್ಕಂತಾದ್ದು. ಆದರೆ ಆ ಗಾಡಿಗೆ ವ್ಯಾಲ್ಯೂ ಕೂಡ ಇಲ್ಲ ಒಂದು, ಬೆಲೆಯಿಲ್ಲದಿರತಕ್ಕ ಗಾಡಿಯನ್ನು ಕೊಟ್ಟಿರತಕ್ಕಂತಾದ್ದು. 1060 ಮಾದರಿಯ ಗಾಡಿಯನ್ನು ತೋರಿಸಿ, 1050 ರ ಗಾಡಿಯನ್ನು ಕೊಟ್ಟಿರುತ್ತಾರೆ. ಮತ್ತೆ ಹೊರ ರಾಜ್ಯದಿಂದ ತಂದಂಥ ಈ ವೆಹಿಕಲ್ ಏನಿದೆ, ಅದು ಪ್ಯಾಸೆಂಜರ್ ವಾಹನ ಎಂದು ನೋಂದಾಯಿಸಲ್ಪಡದೇ ಇದ್ದುದರಿಂದ ಹೆಚ್ಚು ಅಂದರೆ ಸುಮಾರು 42,200 ರೂಪಾಯಿಗಳನ್ನು ಕೊಟ್ಟು ಸುಮಾರು 5 ಲಕ್ಷದ 72 ಸಾವಿರ ರೂಪಾಯಿಗಳನ್ನು ಹೆಚ್ಚು ಕೊಡುವಂತಹ ಕೆಲಸ ಸಂಬಂಧಪಟ್ಟ ಎಂ.ಡಿ.ಯವರಿಂದ ಆಯಿತು. ಈ ರೀತಿ ಮಾಡಿರುವುದರಿಂದ, ಆ ಎಸ್‌ಸಿ:ಎಸ್‌ಟಿ ಜನಗಳು ಯಾರಿದ್ದಾರೆ. ಆ ಗಾಡಿಯನ್ನು ಪಡೆದುಕೊಳ್ಳಬೇಕಾದರೆ ಭೂಮಿಯನ್ನು ಒತ್ತೆ ಇಡಬೇಕಾಯಿತು. ಎರಡು ಜನ ಸಂಬಂಧಪಟ್ಟ ಅಧಿಕಾರಿಗಳಿಂದ ಬಾಂಡ್ ಪಡೆದುಕೊಳ್ಳಬೇಕಾಗಿತ್ತು. ಈಗ ಒಂದು ಈಗ ಒಂದು ಕಡೆಯಿಂದ ಆ 1050ರ ಮ್ಯಾಕ್ಸಿಕ್ಯಾಬ್ ವಾಹನ ಏನಿದೆ, ಅದು ಔಡಾಟ ಮಾಡಲಿಕ್ಕಾಗುವುದಿಲ್ಲ. ಅದನ್ನು ಪ್ಯಾಸೆಂಜರ್ ವಾಹನವಾಗಿ ಓಡಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ, ಒಂದುಕಡೆಯಿಂದ ಯಾರು ವಾಹನವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ಆದಾಯ ಬರುವಂಥ ಪರಿಸ್ಥಿತಿಯಾಗುವುದಿಲ್ಲ. ಈ 1050ರ ಮಾದರಿಯ ಪ್ಯಾಸೆಂಜರ್ ವಾಹನ ಏನಿದೆ, ಇದು ನಿಜವಾಗಿಯೂ ಕಳಪೆ ಮಟ್ಟದ ಸಾಮಗ್ರಿಗಳಿಂದ ಕೂಡಿದ ವಾಹನ. ಇದು ಆಗಾಗ ರಿಪೇರಿಗೆ ಬರುವುದರಿಂದ, ಈ ಪರಿಶಿಷ್ಟಜಾತಿ ಮತ್ತು ಪಂಗಡದ ಜನ ಅದನ್ನು ರಿಪೇರಿ ಮಾಡಿಕೊಂಡು ಬಾಡಿಗೆಗೆ ಓಡಿಸುವುದು ಕಷ್ಟವಾಗುತ್ತದೆ. ಇದರಿಂದಾಗಿ ಆ ಎಸ್: ಎಸ್‌ಟಿ ಅಭಿವೃದ್ಧಿ ನಿಗಮದಲ್ಲಿ ಯಾರು 34 ಫಲಾನುಭವಿಗಳಿದ್ದಾರೆ, ವರು ಬೀದಿಪಾಲಾಗುವಂಥ ಪರಿಸ್ಥಿತಿಯಾಗಿದೆ. ಬರೀ ಫಲಾನುಭರಿಗಳು ಮಾತ್ರವಲ್ಲ, ಅವರ ಕುಟುಂಬದಲ್ಲಿರತಕ್ಕ ವ್ಯಕ್ತಿಗಳೆಲ್ಲರೂ ಬೀದಿಪಾಲಾಗುವಂಥ

ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಸರ್ಕಾರ ಸಂಬಂಧಪಟ್ಟವರಿಗೆ ಯಾವ ರೀತಿಯ ಹೊಣೆಯನ್ನು ಮಾಡಿ, ಯಾವರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳತ್ತದೆಂಬುದನ್ನು ನಾವು ಮುಂದೆ ನೋಡಬೇಕಾಗುತ್ತದೆ. ಆದರೆ, ನನ್ನ ಅನಿಸಿಕೆ ಇಷ್ಟೆ. ಈ ರೀತಿಯ ಭಾರಿ ಅವ್ಯವಹಾರ ಎಸ್‌ಸಿ:ಎಸ್‌ಟಿ ಅಭಿವೃದ್ಧಿ ನಿಗಮದಿಂದ ಆಗಿರುತ್ತದೆ. ನಿಜವಾಗಿಯೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಈ ರೀತಿಯ ಅನ್ಯಾಯವಾದರೆ, ಸರ್ಕಾರ ಅವರಿಗೆ ಯಾವ ರೀತಿಯ ರಕ್ಷಣೆಯನ್ನು ಕೊಡುತ್ತದೆ? ಮತ್ತೆ ಈ ಒಂದು ಮೋಸದಿಂದ ಆ ವ್ಯಕ್ತಿಗಳನ್ನು ಯಾವ ರೀತಿಯಲ್ಲಿ ಪಾರು ಮಾಡುತ್ತಾರೆಂದು ನೋಡಬೇಕು. ಇದರ ಬಗ್ಗೆ ಸರ್ಕಾರ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಯಾವ ಎಸ್‌ಸಿ:ಎಸ್‌ಟಿ 34 ಜನ ಫಲಾನುಭವಿಗಳು ಇದ್ದಾರೆ ಅವರಿಗೆ ನಿಜವಾಗಿಯೂ 1060 ಪ್ಯಾಸೆಂಜರ್ ವಾಹನದ ಬದಲು 1050ರ ವಾಹನವನ್ನು ಕೊಟ್ಟು ಮೋಸವಾಗಿದೆ. ಮತ್ತೆ ಹೆಚ್ಚು ತೆರಿಗೆ ಮತ್ತು ಲೋನ್ ಕೊಟ್ಟು ಕೂಡ ಮೋಸವಾಗಿದೆ ಅಂತಹ ಯಾರು ಫಲಾನುಭವಿಗಳು ಇದ್ದಾರೆ, ಅವರಿಗೆ ಆಗಿರತಕ್ಕ ವಂಚನೆ ಏನಿದೆ, ವರು ಬೀದಿಪಾಲಾಗುವ ಸ್ಥಿತಿ ಏನಿದೆ, ಅದನ್ನು ಪರಿಹರಿಸತಕ್ಕ ದೃಷ್ಟಿಯಿಂದ ಸಂಬಂಧಪಟ್ಟ ಎಂ.ಡಿ. ಯವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು, ಸಂಬಂಧಪಟ್ಟ ಎಂ.ಡಿ.ಯಿಂದಲೇ ಆ ಹಣವನ್ನು ಭರಿಸತಕ್ಕ ಕೆಲಸವನ್ನು ಸಂಬಂಧಿಸಿದ ಸಚಿವರು ಮಾಡಬೇಕೆಂಬ ದಿನಂತಿಯನ್ನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ ಮ್ಯಾಕ್ಸಿಕ್ಯಾಬ್ ವಾಹನದ ಮಾಲೀಕರು ಸಚಿವರು ಗಮನಕ್ಕೂ ಈ ಹಿಂದೆ ತಂದಿದ್ದಾರೆ. 34 ಜನರ ಹತ್ತಿರ ಪತ್ರ ಬರೆಸಿಕೊಂಡುಬಿಟ್ಟರು. ಈ ವಾಹನ ಕಳಪೆ ಮಟ್ಟದ್ದು ಮತ್ತು ಅಗ್ರಿಮೆಂಟ್ ಆಗಿರತಕ್ಕ ವಾಹನ ಇದಲ್ಲ. ನಮಗೆ ಕೊಟ್ಟಿರುವುದು ಬೇರೆ ವಾಹನ ಆದರೂ ನಾವು ಇದಕ್ಕೆ ಬಡ್ಡಿ ಮನ್ನಾ ಮಾಡುತ್ತೇವೆ ಮತ್ತು ಸಾಲದಲ್ಲಿ ಕಂತನ್ನು ಕಡಿಮೆ ಮಾಡುತ್ತೇವೆಂದು ಎಸ್‌ಸಿ:ಎಸ್‌ಟಿ ಕಾರ್ಪೋರೇಷನ್ ಎಂ.ಡಿ.ಯವರು ಒಂದು ಪತ್ರ ಬರೆಸಿಕೊಂಡುಬಿಟ್ಟರು. ಆಗ ಇವರು ಒಪ್ಪಿಕೊಂಡುಬಿಟ್ಟರು. ಪಾಪ ಬಡವರು, ಮುಗ್ದರು, ದಿನದ ಜೀವನ ಮಾಡುವುದಕ್ಕೆ ಈ ಒಂದು ಸಾಲ ಪಡೆದುಕೊಂಡಂಥವರು. ಇವರಿಗೆ ಈಗ ನೋಟೀಸ್ ಕೊಟ್ಟಿದ್ದಾರೆ, ಬಡ್ಡಿ ತುಂಬಬೇಕು, ಸಾಲದ ಅಸಲು ತುಂಬಬೇಕು. ಹಾಗೆ ಮಾಡಬೇಕು, ಹೀಗೆ ಮಾಡಬೇಕೆಂದು ಹೇಳಿದ್ದಾರೆ, ವಾಹನದ ಹಣಕ್ಕಿಂತ ಜಾಸ್ತಿ ಇವರು ಬಡ್ಡಿಯನ್ನು ಮತ್ತು ಆ ಹಮವನ್ನು ತುಂಬಿಸಿಕೊಳ್ಳುವುದಕ್ಕೆ ನೋಟೀಸ್ ಕೊಟ್ಟು, ಈಗ ಅವಲ್ದೆಲ್ಲಾ ಜಪ್ತಿಯಾಗುತ್ತಾ ಇದೆ. ಅವರಿಗೆ ದಿನ ಗಾಡಿ ಓಡಿಸುವುದಕ್ಕೆ ತೊಂದರೆಯಾಗಿದೆ. ಇವರು ಕಳಪೆ ಮಟ್ಟದ ಗಾಡಿ ಕೊಡಿಸಿದ್ದಾರೆ. ಈ ರೀತಿ ಅವರಿಗೆ ದೊಡ್ಡ ಅನ್ಯಾಯವಾಗಿದೆ. ಇದರ ಬಗ್ಗೆ ತನಿಖೆ ಆಗಲೇಬೇಕು. ಇದು ಮಾನ್ಯ ಸಚಿವರ ಗಮನಕ್ಕೂ ಬಂದಿದೆ. 20-1-2000 ರ ಇಸವಿಗೆ ಸರ್ಕಾರದ ಕಾರ್ಯದರ್ಶಿಗಳಿಗೆ ಪತ್ರ ಬರೆದು ತನಿಖೆ ಮಾಡಿ ಎಂದು ಹೇಳಿದ್ದೀರಿ. ಆ ತನಿಖೆ ಏನಾಗುತ್ತಿದೆ, ಆ ತನಿಖೆ ಮಾಡಲು ಸಮಗ್ರವಾದ ಮಾಹಿತಿ ಕೊಟ್ಟಿದೆ, ಇದು ಸರ್ಕಾರದಲ್ಲಿ ಸಮಗ್ರವಾಗಿ ತನಿಖೆಯಾಗಬೇಕು. ಮತ್ತು ಈ 34 ಜನರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಮತ್ತು ಇದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಸಚಿವರು ಇದಕ್ಕೆ ಸ್ಪಂದಿಸಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎಸ್.ಅಂಗಾರ:- ಮಾನ್ಯ ಉಪಾಧ್ಯಕ್ಷರೇ, ಈ ರೀತಿ ಆ ಎಸ್‌ಸಿ: ಎಸ್‌ಟಿ ಅಭಿವೃದ್ಧಿ ನಿಗಮದಲ್ಲಿ ಭಾರಿ ಅವ್ಯವಹಾರ ಆಗಿದೆ. ಆದರೆ, ಆ 1050ರ ಮ್ಯಾಕ್ಸಿಕ್ಯಾಬ್ ವಾಹನ ಅದರ ಬಗ್ಗೆ ನ್ಯೂ ಇಂಡಿಯಾ ಅಷೂರೆನ್ಸ್ ಕಂಪನಿಯವರು ಕೂಡ ಒಂದು ಪ್ರಕಟಣೆ ಮಾಡಿದ್ದಾರೆ ಅದು ಯಾವರೀತಿಯಲ್ಲಿ ಬರೆಯುತ್ತಾರೆಂದರೆ, 4 ಟೈರ್ ಮ್ಯಾಕ್ಸಿಕ್ಯಾಬ್ ಅಪಘಾತಕ್ಕೆ ಒಳಗಾಗುವ ಸಂಭವ ಹೆಚ್ಚು ಎಂದು ಅಂಕಿಅಂಶಗಳೇ ತೋರಿಸಿದೆ. ಹಿಂದೆ ಇರುವ ಒಂದು ಟೈರು ಅಸ್ಥಿರ ಸ್ಥಿತಿಯಲ್ಲಿರುವುದೇ ಇದಕ್ಕೆ ಕಾರಣ. ಈ ಬಗ್ಗೆ ಅಪಘಾತದಲ್ಲಿ ಈ ಮ್ಯಾಕ್ಸಿಕ್ಯಾಬ್ ಪೂರ್ಣವಾಗಿ ಉರುಳುವ ಸಂಭವ ಇರುವುದರಿಂದ, ಅಪಘಾತವು ತೀವ್ರ ಸ್ವರೂಪವಾಗಿದ್ದು ಚಾಲಕರಿಗೆ ಮರಣಾಂತಿಕವೂ ಆಗಬಹುದೆಂದು ತಿಳಿಸಲು ನಾವು ವಿಷಾದಿಸುತ್ತೇವೆ. ಹಿಂದೆ ಎರಡು ಟೈರುಗಳಿರುವುದರಿಂದ ಇದು ಸುರಕ್ಷಿತವಲ್ಲ ಜನ ಸಾಗಾಣಿಕೆಗೆ 6 ಟೈರುಗಳುಳ್ಳ ವಾಹನವು ಹೆಚ್ಚು ಸುರಕ್ಷಿತ ಎಂಬುದನ್ನು ಹಾಗೂ ಜೀವರಕ್ಷಣೆಯನ್ನು ಮುಖ್ಯವಾಗಿಟ್ಟು ಕೊಂಡಿರುವಂಥ ವಿಮಾ ಸಂಸ್ಥೆಯು ಕೂಡ ಸಂಪೂರ್ಣವಾಗಿ ಒಪ್ಪುತ್ತದೆಂಬ ಪ್ರಕಟಣೆಯನ್ನು ಕೂಡ ಮಾಡಿದರು. ಈ ಎಲ್ಲಾ ಪ್ರಕಟಣೆಗಳು ಇದ್ದರೂ ಕೂಡ ಸಂಬಂಧಪಟ್ಟ ಎಂ.ಡಿ.ಯವರು ಈ ಎಸ್‌ಸಿ:ಎಸ್‌ಟಿ ಜನಗಳಿಗೆ ನಿಜವಾಗಿಯೂ ಮೋಸಮಾಡಬೇಕೆಂಬ ಉದ್ದೇಶದಿಂದಲೇ ಈ ರೀತಿಯ ಮೋಸವನ್ನು ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳದೇ ಹೋದರೆ ಖಂಡಿತವಾಗಿಯೂ ಯಾವುದೇ ಅಧಿಕಾರಿಗೆ ಭಯಬರುವುದಿಲ್ಲ. ಒಂದು ಕಡೆಯಿಂದ ಆ ಅಧಿಕಾರಿಯನ್ನು ಕೇವಲ ಸಸ್ಪೆಂಡ್ ಮಾಡುವಂತಾದ್ದು ಸ್ವಲ್ಪ ದಿನ ಕಳೆದ ಮೇಲೆ ಮತ್ತೆ ಮರು ನೇಮಕ ಮಾಡುವಂತಾದ್ದು. ಮತ್ತೆ ಅದೇ ಸಂಬಳವನ್ನು ಕೊಡುವಂತಾದ್ದು. ಇದರಿಂದಾಗಿ ಯಾವುದೇ ಇಲಾಖೆಯಲ್ಲಿ ಭಯದ ವಾತಾವರಣ ನಿರ್ಮಾಣವಾಗುವುದಿಲ್ಲ. ಮತ್ತು ಯಾವುದೇ ಅಧಿಕಾರಿ ಕೂಡ, ನಾನು ಏನು ಮಾಡಿದರೂ ಕೂಡ ನನ್ನನ್ನು ಸಸ್ಪೆಂಡ್ ಮಾಡಬಹುದು ಅಷ್ಟೆ ಎಂಬ ಭಾವನೆ ಬಂದಿದೆ. ಇದರಿಂದಾಗಿ ಎಸ್‌ಸಿ/ ಎಸ್‌ಟಿ ಜನಗಳೇನಿದ್ದಾರೆ, ಅವರಿಗೆ ಸರ್ಕಾರ ಯಾವ ಯಾವ ಯೋಜನೆಗಳನ್ನು ಕೊಡುತ್ತದೆ ಆ ಯೋಜನೆಗಳು ಅವು ಗ್ರಾಮ ಮಟ್ಟದಲ್ಲಿರಬಹುದು, ಯಾವುದೇ ಮಟ್ಟದಲ್ಲಿರಬಹುದು. ನಿಜವಾಗಿಯೂ ನಿಜವಾಗಿಯು ಇವುಗಳು ಸರಿಯಾಗಿ ಕಾರ್ಯಗತವಾಗುತ್ತಾ ಇಲ್ಲ. ಸರ್ಕಾರ ಈ ರೀತಿಯ ಯೋಜನೆಗಳನ್ನು ಕೊಡುತ್ತೇವೆ ಎಂಬ ಮಾತುಗಳನ್ನು ಹೇಳುವಂತಾದ್ದು ಇದೆ. ಆದರೆ, ಸಂಬಂಧಪಟ್ಟ ಇಲಾಖೆಗಳವರು ಈ ಯೋಜನೆಗಳನ್ನು ಸರಿಯಾಗಿ ಕಾರ್ಯಗತ ಮಾಡದೇ ಇದ್ದರೆ, ಆ ಯೋಜನೆಗಳನ್ನು ಕೊಟ್ಟು ಏನು ಪ್ರಯೋಜನ? ಈ ರೀತಿಯಲ್ಲಿ ನಾವು ಅನೇಕ ವಿಚಾರಗಳನ್ನು ತೆಗೆದುಕೊಳ್ಳಬಹುದು. ಈಗ ಎಸ್‌ಸಿ:ಎಸ್‌ಟಿ ಯವರಿಗೆ ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಮನೆಗಳನ್ನು ಕೊಡುತ್ತಾರೆ. ಇನ್ನೊಂದು ಕಡೆಯಿಂದ ಯಾರು ನಿವೇಶನರಹಿತರು ಇದ್ದಾರೆ, ಅವರಿಗೆ ನಿವೇಶನ ಕೊಡುತ್ತೇವೆ ಎಂಬ ಮಾತನ್ನು ಕೂಡ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಮೂಲವಾಗಿರತಕ್ಕಂತಾದ್ದು ಇಷ್ಟೆ. ಹಿಂದೆ, ಯಾವುದೇ ನಿವೇಶನರಹಿತ ವ್ಯಕ್ತಿಗೆ ಕನಿಷ್ಟ 10 ಸೆಂಟ್ ಜಾಗವನ್ನು ಕೊಡುತ್ತಿದ್ದರು. ಆಮೇಲೆ 5 ಸೆಂಟ್ ಮಾಡಿದರು, ಈಗ 2 ಸೆಂಟ್ ಮಾಡಿದ್ದಾರೆ. ಒಂದು ಕಡೆಯಿಂದ ಈ ರೀತಿಯಲ್ಲಿ ಮನೆ ನಿವೇಶನವನ್ನು ಕೊಡುವಂತಾದ್ದು.

4.50 ಪಿ.ಎಂ

ಈ ರೀತಿ ಒಂದು ಕಡೆ ಸರ್ಕಾರ ಮನೆ ನಿವೇಶನವನ್ನು ಕೊಡುವಂಥಾದ್ದನ್ನು ಮಾಡುತ್ತಿದೆ. ಇನ್ನೊಂದು ಕಡೆ ಕೊಳಚೆ ನಿರ್ಮೂಲನ ಮಾಡಬೇಕು ಎಂದು ಕೋಟಿಗಟ್ಟಳೆ ಹಣವನ್ನು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ರೀತಿ 2 ಸೆಂಟ್ಸ್ ಮನೆ ನಿವೇಶನ ಕೊಡುವುದರಿಂದ, ಮನೆಯಲ್ಲಿ ಸ್ನಾನ ಮಾಡಿದಂಥ ನೀರು ಪಾತ್ರೆ ತೊಳೆದಂಥ ನೀರು ಅಥವಾ ಬೇರೆ ಯಾವುದೇ ಕೆಲಸಕ್ಕೆ ಉಪಯೋಗಿಸಿದಂಥ ನೀರು ಹೋಗಲು ಸರಿಯಾದ ವ್ಯವಸ್ಥೆ ಇಲ್ಲದೇ ಅದು ಕೊಳಚೆ ಪ್ರದೇಶವಾಗಿ ನಿರ್ಮಾಣವಾಗುತ್ತದೆ. ಇದನ್ನು ಸರ್ಕಾರ ಯೋಚಿಸಬೇಕು. 2 ಸೆಂಟ್ಸ್ ಬದಲಾಗಿ ಕನಿಷ್ಟ 10 ಸೆಂಟ್ಸ್ ಆದರೂ ಕೊಡಬೇಕು. 10 ಸೆಂಟ್ಸ್ ಕೊಟ್ಟರೆ ಮನೆಯ ಸುತ್ತಮುತ್ತ ನಾಲ್ಕು ತೆಂಗಿನ ಗಿಡಗಳನ್ನು ನೆಟ್ಟು ಸ್ನಾನ ಮಾಡಿದ ನೀರು ಪಾತ್ರೆ ತೊಳೆದ ಇಂಥ ನೀರನ್ನು ತೆಂಗಿನ ಮರದ ಬುಡಕ್ಕೆ ಬಿಟ್ಟರೆ ಒಳ್ಳೆಯ ರೀತಿಯ ಫಸಲು ಬರಲೂ ಅವಕಾಶವಿದೆ ಮತ್ತು ಸ್ವಚ್ಛತೆಯ ದೃಷ್ಟಿಯಿಂದ ಕೂಡ ತುಂಬಾ ಉಪಯುಕ್ತವಾಗುತ್ತದೆ. ಇದರ ಬಗ್ಗೆ ಸರ್ಕಾರ ಮತ್ತು ಸಂಬಂಧಪಟ್ಟ ಸಚಿವರು ಗಮನ ಹರಿಸಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲು ಇಷ್ಟಪಡುತ್ತೇನೆ. ಇನ್ನೂ ನಿರುದ್ಯೋಗ ನಿವಾರಣೆ ಬಗ್ಗೆ ಅನೇಕ ಭರವಸೆಗಳನ್ನು ಇವರು ನೀಡಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಒಂದು ಭಾರೀ ದೊಡ್ಡ ಅವ್ಯವಹಾರವಾಗಿದೆ. 1998 ರಲ್ಲಿ ಕೆ.ಎ.ಎಸ್. ಪರೀಕ್ಷೆಗೆ ಅಧಿಸೂಚನೆ ಹೊರಡಿಸಿ 1998ರ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಪೂರ್ವಭಾವಿ ಪರೀಕ್ಷೆಯಲ್ಲಿ ಸುಮಾರು 65 ಸಾವಿರ ಅಭ್ಯರ್ಥಿಗಳು ಭಾಗವಹಿಸಿದ್ದರು. ಈ ಪೂರ್ವಭಾವಿ ಪರೀಕ್ಷೆಯಲ್ಲಿ ಸುಮಾರು 9 ಸಾವಿರ ಅಭ್ಯರ್ಥಿಗಳು ಉತ್ತೀರ್ಣರಾಗಿದ್ದರು. ಅವರಿಗೆ ಮತ್ತೆ ಲಿಖಿತ ಪರೀಕ್ಷೆ ನಡೆಯಿತು. ಆ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸುಮಾರು 2,400 ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಅರ್ಹತೆ ನೀಡಲಾಗಿತ್ತು. ಇಲ್ಲ ಯಾವ ರೀತಿಯಲ್ಲಿ ಅವ್ಯವಹಾರವಾಗಿದೆ ಎಂದರೆ, ಒಂದೇ ಕುಟುಂಬದ ನಾಲ್ವರಿಗೆ ಕ್ರಮವಾಗಿ 1,2,4 ಮತ್ತು 5 ನೇ ರ್‍ಯಾಂಕುಗಳನ್ನು ನೀಡಲಾಗಿದೆ. ಇವರ ನೋಂದಣಿ ಸಂಖ್ಯೆಗಳು ಈ ರೀತಿ ಇವೆ, 441084, 414066, 414064 ಹಾಗೂ 400102. ಒಟ್ಟು 1800 ಅಂಕಗಳನ್ನು ಇಟ್ಟಿದ್ದರೆ, ಅದರಲ್ಲಿ ಈ ನಾಲ್ವರಿಗೆ ಬಂದಂಥ ಅಂಕಗಳೆಂದರೆ, ಮೊದಲನೆಯವರಿಗೆ 1,309, ಎರಡನೆಯವರಿಗೆ 1,286, ಮೂರನೆಯವರಿಗೆ 1,449 ಮತ್ತು ನಾಲ್ಕನೆಯವರಿಗೆ 1,244 ಅಂಕಗಳನ್ನು ನೀಡಲಾಗಿದೆ. ಹೀಗೆ ಒಂದೇ ಕುಟುಂಬದ ನಾಲ್ಕು ವ್ಯಕ್ತಿಗಳಿಗೆ ರ್‍ಯಾಂಕುಗಳನ್ನು ಕೊಟ್ಟಂಥ ಪ್ರಸಂಗ ಲೋಕಸೇವಾ ಆಯೋಗದಲ್ಲಿ ಆಗಿದೆ. ಇವರು ಈ ರೀತಿ ರ್‍ಯಾಂಕ್ ಬರಬೇಕಾದರೆ ಇವರಿಗೆ ಪ್ರಶ್ನೆ ಪತ್ರಿಕೆ ಹಾಗೂ ಮಾದರಿ ಉತ್ತರ ಪತ್ರಿಕೆಯನ್ನು ಪರೀಕ್ಷೆಗೆ ಮುನ್ನವೇ ಒದಗಿಸಲಾಗಿತ್ತು ಎನ್ನುವ ಮಾಹಿತಿ ಕೂಡ ನನಗೆ ಬಂದಿದೆ. ಆದಕ್ಕಾಗಿ ನಾನು ಹಿರಿಯರು ಹಾಗೂ ಅನುಭವಿಗಳಾಗಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದೇನೆಂದರೆ, ಇದರ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕು. ಪರೀಕ್ಷೆ ಬರೆದಂಥ ಸುಮಾರು 65 ಸಾವಿರ ಅಭ್ಯರ್ಥಿಗಳಂಥ ಅನೇಕ ನಿರುದ್ಯೋಗಿಗಳಿಗೆ ತುಂಬಾ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಲೋಕಸೇವಾ ಆಯೋಗದ ಮೂಲ ಕರ್ತವ್ಯವೆಂದರೆ, ಸರ್ಕಾರದ ಆಡಳಿತಕ್ಕೆ ಬೇಕಾಗುವಂಥ ಹುದ್ದೆಗಳಿಗೆ ಪ್ರಾಮಾಣಿಕವಾಗಿ ಪರೀಕ್ಷೆ ಮತ್ತು ಸಂದರ್ಶನವನ್ನು ನಡೆಸಿ, ಅರ್ಹ ಅಭ್ಯರ್ಥಿಗಳನ್ನು

ಆಯ್ಕೆ ಮಾಡಿ ಸರ್ಕಾರಿ ಕಛೇರಿಗಳಿಗೆ ನೇಮಿಸುವಂಥಾದ್ದಾದರೆ, ವರು ಮಾಡುವಂಥ ಅವ್ಯವಹಾರ ಇದು. ಈ ರೀತಿಯಾಗಿರುವುದರಿಂದ ಯಾರು ನಿಜವಾಗಿ ನಿರುದ್ಯೋಗಿ ವಿದ್ಯಾವಂತರಿದ್ದಾರೆ ಅವರಿಗೆ ತುಂಬಾ ಅನ್ಯಾಯವಾಗಿದೆ. ಒಂದೇ ಕುಟುಂಬದ ನಾಲ್ಕು ಜನ ಸದಸ್ಯರಿಗೆ ರ್‍ಯಾಂಕುಗಳನ್ನು ಕೊಡುವಂಥ ಕೆಲಸವಾಗಿದೆ. ಅವರಿಗೆ ಒಂದು ಟ್ಯೂಷನ್ ಕೂಡ ನಡೆಯುತ್ತಿತ್ತು. ಕ್ರಿಮಿನಾಲಜಿ ಎನ್ನುವ ವಿಷಯಕ್ಕೆ ಕೋಚಿಂಗ್ ಕೊಡಲು ಬಿಂಬಾ ನಾಯಕ್ ಎನ್ನುವವರು ಒಂದು ಸೆಂಟರ್ ಅನ್ನು ಸ್ಥಾಪಿಸಿದ್ದರು. ಆ ಕೋಚಿಂಗ್ ಕ್ಲಾಸಿಗೆ 40 ಜನ ಅಭ್ಯರ್ಥಿಗಳು ಹೋಗುತ್ತಿದ್ದರು. ಈ 40 ಜನರಲ್ಲಿ 24 ಅಭ್ಯರ್ಥಿಗಳು ತಮ್ಮ ಉತ್ತರ ಪತ್ರಿಕೆಯಲ್ಲಿ ಕೋಡ್‌ಅನ್ನು ಬಳಸಿದ್ದರು. ಆ ಗುರುತು ಇದ್ದಂಥ ಅಭ್ಯರ್ಥಿಗಳಿಗೆ ಮೌಲ್ಯಮಾಪಕರು ಹೆಚ್ಚಿನ ಅಂಕಗಳನ್ನು ಕೊಡುವಂಥ ಕೆಲಸವಾಗಿದೆ ಎನ್ನುವ ಮಾಹಿತಿ ನನಗೆ ಬಂದಿದೆ. ಲೋಕಸೇವಾ ಆಯೋಗದಲ್ಲಿ ಆಗಿರುವ ಈ ಭಾರೀ ವ್ಯವಹಾರದ ಬಗ್ಗೆ ಸರ್ಕಾರದವರು ಸಿ.ಬಿ.ಐ. ತನಿಖೆ ಮಾಡಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ಮಾಡಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಇಷ್ಟಪಡುತ್ತೇನೆ. ಇನ್ನೂ ಅನೇಕ ಅವ್ಯವಹಾರಗಳು ಈ ರೀತಿಯಲ್ಲಿ ಆಗಿವೆ.

ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ರಸ್ತೆಗಳ ಅಭಿವೃದ್ಧಿ ವಿಷಯದಲ್ಲಿ ಒಂದು ಮುಖ್ಯ ವಿಷಯವನ್ನು ಹೇಳಲು ನಾನು ಇಷ್ಟಪಡುತ್ತೇನೆ. ನನ್ನ ಕಷೇತ್ರವಾದ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಕುಕ್ಕೇ ಶ್ರೀ ಸುಬ್ರಹ್ಮಣ್ಯವೆಂದು ಒಂದು ಪವಿತ್ರ ದೇವಸ್ಥಾನ ಇದೆ. ಈ ದೇವಸ್ಥಾನಕ್ಕೆ ಇರುವ ರಸ್ತೆಗಳು ಎಂದರೆ, ಜಾಲಸೂರು- ಸುಬ್ರಹ್ಮಣ್ಯ ಮುಖ್ಯ ರಸ್ತೆ, ಗುಂಡ್ಯ - ಸುಬ್ರಹ್ಮಣ್ಯ ರಸ್ತೆ ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಸ್ತೆ, ಹೀಗೆ ನಾಲ್ಕು ಮುಖ್ಯ ಲೋಕೋಪಯೋಗಿ ರಸ್ತೆಗಳಿವೆ. ಈ ರಸ್ತೆಗಳು ಎಲ್ಲ ಕಡೆ ಗುಂಡಿ ಬಿದ್ದಿದ್ದು, ವಾಹನಗಳು ಓಡಾಡಲು ಆಗುತ್ತಿಲ್ಲ. ಇದರಿಂದಾಗಿ ಸಾರ್ವಜನಿಕರು ಜನಪ್ರತಿನಿಧಿಗಳಾದ ನಮಗೆ, ನಾವು ಕ್ಷೇತ್ರದಲ್ಲಿ ಓಡಾಟ ಮಾಡುವಂಥ ಸಂದರ್ಭದಲ್ಲಿ ಯಾವ ರೀತಿ ಬಯ್ಯಬೇಕೋ ಆ ಎಲ್ಲ ರೀತಿಯಲ್ಲಿ ಬಯ್ಯುತ್ತಾರೆ. ಸರ್ಕಾರದವರು ಒಂದು ಕಡೆ, ಆರ್ಥಿಕ ಕ್ರೋಢೀಕರಣ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾರೆ, ಇನ್ನೊಂದು ಕಡೆ, ಆಯಾಯ ಕ್ಷೇತ್ರಗಳಲ್ಲಿ ಯಾವಯಾವ ಮೂಲದಿಂದ ಆರ್ಥಿಕ ವ್ಯವಸ್ಥೆ ಇದೆ, ಅದನ್ನು ಯಾವ ರೀತಿ ಕ್ರೋಢೀಕರಣ ಮಾಡಿಕೊಂಡು ಕ್ಷೇತ್ರದಲ್ಲಿ ಬಳಸಲು ಸಾಧ್ಯವಿದೆ ಎನ್ನುವ ಬಗ್ಗೆ ಗಮನಹರಿಸುತ್ತಿಲ್ಲ. ಅದರ ಬಗ್ಗೆ ಸರ್ಕಾರ ಗಮನಹರಿಸಿ ಕೆಲಸ ಮಾಡಿದರೆ ಗ್ರಾಮಗಳ ಅಭಿವೃದ್ಧಿ ಮಾಡಲು ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಈ ಮಾತಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಾರ್ಷಿಕ ಸುಮಾರು 7 ಕೋಟಿ ರೂಪಾಯಿಗಳಷ್ಟು ಆದಾಯವಿದೆ. ಅದನ್ನು ಉಪಯೋಗಿಸಲು ಕಾನೂನಿನ ತೊಂದರೆಗಳಿರಬಹುದು. ಕಾನೂನಿನ ತೊಂದರೆಗಳಿದ್ದರೂ ಕೂಡ ಅವುಗಳಿಗೆ ಒಂದು ತಿದ್ದುಪಡಿಯನ್ನು ತಂದು, ದೇವಸ್ಥಾನದ ಆದಾಯವನ್ನು ಉಪಯೋಗ ಮಾಡಿಕೊಂಡು ಈ ನಾಲ್ಕು ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿದರೆ ಜನಗಳಿಗೆ ಒಂದು ಒಳ್ಳೆಯ ಸಂಪರ್ಕದ ವ್ಯವಸ್ಥೆಯಾಗುತ್ತದೆ. ಈ ರಸ್ತೆಗಳ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಅಲ್ಲಿಯ ಜನಗಳಿಗೆ ಸಾಕಷ್ಟು ಉದ್ಯೋಗವನ್ನು ನಿರ್ಮಾಣ ಮಾಡಲು ಸಾಧ್ಯವಿದೆ. ಅಲ್ಲಿಯ ಸಾರ್ವಜನಿಕರು ಹೇಳುವಂಥಾದ್ದೇನೆಂದರೆ, ನಮಗೆ ಚೆನ್ನಾಗಿರುವಂಥ ರಸ್ತೆಗಳು ಬೇಕು, ನಾವು ಆ ರಸ್ತೆಯಲ್ಲಿ ಓಡಾಟ ಮಾಡುವಂಥ ಸಮಯದಲ್ಲಿ ಪ್ರತಿಸಾರಿ ಒಂದು ರೂಪಾಯಿ, ಎರಡು ರೂಪಾಯಿಕೊಡಲು

ಸಿದ್ಧರಿದ್ದೇವೆ, ಎನ್ನುವ ಮಾತನ್ನು ಹೇಳುತ್ತಾರೆ. ಆ ರೀತಿಯಾದರೆ ದೇವಸ್ಥಾನದಿಂದ ಹಾಕಿರುವ ಹಣವೂ ಮರುವಸೂಲಾಗುತ್ತದೆ. ಮತ್ತೊಂದು ಕಡೆ ಆ ರಸ್ತೆಗಳ ಕೆಲಸದಿಂದ ಅಲ್ಲಿ ಉದ್ಯೋಗ ಸೃಷ್ಟಿ ಕೂಡ ಮಾಡುವಂಥ ವ್ಯವಸ್ಥೆಯಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಕಾನೂನನ್ನು ತಿದ್ದುಪಡಿ ಮಾಡಿಕೊಂಡು, ಈ ರಸ್ತೆಗಳನ್ನು ದೇವಸ್ಥಾನದ ಅನುದಾನದಿಂದ ಅಭಿವೃದ್ಧಿ ಮಾಡುವಂತೆ ಸಹಕಾರ ನೀಡಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಇನ್ನು, ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಶೀಘ್ರವಾಗಿ ವಿಲೇವಾರಿ ಮಾಡುತ್ತೇವೆ ಎನ್ನುವ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಅಕ್ರಮ ಸಕ್ರಮೀಕರಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಖಾನ, ಬಾನೆ, ಕುಮ್ಕಿ ಇಂಥ ಜಾಗಗಳಲ್ಲಿ ಅಕ್ರಮ ಸ್ವಾಧೀನ ಮಾಡಿಕೊಂಡಂಥ ವ್ಯಕ್ತಿಗಳಿಗೆ ಹಕ್ಕುಪತ್ರ ಕೊಡಬೇಕಾಗಿದೆ. ಆದರೆ ಇಲ್ಲಿಯವರೆಗೆ ಅಕ್ರಮ ಸಕ್ರಮೀಕರಣದ ಕಮಿಟಿ ಕೂಡ ಆಗಿಲ್ಲ ಎನ್ನುವುದು ಬಹಳ ಬೇಸರದ ಸಂಗತಿ. ಏಕೆಂದರೆ, ಸರ್ಕಾರ ಬಂದು 5-6 ತಿಂಗಳಾದರೂ ಈ ಒಂದು ಕಮಿಟಿಯನ್ನು ಮಾಡಲು ಸಾಧ್ಯವಾಗಲಿಲ್ಲವೆಂದರೆ ಈ ರಾಜ್ಯದಲ್ಲಿ ಯಾವ ರೀತಿಯಲ್ಲಿ, ಎಷ್ಟು ಪ್ರಗತಿಯಲ್ಲಿ ಅಭಿವೃದ್ಧಿಯನ್ನು ಮಾಡಲು ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. 10ನೇ ಹಣಕಾಸು ಯೋಜನೆಯಡಿಯಲ್ಲಿ ನಮ್ಮ ಜಿಲ್ಲೆಗೆ ಸುಮಾರು 5,544 ಲಕ್ಷ ರೂಪಾಯಿಗಳು ಬಂದಿದೆ. ಎಷ್ಟು ಅನುದಾನ ಬಂದರೂ ಕೂಡ, ಗ್ರಾಮ ಪಂಚಾಯಿತಿಗಳಿಗೆ ಹೊಂದಾಣಿಕೆ ಅನುದಾನ ಒದಗಿಸುವ ಅನುಪಾತವನ್ನು ಪರಿಷ್ಕರಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಸರಕಾರದಿಂದ ಹಂಚಿಕೆ ಮಾಡಲಾದ ಅನುದಾನವಿದೆ. ಅನುದಾನವನ್ನು ಸರಕಾರದ ಮುಂದಿನ ಆದೇಶ ನೀಡುವವರೆಗೆ ಗ್ರಾಮ ಪಂಚಾಯತ್‌ಗಳಿಗೆ ತಾಲ್ಲೂಕು ಪಂಚಾಯತ್‌ಗಳಿಗೆ ಹಣವನ್ನು ಬಿಡುಗಡೆ ಮಾಡಬಾರದು ಎಂದು ಆದೇಶಿಸಿರುತ್ತಾರೆ. ಒಂದು ಕಡೆಯಲ್ಲಿ ಹತ್ತನೇ ಹಣಕಾಸಿನ ಅನುದಾನವಿದೆ. ಅದನ್ನು ಸರಕಾರದವರು ಒದಗಿಸಿದ್ದರೂ ಕೂಡ ಆ ಒಂದು ಹಮದಲ್ಲಿ ಆದಷ್ಟು ಶೀಘ್ರ ಕೆಲಸವನ್ನು ಮಾಡುವುದಕ್ಕೆ ಸರಕಾರದವರು ಮುಂದಾಗಿಲ್ಲ. ಏತಕ್ಕಾಗಿ ಈ ರೀತಿಯ ನಿಧಾನಗತಿಯನ್ನು ಅನುಸರಿಸುತ್ತಿದ್ದಾರೆ ಎಂಬ ಮಾತನ್ನು ಕೂಡ ಹೇಳುತ್ತಾ, ನಿಜವಾಗಿಯೂ ನನಗೆ ತುಂಬಾ ನೋವು ಆಗುತ್ತಿದೆ ನಾನೊಬ್ಬ ಶಾಸಕನಾಗಿರಬಹುದು. ಆದರೆ ಒಬ್ಬ ಕೂಲಿ ಕಾರ್ಮಿಕನಾಗಿ ನನ್ನ ನಿರೀಕ್ಷೆಗಳಿವೆ ಸರಕಾರವು ಅತ್ಯಂತ ಕಳಕಳಿಯಿಂದ ಎಸ್‌ಸಿ:ಎಸ್‌ಟಿ ವರ್ಗಗಳ ಅಭಿವೃದ್ಧಿಯನ್ನು ಮಾಡಬಹುದೆಂದು ನಂಬಿಕೆಯು ನನ್ನಲ್ಲಿತ್ತು. ಕರ್ನಾಟಕದಲ್ಲಿಯೂ ಕೂಡ ಸುಮಾರು 38 ವರ್ಷಗಳ ಕಾಲದ ಆಡಳಿತವನ್ನು ಕಾಂಗ್ರೆಸ್‌ನವರು ಮಾಡಿದ್ದಾರೆ. ಆದರೆ ಈ ರೀತಿಯಲ್ಲಿ ಆಡಳಿತ ಮಾಡಿರತಕ್ಕಂಥ ಸರಕಾರಗಳೇನಿವೆ ಅವುಗಳು ಪ್ರತಿಭಾರಿಯೂ ಕೂಡ ಬಡಜನರ ಉದ್ಧಾರ, ಬಡಜನರ ಅಭಿವೃದ್ಧಿ, ಬಡಜನರಿಗೆ ವಿವಿಧ ಸೌಲಭ್ಯಗಳನ್ನು ಕೊಡುತ್ತೇವೆಂಬ ಮಾತುಗಳನ್ನು ಹೇಳಿಕೊಂಡು ಬಂದಿದ್ದಾರೆ ಆದರೆ ಆ ಮಾತುಗಳು ನಿಜವಾಗಿಯೂ ಕಾರ್ಯಗತವಾಗಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ಘಟನೆಯ ನೆನಪಾಗುತ್ತದೆ. ಒಬ್ಬಳು ತಾಯಿ ಇರುತ್ತಾಳೆ. ಅವಳಿಗೆ ನಾಲ್ಕು ವರ್ಷಗಳ ಮಗು ಇರುತ್ತದೆ. ಒಮ್ಮೆ ಆ ತಾಯಿಗೆ ನಡೆಯುವ ಮಗುವನ್ನು ಪೇಟೆಗೆ ಕರೆದುಕೊಂಡು ಹೋಗುವ ಆಸಕ್ತಿ ಬಂತು. ಮೊದಲು ಮಗುವಿಗೆ ಸ್ನಾನ ಮಾಡಿಸಿ ಅಂಗಿ ಚಡ್ಡಿಯನ್ನು ಹಾಕುತ್ತಾಳೆ. ಇಬ್ಬರೂ ಪೇಟೆಗೆ ಹೋಗುವ

ರಸ್ತೆಯಲ್ಲಿ ಮಗುವು ಸ್ವಲ್ಪ ದೂರ ನಡೆದು ಅನಂತರ ಬಿದ್ದುಬಿಟ್ಟಿತು. ಇದರಿಂದ ತಾಯಿಯು ಬಹಳ ಗಾಬರಿಯಾದಳು. ದಿನನಿತ್ಯವೂ ಓಡಾಡುವ ಮಗುವು ಪೇಟೆಗೆ ಹೋಗುವ ದಾರಿಯಲ್ಲಿ ಏತಕ್ಕಾಗಿ ಬಿತ್ತು ಎಂದು ಗಾಬರಿಗೊಂಡಳು. ಕೂಡಲೇ ಪಕ್ಕದಲ್ಲಿನ ಟೆಲಿಫೋನ್ ಬೂತ್‌ಗೆ ಹೋಗಿ ಡಾಕ್ಟರ್‌ಗೆ ಫೋನ್ ಮಾಡುತ್ತಾಳೆ. ಪೇಟೆಗೆ ಹೋಗುವಾಗ ರಸ್ತೆಯಲ್ಲಿ ಮಗುವು ಬಿದ್ದು ಬಿಡುವಂತಾಯಿತು. ತಾವುಗಳು ತತ್‌ಕ್ಷಣ ಬಂದು ಮಗುವಿಗೆ ಇಂಜೆಕ್ಷನ್ ಕೊಡಬೇಕೆಂದು ಕೇಳಿಕೊಂಡಳು, ಡಾಕ್ಟರ್ ಬಹಳ ಗಡಿಬಿಡಿಯಿಂದ ಬಂದು ಮಗುವನ್ನು ನೋಡುತ್ತಾರೆ. ಮಗುವನ್ನು ನೋಡಿದ ಡಾಕ್ಟರ್ ನಗೆಯಾಡುತ್ತಾರೆ. ಅದನ್ನು ನೋಡಿದ ತಾಯಿಯು ಸಿಟ್ಟಾದಳು. ಮಗುವಿನ ನೋವು ತಾಯಿಯು ಮಾತ್ರ ಬಲ್ಲವಳಲ್ಲವೆ? ಏತಕ್ಕಾಗಿ ನಗಾಡುತ್ತಿದ್ದೀರಿ? ನಾನು ನಿಮ್ಮನ್ನು ಮಗುವಿಗೆ ಉಪಚರಿಸಲು ಕರೆಸಿದ್ದೆ, ನೀವು ನಗಾಡುತ್ತಿರುವಿರಲ್ಲ? ಎಂದು ಪ್ರಶ್ನಿಸಿದಳು. ಅದಕ್ಕೆ ಪ್ರತಿಕ್ರಿಯಿಸಿದ ಡಾಕ್ಟರ್ ನಾನು ಇಂಜೆಕ್ಷನ್ ಕೊಡಬೇಕಾದುದು ಮಗುವಿಗಲ್ಲ, ಮಗುವಿನ ತಾಯಿಗೆ ಎಂದರು. ಮಗುವನ್ನು ಪೇಟೆಗೆ ಕರೆದುಕೊಂಡು ಹೋಗುವ ಆಶೆ ನಿನ್ನಲ್ಲಿತ್ತು. ಆ ಗಡಿಬಿಡಿಯಲ್ಲಿ ಮಗುವಿಗೆ ತೊಡಿಸಿದ ಅಂಗಿಚಡ್ಡಿ ಏನಿದೆ, ಆ ಚಡ್ಡಿಯ ಒಂದೇ ಕಾಲಲ್ಲಿ ಮಗುವಿನ ಎರಡೂ ಕಾಲುಗಳನ್ನು ಹಾಕಿದ್ದಿ. ಹಾಗಾಗಿ ಮಗುವು ನಿಲ್ಲದಂಥ ಸರಿಯಾಗಿ ನಡೆಯಲಾರದಂಥ ಪರಿಸ್ಥಿತಿಯು ಬಂತು. ಹಾಗಾಗಿ ಮಗುವು ಬಿತ್ತು ಎಂಬ ಮಾತನ್ನು ಡಾಕ್ಟರ್ ತಾಯಿಗೆ ಹೇಳಿದರು. ಅದನ್ನು ತಾಯಿಯು ಒಪ್ಪಿಕೊಂಡಳು. ಹಾಗೆಯೇ ನಿಮ್ಮ ಸರಕಾರವೆಂದು ನನಗನ್ನಿಸುತ್ತದೆ. ಕಳೆದ 38 ವರ್ಷಗಳಿಂದ ಈ ರಾಜ್ಯದಲ್ಲಿ ಕಾಂಗ್ರೆಸ್ ರಾಜ್ಯಭಾರ ಮಾಡಿದೆ. ನಿಜವಾಗಿಯೂ ಸರಕಾರದಿಂದ ಎಸ್‌ಸಿ: ಎಸ್‌ಟಿ ಯವರಿಗೆ ಸರಕಾರದ ಸೌಲಭ್ಯಗಳು ಸರಿಯಾಗಿ ತಲುಪಿದೆಯೇ? ಅದನ್ನು ಸರಕಾರವು ಗಮನಿಸಿದೆಯೇ? ಇಂಥ ಸವಲತ್ತುಗಳ ಬಗ್ಗೆ ಕಾರ್ಯಗತ ಮಾಡುವಲ್ಲಿ ಸರಕಾರವು ವಿಫಲವಾಗಿದೆ. ಯಾರು ಅವ್ಯವಹಾರ ಮತ್ತು ಭ್ರಷ್ಟಾಚಾರವನ್ನು ಮಾಡಿದ್ದಾರೋ ಅಂಥ ವ್ಯಕ್ತಿಗಳ ವಿರುದ್ಧ ಯಾವುದೇ ಕಠಿಣ ಕ್ರಮವನ್ನು ಜರುಗಿಸದೆ ಆಡಳಿತದಲ್ಲಿ ಭ್ರಷ್ಟರ ವಿರುದ್ಧ ಭಯದ ವಾತಾವರಣವಿಲ್ಲದೆ ಹೀಗೆ ಆಗಿದೆ. ಎಸ್‌ಸಿ:ಎಸ್‌ಟಿ ವರ್ಗದವರು ತಮ್ಮ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ತಮ್ಮ ಕಾಲ ಮೇಲೆ ತಾವು ನಿಲ್ಲಬೇಕಾದರೆ ಮೂಲಕಾರಣಕರ್ತರು ಈ ಆಡಳಿತ ಮಾಡಿರತಕ್ಕಂಥ ಕಾಂಗ್ರೆಸ್ ಸರಕಾರಗಳು. ಮುಂದೆ ಕಾಂಗ್ರೆಸ್ ಸರಕಾರಗಳು ಒಂದು ಹೃದಯವಂತಿಕೆ ಮತ್ತು ವಿವೇಕದಿಂದ ಕೆಲಸ ಮಾಡಿದ್ದರೆ ಇವೊತ್ತು ದಲಿತರ ಮೇಲೆ ನಡೆಯುತ್ತಿರುವ ಘಟನೆಗಳು ಆಗುತ್ತಿರಲಿಲ್ಲ. ಏಕೆಂದರೆ, ಕೋಲಾರದ ಕಂಬಾಲಪಲ್ಲಿಯಲ್ಲಿ ಮೊನ್ನೆನ ಘಟನೆ ಆಯಿತು. ಆಗ ಸರಕಾರದವರು ಹೃದಯವಂತಿಕೆ ಮತ್ತು ವಿವೇಕದಿಂದ ಕೆಲಸ ಮಾಡಿದ್ದರೆ ಸಂಬಂಧಪಟ್ಟ ವ್ಯಕ್ತಿ ಯಾರಿದ್ದಾರೆ ಅವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕಾಗಿತ್ತು. ಆಗ ಯಾವುದೇ ಇಲಾಖೆಯ ಯಾವುದೇ ವ್ಯಕ್ತಿ ಇರಬಹುದು, ಅವರಿಗೆ ಭಯ ಬರುತ್ತಿತ್ತು. ಆದರೆ ಅದು ಆಗಲಿಲ್ಲ. ಎಲ್ಲಾ ಘಟನೆಗಳು ಆದಮೇಲೆ ಇದರಿಂದ ಯಾವ ಪ್ರಯೋಜನವಾಗುತ್ತವೆ? ಆಡಳಿತ ವ್ಯವಸ್ಥೆಯಲ್ಲಿ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯನ್ನು ಕೊಟ್ಟು ಆ ಮೂಲಕ ಸರಕಾರದ ಶಿಸ್ತಿನ ಬಗ್ಗೆ ಭಯ ಬರುವ ವಾತಾವರಣವನ್ನು ಸೃಷ್ಟಿಸಬೇಕು. ಆಗ ರಾಜ್ಯದಲ್ಲಿ ಒಂದು ಒಳ್ಳೆಯ ರೀತಿಯ ಆಡಳಿತವನ್ನು ತಮಗೆ ಕೊಡಲು ಸಾಧ್ಯವಾಗುತ್ತದೆ. ಅದಕ್ಕೆ ಸಂಬಂಧಪಟ್ಟಂಥ ಮಾನ್ಯ ಮುಖ್ಯ ಮಂತ್ರಿಯವರಿದ್ದಾರೆ. ಅವರು ತುಂಬಾ ಅನುಭವಸ್ಥರು ಮತ್ತು ಹಿಂದಿಯ ರಾಜಕಾರಿಣಿಯಾಗಿದ್ದಾರೆ. ಅವರ ರಾಜಕೀಯದ

ಅನುಭವವದಷ್ಟು ನನಗೆ ವಯಸ್ಸು ಆಗಿಲ್ಲ. ಅವರು ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡಬೇಕು, ಎಸ್‌ಸಿ:ಎಸ್‌ಟಿ ವರ್ಗದವರಿಗೆ ಸರಕಾರದಿಂದ ಕೊಡುವಂಥ ಸವಲತ್ತುಗಳು ಗ್ರಾಮಮಟ್ಟದವರೆಗೆ ಸರಿಯಾಗಿ ತಲುಪುವ ವ್ಯವಸ್ಥೆಯಾಗಬೇಕು. ಆ ಕುರಿತು ಸರಕಾರದವರು ಗಮನಕೊಡಬೇಕು. ತಪ್ಪಿತಸ್ಥರ ಮೇಲೆ ಕಠಿಣ ಕ್ರಮವನ್ನು ಜರುಗಿಸಬೇಕು ರಾಜ್ಯಪಾಲರ ಭಾಷಣದಲ್ಲಿ ಕೇವಲ ಪ್ರಚಾರ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಅವುಗಳನ್ನು ಸೂಕ್ತ ರೀತಿಯಲ್ಲಿ ಜಾರಿಗೆ ತರಬೇಕೆಂಬ ಮಾತನ್ನು ಕೇಳಿ, ರಾಜ್ಯಪಾಲರ ಭಾಷಣದಲ್ಲಿ ಯಾವ ಹೆಚ್ಚಿನ ಅಂಶಗಳು ಇಲ್ಲವೆಂದು ಹೇಳುತ್ತಾ ಅದನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ ಕ್ಷೇತ್ರ):- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ರಾಜ್ಯಪಾಲರು ರಾಜ್ಯದ ಐದು ಕೋಟಿ ಜನರನ್ನುದ್ದೇಶಿಸಿ ಸರಕಾರದ ಕಾರ್ಯಕ್ರಮಗಳ ಬಗ್ಗೆ ತಮ್ಮ ಭಾಷಣವನ್ನು ಮಾಡಿದಾಗ ಕನ್ನಡ ನಾಡು ತನ್ನದೇ ಆದ ಒಂದು ಶಕ್ತಿ ಮತ್ತು ಹಿರಿಮೆಯನ್ನು ಬೆಳೆಸಿಕೊಂಡಿದೆ ಎಂದು ನಾನು ಭಾವಿಸುತ್ತೇನೆ. ನಾನು ಕಳೆದ ಆರು ವರ್ಷಗಳಿಂದ ಇಲ್ಲಿ ಶಾಸಕನಾಗಿ ಇದ್ದೇನೆ. ಆದರೆ ಇಲ್ಲಿ ರಾಜ್ಯಪಾಲರು ಒಂದು ಸಾರಿಯೂ ಕನ್ನಡದಲ್ಲಿ ಭಾಷಣ ಮಾಡಿದ್ದನ್ನು ನೋಡಡರಲಿಲ್ಲ. ಈ ಬಾರಿ ನಮ್ಮ ಸನ್ಮಾನ್ಯ ರಾಜ್ಯಪಾಲರು ಉತ್ತಮವಾದಂಥ ಕನ್ನಡದಲ್ಲಿ ಮಾಡಿ ನಮಗೆಲ್ಲರಿಗೂ ಸಂತೋಷವನ್ನು ಅಭಿಮಾನವನ್ನು ಉಂಟು ಮಾಡಿದ್ದಾರೆ. ರಾಜ್ಯದ ಐದು ಕೋಟಿ ಜನರಿಗೆ ಸರಕಾರದ ಕಾರ್ಯಕ್ರಮಗಳನ್ನು ಮುಟ್ಟಿಸುವ ಮಹತ್ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಯವರು ಗೌರವಾನ್ವಿತ ರಾಜ್ಯಪಾಲರ ಮೂಲಕ ಮೂಡಿಸಿದ್ದಾರೆ. ಅದಕ್ಕೋಸ್ಕರ ಅವರನ್ನು ನಾನು ಅಭಿನಂದಿಸುತ್ತೇನೆ. ಈ ಒಂದು ಕಿರುಹೊತ್ತಿಗೆಯಲ್ಲಿ ರಾಜ್ಯದ ಎಲ್ಲಾ ಇಲಾಖೆಗಳ ಜನಪರ ಕಾರ್ಯಕ್ರಮಗಳ ಬಗ್ಗೆ ಪಕ್ಷಿನೋಟವನ್ನು ಎಷ್ಟರಮಟ್ಟಿಗೆ ಸದನದಲ್ಲಿ ಓದಿಸಿದ್ದಾರೆ ಅಂಗರೆ, ಎಲ್ಲಾ ಇಲಾಖಾ ವಿಚಾರಗಳನ್ನು ಹಂತ ಹಂತವಾಗಿ ಕೊಡುವ ಚಿತ್ರವನ್ನು ಕೊಟ್ಟಿದ್ದಾರೆ. "ಕರ್ನಾಟಕ ರಾಜ್ಯವು ಪ್ರಾಚೀನ ಮತ್ತು ಸಮೃದ್ಧ ಪರಂಪರೆಯನ್ನು ಹೊಂದಿರುವುದಲ್ಲದೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ತ್ವರಿತಗತಿಯಲ್ಲಿ ಮುನ್ನೆಡೆಯುತ್ತಿದೆ. ಆಧನೀಕರಣದ ಪ್ರಯೋಜನವನ್ನು ಜನತೆಗೆ ಒದಗಿಸುವುದರ ಮೂಲಕ ಅವರ ಜೀವನವನ್ನು ಸುಧಾರಿಸಲು ನಾನು ಪ್ರಯತ್ನ ಮಾಡುತ್ತೇನೆ. ಸರಕಾರವು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಕುಡಿಯುವ ನೀರು, ಆರೋಗ್ಯ ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ, ಮುಂತಾಗಿ ಎಲ್ಲಾ ಇಲಾಖಾ ಕಾರ್ಯಕ್ರಮಗಳನ್ನು ನಮಗೆ ಕೊಟ್ಟು ಜನತೆಯ ಹಿತದೃಷ್ಟಿಯಿಂದ ಇವುಗಳನ್ನು ಕಾರ್ಯಗತ ಮಾಡುತ್ತೇನೆ" ಎಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅವರನ್ನು ನಾನು ಅಭಿನಂಧಿಸುತ್ತೇನೆ. ಕೃಷಿ ಕ್ಷೇತ್ರದಲ್ಲಿ ಕೂಡ ಎಲ್ಲಾ ಆಧುನೀಕರಣವನ್ನು ಮಾಡುತ್ತೇವೆ, ರೈತರಿಗೆ ಅನುಕೂಲವನ್ನು ಮಾಡಿಕೊಡುತ್ತೇವೆ, ಹಿಂದಿನ ಎಲ್ಲಾ ಸವಲತ್ತುಗಳನ್ನು ಮುಂದುವರಿಸುತ್ತೇವೆ ಎಂದು ಹೇಳಿದ್ದಾರೆ. ನಾನು ಸರಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸರಕಾರದವರು ಕೇವಲ ಬಾಯಿ ಮಾತಿನಲ್ಲಿ ಇನ್ನೂ ನಡೆಯುತ್ತಿದ್ದಾರೆ. ನಿಖರವಾಗಿ ಇದಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಆದರ ಮೂಲಕ ಬಡ ರೈತರಿಗೆ ಅನುಕೂಲ ಮಾಡಿಕೊಡಬೇಕಾಗಿತ್ತು. ನಮ್ಮಲ್ಲಿ 70 ಪರ್‌ಸೆಂಟ್‌ನಷ್ಟು ಜನರು ರೈತಾಪಿ ಜನರಿದ್ದಾರೆ. ವರಿಗೆ ಇವರು ಕೊಟ್ಟಂಥ ಕೊಡುಗೆ ಏನು? ಒಂದು ಸಾವಿರ ಜನರಿಗೆ ಹತ್ತು ಸೇರು ಅಕ್ಕಿ ಕೊಟ್ಟು ಅಡುಗೆ ಮಾಡಿ ಊಟ ಮಾಡಿ ಎಂಬ ರೀತಿಯಲ್ಲಿ ಅದೆ. ಇದನ್ನು ನಾವು

ಅವರ ಬಜೆಟ್‌ನಲ್ಲಿ ಕಾಣಬಹುದು. ರೈತರ ವಿಚಾರದಲ್ಲಿ ಅದು ಮಳೆ ಹಾನಿ ಕುರಿತಾಗಿರಬಹುದು, ಬೀಜಗಳನ್ನು ಕೊಡುವ ವಿಚಾರವಾಗಿರಬಹುದು, ಔಷಧಿ ವಿತರಣೆ ಮಾಡುವ ವಿಚಾರವೇ ಇರಬಹುದು, ಎಸ್‌ಸಿ:ಎಸ್‌ಟಿ ಯವರಿಗೆ ಕೊಡುವ ಕೃಷಿ ಪರಿಕರಗಳ ವಿಚಾರವೇ ಆಗಿರಬಹುದು, ರಾಸಾಯನಿಕ ಗೊಬ್ಬರದ ವಿಚಾರವಾಗಿರಬಹುದು, ಹೀಗೆ ಎಲ್ಲವನ್ನು ಒದಗಿಸುವ ಸರಕಾರದ ಕರ್ತವ್ಯದಲ್ಲಿ ಮೊಸಲಿಟ್ಟಿರುವ ಹಣದ ಮೊತ್ತವು ಬಹಳ ಕಡಿಮೆಯಾಗಿದೆ. ಈ ಪುಸ್ತಕದಲ್ಲಿ ಅದನ್ನು ತಮ್ಮದ್ರೇ ಆದ ರೀತಿಯಲ್ಲಿ ತೋರಿಸಿ ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿದ್ದಾರೆ. ಇಂದು ಎಸ್‌ಸಿ:ಎಸ್‌ಟಿ ವರ್ಗದವರಿಗೆ ಕೊಡತಕ್ಕಂಥ ಪರಿಕರಗಳು ಇನ್ನೂ ರೈತರಿಗೆ ಕೊಟ್ಟಿಲ್ಲ. ನಾವು ಹಳ್ಳಿಗಳಿಗೆ ಹೋದಾಗ ಅವರು ನಮ್ಮನ್ನು ಪ್ರಶ್ನಿಸುತ್ತಾರೆ. ನಾವು ಇಲ್ಲಿ ಸುಮ್ಮನೆ ಬಂದು ಹೋಗಬೇಕಾಗಿದೆ. ಅದನ್ನು ಬಿಟ್ಟು ಸರಕಾರದವರು ಯಾವ ಸವಲತ್ತನ್ನೂ ಇದುವರೆಗೆ ಜನರಿಗೆ ತಲುಪಿಸಿಲ್ಲ. ಆ ಬಗ್ಗೆ ಸೂಕ್ತ ಮತ್ತು ಸಕಾಲಿಕ ಪ್ರಯತ್ನಗಳನ್ನು ಕೂಡ ಸರಕಾರದವರು ಮಾಡಿಲ್ಲ ಮತ್ತು ಇವರಿಂದ ಮಾಡಲೂ ಆಗುವುದಿಲ್ಲ. ನೀರಾವರಿ ಇಲಾಖೆಯ ವಿಚಾರ ಹೇಳುವಾಗ ಕೆರೆಗಳಲ್ಲಿನ ಹೂಳೆತ್ತುವ ಕೆಲಸಕಾರ್ಯಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದುವರೆಗೂ ಯಾವುದೇ ಟೆಂಡರ್‌ನ್ನಾಗಲೀ, ಇನ್ನಾವುದೇ ಆ ಕುರಿತ ಕ್ರಮಗಳನ್ನಾಗಲೀ ಜರುಗಿಸಿದ್ದು ಕಂಡುಬಂದಿಲ್ಲ. ಅದಕ್ಕೆ ಬೇಕಾಗುವಷ್ಟು ಹಣದ ಬಿಡುಗಡೆಯೂ ಕೂಡ ಮಾಡಿಲ್ಲ. ರೈತರಿಗೆ ಮಳೆ ಹಾನಿಯಿಂದಾಗಿ ಅವರ ಬೆಳೆಗಳೂ ಹೋಗಿವೆ, ಅವರಿಗೆ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿ ಇವತ್ತಿನವರೆಗೂ ಕೊಟ್ಟಿಲ್ಲ. ಹಳ್ಳಿಗಾಡಿನ ರಸ್ತೆಗಳು ಹಾಳಾಗಿವೆ, ಕೆರೆಗಳು ಕೋಡಿ ಬಿದ್ದಿವೆ, ಇದರ ಬಗ್ಗೆ ಸದನದಲ್ಲಿ ಚರ್ಚೆಯಾಯಿತು. ಅಂದಿನ ಮಾನ್ಯ ಕಂದಾಯಮಂತ್ರಿಗಳು ಇದರ ಬಗ್ಗೆ ಪರಿಹಾರವನ್ನು ಕೂಡಲೇ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಅದೂ ಸಹಾ ಆಗಿಲ್ಲ. ಸರ್ಕಾರ ಈ ರೀತಿಯಾಗಿ ಕೃಷಿ ಕ್ಷೇತ್ರಕ್ಕೆ ಕೊಡುಗೆಯನ್ನು ಕೊಡುತ್ತಿದೆ. ಇಡೀ ಭಾರತದೇಶದಲ್ಲಿ 70 ಪರ್‌ಸೆಂಟ್ ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ, ಇದರ ಬಗ್ಗೆ ಸೆಂಟ್ರಲ್ ಗೌರ್ನಮೆಂಟ್ ಆಗಬಹುದು ಸ್ಟೇಟ್ ಗೌರ್ನಮೆಂಟ್ ಆಗಬಹುದು, ಇಬ್ಬರೂ ಯೋಚನೆ ಮಾಡಿ. ರೈತರಿಗೆ ಸಬ್ಸಿಡಿ ದರದಲ್ಲಿ ಕೊಡುವ ಗೊಬ್ಬರವಾಗಬಹುದು, ಬೀಜವಾಗಬಹುದು ಪರಿಕರಗಳಾಗಬಹುದು, ಎಸ್‌ಸಿ/ಎಸ್‌ಟಿ ಜನರಿಗೆ ಕೊಡುವ ಸರ್ಕಾರದ ಯಾವುದೇ ಸವಲತ್ತಾಗಬಹುದು. ಈ ದಿಶೆಯಲ್ಲಿ ಹೆಚ್ಚಿಗೆ ಹಣವನ್ನು ನಿಗದಿ ಮಾಡುವ ಮುಖೇನ ರಾಷ್ಟ್ರದ ಬಡತವನ್ನು ನಿರ್ಮೂಲನ ಮಾಡುವುದಕ್ಕೆ ಯಾವುದೇ ಸರ್ಕಾರವಾದರೂ ಕಳಕಳಿಯಿಂದ ಕೆಲಸಮಾಡಬೇಕೆಂದು ಹೇಳುತ್ತೇನೆ. ಇವತ್ತು ಹಳ್ಳಿಗಾಡಿನ ಮಕ್ಕಳಿಗೆ ವಿದ್ಯಾಬ್ಯಾಸ ಕೊಡುವುದು ಇರಬಹುದು, ಆರೋಗ್ಯದ ಬಗ್ಗೆ ಇರಬಹುದು, ಮತ್ತು ಹಳ್ಳಿಯ ರೈತರಿಗೆ ಪಶುಸಂಗೋಪನೆ, ರೇಷ್ಮೆ, ಗ್ರಾಮೀಣಾಭಿವೃದ್ಧಿ ಬಗ್ಗೆ ಎಲ್ಲವನ್ನೂ ಮಾಡುತ್ತೇವೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವತ್ತು ಹಳ್ಳಿಯ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವರಿಗೆ ಒಳ್ಳೆಯ ಅವಕಾಶಗಳು ನಗರದಲ್ಲಿರುವ ಮಕ್ಕಳಿಗೆ ಇದ್ದಷ್ಟು ಇರುವುದಿಲ್ಲವೆಂದು ಹೇಳಬಹುದು. ನಮ್ಮ ಸರ್ಕಾರವಿದ್ದಾಗ 1,16,000 ಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿ ತನ್ನದೇ ಆದ ಹಿರಿಮೆಯನ್ನು ಸಾಧಿಸಿತು ಈಗ ಈ ಸರ್ಕಾರ 7,200 ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇವೆ, 11 ಸಾವಿರ ಶಾಲಾ ಕೊಠಡಿಗಳನ್ನು ಕಟ್ಟುತ್ತೇರೆಂದು ಹೇಳುತ್ತಾರೆ. ಇದನ್ನು ಹೋಲಿಕೆ ಮಾಡಿ ನೋಡಿದಾಗ ರೈತರ ಬಗ್ಗೆ, ಬಡವರ ಬಗ್ಗೆ ಶಿಕ್ಷಣಕ್ಕೆ ಎಷ್ಟು ಒತ್ತು ಕೊಟ್ಟರು

ಎಂದು ಇದರಿಂದ ಗೊತ್ತಾಗುತ್ತದೆ. ಹಿಂದಿನ ಸರ್ಕಾರದವರು ಕೃಪಾಂಕ ಎಂದು ಕೊಟ್ಟರು. ಹಳ್ಳಿಯ ರೈತರ ಮಕ್ಕಳಿಗೆ 10 ಪರ್‌ಸೆಂಟ್ ಕೊಟ್ಟು ಅದು ಅಪಾಯಿಂಟ್‌ಮೆಂಟ್ ಬಗ್ಗೆ ಆಗಬಹುದು ಅಥವಾ ಅಡ್ಮಿಷನ್ ಬಗ್ಗೆ ಆಗಬಹುದು. ಈ ಸರ್ಕಾರ ಬಂದತಕ್ಷಣವೇ ಈ ಕೃಪಾಂಕವನ್ನು ಕಿತ್ತುಹಾಕಿದರು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಮಾನ್ಯ ಉಪಾಧ್ಯಕ್ಷರೇ ಕೃಪಾಂಕವನ್ನು ಈ ಸರ್ಕಾರ ಬಂದು ಕಿತ್ತುಹಾಕಿತು ಎನ್ನುವುದು ಸರಿಯಲ್ಲ. ಅದು ನ್ಯಾಯಾಲಯದ ಆದೇಶದ ಮೇಲೆ, ಆಗಿರುವುದು ರೆಕಾರ್ಡ್ ಸ್ಟ್ರೈಟ್ ಇರಬೇಕು. ಸರ್ಕಾರ ಬಂದು ಕೃಪಾಂಕವನ್ನು ಕಿತ್ತುಹಾಕಿತು ಎನ್ನುವುದು ಬೇಡ. ಏಕೆಂದರೆ ನ್ಯಾಯಾಲದ ಆದೇಶದ ಬಗ್ಗೆ ತಮಗೂ ಕೂಡ ಮನವರಿಕೆಯಾಗಿದೆ. ದಯಮಾಡಿ ರೆಕಾರ್ಡ್ ಸ್ಟ್ರೈಟ್ ಆಗಿ ಇರಲಿ.

ಶ್ರೀ ಸಿ. ಚೆನ್ನಿಗಪ್ಪ:- ಮಾನ್ಯ ಸ್ನೇಹಿತರು ಹೇಳಿದ ವಿಚಾರವನ್ನು ಒಪ್ಪಬೇಕಾಗುತ್ತದೆ. ಅದು ಬೇಗ ಕಾರ್ಯರೂಪಕ್ಕೆ ಬರಬೇಕಲ್ಲವೆ? ನೀವು ಯಾವ ರೀತಿ ಅದನ್ನು ಮಾಡುತ್ತೀರೋ ಗೊತ್ತಿಲ್ಲ. ಆ ಕೃಪಾಂಕವನ್ನು ಮತ್ತೊಮ್ಮೆ ತರುವ ಪ್ರಯತ್ನವನ್ನು ತಾವು ಮಾಡಿಲ್ಲ. ಅದನ್ನು ತರುವ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು):- ಅದರ ಬಗ್ಗೆ ಸುಪ್ರೀಂಕೋರ್ಟಿಗೆ ಹೋದೆವು. ಸುಪ್ರೀಂಕೋರ್ಟ್‌ನವರು ಅದನ್ನು ರದ್ದುಮಾಡಿದರು. ಈಗೇನುಮಾಡಬಹುದು ಸರ್ಕಾರ ಎಂದು ತಾವು ಹೇಳಿ. ಏನು ಮಾಡಿದರೆ ಈ ಗ್ರಾಮೀಣ ಭಾಗದ ಜನಗಳ ಜ್ವಲಂತ ಸಮಸ್ಯೆಗಳ ಬಗ್ಗೆ ಅತ್ಯಂತ ನಿಷ್ಠೆಯಿಂದ ತಾವು ವಾದ ಮಾಡುತ್ತಿದ್ದೀರಲ್ಲ. ಏನು ಮಾಡಬಹುದು ಸರ್ಕಾರ ನೀವೇ ಇಲ್ಲಿ ಕುಳಿತಿದ್ದರೆ ಏನು ಮಾಡುತ್ತಿದ್ದೀರಿ ಎಂದು ತಾವು ಉತ್ತರವನ್ನು ಕೊಡಬಹುದು.

ಶ್ರೀ ಬಿ. ಸೋಮಶೇಖರ್:- ಈಗ ಈ ವಿಚಾರದಲ್ಲಿ ಯಾವುದೇ ಪಕ್ಷಕ್ಕೂ ಭಿನ್ನಾಭಿಪ್ರಾಯವಿಲ್ಲ. ನಾನು ಸಲಹೆ ಕೊಡುತ್ತಿರುವುದೇನೆಂದರೆ ಈಗ ಸುಪ್ರಿಂ ಕೋರ್ಟ್‌ನವರು ಮನ್ನಣೆ ಮಾಡದಿದ್ದರೂ ನಾವು ಉದಾಹರಣೆಗೆ ತಮಿಳುನಾಡು ಸರ್ಕಾರದಲ್ಲಿ 50 ಕ್ಕಿಂತ ಹೆಚ್ಚು ಇರಬಾರದೆಂದು ಹೇಳಿ ಸುಪ್ರಿಂ ಕೋರ್ಟ್‌ನವರು ಆದೇಶವನ್ನು ಕೊಟ್ಟರು. ಅದನ್ನು ಅವರು 69 ಪರ್‌ಸೆಂಟ್‌ಗೆ ಏರಿಸಿ 9ನೇ ಷಡ್ಯೂಲ್‌ಗೆ ಸೇರಿಸಬೇಕೆಂದು ಹೇಳಿ ಸರ್ಕಾರದವರು ರೆಸಲ್ಯೂಷನನ್ನು ಮಾಡಿ ಕೇಂದ್ರಕ್ಕೆ ಕಳುಹಿಸಿದರು. ಅದನ್ನು ಸೇರಿಸಿದರು. ರಾಜಕೀಯ ಇಚ್ಛಾಸಕ್ತಿ ಇದ್ದರೆ ಎಲ್ಲರೂ ಒಟ್ಟಾಗಿ ಒಂದು ತೀರ್ಮಾನವನ್ನು ಮಾಡುವುದಾದರೆ ನೀವು ಸರ್ಕಾರದವರು ಒಂದು ರೆಸಲ್ಯೂಷನನ್ನು ತನ್ನ. ಇವತ್ತು ಒಂದು ರೆಸಲ್ಯೂಷನ್ ತಂದು ನಾವೆಲ್ಲರೂ ತೀರ್ಮಾನ ಮಾಡಿ ಇದನ್ನು 9ನೇ ಷೆಡ್ಯೂಲೇಷನಲ್ಲಿ 10 ಪರ್‌ಸೆಂಟ್ ಕೃಪಾಂಕವನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸೇರಿಸಬೇಕೆಂದು ರೆಸಲ್ಯೂಷನನ್ನು ಮಾಡೋಣ. Let us take lead in the country ಅದನ್ನು ಮಾಡದೆ ತಾವು ಏಕೆ ಸುಮ್ಮನೆ ಕುಳಿತಿದ್ದೀರಿ? ಈಗಾಗಲೇ ಕಾಲ ವಿಳಂಬವಾಗುತ್ತಿದೆ ಎಂದು ಅದರ ಬಗ್ಗೆ ಅವರು ಹೇಳುತ್ತಿದ್ದಾರೆ. ಅದನ್ನು ತಾವು ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸಲಹೆಗಳೇನು ಎಂದು ಪ್ರಸ್ತಾಪಮಾಡಿದರು. ಇದಕ್ಕೆ ಪ್ರತಿಪಕ್ಷದ ನಾಯಕರು ಮತ್ತು

ಎಲ್ಲಾ ಪಕ್ಷದವರನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದು ಇದರ ಬಗ್ಗೆ ಚರ್ಚೆಯಾಗಿದೆ. ಆ ಒಂದು ಸಂದರ್ಭದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಚರ್ಚೆಯಾಯಿತು. ಏಕೆಂದರೆ ಇದನ್ನು ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ತರಬೇಕೆಂದು ವಿಚಾರ ಮಾಡಬೇಕಾಗಿದೆ. ಇದನ್ನು ಕೇವಲ ರಾಜಕೀಯವಾಗಿ ನೋಡುವಂಥದ್ದಲ್ಲ. ಏನಾದರೂ ಸಲ್ಯೂಷನನ್ನು ಹುಡುಕಬೇಕು. ಗ್ರಾಮೀಣ ಭಾಗದವರಿಗೆ ಕೃಪಾಂಕ ಮುಂದುವರಿಯಬೇಕು. ಗ್ರಾಮೀಣ ಭಾಗದಿಂದ ಬಂದಂಥ ಯುವಕರಿಗೆ ಆದ್ಯತೆ ಸಿಗಬೇಕು. ಇದರ ಬಗ್ಗೆ ಎಲ್ಲರ ಕಳಕಳಿಯೂ ಇದೆ. ಆದಕ್ಕೆ ಸಲ್ಯೂಷನ್ ಎನ್ನುವುದು ಈಗ ಕೇರಳದಲ್ಲಿದೆ, ಆಮೇಲೆ ನಮ್ಮ ಮಹಾರಾಷ್ಟ್ರದಲ್ಲಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ 9ನೇ ಷೆಡ್ಯೂಲಿನಲ್ಲಿ ನಾವು ಅಮೆಂಡ್‌ಮೆಂಟ್ ಮಾಡಿ ಕೆಲವೊಂದು ಭಾಗದ ಬಗ್ಗೆ ಅಮೆಂಡ್‌ಮೆಂಟ್ ಸೇರಿಸಬೇಕಾಗುತ್ತದೆ. ಇದಕ್ಕೆ ನಾರು ಯೂನಾನಿಮಸ್ ರೆಸಲ್ಯೂಷನನ್ನು ಮಾಡಿೀ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್‌ಗೆ ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ ಬಹುಶಃ ಅಲ್ಲಿ ಅಪ್ರೂವಲ್ ಆದರೆ ಇದಕ್ಕೇನಾದರೂ ಪರಿಹಾರ ಸಿಗಬಹುದು. ಇಲ್ಲಿ ಹೈಕೋರ್ಟಿನಲ್ಲಿ ನಾವು ಫೇಲ್ ಆಗಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ನಮ್ಮ ಅಪೀಲು ರಿಜೆಕ್ಟ್ ಆಗಿದೆ. ಈಗ ಮುಂದೇನು ಎನ್ನುವ ಪ್ರಶ್ನೆ ಬರುತ್ತದೆ. ಆದಕ್ಕೆ ಮುಂದೆ ದಾರಿ ಎಂದರೆ ಅದೇ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಒಂದು ಆಯೋಗವನ್ನು ನೇಮಿಸಿದ್ದಾರೆ. ಅಂಕಿಸಂಖ್ಯೆಗಳನ್ನು ತಿಳಿದುಕೊಳ್ಳುವ ಸಲುವಾಗಿ ಗ್ರಾಮೀಣಭಾಗದ ಶಿಕ್ಷಣದ ವ್ಯವಸ್ಥೆ, ಶಿಕ್ಷಣ ಮಟ್ಟ ಮತ್ತು ನಗರ ಪ್ರದೇಶದಲ್ಲಿರುವ ಶಿಕ್ಷಣದ ಮಟ್ಟ ಇದರ ಬಗ್ಗೆ ಏನು ಹೋಲಿಕೆ ಇದೆಯಲ್ಲ, ಇದರ ಬಗ್ಗೆ ಅಂಕಿಸಂಖ್ಯೆ ತೆಗೆದುಕೊಂಡು ಅಲ್ಲಿ ಕೂಡ ಯಾವ ರೀತಿ ಡೆವಲಪ್‌ಮೆಂಟ್ ಮಾಡಬೇಕು, ಆ ಭಾಗದಲ್ಲಿರುವ ವಿದ್ಯಾರ್ಥಿಗಳಿಗೆ ಏನು ಅನುಕೂಲ ಮಾಡಬೇಕು? ಇದರ ಬಗ್ಗೆ ಒಂದು ವರದಿ ತೆಗೆದುಕೊಂಡು ಅದನ್ನು ಮಾಡುತ್ತಾರಲ್ಲ, ಅದನ್ನು ಆದಷ್ಟು ಬೇಗನೆ ಮಾಡಿ. ಈಗ ಅದಕ್ಕೆ ಮೂರು ತಿಂಗಳ ಗಡುವನ್ನು ಕೊಟ್ಟಿದ್ದರು. ಈಗ ಮೂರು ತಿಂಗಳು ಮುಗಿಯುವ ಹಂತಕ್ಕೆ ಬಂದಿದೆ. ಆಗ ಅವರು ವರದಿ ಕೊಟ್ಟರೋ ಇಲ್ಲವೋ? ಆ ಅಂಕಿಸಂಖ್ಯೆ ಬಂತೋ ಇಲ್ಲವೋ? ಅದರ ಆಧಾರದ ಮೇಲೆ ಇವತ್ತು ಯಾವುದು ಬ್ಯಾಕ್‌ವರ್ಡ್ ಏರಿಯಾ ಇದೆ? ರೂರಲ್ ಏರಿಯಾದಲ್ಲಿ ನಾವು ಜನಸಂಖ್ಯೆಯನ್ನು ಹೇಗೆ ಅಳತೆಗೋಲು ಮಾಡಬೇಕು? ಇದನ್ನೆಲ್ಲಾ ತೆಗೆದುಕೊಂಡು ಇದಕ್ಕೆ ಒಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದರೆ ಬಹುಶಃ ಇದಕ್ಕೊಂದು ಪರಿಹಾರ ಸಿಗಲಿಕ್ಕೆ ಸಾಧ್ಯ ಇದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬಹುದು ಎಂದು ನನ್ನ ಸಲಹೆ.

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೊಡಿ ಎಂದು ಕೇಳುತ್ತಿದ್ದಾರೆ. ಐದು ಕೋಟಿ ಜನರು ತಮ್ಮನ್ನು ಮುಖಂಡರನ್ನಾಗಿ ಮಾಡಿ ಇಲ್ಲಿ ಕೂಡಿಸಿದ್ದಾರೆ. ಏನು ಮಾಡಬೇಕೆಂದು ಅವರೇ ಯೋಚನೆ ಮಾಡಿ ಮಾಡಬೇಕು. ನಾವು ಸಲಹೆ ಕೊಡುವುದು ಬೇರೆ. ಶಾಸಕರು ಅವರು ಅವರ ಕರ್ತವ್ಯಗಳನ್ನು ಮಾಡುತ್ತಾರೆ. ಎಲ್ಲಾ ಶಾಸಕರು ಚರ್ಚೆ ಮಾಡಿ ಅವರಲ್ಲಿ ವಿನಂತಿ ಮಾಡಿದ್ದಾರೆ; 9ನೇ ಷಡ್ಯೂಲ್ ಪ್ರಕಾರ ಏನು ಮಾಡಬೇಕೆಂದು ಎಲ್ಲಾ ವಿರೋಧ ಪಕ್ಷದವರನ್ನು ಕರೆದು ಕೂಡಿಸಿ ಅದರ ಬಗ್ಗೆ ಏನು ನಿರ್ಣಯ ತೆಗೆದುಕೊಂಡರೆ ಅನುಕೂಲವಾಗುತ್ತದೆ ಎಂದು ಕಂಡುಹಿಡಿದು ಗ್ರಾಮೀಣ ಮಕ್ಕಳಿಗೆ ಕೃಪಾಂಕದ ಬಗ್ಗೆ ಮಾಡಿಕೊಟ್ಟರೆ ನಿಜವಾಗಿಯೂ ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬುದ್ಧಿವಂತರು,

ವಿದ್ಯಾವಂತರು. ನಾಗರೀಕರು. ಯಾವ ವಿಚಾರದಲ್ಲೂ ಅವರನ್ನು ನಾವು ಕಂಡಮ್ ಮಾಡುವ ಹಾಗೆ ಇಲ್ಲ. ನಾನು ಕಂಡ ಮುಖ್ಯಮಂತ್ರಿಗಳ ಪೈಕಿ ಚೆನ್ನಾಗಿ ಕೆಲಸ ಮಾಡಿದ್ದಾರೆ. ಚೆನ್ನಾಗಿ ವಿಚಾರಗಳನ್ನು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಹಳ್ಳಿಯ ರೈತರಿಗೆ ಕೊಡುವ ರಸಗೊಬ್ಬರ ಇರಬಹುದು. ಅದರ ರೇಟು ಜಾಸ್ತಿಯಾಯಿತು. ಅವರಿಗೆ ಸಬ್ಸಿಡಿ ರೇಟ್ ಕಡಿಮೆ ಮಾಡಲಿಲ್ಲ. ಅಕ್ಕಿ ಇವತ್ತು ಬೆಲೆ ಜಾಸ್ತಿಯಾಯಿತು. ಸಕ್ಕರೆ ಬೆಲೆ ಜಾಸ್ತಿಯಾಯಿತು. ಸೀಮೆಎಣ್ಣೆ ಬೆಲೆ ಜಾಸ್ತಿಯಾಯಿತು. ಗೋಧಿ ಬೆಲೆ ಜಾಸ್ತಿಯಾದವು. ಅಕ್ಕಿಗೆ ಮೂರುವರೆ ರೂಪಾಯಿ ಜಾಸ್ತಿ ಮಾಡಿದರು. ಮಾನ್ಯ ಮುಕ್ಯಮಂತ್ರಿಗಳು ಜನಪರವಾದ ಕಾರ್ಯಕ್ರಮವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಸ್ವಾಗತಾರ್ಹವಾದ ವಿಚಾರ. ಎಲ್ಲಿದೆ ಜನಪರ ಕಾರ್ಯ? ಯಾವ ಸರ್ಕಾರವೂ ಒಂದೇ ಸಾರಿ ಕೆಜಿ ಅಕ್ಕಿಗೆ ಮೂರುವರೆ ರೂಪಾಯಿ ಜಾಸ್ತಿ ಮಾಡಿರಲಿಲ್ಲ. ಇದನ್ನು ಕೇಂದ್ರ ಸರ್ಕಾರ ಮಾಡಿದ್ದು. ನಾನು ಇಲ್ಲ ಎಂದು ಹೇಳುವುದಿಲ್ಲ. ನೀವು ಅಧಿಕಾರಕ್ಕೆ ಬರಬೇಕಾದರೆ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ? ಅದನ್ನು ನೀವು ಪಾಲನೆ ಮಾಡಿಲ್ಲ. ಇದು ಬ್ಲೇಮ್ ಮಾಡುವ ವಿಚಾರವಲ್ಲ. 5 ಕೋಟಿ ಜನರು ಏನು ಇದ್ದಾರೆ, ಅವರೆಲ್ಲಾರೂ ತಮ್ಮ ಮೇಲೆ ಡಿಪೆಂಡ್ ಆಗಿದ್ದಾರೆ. ಇನ್ನು ಲೋಕಸೇವಾ ಆಯೋಗದ ಬಗ್ಗೆ ಹೇಳುವುದಾದರೆ ಕೃಪಾಂಕದ ಮೇಲೆ ಪ್ರಿಲಿಮಿನರಿ ಪರೀಕ್ಷೆಗಳಾಗಿ ಮತ್ತೆ ಮೆಯಿನ್ ಎಕ್ಸಾಂ ಕೂಡ ಆಗ ಓರಲ್ ಟೆಸ್ಟ್ ಕೂಡ ಆಯಿತು. ಅವರುಗಳು ಪಾಸಾದರು. ಹೈಕೋರ್ಟ್ ಒಂದು ಆದೇಶವನ್ನು ಮಾಡಿತು. ಇದು ಅಪ್ಲೈ ಆಗುವುದಿಲ್ಲ. ಈ ಡೇಟ್‌ನಿಂದ ಈ ಡೇಟ್‌ನವರೆಗೆ ಅಪಾಯಿಂಟ್‌ನ್ನು ಅವರಿಗೆ ಕೊಡಿ ಎಂದು ಹೇಳಿತು. ಅವತ್ತು ಸರ್ಕಾರ ಕೂಡ ಇದರ ಬಗ್ಗೆ ಆಯೋಗಕ್ಕೆ ಒಂದು ಸರ್ಕ್ಯುಲರನ್ನು ಕಳುಹಿಸಿತು. ಹೈಕೋರ್ಟ್ ಪ್ರಕಾರ ಕೊಡಬಹುದು ಎಂದು ಹೇಳಿದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ಇವರು ಕಳುಹಿಸಿದ ಸರ್ಕ್ಯುಲರ್‌ಗೆ ಒಂದು ಪೈಸಾ ಗೌರವ ಕೊಡಲಿಲ್ಲ. ಅದನ್ನು ಪಾಲನೆ ಮಾಡಲೂ ಇಲ್ಲ. ಆದರೆ ಕೊನೆಗೆ ಎರಡನೇ ಸರ್ಕ್ಯುಲರನ್ನು ಕಳುಹಿಸಿದರು. ಕೃಪಾಂಕ ಎನ್ನುವುದು ಬಹಳ ಕಷ್ಟ. 66 ಪರ್‌ಸೆಂಟ್ ಇದ್ದವರಿಗೆ 76 ಪರ್‌ಸೆಂಟ್ ಕೊಟ್ಟರೆ 300 ಜನರು ಜಾಸ್ತಿಯಾಗುತ್ತಾರೆ. ಅದರಲ್ಲೂ ಇಎಸ್‌ಐ ಡಾಕ್ಟರ್‌ಗಳು ಕೆಲವರು ಹಳ್ಳಿಗಾಡಿನಿಂದ ಬಂದಿರುವವರೂ ಇದ್ದಾರೆ. 188 ಜನರ ಅಪಾಯಿಂಟ್‌ಮೆಂಟ್ ಆಯಿತು. ಅವರಿಗೆ ಕೃಪಾಂಕ ಕೊಟ್ಟು ಮಾಡಿದರು. ಒಂದೇ ಆರ್ಡರ್‌ನಲ್ಲಿ ಬಂದಂಥವರಿಗೆ ಇಎಸ್‌ಐ ಡಾಕ್ಟರ್‌ಗಳಿಗೆ ಅಪಾಯಿಂಟ್‌ಮೆಂಟ್ ಕೊಡಲಿಲ್ಲ. ಸರ್ಕಾರ ಏನು ಮಾಡುತ್ತಿದೆ? ಇದು ಸಾಮಾನ್ಯವಾದ ವಿಚಾರವಲ್ಲ. ಎಂಬಿಬಿಎಸ್ ಓದಿಸಬೇಕಾದರೆ ಹಳ್ಳಿಗಾಡಿನ ಜನರು ಹೊಲವನ್ನು ಮಾರಿ ಗದ್ದೆ ಮಾರಿ ತೋಟ ಮಾರಿ, ರೇಷ್ಮೆ ಮಾರಿ, ಓದಿಸುತ್ತೇವೆ ಏನೋ ಸರ್ಕಾರ ಕೃಪಾಂಕ ಕೊಟ್ಟು ಮಾಡಿದರು. ಇದು ಸ್ವಾಗತಾರ್ಹವಾದ ವಿಚಾರ ಆದರೆ ಇದನ್ನು ಬದಲಾವಣೆ ಮಾಡಿದರು. ಪಿಎಸ್‌ಸಿ ಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವ ಸಲುವಾಗಿ ತಾವು ಯಾವ ರೀತಿ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಜನತೆಗೆ ತಿಳಿಸಬೇಕು. ಪಿಎಸ್‌ಸಿ ಯಲ್ಲಿ ಅಪಾಯಿಂಟ್‌ಮೆಂಟ್‌ಗಳನ್ನು ಮಾಡಬೇಕಾದರೆ ಪರೀಕ್ಷೆಗಳನ್ನು ನಡೆಸುತ್ತಾರೆ.

5.20 ಪಿ.ಎಂ

ಅಲ್ಲಿಗೆ ಸರ್ಕಾರದವರೇ ಯಾರನ್ನು ಬೇಕಾದರೂ ಅಧ್ಯಕ್ಷರನ್ನಾಗಿ ಮತ್ತು ಕಾರ್ಯದರ್ಶಿಗಳನ್ನಾಗಿ ಮಾಡುತ್ತಾರೆ. ಇದಕ್ಕೆ ಐ.ಎ.ಎಸ್. ನವರನ್ನು ಬೇಕಾದರೂ ನೇಮಿಸುವುದಲ್ಲದೆ ಉಳಿದ ಸದಸ್ಯರನ್ನು ಕೂಡ ಸರ್ಕಾರದವರೇ ಮಾಡುತ್ತಾರೆ. ಸರ್ಕಾರದ ಸಿಸ್ಟಂ ಪ್ರಕಾರ ಏನು ಮಾಡುತ್ತಾರೆ ಅದನ್ನು ನಾವು ಒಪ್ಪಲೇಬೇಕಾಗುತ್ತದೆ. ಇಂದು ಇಲ್ಲಿಯೂ ಕೂಡ ಪರೀಕ್ಷೆಗಳಲ್ಲಿ ಕಷ್ಟಪಟ್ಟು ಓದಿದವರಿಗೆ 800,750, 600 ಅಂಕಗಳು ಬಂದರೆ ಮಾಲ್ ಪ್ರಾಕ್ಟೀಸ್, ಫೋಸ, ಕಾಪಿ ಹೊಡೆದು ಪರೀಕ್ಷೆಯಲ್ಲಿ ಬರೆದವರಿಗೆ 1759, 1350, 1320 ಅಂಕಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಎಲ್ಲಿ ಜಾರಿಕೊಂಡರೆ ಹೇಗೆ ತಪ್ಪಿಸಿಕೊಳ್ಳಬಹುದು ಮತ್ತು ಅಂಕಗಳನ್ನು ಪಡೆಯಬಹುದು ಎನ್ನುವ ವಿಷಯ ಅರಿತ ಕೆಲವು ಐ.ಎ.ಎಸ್., ಐ.ಪಿ.ಎಸ್., ಮತ್ತು ಎಂ.ಎಲ್.ಎ. ಮಕ್ಕಳು ಎಲ್ಲಿ ಏನು ಮಾಡಿದರೆ ಅನುಕೂಲವಾಗುತ್ತದೆ ಎಂದು ಯೋಚನೆ ಮಾಡಿದವರನ್ನು 1994ರಲ್ಲಿ ಕಂಡುಹಿಡಿದಾಗ ಸುಮಾರು 300 ರಿಂದ 400 ಜನರು ಮರು ಮೌಲ್ಯಮಾಪನ ಮಾಡಿದಾಗ ಸಿಕ್ಕಿಹಾಕಿಕೊಂಡರು. ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಬರೆಯಿತು. ಆದರೂ ಕೆಲವರ ಮೇಲೆ ಮಾತ್ರ ಕರ್ನಾಟಕ ಲೋಕಸೇವಾ ಆಯೋಗ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಲಿಲ್ಲ. ಇಂದಿನ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿಯೇ ಉತ್ತಮವಾದ ಭ್ರಷ್ಟಾಚಾರ ರಹಿತ ಸರ್ಕಾರವನ್ನು ರಾಜ್ಯಕ್ಕೆ ಕೊಡುತ್ತೇನೆ. ಆಡಳಿತದಲ್ಲಿ ಪಾರದರ್ಶಕತೆ ತಂದು ಭ್ರಷ್ಟ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನಾರೆಲ್ಲರೂ ಸ್ವಾಗತ ಮಾಡಬೇಕು. ಏಕೆಂದರೆ ಭ್ರಷ್ಟರನ್ನು ದೂರ ಕಳುಹಿಸುವ ಕೆಲಸ ಬಹಳ ಕಷ್ಟಕರವಾದುದೇ ಆಗಿದೆ. ಈ ಭ್ರಷ್ಟರ ತಂಡವನ್ನು ದೂರ ಕಳುಹಿಸುವ ಸರ್ಕಾರದ ಕೆಲಸಕ್ಕೆ ಎಲ್ಲ ಪಕ್ಷಗಳವರೂ ಕೂಡ ಬೆಂಬಲ ಕೊಡುವುದು ಧರ್ಮವೇ ಆಗಿದೆ. ಇದು ರಾಜಕೀಯ ಧರ್ಮವೂ, ಮೇಲಾಗಿ ಮಾನವ ಧರ್ಮವೂ ಕೂಡ ಆಗಿದೆ. ಇಂದು ಉತ್ತಮವಾದ ಅಧಿಕಾರಿಗಳಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳು ರಿವಾರ್ಡ್‌ನ್ನು ಕೊಟ್ಟಿದ್ದಾರೆ. ಆ ಕೆಲಸವನ್ನು ಕೂಡ ಮಾಡಬೇಕು, ಆದರೆ ಕೆಟ್ಟವರಿಗೆ ಶಿಕ್ಷೆಯನ್ನು ಕೊಡಬೇಕು. ಈಗಾಗಲೇ ಲೋಕಾಯುಕ್ತ ಮುಖಾಂತರ ಕೆಲವು ಅಧಿಕಾರಿಗಳನ್ನು ಹಿಡಿಸಿ ಸರ್ಕಾರ ಸಸ್ಪೆನ್‌ಶನ್‌ನ್ನು ಮಾಡಿದೆ. ಇನ್ನು ಕೆಲವರು ಎನ್‌ಕ್ವೈರಿಯನ್ನು ಎದುರಿಸುತ್ತಿದ್ದಾರೆ. ಸರ್ಕಾರ ಮಾಡಿರುವ ಕೆಲಸವನ್ನು ನಾನು ಸ್ವಾಗತ ಮಾಡುತ್ತೇನೆ. ಇದೇ ರೀತಿ ಇಂದು ವರ್ಗಾವಣೆ ವಿಚಾರದಲ್ಲೂ ಕೂಡ ಶಾಸಕರ ನೆಂಟರು, ಪಕ್ಷದವರ ಕಡೆಯವರನ್ನು ತಮ್ಮ ಕ್ಷೇತ್ರಗಳಿಗೆ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿ ಹಾಕಿಸಿಕೊಳ್ಳುವಂಥ ಪ್ರವೃತ್ತಿ ಇದೆ. ಮೊನ್ನೆ ಮುಖ್ಯಮಂತ್ರಿಗಳು ಕೂಡ ಶಾಸಕರು ಯಾರನ್ನು ಬೇಕಾದರೂ ಹಾಕಿಕೊಳ್ಳಿ ಎಂದರು. ಆದರೆ ಇಂದು ವಿಧಾನಸೌಧದಲ್ಲಿ ಶಾಸಕರು ಅಧಿಕಾರಿಗಳ ಹಂಗಿನಾಸೆಗೆ ಹೋಗುವ ಮಟ್ಟಕ್ಕೆ ಹೋಗುವುದಿಲ್ಲ. ಒಳ್ಳೆಯ ಕೆಲಸವನ್ನು ಮಾಡುವ ಶಾಸಕರೇ 100 ಕ್ಕೆ 95 ರಷ್ಟು ಇಂದು ಇದ್ದಾರೆ ಎನ್ನುವ ಭಾವನೆ ನನಗಿದೆ. ವರ್ಗಾವಣೆ ಮಾಡುವಾಗ ಯಾರಾದರೂ ಕಾರ್ಯದರ್ಶಿಯವರನ್ನು ಹಳ್ಳಿಗೆ ವರ್ಗಾವಣೆ ಮಾಡಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ಮಾನ್ಯ ಸೋಮಶೇಖರ್‌ರವು ಕಂದಾಯ ಮಂತ್ರಿಗಳಾಗಿದ್ದಾಗ ಕೆಲವೊಂದು ಆಧಾರಗಳನ್ನು ಅನುಸರಿಸಿ ಖಾತೆ ಮಾಡುವ, ಪಹಣಿ ಮಾಡುವ, ಮ್ಯುಟೇಶನ್ ಮಾಡುವ ವಿಚಾರದಲ್ಲಿ ಹಳ್ಳಿಯ ರೈತರಿಗೆ ದಾಖಲೆಗಳನ್ನು ಕೂಡಲೇ ಕೊಡುವಂಥ ಆದೇಶ ಹೊರಡಿಸಿ ಆ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು. ಈಗಿನ ಮುಖ್ಯಮಂತ್ರಿಗಳು ಈ ದಾಖಲೆಗಳನ್ನು

ಕಂಪ್ಯೂಟರ್ ಮೂಲಕ ಕೊಡುತ್ತೇವೆಂದು ಹೇಳಿದ್ದಾರೆ. ಇದು ಇನ್ನೂ ಆಧುನೀಕರಣದ ವ್ಯವಸ್ಥೆ. ಈ ಕಂಪ್ಯೂಟರ್ ವ್ಯವಸ್ಥೆಯನ್ನು ಯಾವಾಗ ಜಾರಿಗೆ ತರುತ್ತಾರೆಂದು ಹೇಳಬೇಕು. ಈಗಾಗಲೇ ಖಾತೆ ಮಾಡಿಕೊಂಡು ತಹಸೀಲ್ದಾರ್ ಕಛೇರಿಗೆ ಕೊಡಲಾಗಿದೆ. ಒಬ್ಬ ರೈತ 25 ಕಿ.ಮೀ ದೂರದಿಂದ ಒಂದು ಖಾತೆ ಮಾಡಿಸಿಕೊಳ್ಳಲು ಬಂದರೆ ಅದಕ್ಕೆ ಸೆಕ್ರೆಟರಿ ಒಂದು ರಿಪೋರ್ಟ್ ಹಾಕಬೇಕು, ರೆವಿನ್ಯೂ ಇನ್ಸ್‌ಪೆಕ್ಟರ್ ರಿಪೋರ್ಟ್ ಹಾಕಿ ಕಡೆಗೆ ತಹಸೀಲ್ದಾರ್‌ಗೆ ಬರಬೇಕು. ಆದರೆ ಈಗಿನ ತಹಸೀಲ್ದಾರ್‌ಗಳೆಲ್ಲರೂ ಪ್ರಮೋಟೀಸ್ ಆಗಿದ್ದಾರೆ. ಅವರಿಗೆ ಏನೂ ಗೊತ್ತಿರುವುದಿಲ್ಲ. ನಾವು ಏನಾದರೂ ಕೇಳಿದರೆ ಆಗ ಪುಸ್ತಕ ತೆಗೆದು ಓದುವುದಕ್ಕೆ ಹೋಗುತ್ತಾರೆ. ಈ ಮಟ್ಟದಲ್ಲಿ ಇಂದು ತಹಸೀಲ್ದಾರ್‌ರವರುಗಳು ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಶಾಸಕರಿಗೂ ಈ ವಿಚಾರ ಗೊತ್ತಿದೆ. ಇಂದು ಮಾನ್ಯ ಮುಖ್ಯಮಂತ್ರಿಗಳು ಬಡ ರೈತರಿಗೆ ಜನಪರ ಕಾರ್ಯಕ್ರಮಗಳನ್ನು ಕೊಡುವುದಾಗಿ ಹೇಳಿರುವ ಹಿನ್ನೆಲೆಯಲ್ಲಿ ನನ್ನ ವಿನಂತಿ ಏನೆಂದರೆ ಪಹಣಿ, ಖಾತೆ ಮತ್ತು ಮ್ಯೂಟೇಶನ್ ವಿಚಾರದಲ್ಲಿ ರೈತರಿಗೆ ಕೊಡಬೇಕಾದ ದಾಖಲೆಗಳನ್ನು ನಾಡ ಕಛೇರಿ ಮೂಲಕ ಕೊಡುವ ಕೆಲಸವನ್ನು ಕೂಡಲೇ ಮುಖ್ಯಮಂತ್ರಿಗಳ ಮಾಡಿಕೊಟ್ಟರೆ ರೈತರಿಗೆ ಸರ್ಕಾರ ನಿಜವಾಗಿಯೂ ಮಾಡಿದ ಒಂದು ಸಹಾಯಕವಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ಮುಖ್ಯಮಂತ್ರಿಗಳು ಹಳ್ಳಿಗಳಲ್ಲಿ ರಸ್ತೆಗಳ ಬಗ್ಗೆ, ಹಳ್ಳಿಯ ಜನರ ಆರೋಗ್ಯದ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸ್ವಸ್ತಿ ಗ್ರಾಮ ಎನ್ನುವುದನ್ನೂ ಕೂಡ ಮಾಡಿದಾದರೆ. ಅಲ್ಲಿ ಒಂದು ಆಸ್ಪತ್ರೆ ಪ್ರಾರಂಭ ಮಾಡಿದ್ದಾರೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ, ಅಂಗನವಾಡಿ ಕೇಂದ್ರವನ್ನು ಮಾಡಿದ್ದಾರೆ, ಇದಲ್ಲದೇ ಮಾಧ್ಯಮಿಕ ಶಾಲೆಯನ್ನು ತೆರೆಯಲು ಆರ್ಡರ್‌ನ್ನು ಕೂಡ ಮುಖ್ಯಮಂತ್ರಿಗಳು ಮಾಡಿದ್ದಾರೆ. ಆದರೆ ಇದೇ ರೀತಿಯಲ್ಲಿ ರಾಜ್ಯದ ಮೂಲೆ ಮೂಲೆಗಳಲ್ಲೂ ಮಾಡಬೇಕು. ಸ್ವಸ್ತಿ ಗ್ರಾಮದ ಪ್ರಯೋಜನ ರಾಜ್ಯದ ಎಲ್ಲ ಜನರಿಗೆ ಸಿಗುವಂತಾಗಬೇಕು. ಇದರ ಬಗ್ಗೆ ಮುಖ್ಯಮಂತ್ರಿಗಳು ಗಮನಹರಿಸಿ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ತೊಡಗಿಸಬೇಕು. ಆದರೆ ಇದರ ಬಗ್ಗೆ ಅವರ ಭಾಷಣದಲ್ಲಿ ಹೇಳಿಯೇ ಇಲ್ಲ. ಕಡಿಮೆ ಹಣ ತೋರಿಸಿ ಎಲ್ಲವನ್ನೂ ಮಾಡುತ್ತೇವೆ ಎಂದರೆ ಹೇಗೆ? ಇದರ ಬಗ್ಗೆ ಹೆಚ್ಚಿನ ಕಳಕಳಿ ಇಟ್ಟು ಕಾರ್ಯಕ್ರಮ ಹಾಕಿಕೊಂಡು ಹೆಚ್ಚಿನ ಹಣವನ್ನು ಇಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಪರೀಕ್ಷೆಗಳಲ್ಲಿ ಒಂದೇ ಮನೆಯ ನಾಲ್ವರಿಗೆ ರ್‍ಯಾಂಕ್ ಬಂದಿದೆ. ಇದು ಹೇಗೆ ಬಂತು? ಇದಲ್ಲದೇ ಒಂದೇ ಇನ್ಸ್‌ಟ್ಯೂಶನ್‌ನಲ್ಲಿ ಓದಿದ 40 ಜನರಲ್ಲಿ 24 ಜನರಿಗೆ 1300, 1200 ಅಂಕಗಳನ್ನು ಕೊಟ್ಟಿದ್ದಾರೆ. ಇದು ಹೇಗೆ ಬಂತು ಎಂಬುದಕ್ಕೆ ಸಂಬಂಧಪಟ್ಟ ಎನ್‌ಕ್ವೈರಿಯನ್ನು ಮಾಡಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ನಗರದಲ್ಲಿರುವವರೇ ಈ ರೀತಿಯಲ್ಲಿ ಮಾಡುವುದರಿಂದ ಹಳ್ಳಿಯ ರೈತರಿಗೆ ಈ ಪರೀಕ್ಷೆಗಳಲ್ಲಿ ನ್ಯಾಯವಾಗಿ ಸಿಗಬೇಕಾದ ಅಂಕಗಳು ಸಿಗುತ್ತಿಲ್ಲವೆಂದು ಹೇಳಬಯಸುತ್ತೇನೆ. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಸರ್ಕಾರ ತೆಗೆದುಕೊಂಡರೆ ಮಾತ್ರ ಹಳ್ಳಿಯ ಬುದ್ಧಿವಂತ ಮಕ್ಕಳಿಗೆ ಸರ್ಕಾರದಲ್ಲಿ ಉದ್ಯೋಗ ಸಿಗುತ್ತದೆ ಮತ್ತು ಕಾಲೇಜುಗಳಲ್ಲಿ ಉನ್ನತ ಶಿಕ್ಷಣದ ಸೀಟ್‌ಗಳು ಕೂಡ ಸಿಗುತ್ತದೆ ಮತ್ತು ಕಾಲೇಜುಗಳಲ್ಲಿ ಉನ್ನತ ಶಿಕ್ಷಣದ ಸೀಟ್‌ಗಳು ಕೂಡ ಸಿಗುತ್ತದೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ಆಡಳಿತದಲ್ಲಿ ಪಾರದರ್ಶಕತೆಯನ್ನು ತರುತ್ತೇವೆಂದು

ಹೇಳಿದ್ದಾರೆ. ಯಾವುದೇ ದೇಶ ನಾಗರಿಕತೆಯಲ್ಲಿ ಬೆಳವಣಿಗೆಯಾದಂತೆ ಎಲ್ಲಾ ವಿಚಾರಗಳಲ್ಲೂ ಪಾರದರ್ಶಕತೆಯ ನಾಗರಿಕತೆ ಹೆಚ್ಚಬೇಕಾಗುತ್ತದೆ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳನ್ನು ನಮ್ಮ ಹಳ್ಳಿಯ ಕಡೆಯ ಜನರು ಹೈಟೆಕ್ ಚೀಫ್ ಮಿನಿಸ್ಟರ್ ಎಂದು ಕರೆಯುತ್ತಾರೆ. ಬೆಂಗಳೂರನ್ನು ಸಿಂಗಪುರನ್ನಾಗಿ ಮುಖ್ಯಮಂತ್ರಿಗಳು ಮಾಡುತ್ತಾರಂತೆ, ನಮ್ಮ ಹಳ್ಳಿಯನ್ನು ಏನು ಮಾಡುತ್ತಾರಂತೆ ಎಂದು ಕೆಲವರು ತಮ್ಮನ್ನು ಕೇಳುತ್ತಾರೆ. ಆದರೆ ಅವರ ಮಾತನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಮುಖ್ಯಮಂತ್ರಿಗಳು ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುತ್ತೇನೆಂದು ಏನು ಹೇಳಿದ್ದಾರೆ ಅದನ್ನು ಪ್ರಾಕ್ಟಿಕಲಿ ಮಾಡಿ ತೋರಿಸಿದರೆ ರಾಜ್ಯದ 5 ಕೋಟಿ ಜನಗಳೂ ತಲೆಬಾಗುತ್ತಾರೆ. ಮುಖ್ಯಮಂತ್ರಿಗಳು ಹಳ್ಳಿಯ ಪ್ರತಿಯೊಬ್ಬರಿಗೂ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗುವುದೆಂದು ಹೇಳಿದ್ದಾರೆ. ಅಲ್ಲಿ ಕಟ್ಟಿರುವ ಕೆರೆಯ ನೀರನ್ನೇ ಕುಡಿಯುತ್ತಿದ್ದಾರೆಂದು ಹೇಳುತ್ತಿದ್ದಾರೆ. ಕುಡಿಯುವ ನೀರಿನ ಯೋಜನೆಯಲ್ಲಿ ಹಿಂದೆ ನಮ್ಮ ಸರ್ಕಾರವಿದ್ದಾಗ ಏನು ಕೆಲಸವಾಗಿದೆಯೋ ಅದೇ ಹಂತದಲ್ಲಿದ್ದು ಆದಕ್ಕಿಂತ ಒಂದು ಚೂರು ಕೂಡ ಹೆಚ್ಚಿನ ಕೆಲಸರಾಗಿಲ್ಲ ಇಲ್ಲಿ ಹಲವಾರು ಸಚಿವರುಗಳಾಗಿದ್ದಾರೆ. ಹಿಂದೆ ಸರ್ಕಾರ ಯಾವುದೇ ಒಂದು ಯೋಜನೆಯನ್ನು ಮಾಡಬೇಕಾದರೆ ಪ್ರತಿಯೊಬ್ಬ ಶಾಸಕರನ್ನು ಕರೆಸಿ ಅಭಿಪ್ರಾಯ ಕೇಳುತ್ತಿದ್ದರು. ಅದೇ ರೀತಿಯಲ್ಲಿ ಇಂದಿನ ಮುಖ್ಯಮಂತ್ರಿಗಳು ಕೂಡ ಸಭೆಯನ್ನು ಕರೆದು ಯೋಜನೆಯನ್ನು ಹೇಗೆ ಮಾಡಬೇಕೆಂದು ಕೇಳಿದರೆ ನಮ್ಮ ಮುಖಂಡರುಗಳು ಅಭಿಪ್ರಾಯವನ್ನು ಕೊಟ್ಟೇ ಕೊಡುತ್ತಾರೆ. ಇಂದು ನೀರಿನ ಸಮಸ್ಯೆ ನೀಗಿಸಲು ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದರೆ ಸಲಹೆಯನ್ನು ಕೊಟ್ಟೇ ಕೊಡುತ್ತಾರೆ. ದಯಮಾಡಿ ಮುಖ್ಯಮಂತ್ರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು ಎಲ್ಲಾ ಜನರಿಗೆ ಕೊಡುವಂಥ ಕೆಲಸವನ್ನು ಮಾಡಬೇಕು. ಇನ್ನು ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುವಲ್ಲಿ ಮೀಟರ್‌ನ್ನು ಅಳವಡಿಸಲಾಗುವುದೆಂದು ಹೇಳಿದ್ದಾರೆ. ಆದರೆ ಅಲ್ಲಿ ರೈತರ ಪರವಾದ, ಜನಪರವಾದ ಮತ್ತು ಬಡವರ ಪರವಾಗಿ ಸರ್ಕಾರ ಕೆಲಸ ಮಾಡುತ್ತದೆ ಎಂದು ಹೇಳುತ್ತಾರೆ. ಆದರೆ ಇಂದು ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿದರೆ ಅವರು ಏನು ಬೆಳೆಯನ್ನು ಬೆಳೆಯುತ್ತಾರೆ. ಇವತ್ತು ಒಂದುಬೋರ್ ಹಾಕಿದರೆ 2000 ಗ್ಯಾಲನ್ ನೀರು ಬರಬಹುದು. ಆದರೆ ಇರುವ ನಾಲ್ಕು ಎಕರೆ ಜಮೀನನ್ನೇ ನಂಬಿಕೊಂಡು ತಂದೆ ತಾಯಿ, ಆರು ಜನ ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳೆಲ್ಲರೂ ಜೀವನ ನಡೆಸಬೇಕಾದ ಪರಿಸ್ಥಿತಿ ಹಳ್ಳಿಗಳಲ್ಲಿ ಹೆಚ್ಚಾಗಿಯೇ ಇದೆ. ಆದರೆ ಇವರು ಬೆಳೆಯುವ ಬೆಳೆಗಳಾದ ಭತ್ತ, ರಾಗಿ, ತೆಂಗಿನ ಕಾಯಿ ಮತ್ತು ತರಕಾರಿಗಳಿಗೆ ಮಾರುಕಟ್ಟೆಗಳಲ್ಲಿ ಸರಿಯಾದ ಬೆಲೆಯೇ ಸಿಗುತ್ತಿಲ್ಲ. ಒಂದು ಸಾರಿ ಟಮೋಟೋ ಬೆಲೆ ಕೆ.ಜಿ.ಗೆ 50 ಪೈಸೆಯಾದರೆ ಕೆಲವೊಮ್ಮೆ ಕೆ.ಜಿಗೆ 10 ರೂಪಾಯಿಗಳು ಆಗುತ್ತದೆ. ಕೋಲಾರದಲ್ಲಿ ಇದೇ ಪರಿಸ್ಥಿತಿ. ಬೆಲೆಯಲ್ಲಿ ಸ್ಥಿರತೆ ಎಂಬುದೇ ಇಲ್ಲವಾಗಿದೆ. ಜನತಾ ದಳ ಸರ್ಕಾರದಲ್ಲಿ ಕೆಲವು ಮುಖಂಡರುಗಳು ರೈತರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಕೆಲಸಗಳನ್ನು ಮಾಡಿದ್ದಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆಲುಗೆಡ್ಡೆ ಬೆಳೆ ಜಾಸ್ತಿಯಾದಾಗ ಸರ್ಕಾರವೇ ಆಲೂಗೆಡ್ಡೆಯನ್ನು ಖರೀದಿಸಿತು. ಈರುಳ್ಳಿ ಬೆಳೆ ಜಾಸ್ತಿಯಾದಾಗ ಅದಕ್ಕೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರು. ಆದರೆ ಇಂದು ಆ ವ್ಯವಸ್ಥೆ ಇಲ್ಲದೇ ಈರುಳ್ಳಿ ಮತ್ತು ಟಮೋಟೋ ಬೆಳೆ ಜಾಸ್ತಿಯಾಗಿ ಸರಿಯಾದ ಬೆಲೆಯೂ ಸಿಗದೇ ಕೆಟ್ಟುಹೋಗಿ ಅದನ್ನು ಬಿಸಾಡಿ ರೈತರುಗಳು ಮನೆಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇವರು ಬೆಳೆಯನ್ನು

ಬೆಳೆಯಲು ಖರ್ಚು ಮಾಡಿದ ಹಣ ಕೂಡ ಬರುತ್ತಿಲ್ಲ. ಸಾಗಾಣಿಕೆ ವೆಚ್ಚ ಮತ್ತು ಗೊಬ್ಬರದ ವೆಚ್ಚವಾದರೂ ಕೂಡ ಬರುತ್ತಿಲ್ಲ. ಆದುದರಿಂದ ನಾನು ವಿನಂತಿ ಮಾಡುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ರೈತರ ಬೆಳೆಗಳಿಗೆ ಮೊಟ್ಟ ಮೊದಲನೆಯದಾಗಿ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಇಂದು ರೇಮಂಡ್ಸ್ ಬಟ್ಟೆಗೆ ಒಂದು ಮೀಟರ್‌ಗೆ 680-00 ರೂಪಾಯಿಗಳೆಂದು ಕಾರ್ಖಾನೆಯವರೇ ನಿಗಧಿ ಮಾಡುತ್ತಾರೆ. ಆದರೆ ರೈತ ಬೆಳೆದ ಟಮೋಟೋ 50 ಪೈಸೆ ಕೆ.ಜಿ.ಗೆ ಇದೆ. ರೈತ ವಿದ್ಯಾವಂತನಲ್ಲದ ಕಾರಣ ಅವನು ಕೇಳುವುದಕ್ಕೆ ಬರುವುದಿಲ್ಲವೆಂದು ಈ ರೀತಿ ಮಾಡುವುದೇ? ರೈತ ಬೆಳೆದ ಯಾವುದೇ ಬೆಳೆಗೆ ಉತ್ತಮವಾದ ಮಾರುಕಟ್ಟೆ, ಬೆಳೆಯನ್ನು ಸ್ಟಾಕ್ ಮಾಡಲು ಕೂಲಿಂಗ್ ವ್ಯವಸ್ಥೆ ಮತ್ತು ರೈತರಿಗೆ ಸಾಲವನ್ನು ಕೊಡುವಂಥ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳು ಮಾಡಬೇಕು. ಇಂದು ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ರೈತರು ಎರಡು ಜೊತೆ ಹಸುವಿನ ಲೋನ್, ಅಥವಾ ಬೋರ್‌ವೆಲ್ ಲೋನ್ ಅಥವಾ ಬೇರೆ ಲೋನ್‌ಗಳೆಂದು 10 ಸಾವಿರವೋ ಅಥವಾ 20 ಸಾವಿರವೋ ಸಾಲವಾಗಿ ತೆಗೆದುಕೊಳ್ಳುತ್ತಾರೆ. ಆದರೆ ಆ ವರ್ಷ ಮಳೆಯಾಗದೇ ಬೆಳೆಯೇ ಬರುವುದಿಲ್ಲ. ಜೀವನ ನಡೆಸುವುದೇ ರೈತರಿಗೆ ಕಷ್ಟವಾಗಿರುತ್ತದೆ. ಆದರೆ ಪಿ.ಎಲ್.ಡಿ ಬ್ಯಾಂಕ್‌ನವರು ಅವರ ಮನೆಗೆ ಹೋಗಿ ಸಾಲ ತೀರಿಸದೇ ಇರುವುದಕ್ಕಾಗಿ ಮನೆಯಲ್ಲಿದ್ದ ಚೆಂಬು, ತಟ್ಟೆ, ಬಿಂದಿಗೆ ಮತ್ತು ಇತರ ವಸ್ತುಗಳನ್ನೆಲ್ಲಾ ಆಚೆಗೆ ಇಟ್ಟುಬಿಡುತ್ತಾರೆ. ರೈತನ ಮನೆಯಲ್ಲಿರುವ ಇವುಗಲಿಗೆಲ್ಲಾ 500 ರೂಪಾಯಿಗಳು ಬರುವುದಿಲ್ಲ. ಆದರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರು 320 ಕೋಟಿ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿರುವವರ ಮನೆಗಳಿಗೆಲ್ಲಾ ಹೋಗಿ ದಾಳಿಯನ್ನು ಮಾಡುವುದೇ ಇಲ್ಲ. ಅವರ ಹತ್ತಿರ ಹೋಗುವುದಿಲ್ಲ, ಅವರು ಹೈಕೋರ್ಟಿಗೆ ಹೋಗುತ್ತಾರೆ. ಏಕೆಂದರೆ, ಲಾಯರ್‌ಗೆ ದುಡ್ಡು ಕೊಟ್ಟರೆ ಬರುತ್ತಾರೆಂದು ಅವರಿಗೆ ಚೆನ್ನಾಗಿ ಗೊತ್ತಿದೆ. ಆ ರೈತರಿಗೆ ಯಾರು ನ್ಯಾಯ ಹೇಳಬೇಕು? ಆತ ಚಡ್ಡಿ ಹಾಕಿಕೊಂಡು ಬಂದು ನಿಂತುಕೊಳ್ಳುತ್ತಾನೆ, ಬೈದರೆ ಬೈಸಿಕೊಳ್ಳುತ್ತಾನೆ, ಹೊಡೆದರೆ ಹೊಡೆಸಿಕೊಂಡು ಮನೆಗೆ ಹೋಗುತ್ತಾನೆ. ಈ ಹಂತದಲ್ಲಿ ಸರ್ಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಆಧುನೀಕರಣಗೊಳಿಸಿ, ರೈತರಿಗೆ ಶಕ್ತಿ ತುಂಬುವಂತಾಗಬೇಕು. ಹಳ್ಳಿಯ ರೈತರು ಬಂದು ನಿಮ್ಮ ಕಛೇರಿಯಲ್ಲಿ ಕುಳಿತುಕೊಳ್ಳುವಂಥ ವಾತಾವರಣವನ್ನು ತಾವು ಕಲ್ಪಿಸಿಕೊಡಬೇಕು. ಆಗ ಮಾತ್ರ ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಗಳ ಆಡಳಿತ ಪಾರದರ್ಶಕತೆ ಮತ್ತು ಸಮಾನತೆಯಿಂದ ಕೂಡಿರುತ್ತದಲ್ಲದೆ, ರೈತರಿಗೂ ಎಲ್ಲಾ ರೀತಿಯಲ್ಲೂ ಉತ್ತೇಜನ ಕೊಟ್ಟಂತಾಗುತ್ತದೆಂದು ಅನ್ನಿಸುತ್ತದೆ. ಇವೊತ್ತು ಇದು ಮಾಡುವುದನ್ನು ಬಿಟ್ಟು ರೈತರ ಮನೆಗಳನ್ನು ಹರಾಜು ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ಓಡಾಡಲು ಸೂಕ್ತ ರಸ್ತೆಗಳ ಸೌಲಭ್ಯವಿಲ್ಲ, ಕುಡಿಯುವ ನೀರಿನ ಸೌಲಭ್ಯವಿಲ್ಲ. ರಸ್ತೆಗಳ ಅಭಿವೃದ್ಧಿಗೆಂದು ಎಂ.ಎಲ್.ಎ. ಗಳಿಗೆ ಅರವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರು. ಈ ಕುರಿತು ತಾಲ್ಲೂಕು ಪಂಚಾಯಿತಿಯಲ್ಲಿ ಸಭೆ ನಡೆದು ಜಿಲ್ಲಾ ಪಂಚಾಯಿತಿಯಲ್ಲಿ ಅಪ್ರೂವ್ ಆಯಿತು. ಟೆಂಡರ್ ಕರೆಯುವ ಕುರಿತು ಹೇಳುವುದಾದರೆ, ನಾನು ಬ್ಲೇಮ್ ಮಾಡುವುದಕ್ಕೆ ಹೋಗುವುದಿಲ್ಲ. ಇದುವರೆವಿಗೂ ಅಧಿಕಾರಿಗಳು ಟೆಂಡರ್ ಕರೆದಿಲ್ಲ, ಕೆಲಸವೂ ಪ್ರಾರಂಭವಾಗಿಲ್ಲ. ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳುಗಳಾಯಿತು. ನಾಲ್ಕು ತಿಂಗಳಿನ ಮುಂಚೆ ಮಾತನಾಡುತ್ತಾ ಬರುವ ಮಾರ್ಚಿ ತಿಂಗಳ 31ನೇ ತಾರೀಖಿನೊಳಗಾಗಿ ಎಲ್ಲಾ ಕೆಲಸಗಳನ್ನು ಮುಗಿಸುತ್ತೇವೆಂದರು. ಕೆಲಸಗಳನ್ನು ಎಲ್ಲಿ ಮುಗಿಸಲಾಗಿದೆ? ಬರೀ ಕಾಗದದ ಮೇಲೆ ಮಾತ್ರ

ಕೆಲಸಗಳನ್ನು ಮುಗಿಸಿದ್ದೀರ. ಎಕ್ಸಿಕ್ಯುಟೀವ್ ಇಂಜಿನಿಯರ್ ಆದವರು ತಮ್ಮನ್ನು ಯಾವಾಗ ಟ್ರಾನ್ಸ್‌ಫರ್ ಮಾಡುತ್ತಾರೆಂದು ಕೊಂಡು ಎಂ.ಎಲ್.ಎ. ಮನೆಗಳನ್ನು ಹುಡುಕಿಕೊಂಡು ಹೋಗುತ್ತಾರೆ ಅಥವಾ ಜಿಲ್ಲಾ ಮಂತ್ರಿಗಳ ಮನೆಗೆ ಹೋಗುತ್ತಾರೆ. ಹೀಗಿರುವಾಗ ಸರ್ಕಾರ ಹಮ್ಮಿಕ್ಕೊಂಡಿರುವ ಕಾರ್ಯಕ್ರಮದಲ್ಲಿ ಶೇಕಡ 10 ರಷ್ಟು ಕೆಲಸವೂ ಆಗಿಲ್ಲ. ಮಾನ್ಯ ಮಂತ್ರಿಗಳ ಅಭಿಪ್ರಾಯ ಮತ್ತು ಅವರ ಕಳಕಳಿಯನ್ನು ಒಪ್ಪುತ್ತೇನೆ. ಆದರೆ, ಪ್ರಾಕ್ಟಿಕಲ್ ಆಗಿ ನಥಿಂಗ್ ವಿಲ್ ಡು. ಆದುದರಿಂದ, ಕೂಡಲೇ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಲು ಸೂಚನೆ ಕೊಡುವ ಮುಖೇನ ಹಳ್ಳಿ ರಸ್ತೆಗಳ ಅಭಿವೃದ್ಧಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವಿಕೆ, ರೈತರ ಉತ್ಪನ್ನಗಳಿಗೆ ಬೆಂಬಲ ನಿಗದಿಯ ತೀರ್ಮಾನ ಮತ್ತು ಗ್ರಾಮೀಣ ಜನರಿಗೆ ಒದಗಿಸಬೇಕಾದ ಕೆಲವು ಸವಲತ್ತುಗಳು ಅದರಲ್ಲೂ ವಿದ್ಯಾರ್ಥಿಗಳಿಗೆ ನೀಡುವ ಕೃಪಾಂಕದ ಬಗ್ಗೆಯೂ ಹೇಳಿದರು. ಅದರ ಬಗ್ಗೆ ಸಭೆ ಕರೆದು ಏನಾದರೂ ಮಾಡಿ. ಆ ಬಗ್ಗೆ ನಮ್ಮಿಂದ ನೀವು ಸಲಹೆಗಳನ್ನು ಕೇಳಿದರೆ ನಾರಿನ್ನೂ ಆ ಮಟ್ಟಕ್ಕೆ ಬೆಳೆದಿಲ್ಲ. ನಾವು ಎರಡನೇ ಬಾರಿಗೆ ಶಾಸಕರಾಗಿ ಆರಿಸಿ ಬಂದಿರುವವರು. ಸದನದಲ್ಲಿ ಅನೇಕ ಮಾನ್ಯ ಹಿರಿಯ ಮಂತ್ರಿಗಳು ಕುಳಿತಿದ್ದಾರೆ, ಅವರುಗಳ ಸಭೆ ಕರೆದು ಅವರ ಮುಖಾಂತರ ಒಂದು ತೀರ್ಮಾನ ಮಾಡಿ ಏನು ಆಗಬೇಕೆಂಬ ಬಗ್ಗೆ ಕಾನೂನಿನ ಪ್ರಕಾರ ಒಂದು ಅವಕಾಶ ಮಾಡಿ ಕೊಟ್ಟರೆ ತಾವು ಹೇಳಿರುವಂಥ ಮಾತಿಗೆ ನಿಜವಾಗಿಯೂ ಅರ್ಥವಿರುತ್ತದೆ. ಇನ್ನು ತೋಟಗಾರಿಕೆ ಬಗ್ಗೆ ಹೇಳಿದ್ದೀರಿ. ನಮ್ಮಲ್ಲಿ ತೋಟಗಾರಿಕೆ ಜಮೀನು ಎಷ್ಟಿದೆ? ಲಕ್ಷಾಂತರ ಎಕರೆಗಳಷ್ಟು ಪ್ರದೇಶದಲ್ಲಿ ತೋಟಗಾರಿಕೆ ಇದೆ. ಹೀಗಿದ್ದರೂ ಸರ್ಕಾರಕ್ಕೆ ಮೂರು ರೂಪಾಯಿಯಷ್ಟು ಲಾಭ ಬರುವುದಿಲ್ಲ. ಇಲಾಖೆಯಲ್ಲಿ ಯಾವ್ಯಾವ ಸರ್ಕಾರದ ಅಧಿಕಾರಿಗಳು ಏನೇನು ಮಾಡಿದರೋ ಗೊತ್ತಿಲ್ಲ. ಇವತ್ತು ಮರಿಗೌಡ ಫಾರ್ಮ್ ಇದ್ದು, ಇದು ಸುಮಾರು ಐದು ಸಾವಿರ ಎಕರೆಗಳಷ್ಟು ವ್ಯಾಪ್ತಿ ಹೊಂದಿದ್ದು, ಅಲ್ಲಿ ಬರೀ ಅಂಚಿ ಹುಲ್ಲು ಬೆಳೆದಿದ್ದು, ಸರ್ಕಾರಕ್ಕೆ ಮೂರ ರೂಪಾಯಿಯಷ್ಟು ಲಾಭವಿಲ್ಲ, ಆದರೆ, ಖರ್ಚು ಇಪ್ಪತ್ತು ಲಕ್ಷ ರೂಪಾಯಿಗಳು ಮಟಿಣು ಆಗೆಯುವುದಕ್ಕೆ , ಗೊಬ್ಬರ ತೆಗೆದುಕೊಂಡು ಹೋಗುವುದಕ್ಕೆ ಮತ್ತು ಔಷಧಿ ಸಿಂಪರಣೆಗೆ ಹಣ ಖರ್ಚಾಗುತ್ತಿದೆಯೇ ವಿನಾ ಅದರಿಂದ ಮೂರು ರೂಪಾಯಿಗಳ ಆದಾಯವಿಲ್ಲ. ಸರ್ಕಾರ ಕೊಡುವ ಹಣ ಸಂಬಳಕ್ಕೆ ಸಾಕಾಗುವುದಿಲ್ಲ. ಈ ಫಾರ್ಮ್ ತುಮಕೂರು ಜಿಲ್ಲೆಯ ದೊಡ್ಡಸಾಗ್ಗೆರೆಯಲ್ಲಿದೆ. ತೋಟಗಾರಿಕೆಯಲ್ಲಿ ನಾವು ರಾಷ್ಟ್ರದಲ್ಲಿಯೇ ಮೊಟ್ಟಮೊದಲನೆಯ ಸ್ಥಾನದಲ್ಲಿದ್ದೇವೆಂದು ಹೇಳಿಕೊಳ್ಳುತ್ತೇವೆ, ನಾವು ಎಲ್ಲಿದ್ದೇವೆ? ಸರ್ಕಾರದ ಹಣವನ್ನು ಬಿಡುಗಡೆ ಮಾಡುವ ಮುಖಾಂತರ ಖರ್ಚು ಮಾಡಿ ಉತ್ಪತ್ತಿಯನ್ನು ಕಡಿಮೆ ಮಾಡಿ ಸರ್ಕಾರಕ್ಕೆ ನಷ್ಟ ಮಾಡುವುದೊಂದೇ ಇದರ ಹಿಂದೆ ಅಡಗಿರುವ ಉದ್ದೇಶವೆಂದು ನನಗನ್ನಿಸುತ್ತದೆ. ಅದೇ ರೀತಿ ರೇಷ್ಮೆ ಬೆಳೆ ಕುರಿತು ಹೇಳುವುದಾದರೆ, ಹಿಂದಿನ ಸರ್ಕಾರದಲ್ಲಿ ರೇಷ್ಮೆ ಬೆಳೆಗೆ ಬೆಂಬಲ ಬೆಲೆ ನಿಗದಿಯಾಗಿತ್ತು. ಯಾರೋ ಪುಣ್ಯಾತ್ಮರು ರೇಷ್ಮೆ ಬೆಳೆಯನ್ನು ಆಮದು ಮಾಡಿಕೊಳ್ಳುವ ನೀತಿ ಜಾರಿಗೊಳಿಸಿದ್ದರಿಂದ ಇವೊತ್ತು ರೇಷ್ಮೆಗೆ 70-80-90 ರೂಪಾಯಿಗಳಷ್ಟು ಬೆಲೆ ಬಂದಿದೆ. ಇವೊತ್ತು ನಮ್ಮ ಮಕ್ಕಳನ್ನು ಓದಿಸಿ ಬಿ.ಎಸ್.ಸಿ, ಬಿ.ಎಡ್. ಮಾಡಿಸುತ್ತೇವೆ, ಆದರೆ ಉದ್ಯೋಗವಿಲ್ಲ. ಆತನನ್ನು ಕರೆದು ನೀನು ರೇಷ್ಮೆ ಬೆಳೆದುಕೋ, ನಾಲ್ಕು ಹಸುಗಳನ್ನು ಸಾಕಿಕೋ ಎನ್ನುತ್ತೇವೆ. ಆದರೆ, ಮಾರುಕಟ್ಟೆಯಲ್ಲಿ ರೇಷ್ಮೆ ಬೆಳೆಗೆ 60 ರೂಪಾಯಿಗಳು. ಆತ ವಿದ್ಯಾವಂತ ಯುವಕ. ಹತ್ತು ಎಕರೆಯಲ್ಲಿ ಆತ ರೇಷ್ಮೆ ಕೃಷಿ ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಆತನ ಕೈಗೆ 20-25 ಸಾವಿರ ರೂಪಾಯಿಗಳು

ಸಿಗುತ್ತದೆ, ಖರ್ಚು 30 ಸಾವಿರ ರೂಪಾಯಿಗಳಾಗಿರುತ್ತದೆ; ಇದರಿಂದ ಆತಿನಿಗೆ ಎಲ್ಲಿ ಶಕ್ತಿ ಬರುತ್ತದೆ? ಬಡತನ ಎಲ್ಲಿ ನಿರ್ಮೂಲವಾಗುತ್ತದೆ? ಯುವಕರಿಗೆ ಎಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ?

ಶ್ರೀ ಎಂ. ಮಹದೇವು:- ರೇಷ್ಮೆ ಕೃಷಿ ಎಲ್ಲಾ ಉದ್ಯಮಗಳಿಗಿಂತಲೂ ಹೆಚ್ಚು ಲಾಭದಾಯಕವಾದುದಾಗಿದೆ. ನಿರುದ್ಯೋಗಿಯಾಗಿರುವವನು ಒಂದು ಎಕರೆ ಪ್ರದೇಶದಲ್ಲಿ ರೇಷ್ಮೆ ಕೃಷಿ ಮಾಡಿದಲ್ಲಿ 25 ರಿಂದ 30 ಸಾವಿರ ರೂಪಾಯಿಗಳಷ್ಟು ಆದಾಯ ತೆಗೆದುಕೊಳ್ಳಬಹುದಾಗಿದೆ. ಇದನ್ನು ತಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ.

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ವಾಸ್ತವವಾಗಿ ನೋಡಿದಾಗ, ಇವೊತ್ತು ತಮ್ಮ ಕ್ಷೇತ್ರದಲ್ಲಿಯೇ ಅನೇಕರು ರೇಷ್ಮೆ ಬೆಳೆಯುತ್ತಾರೆ. ರೇಷ್ಮೆ ಬೆಳೆಗೆ ಇದ್ದಂಥ ಬೆಲೆಯನ್ನು ಹಿಂದೆ ಕಡಿಮೆ ಮಾಡಿದಾಗ ಎಷ್ಟೊ ಜನ ರೈತರು ರೇಷ್ಮೆ ಗಿಡಗಳನ್ನು ಕಿತ್ತು ಹಾಕಿದರು. ರೇಷ್ಮೆ ಬೆಳೆಗೆ ಸೂಕ್ತ ಬೆಲೆ ಸಿಗುವುದಿಲ್ಲವಾದ್ದರಿಂದ ಅದಕ್ಕೆ ಗೊಬ್ಬರ ಹಾಕುತ್ತಿಲ್ಲ ಮತ್ತು ನೀರಿನ ಸೌಲಭ್ಯ ಒದಗಿಸಲಾಗುತ್ತಿಲ್ಲವೆನ್ನುತ್ತಾರೆ. ಆದುದರಿಂದ, ರೇಷ್ಮೆ ಬೆಳೆ ಬೆಲೆಯ ಸ್ಥಿರತೆಯನ್ನು ಕಾಪಾಡುವುದಕ್ಕೋಸ್ಕರ ತಮ್ಮ ಇಲಾಖೆ ವತಿಯಿಂದ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುತ್ತೀರೆಂದು ತಿಳಿಸಬೇಕು. ಮತ್ತು ಬಡವರಿಗೆ, ಪರಿಶಿಷ್ಟ ಜಾತಿ ಹಾಗೂ ವರ್ಗಗಳವರಿಗೆ ಉಚಿತವಾಗಿ ಗೊಬ್ಬರ, ಪರಿಕರಗಳನ್ನು ಒದಗಿಸಿಕೊಡಬೇಕಲ್ಲದೆ ಮನೆಗಳನ್ನು ಕಟ್ಟಿಸಿಕೊಡಬೇಕು. ಹೀಗಾದಾಗ ಐದು ಕೋಟಿ ಜನರು ನಿಮ್ಮನ್ನು ಅಭಿನಂದಿಸಿದಂತಾಗುತ್ತದೆ ಮತ್ತು ಅವರುಗಳನ್ನು ಉದ್ಧಾರ ಮಾಡಿದಂತಾಗುತ್ತದೆ. ಅದು ಬಿಟ್ಟು ಅಲ್ಲಿ ಪರಿಶಿಷ್ಟ ಜಾತಿ: ವಗದವರನ್ನು ಕೇರ್ ಮಾಡುವಂತಿಲ್ಲ, ಬಡ ರೈತರ ಪರಿಸ್ಥಿತಿ ನೋಡುವಂತಿಲ್ಲ ನೀವೇನಾದರೂ ಉತ್ತಮವಾದ ಕಾರ್ಯಕ್ರಮವನ್ನು ರೈತರಿಗೋಸ್ಕರ, ಬಡವರಿಗೋಸ್ಕರ ಮತ್ತು ಪರಿಶಿಷ್ಟ ಜಾತಿ: ವರ್ಗದವರಿಗೆ ಹಮ್ಮಿಕ್ಕೊಂಡಿದ್ದರೆ ಅದು ಅವರುಗಳಿಗೆ ವಾಸ್ತವವಾಗಿ ತಲುಪುವಂತಾಗಬೇಕು. ಹಾಗೂ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಟ್ರಾನ್ಸ್‌ಪೋರ್ಟ್ ಮತ್ತು ಕಮ್ಯುನಿಕೇಷನ್ ಕುರಿತು ಹೇಳುವುದಾದರೆ, ಸರ್ಕಾರ ಎಲ್ಲರಿಗೂ ಸಂಚಾರದ ವ್ಯವಸ್ಥೆ ಮಾಡುವುದಲ್ಲದೆ ನವಲತ್ತುಗಳನ್ನೂ ಒದಗಿಸಿಕೊಡುವುದಾಗಿ ಹೇಳಿದೆ. ಸ್ವಾಮಿ, ಇವೊತ್ತು ಹಳ್ಳಿಗಳಿಗೆ ಹೋಗಿ ನೋಡಬೇಕು, ಒಂದೂ ಸಂಚಾರಿ ಬಸ್ಸುಗಳು ಓಡುತ್ತಿಲ್ಲ. ನೂರಕ್ಕೆ ಶೇಕಡ 20 ರಷ್ಟು ಬಸ್ಸುಗಳು ಕಾರ್ಯನಿರ್ವಹಿಸದೇ ನಿಂತುಹೋಗಿದೆ. ಏಕೆಂದರೆ, ಟೈರ್ ಇಲ್ಲ, ಬೋಲ್ಟ್ ಮತ್ತು ನೆಟ್ ಇಲ್ಲ, ಮುಂತಾದ ಹಲವು ಕಾರಣಗಳಿಗಾಗಿ ಬಸ್ಸುಗಳು ಚಲಿಸದೆ ನಿಂತುಹೋಗಿವೆ. ಬಸ್ ಸೌಲಭ್ಯ ಒದಗಿಸಬೇಕೆಂದು ಶಾಸಕರುಗಳು ಮಂತ್ರಿಗಳಿಗೆ ಮತ್ತು ಇಲಾಖೆಗೆ ಪತ್ರಗಳನ್ನು ಕೊಟ್ಟರೂ, ಆ ಮಾರ್ಗವಾಗಿ ಬಸ್ಸುಗಳ ವ್ಯವಸ್ಥೆ ಕಲ್ಪಿಸಿದಲ್ಲಿ ಕಲೆಕ್ಷನ್ ಆಗುವುದಿಲ್ಲವೆನ್ನುತ್ತಾರೆ. ಪ್ರಯಾಣಿಕರಿಗೆ ಕಂಡಕ್ಟರ್ ಟಿಕೆಟ್‌ಗಳನ್ನು ಕೊಡದೆ ಹಣವನ್ನು ಬಾಚಿಕೊಂಡು ಬಿಡುತ್ತಾನೆ. ಹಳ್ಳಿಗಳಲ್ಲಿ ಸಂಚರಿಸುವ ಶೇಕಡ 90 ರಷ್ಟು ಬಸ್ಸುಗಳಲ್ಲಿರುವ ಕಂಡಕ್ಟರುಗಳು ಪ್ರಯಾಣಿಕರಿಗೆ ಟಿಕೇಟ್‌ಗಳನ್ನು ಕೊಡದೆ ಟಿಕೆಟ್ ದರ ಹತ್ತು ರೂಪಾಯಿಗಳಿದ್ದರೆ 6 ರೂಪಾಯಿ 8 ರೂಪಾಯಿಗಳನ್ನು ತೆಗೆದುಕೊಂಡು ಪ್ರಯಾಣಿಕರನ್ನು ಕೂರಿಸುತ್ತಾನೆ, ಅನಂತರ

ಹಣವನ್ನು ಜೇಬಿಗಿಳಿಸಿ ಮನೆಗೆ ಹೋಗುತ್ತಾನೆ. ಭ್ರಷ್ಟಾಚಾರ ಎಲ್ಲಿ ನಿರ್ಮೂಲನವಾಗಿದೆ? ಇವೊತ್ತು ಭ್ರಷ್ಟಾಚಾರ ಇರುವುದಾದರೆ ಅದು ಕಂಡಕ್ಟರ್ ಮನೆಯಲ್ಲಿದೆ, ಡಿಪೋ ಮ್ಯಾನೇಜರ್‌ರವರ ಮನೆಯಲ್ಲಿದೆ ಮತ್ತು ಕೆಎಸ್‌ಆರ್‌ಟಿಸಿ ಜನರಲ್ ಮ್ಯಾನೇಜರ್‌ರವ ಮನೆಯಲ್ಲಿದೆ. ಭ್ರಷ್ಟಾಚಾರ ಇಲ್ಲದೆಯೆಂದು ಹೇಳಿಕೊಳ್ಳುವುದಲ್ಲ, ಭ್ರಷ್ಟಾಚಾರ ಅಲ್ಲಿದೆ. ಆದುದರಿಂದ, ಈ ಸರ್ಕಾರ ಯಶಸ್ವಿ ಸರ್ಕಾರವಾಗಬೇಕಾದರೆ ಇವೊತ್ತು ಸರ್ಕಾರದ ಬಂಡವಾಳವನ್ನು, ಕಡಿಮೆಗೊಳಿಸುವ ನಿಟ್ಟಿನಲ್ಲಿ ಆಡಳಿತ ನಡೆಸಬೇಕೆಂದು ವಿನಂತಿಸುತ್ತಾ, ಹಳ್ಳಿಗಳಿಗೆ ಸಂಚಾರಿ ವ್ಯವಸ್ಥೆ ಮಾಡಿ ಕೊಡುವುದಾಗಿ ತಾವು ಏನು ಹೇಳಿದ್ದೀರಿ, ಹಳ್ಳಿಯ ಮೂಲೆ-ಮೂಲೆಗಳಿಗೆ ಸಂಚಾರಿ ಸೌಲಭ್ಯ ಇಲ್ಲದಿರುವುದರಿಂದ ಅಬಾಲವೃದಧರಾದಿಯಾಗಿ 10-12 ಕಿಲೋಮೀಟರ್‌ಗಳಷ್ಟು ದೂರ ನಡೆಯಬೇಕಾಗಿದೆ. ಆದ ಕಾರಣ, ಹಳ್ಳಿಗಳಿಗೆ ಸಾರಿಗೆ ವ್ಯವಸ್ಥೆಯನ್ನು ಅತ್ಯುತ್ತಮ ರೀತಿಯಲ್ಲಿ ಮಾಡಬೇಕೆಂದು ವಿನಂತಿಸುತ್ತಾ, ಅಭಿವೃದ್ಧಿ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿ ಸರ್ಕಾರ ಏನು ಬಾರಿ ಹಿಂದೆ ಬಿದ್ದಿದೆ, ಅದನ್ನು ಕೂಡಲೇ ಸರಿಪಡಿಸಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಇವೊತ್ತು ರಾಜ್ಯದಲ್ಲಿ ನಡೆಯುತ್ತಿರುವ ದರೋಡೆಗಳು, ಸುಲಿಗೆಗಳು ಮತ್ತು ಕೊಲೆಗಳ ಬಗ್ಗೆ ಪ್ರಸ್ತಾಪಿಸುವುದಾದರೆ, ಕೋಲಾರದ ಕಂಬಾಲಪಲ್ಲಿ, ಗುಲ್ಬರ್ಗ, ರಾಯಚೂರು ಮತ್ತು ಯಾವುದೇ ಊರನ್ನು ಉದಾಹರಣೆಗೆ ತೆಗೆದುಕೊಂಡರೂ ಅಲ್ಲಿ ಕೊಲೆ, ಸುಲಿಗೆ, ಅತ್ಯಾಚಾರಗಳು ಜರುಗುತ್ತಿದ್ದು, ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ವರ್ಗದವರನ್ನು ಹೊಡೆದರು, ಕೊಲೆ ಮಾಡಿದರು ಎನ್ನುವ ಸುದ್ದಿಗಳನ್ನೇ ಕೇಳುತ್ತಿದ್ದೇವೆ ಇದೆಲ್ಲವೂ ಏಕೆ ಬೇಕು? ಗೃಹ ಸಚಿವರಾಗಿರುವ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಹಿಂದೆ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದಾಗ ರಾಜ್ಯದಲ್ಲಿ ಇಂತಹ ಅಹಿತಕರ ಘಟನೆಗಳು ವರದಿಯಾದಾಗ ಸರ್ಕಾರವನ್ನು ಉದ್ದೇಶಿಸಿ, ಘಟನೆಗೆ ಕಾರಣರಾದವರನ್ನು ಸಸ್ಪೆಂಡ್ ಮಾಡಿ, ಡಿಸ್‌ಮಿಸ್ ಮಾಡಿ ಅವರನ್ನು ಕೆಲಸದಿಂದ ತೆಗೆದು ಹಾಕಿ ಎಂದು ಹೇಳುತ್ತಿದ್ದರು. ಅದೇ ರೀತಿ ಇಂದು ರಾಜ್ಯದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳಿಗೆ ಕಾರಣರಾದವರನ್ನೂ ತೆಗೆದುಹಾಕಿ, ಅಂತಹವರನ್ನು ದೂರವಿಡಿ. ಇವೊತ್ತು ಪೊಲೀಸ್ ಇಲಾಖೆಗೆ ಒಳ್ಳೆಯ ಅಧಿಕಾರಿಗಳನ್ನು ನೇಮಿಸಿದ್ದೀರಿ. ಡಿ.ಜಿ.ಯವರನ್ನು ನೇಮಿಸಿರುವುದಕ್ಕೆ ನಾವು ಸ್ವಾಗತಿಸುತ್ತೇವೆ. ಎಸ್.ಪಿ.ಯಾಗಿರುವ ರಾಮಕೃಷ್ಣರಂತಹ ಅಧಿಕಾರಿಗಳನ್ನು ನೇಮಿಸಬೇಕು. ಒಳ್ಳೆಯ ಅಧಿಕಾರಿಗಳಿಗೆ ಬಹುಮಾನ ನೀಡಿ. ಇವೊತ್ತು 42 ಕೊಲೆ ಪ್ರಕರಣಗಳನ್ನು ಪತ್ತೆಂಚ್ಚಿರುವುದಕ್ಕೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ನಾನು ಅಭಿನಂದಿಸುತ್ತೇನೆ. ಬಾಣವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹಿಂದೆ ಜರುಗಿದಂಥ 42 ಕೊಲೆ ಪ್ರಕರಣಗಳನ್ನು ಹೊಸದಾಗಿ ನೇಮಕವಾದ ಸಬ್ ಇನ್ಸ್‌ಪೆಕ್ಟರ್ ಒಬ್ಬರು ಪತ್ತೆಹಚ್ಚಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಓದಿದೆ. ಅವರಿಗೆ ಮೊನ್ನೆ ದಿವಸ ಗೋಲ್ಡ್ ಮೆಡಲ್ ಕೊಟ್ಟಿರುವುದು ಸ್ವಾಗತಾರ್ಹವಾದುದಾಗಿದೆ. ಇಂತಹ ಅಧಿಕಾರಿಗಳನ್ನು ಪ್ರೋತ್ಸಾಹಿಸಬೇಕು. ಆದರೆ, ಹಿಂದಿದ್ದ ಪೊಲೀಸ್ ಅಧಿಕಾರಿಗಳು 42 ಕೊಲೆ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ಮಾಡಿ ಅಪರಾಧಿಗಳು ಸಿಗಲಿಲ್ಲವೆಂದು ಪ್ರಕರಣಗಳನ್ನು ಮುಚ್ಚಿಟ್ಟು ಕೋರ್ಟಿಗೆ 'ಸಿ' ರಿಪೋರ್ಟ್ ಸಲ್ಲಿಸಿದ್ದರಲ್ಲ, ಅಂತಹ ಅಧಿಕಾರಿಗಳನ್ನು ಬರಮಾಡಿಕೊಂಡು, ಅವೊತ್ತು ಕೊಲೆ ಪ್ರಕರಣಗಳನ್ನು ತಮಗೇಕೆ ಪತ್ತೆಂಚ್ಚುವುದಕ್ಕಾಗಲಿಲ್ಲ? ಇವೊತ್ತು ನೇಮಕವಾಗಿರುವ ಸಬ್ ಇನ್ಸ್‌ಪೆಕ್ಟರ್ ಕೊಲೆ ಪ್ರಕರಣಗಳನ್ನು ಹೇಗೆ ಪತ್ತೆ ಹಚ್ಚಿದರು? ಎಂಬುದರ ಬಗ್ಗೆ ಅವರ ಮೇಲೆ ತಾವು ಎನ್‌ಕ್ವೇರಿ ಮಾಡಬೇಕು. ಮತ್ತು ಸಮಾಜಕ್ಕೆ ಅನ್ಯಾಯ, ಅಕ್ರಮವೆಸಗುವಂಥ

ಅಧಿಕಾರಿಗಳ ವಿರುದ್ಧ ಮಾನ್ಯ ಗೃಹ ಸಚಿವರು ಕೂಡಲೇ ಕ್ರಮಕೈಗೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಅದೇ ರೀತಿ ಹಳ್ಳಿಗಳಲ್ಲಿನ ಪೊಲೀಸ್ ವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ, ಒಂದು ತಾಲ್ಲೂಕಿನಲ್ಲಿರುವ ಪೊಲೀಸ್ ಠಾಣೆಯಲ್ಲಿ ಇಪ್ಪತ್ತು ಪೊಲೀಸ್ ಸಿಬ್ಬಂದಿಯಿದ್ದು, ಹಳ್ಳಿಗಳಲ್ಲಿ ರಾತ್ರಿ ಏಳು ಗಂಟೆಯ ಬಳಿಕ ವಿದ್ಯುದ್ದೀಪದ ವ್ಯವಸ್ಥೆ ಇಲ್ಲದಿರುವ ಕಾರಣ ಕಳ್ಳರು ಮನೆಗಳಿಗೆ ನುಗ್ಗಿ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋಗುತ್ತಾರೆ. ಆದಕಾರಣ, ತಾಲ್ಲೂಕಿನಲ್ಲಿರುವ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕು. ಇವೊತ್ತು ತಾವು ಕಾನೂನು ಸುವ್ಯವಸ್ಥೆ ಬಗ್ಗೆ ಹೇಳಿದ್ದು, ತಪ್ಪಿತಸ್ಥರಿಗೆ ಯಾವುದೇ ಮುಲಾಜಿಲ್ಲದೆ ಶಿಕ್ಷೆ ವಿಧಿಸುತ್ತೇವೆಂದು ತಿಳಿಸಿದ್ದೀರಿ. ಈಗ 42 ಕೊಲೆ ಪ್ರಕರಣಗಳನ್ನು ಏನು ಕಂಡುಹಿಡಿದಿದ್ದಾರೆ, ಇದರ ವಿಚಾರಣೆಗೆ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಬೇಕು. ಹೊಸಕೋಟೆಯಲ್ಲಿ ಮೊನ್ನೆ ದಿವಸ ಪೊಲೀಸರು ಡಕಾಯಿತರ ತಂಡವೊಂದನ್ನು ಹಿಡಿದಿದ್ದು, ಅವರನ್ನು ಕೋರ್ಟ್ ಮುಂದೆ ಹಾಜರುಪಡಿಸಿ ನಂತರ ಜೈಲಿಗೆ ಹಾಕಿದ್ದಾರೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವವರು ಹಾರೆ ಕೋಲಿನಿಂದ ಹೊಡೆಯುವುದು, ಅತ್ಯಾಚಾರವೆಸಗುವುದು ಮತ್ತು ಬೆಲೆ ಬಾಳುವ ವಸ್ತುಗಳನ್ನು ಕಿತ್ತುಕೊಂಡು ಹೋಗುತ್ತಾರೆ. ಅಪರಾಧಿಗಳನ್ನು ಜೈಲಿಗೆ ಹಾಕಿದ ಮೇಲೆ, ಅವರು ಪೊಲೀಸ್ ಸಿಬ್ಬಂದಿಯನ್ನು ಉದ್ದೇಶಿಸಿ ರೀ, ಸಬ್ ಇನ್ಸ್‌ಪೆಕ್ಟರೇ, ನನಗೆ ಸರಿಯಾಗಿ ಬಿರಿಯಾನಿ ತಂದುಕೊಡಿ' ಎನ್ನುತ್ತಾರೆ. 'ಯಾಕಯ್ಯಾ? ' ಎಂದು ಪೊಲೀಸ್ ಪ್ರಶ್ನಿಸಿದರೆ 'ಇಲ್ಲದಿದ್ದರೆ, ನಾಳೆ ನಾನು ಆಚೆ ಬಂದರೆ ನಿನ್ನನ್ನು ನೋಡಿಕೊಳ್ಳುತ್ತೇನೆ, ಹುಷಾರ್;' ಎಂದು ಗದರಿಸುತ್ತಾನೆ. ಪರಿಸ್ಥಿತಿ ಈ ಮಟ್ಟಕ್ಕೆ ಹೋಗುವಂಥ ಭಾವನೆ ಬೆಳೆದರೆ ನಾಗರಿಕರ ಗತಿ ಏನು? ಸಾಮಾನ್ಯ ಮನುಷ್ಯರ ಗತಿ ಏನು? ಆದುದರಿಂದ, ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಕಾನೂನು ವ್ಯವಸ್ಥೆಯನ್ನು ಇನ್ನಷ್ಟು ಬಿಗಿಗೊಳಿಸಿ, ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ ಸಮಾಜಘಾತುಕ ಶಕ್ತಿಗಳಿಗೆ ಶಿಕ್ಷೆ ವಿಧಿಸುವ ಮೂಲಕ ಯಾವುದೇ ಬೇಲ್‌ಗೂ ಅವಕಾಶ ಮಾಡಿಕೊಡದಂತೆ ಅಪರಾಧಿಗಳ ಬಗ್ಗೆ ನಿರ್ಧಾಕ್ಷಿಣ್ಯವಾಗಿ ಕ್ರಮ ಕೈಗೊಂಡು ಸಮಾಜದಲ್ಲಿ ಶಾಂತಿ ಕಾಪಾಡುವುದಕ್ಕೆ ಗೃಹ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅನುವು ಮಾಡಿಕೊಡುತ್ತಾರೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇವೊತ್ತು ಎಲ್ಲಾ ಇಲಾಖೆಗಳು ಉತ್ತಮವಾಗಿ ಕೆಲಸ ಮಾಡುತ್ತಿವೆಯೆಂದು ಭಾಷಣದಲ್ಲಿ ಏನು ಹೇಳಿದ್ದಾರೆ, ನಾನು ಕೆಲವು ನ್ಯೂನತೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಅದನ್ನೆಲ್ಲಾ ಸರಿಪಡಿಸಿದರೆ ಸರ್ಕಾರಕ್ಕೆ ಗೌರವ ಸಿಗುತ್ತದೆ, ಇಲ್ಲದಿದ್ದರೆ ಸಿಗುವುದಿಲ್ಲ ಮತ್ತು ಭಾಷಣದ ಪುಸ್ತಕದಲ್ಲಿ ತಿಳಿಸಿರುವುದೆಲ್ಲವೂ ಶೂನ್ಯರೆಂದು ನಾವು ಕರೆಯಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಮುಖೇನ ರಾಜ್ಯಕ್ಕೆ ಉತ್ತಮವಾದ ಸಂದೇಶ ನೀಡಿರುವ ಸರ್ಕಾರವನ್ನು ಅಭಿನಂದಿಸುತ್ತೇನೆ. ವಾಸ್ತವವಾಗಿ ಸರ್ಕಾರ ಹಮ್ಮಿಕ್ಕೊಂಡಿರುವ ಕಾರ್ಯಕ್ರಮದಲ್ಲಿ ಶೇಕಡ 80 ರಷ್ಟು ಕೆಲಸಗಳು ಆಗಿಲ್ಲವೆಂದು ತಿಳಿಸುತ್ತಾ, ಗ್ರಾಮೀಣ ಜನರ, ವಿದ್ಯಾರ್ಥಿಗಳ, ಬಡವರ, ಪರಿಶಿಷ್ಟ ಜಾತಿ ಮತ್ತು ವರ್ಗಗಳ, ನಾಗರಿಕರ ಮತ್ತು ಸರ್ಕಾರಿ ನೌಕರರುಗಳ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಏನು ಹೇಳಿದ್ದೀರಿ, ಹಂತ ಹಂತವಾಗಿ ಪ್ರಾಮಾಣಿಕವಾಗಿ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಿ ಯಶಸ್ಸು ಪಡೆಯಬೇಕಾಗುತ್ತದೆ. ಈ ನಿಟ್ಟಿನಲ್ಲಿ ತಾವುಗಳೆಲ್ಲರೂ ಉತ್ತಮ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರವೇನು ವಿಚಾರಗಳನ್ನು ಹೇಳಿದೆ ಅದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು. ಕೆಲವು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಅನೇಕ

ತಪ್ಪುಗಳನ್ನು ಮಾಡಿದ್ದಾರೆ. ಅವರ ಬಗ್ಗೆ ಇದುವರೆಗೂ ಸಹ ವಿಚಾರಣೆ ಮಾಡಿಲ್ಲ. ಅವರು ಬರೆದು ಸಹಿ ಮಾಡಿಕೊಟ್ಟರೆ ಇವರು ಕಣ್ಣುಮುಚ್ಚಿಕೊಂಡು ಸಹಿ ಮಾಡಿಬಿಡುತ್ತಾರೆ. ಏಕೆಂದರೆ ಓದಲು ಬರುವುದಿಲ್ಲ. ಅವರುಗಳು ಮಾಡಿದ್ದೇ ಆ್ಯಕ್ಟ್ ಕಮಿಟ್‌ಮೆಂಟ್ ಆದಮೇಲೆ, ಅವತ್ತು ತಾವು ಮಾಡಿದ್ದ ಸಹಿ ತಪ್ಪಾಯಿತು ಎಂದರೆ ಅದರ ಬಗ್ಗೆ ತಿಳಿಸಬೇಡ ಯಾರಿಗು ಗೊತ್ತಾಗುವುದಿಲ್ಲವೆಂದು ಹೇಳುವ ಮಟ್ಟಕ್ಕೆ ಹೋಗಿದೆ. ದಯಮಾಡಿ ಈ ಪದ್ಧತಿ ಹೋಗಬೇಕು ಎಲ್ಲಾ ಮಂತ್ರಿಗಳು ಅದನ್ನು ನನ್ನ ಮುಂದೆ ಓದಿ ಎಂದು ಅಧಿಕಾರಿಗಳಿಗೆ ಹೇಳಿ ಅವರು ಓದಿದಮೇಲೆ ಅವರ ಬಗ್ಗೆ ಪರಿಶೀಲನೆ ಮಾಡಿ ಕಾನೂನಿನ ರೀತಿ ಇದ್ದರೆ ಮಾತ್ರ ಸಹಿ ಮಾಡುವ ವ್ಯವಸ್ಥೆ ಬರಬೇಕು. ಸರ್ಕಾರಿ ಕಛೇರಿಯನ್ನು ಕಾಂಗ್ರೆಸ್ ಕಛೇರಿಯಾಗಿ ಮಾಡಿಕೊಂಡಿದ್ದಾರೆಂದು ಅನೇಕರು ಹೇಳುತ್ತಾರೆ. ಬಿ. ಡಬ್ಲ್ಯೂ.ಎಸ್.ಎಸ್. ನಲ್ಲಿ ಅಧಿಕಾರಿಯಾಗಿದ್ದ ಗೋವಿಂದರಾಜುರವರು ರಾಜೀನಾಮೆ ಕೊಟ್ಟು ಕಾಂಗ್ರೆಸ್ ಪಕ್ಷದ ವತಿಯಿಂದ ವಿಧಾನಸಭಾ ಚುನಾವಣೆಗೆ ನಿಂತುಕೊಂಡರು. ಅಂಥ ಸರ್ಕಾರ, ಇಂಥ ಸರ್ಕಾರ, ಆ ಜನ ಈ ಜನ ಎಂದು ಎಲ್ಲರನ್ನು ಬೈದರು. ಜನರು ಯೋಚನೆ ಮಾಡಿದರು, ಇವರು ಎಲ್ಲರನ್ನು ಬೈದುಕೊಂಡು ಬಂದಿರುವ ಅಧಿಕಾರಿ, ಇವನಿಗೆ ಹೇಗೆ ಓಟು ಕೊಡುವುದು ಎಂದು. ಚುನಾವಣೆಯಲ್ಲಿ ಆ ವ್ಯಕ್ತಿ ಸೋತು ಮನೆಗೆ ಬಂದ. ಅನಂತರ ಇಂದು ಮನವಿಯನ್ನು ಸಲ್ಲಿಸಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿದರು. ಆ ಅರ್ಜಿಯನ್ನು ತೆಗೆದುಕೊಂಡು ಮತ್ತೆ ಪರಿಶೀಲನೆ ಮಾಡಿ ಒಂದು ಸಭೆ ಕರೆದು ಮನವಿಯ ದೃಷ್ಟಿಯಿಂದ ಇವರನ್ನು ಪುನರ್ನಿಯೋಜಿಸಲಾಗಿದೆಯೆಂದು ಆರ್ಡರ್ ಮಾಡಿದರು ಇದೇನು ಸ್ವಾಮಿ? ಕೆಲವು ಅಧಿಕಾರಿಗಳಿಗಾಗಿ ಸರ್ಕಾರ ಇದೆಯೇ? ಉತ್ತಮವಾದ ಅಧಿಕಾರಿಗಳ ಗತಿ ಏನಾಗಬೇಕು? ಉತ್ತಮವಾಗಿ ಕೆಲಸ ಮಾಡಿದರೆ ಏನು ಗೌರವ ಸಿಗುತ್ತದೆ? ಇವರು ರಾಜೀನಾಮೆ ಕೊಟ್ಟು ಬಂದು ಅನಂತರ ಮತ್ತೆ ಅಧಿಕಾರಕ್ಕೆ ಹೋದರೆ ಸರ್ಕಾರದಿಂದ ಜನರಿಗೆ ಹೇಗೆ ರಕ್ಷಣೆ ಸಿಗುತ್ತದೆ? ಇನ್ನು ಅನೇಕ ಜನರು ಅನೇಕ ತಪ್ಪು ಮಾಡಿದರು. ಅವರುಗಳು ಲೂಟಿ ಮಾಡಿದ್ದು, ಬ್ಯಾಂಕ್‌ನಲ್ಲಿ ಇಟ್ಟಿದ್ದು, ಅಪಹರಣ ಮಾಡಿದ್ದು ಎಲ್ಲ ಮಾಹಿತಿ ಬಂತು. ಕೆ.ಎಲ್. ನೇಗಿಯವರು ಅದರಲ್ಲಿ ಒಬ್ಬರು. ವರು ಧೀಮಂತರು. ಅಬ್ಕಾರಿ ಹಗರಣದಲ್ಲಿ ಒಬ್ಬರು ಐ.ಎ.ಎಸ್. ಅಧಿಕಾರಿಗಳು. ಅದರಲ್ಲಿ ಶಾಸಕರೊಬ್ಬರು ಇದ್ದರು ಎಂದು ವಿಚಾರ ಇದೆ. ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ. ನಾಗಲಾಂಬಿಕೆ ದೇವಿ ಇವರದೊಂದು ಪ್ರಕರಣ. ಕೆ.ಹೆಚ್.ಬಿ. ಯ ಎರಡೂವರೆ ಕೋಟಿ ರೂಪಾಯಿಗಳ ಹಗರಣ ಯಾವುದೋ ಫೈನಾನ್ಸ್ ಸಂಸ್ಥೆಗೆ ಫೈನಾನ್ಸ್ ಮಾಡಿದಂತೆ ಮಾಡಿ ಅಲ್ಲಿ ಮೋಸವಾದ ಮೇಲೆ ಯಾರೋ ಅಧಿಕಾರಿಯ ಮೇಲೆ ಅದನ್ನು ಹಾಕಿ ಅವರನ್ನು ಅಮಾನತ್ತು ಮಾಡಿದ ಅನ್ಯಾಯ ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ಅಂಥ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಂಡರೆ ಸರ್ಕಾರಕ್ಕೆ ಹಣ ಉಳಿದುಕೊಳ್ಳುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಉತ್ತಮವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ರಿವಾರ್ಡ್‌ನ್ನು ಕೊಟ್ಟು ತಪ್ಪು ಮಾಡಿದ ಧಿಕಾರಿಗಳಿಗೆ ಶಿಕ್ಷೆ ಕೊಡುವ ಮೂಲಕ ಕೆಲಸ ಮಾಡಿದರೆ ಜನರಿಗೆ ನಂಬಿಕೆ ಬರುತ್ತದೆ. ಈ ರೀತಿ ಮಾಡಿದರೆ ಐ.ಎ.ಎಸ್. ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಹಿಡಿತ ಇದೆ, ಸರ್ಕಾರಿ ಕಾರ್ಯಕ್ರಮವನ್ನು ಅಧಿಕಾರಿಗಳು ಯಶಸ್ವಿಯಾಗಿ ಮಾಡಿಕೊಡುತ್ತಾರೆ ಎಂದು ಜನರಲ್ಲಿ ನಂಬಿಕೆ ಬರುತ್ತದೆ. ಇಲ್ಲದಿದ್ದರೆ ಏನೋ ಅಧಿಕಾರಕ್ಕೆ ಬಂದರು ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ತೆಗೆದುಕೊಂಡು ಹೋದರು ಎಂಬ ಕೆಟ್ಟ ಭಾವನೆ ಬರುತ್ತದೆ.

ಇದು ಉತ್ತಮವಾದ ಸರ್ಕಾರ. ಮಾನ್ಯ ಕೃಷ್ಣರವರು ಉತ್ತಮವಾಗಿ ಕೆಲಸ ಮಾಡಲು ಏನೇ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಕಳೆದ ಆರು ತಿಂಗಳಿನಲ್ಲಿ ಆಗಿರುವ ಸಾಧನೆ ಕೇವಲ ಇಪ್ಪತ್ತು ಪರ್‌ಸೆಂಟ್ ಉಳಿದುದೆಲ್ಲವು ಸತ್ಯಕ್ಕೆ ದೂರವಾದ ವಿಚಾರ. ಇದರ ಬಗ್ಗೆ ಸರ್ಕಾರ ಗಮನಹರಿಸಿ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಂಡು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಮಹಂತೇಶ್ ಕೌಜಲಗಿ (ಬೈಲಹೊಂಗಲ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಮೊದಲು ಅಭಿನಂದಿಸುತ್ತೇನೆ. ನಮ್ಮ ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಸುಮಾರು ಆರು ತಿಂಗಳುಗಳಾಯಿತು. ಯಾವುದೇ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದ ಮೇಲೆ ಜನರು ಅದರಿಂದ ಹೆಚ್ಚಿನ ಸಾಧನೆಯನ್ನು ನಿರೀಕ್ಷಿಸುವುದು ಸಹಜ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎರಡನೆ ರಾಜ್ಯಪಾಲರ ಭಾಷಣವನ್ನು ಇಲ್ಲಿ ನೋಡುತ್ತಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಯಾವ ರೀತಿಯಾದ ಭರವಸೆಯನ್ನು, ಚುನಾವಣಾ ಪ್ರಣಾಳಿಕೆಯನ್ನು ಸಿದ್ಧಪಡಿಸಿತ್ತೋ ಅದರ ಯಾವುದೇ ಒಂದು ವಿಚಾರವನ್ನು ಈ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಿಲ್ಲ. ಆದ್ದರಿಂದ ಈ ಸರ್ಕಾರ ಕೇವಲ ಮಾತನಾಡುವ ಸರ್ಕಾರ ಯಾವುದೇ ರೀತಿಯ ಕೆಲಸವನ್ನು ಮಾಡದಿರುವ ಸರ್ಕಾರವೆಂದು ಹೇಳಬೇಕಾಗುತ್ತದೆ. ರಾಜ್ಯಪಾಲರ ಭಾಷಣವನ್ನು ನೋಡಿದಾಗ ಇದರಲ್ಲಿ ಯಾವುದೇ ಹೊಸ ವಿಚಾರ, ಯೋಜನೆಗಳು ಕಂಡುಬರುವುದಿಲ್ಲ. ನಾನು ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೆ ಕೆಲವು ವಿಚಾರದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಬಯಸುತ್ತೇನೆ. ಮೊನ್ನೆ ನಡೆದ ಗ್ರಾಮಪಂಚಾಯಿತಿಯ ಚುನಾವಣೆಯ ನಂತರ ರಾಜ್ಯದಲ್ಲಿ ಆದ ಗಲಭೆಗಳ ಬಗ್ಗೆ ಅನೇಕ ಸದಸ್ಯರು ಈಗಾಗಲೆ ಮಾತನಾಡಿರುವುದರಿಂದ ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ನಿಯಮದ ಅನುಸಾರ ಗ್ರಾಮಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು ಒಂದೇ ಕೋಮಿನವರಿಗೆ ಇರಬಾರದು ಎಂದು ಇದ್ದರು ಸಹ ರಾಜ್ಯದ ಅನೇಕ ಕಡೆ ಒಂದೇ ಕೋಮಿನವರಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯನ್ನು ಕೊಟ್ಟಿರುವುದು ನಮಗೆ ಕಂಡುಬರುತ್ತಿದೆ. ಇದರಿಂದ ಬೇರೆ ಕೋಮಿನವರಿಗೆ ಮೋಸ ಮಾಡದಂತೆ ಆಗುವುದಿಲ್ಲವೆ ಎಂದು ಕೇಳಬಯಸುತ್ತೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ತಮ್ಮ ಇಲಾಖೆಯನ್ನು ವಹಿಸಿಕೊಂಡಮೇಲೆ ಪ್ರತಿಯೊಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ತಿಳಿಸಿದ್ದರು. ಬಹುಶಃ ಇಲ್ಲಿ ಇದ್ದಂಥ ಎಲ್ಲಾ ಶಾಸಕರು ಇದರಿಂದ ಸಂತೋಷವನ್ನು ಪಟ್ಟಿದ್ದರು. ಅದರಲ್ಲಿ ನಾನು ಒಬ್ಬನಾಗಿದ್ದೆ. ಆದರೆ ನಮ್ಮ ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಇದುವರೆಗೆ ಯಾವುದೇ ಕಾಮಗಾರಿಯನ್ನು ಪ್ರಾರಂಭ ಮಾಡಿಲ್ಲ. ಇವತ್ತು ಪತ್ರಿಕೆಯಲ್ಲಿ ಟೆಂಡರ್ ಕರೆದಿದ್ದರೆ. ಆದರೆ ಅದು ಕೇವಲ 43 ಲಕ್ಷ ರೂಪಾಯಿಗಳಿಗೆ ಮಾತ್ರ ಟೆಂಡರ್‌ನ್ನು ಕರೆದಿದ್ದಾರೆ. ಮಂತ್ರಿಗಳು ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದರು. ಬೆಳಗಾಂ ಜಿಲ್ಲೆಯಲ್ಲಿ ಹದಿನೆಂಟು ಶಾಸಕರು, ಒಂಭತ್ತು ತಾಲ್ಲೂಕುಗಳು ಎಂದರೆ ಒಬ್ಬ ಶಾಸಕರಿಗೆ 20-21 ಲಕ್ಷ ರೂಪಾಯಿಗಳು

ಬರುತ್ತದೆ. ಆದರೆ ಇವರು ಒಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಇವರು ಜನರಿಗೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ ಎಂದು ಹೇಳಬಯಸುತ್ತೇನೆ. ಮಾನ್ಯ ಸೋಮಶೇಖರ್‌ರವರು ಮೊನ್ನೆ ಮಾತನಾಡುತ್ತಾ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅದೇನೆಂದರೆ, ರಾಜ್ಯ ಸರ್ಕಾರದಿಂದ ಕುಡಿಯುವ ನೀರಿನ ಯಾವುದೇ ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಲ್ಲವೆಂದು. ಅದು ಸತ್ಯವಾದ ವಿಚಾರ. ರಾಜೀವ್‌ಗಾಂಧಿ ಟೆಕ್ನಾಲಜಿ ಮಿಷನ್‌ನ ಯೋಜನೆಯು ಅಡಿಯಲ್ಲಿ ನನ್ನ ಕ್ಷೇತ್ರಕ್ಕೆ 1998 ರಲ್ಲಿ ಹತ್ತು ಕೋಟಿ ರೂಪಾಯಿಗಳು ಮಂಜೂರಾಗಿತ್ತು. ಅದಕ್ಕೆ ಇಆಡಳಿತಾತ್ಮಕ ಮಂಜೂರಾತಿಯನ್ನು ಈಗಾಗಲೆ ಕೊಡಲಾಗಿದೆ. ಮತ್ತು ಕೇಂದ್ರ ಸರ್ಕಾರದವರು ಅದಕ್ಕೆ ಬೇಕಾದಂಥ 3 ಕೋಟಿ 40 ಲಕ್ಷ ರೂಪಾಯಿಗಳನ್ನು ಈಗಾಗಲೆ ಬೆಳಗಾಂ ಜಿಲ್ಲಾಪಂಚಾಯಿತಿಯಲ್ಲಿ ಇಟ್ಟಿದ್ದಾರೆ. ಆದರೆ ಇದುವರೆಗೆ ಆ ಕೆಲಸವನ್ನು ಪ್ರಾರಂಭ ಮಾಡಲು ಸಾಧ್ಯವಾಗಿಲ್ಲ. ಮಂಜೂರಾದಂಥ ಕೆಲಸವನ್ನು ಪ್ರಾರಂಭ ಮಾಡಲು ಜಸರ್ಕಾರಕ್ಕೆ ಸಾಧ್ಯವಾಗಿಲ್ಲ. ಹೀಗಿರುವಾಗ ಹೊಸದಾದ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಇವರು ಹೇಗೆ ಕಳಿಸಿಕೊಡುತ್ತಾರೆ ಎಂದು ಕೇಳಬಯಸುತ್ತೇನೆ. ರಾಜ್ಯ ಸರ್ಕಾರದವರು ಕೂಡಲೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ಸುಮಾರು ಹತ್ತೊಂಭತ್ತು ಹಳ್ಳಿಗಳಿಗೆ ಇದರಿಂದ ಅನುಕೂಲವಾಗುತ್ತದೆ. ಬೈಲಹೊಂಗಲ ಮಾತ್ರವಲ್ಲ ಸವದತ್ತಿ ಕ್ಷೇತ್ರದಲ್ಲಿ ಸಹ ಸುಮಾರು ಆರೂವರೆ ಕೋಟಿ ರೂಪಾಯಿ ಯೋಜನೆ ಇದರ ಅಡಿಯಲ್ಲಿಯೇ ಮಂಜೂರಾಗಿದೆ. ಈ ಯೋಜನೆಯ ಮಂಜೂರಾತಿ ಪಡೆಯಲು ನಾವುಗಳೆ ಎರಡು ಮೂರು ಸಲ ದೆಹಲಿಗೆ ಹೋಗಿಬಂದಿದ್ದೇವೆ. ಅಲ್ಲಿ ನಾವು ಪಟ್ಟಂಥ ಕಷ್ಟ ನಮಗೇ ಗೊತ್ತು. ಆದರು ಸಹ ಈ ಸರ್ಕಾರದವರು ಈ ಕಾಮಗಾರಿಯನ್ನು ಇದುವರೆಗೆ ಪ್ರಾರಂಭ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣ ಮಾಡುತ್ತಾ ಶಾಸಕರ ನಿಧಿಯನ್ನು ಪ್ರಾರಂಭ ಮಾಡುವ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡುವುದಾಗಿ ಹೇಳಿದ್ದರು. ನಾವೆಲ್ಲರೂ ಅದನ್ನು ಸಂತೋಷದಿಂದ ಸ್ವಾಗತಿಸುತ್ತೇವೆ. ಇದರ ಜೊತೆಗೆ ಖಾಲಿ ಇರುವ ಸರ್ಕಾರಿ ಹುದ್ದೆಗಳಲ್ಲಿ 80 ಪರ್‌ಸೆಂಟ್ ಹುದ್ದೆಗಳನ್ನು ಕಡಿತ ಮಾಡುವುದಾಗಿ ಹೇಳಿದರು. ನಮ್ಮ ಮುಂದೆ ಮಲೆನಾಡು ಅಭಿವೃದ್ಧಿ ನಿಗಮ, ಬಯಲು ಸೀಮೆ ಅಭಿವೃದ್ಧಿ ನಿಗಮ, ಹೆಚ್.ಕೆ.ಡಿ.ಬಿ. ಈ ರೀತಿ ಅನೇಕ ನಿಗಮಗಳನ್ನು ನಾವು ನೋಡುತ್ತಿದ್ದೇವೆ. ಆದರೆ ಸುಮಾರು ಎರಡು ಮೂರು ವರ್ಷಗಳಿಂದ ಈ ನಿಗಮಗಳಿಗೆ ಹಣವನ್ನೇ ಬಿಡುಗಡೆ ಮಾಡಿಲ್ಲ. ಆ ನಿಗಮಗಳನ್ನು ಮುಚ್ಚಿ ಶಾಸಕರ ನಿಧಿಯನ್ನು ಮಾಡಿದರೆ ಅಧಿಕಾರಿ ವರ್ಗವನ್ನು ಕಡಿಮೆ ಮಾಡಿದಂತೆ ಆಗುತ್ತದೆ, ಕೆಲಸಗಳನ್ನು ಬೇಗನೆ ಪ್ರಾರಂಭ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

5.50 ಪಿ.ಎಂ

ಆದರೆ ಸುಮಾರು 2-3 ವರ್ಷಗಳಿಂದ ಈ ನಿಗಮಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ.ಆದರಿಂದ ಈ ನಿಗಮಗಳನ್ನು ಮುಚ್ಚಿ ಅವುಗಳ ಬದಲಾಗಿ ಹಣವನ್ನು ಶಾಸಕರ ನಿಧಿಗೆ ಕೊಟ್ಟರೆ ಒಳ್ಳೆಯದಾಗುತ್ತದೆ ಮತ್ತು ಅಧಿಕಾರಿ ವರ್ಗದವರನ್ನೂ ಕೂಡಾ ಕಡಿಮೆ ಮಾಡಿದಂತಾಗುತ್ತದೆ. ಇದರ ಜೊತೆಗೆ ಕೆಲಸವನ್ನೂ ಕೂಡ ಬೇಗನೇ ಪ್ರಾರಂಭ ಮಾಡಲೂ ಸಹಿತ ಅನೂಕೂಲ ಮಾಡಿದಂತಾಗುತ್ತದೆ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ಮಾಡುತ್ತಾರೆಯೇ?

ಎಂದು ನಾನಿಲ್ಲಿ ಕೇಳ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಉನ್ನತ ಶಿಕ್ಷಣಕ್ಕಾಗಿ ನೀಡಲಾಗುತ್ತಿರುವ ಅನುದಾನದಲ್ಲಿ ಶೇಕಡ 15ರಷ್ಟು ಕಡಿತ ಗೊಳಿಸಿ, ಆ ಹಣವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಉಪಯೋಗಿಸಲಾಗುವುದು ಎಂಬ ಮಾತನ್ನು ಹೇಳಿದ್ದಾರೆ. ಆದರೆ ಈ ಆಯವ್ಯಯದಲ್ಲಿ ಯಾವುದೇ ರೀತಿಯಾದಂತಹ ಪ್ರಾಥಮಿಕ ಶಾಲೆಗಳನ್ನಾಗಲೀ, ಪ್ರೌಢ ಶಾಲೆಗಳನ್ನಾಗಲೀ ಅಥವಾ ಜ್ಯೂನಿಯರ್ ಕಾಲೇಜುಗಳನ್ನಾಗಲೀ ಹೊಸದಾಗಿ ತೆರೆಯುವ ಬಗ್ಗೆ ಪ್ರಸ್ತಾಪನೆಯನ್ನು ಮಾಡಿಲ್ಲ. ಯಾವ ರೀತಿಯಾಗಿ ಈ ಹಣವನ್ನು ವಿನಿಯೋಗಿಸುತ್ತೇನೆ ಎಂಬ ಬಗ್ಗೆ ಸರ್ಕಾರ ಪ್ರಸ್ತಾಪ ಮಾಡಿಲ್ಲ. "ಬಾಲನೊಬ್ಬ ಕಲಿತರೆ ಅವನೊಬ್ಬ ಕಲಿತಂತೆ. ಬಾಲೆಯೊಬ್ಬಳು ಕಲಿತರೆ ಕುಟುಂಬವೆ ಕಲಿತಂತೆ " ಎಂಬ ಮಾತನ್ನು ಆಯವ್ಯಯ ಭಾಷಣದಲ್ಲಿ ಹೇಳಲಾಗಿದೆ. ಸರ್ಕಾರ ಹೊಸ ಪ್ರೌಢ ಶಿಕ್ಷಣ ಶಾಲೆಗಳನ್ನು ಬಾಲಕಿಯರಿಗಾದರೂ ಪ್ರಾರಂಭ ಮಾಡಬಹುದಾಗಿತ್ತು. ಆ ರೀತಿಯಾಗಿ ಅವರಿಗೆ ಹಣವನ್ನು ಕೊಡಲು ಉದ್ದೇಶಿಸಿದೆ ಎಂಬುದು ಇದರಿಂದ ತಿಳಿದು ಬರುತ್ತದೆ. ರಾಜ್ಯಾದ್ಯಂತ ಅಪೂರ್ಣಗೊಂಡಿರುವ 11 ಸಾವಿರ ಶಾಲಾ ಕೊಠಡಿಗಳನ್ನು ಪೂರ್ಣಗೊಳಿಸಲಾಗುವುದು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಒಂದು ಶಾಲಾ ಕೊಠಡಿಯನ್ನು ಕಟ್ಟಲು ಈಗ ಜಿಲ್ಲಾ ಪಂಚಾಯಿತಿಯವರು ಕೇವಲ 90 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಆದರೆ ನಮ್ಮ ಕಡೆಯಲ್ಲಿ ಕರಿಮಣ್ಣು ಇರುವುದರಿಂದ ಕೇವಲ 90 ಸಾವಿರ ರೂಪಾಯಿಗಳಿಂದ ಒಳ್ಳೆಯ ಗುಣಮಟ್ಟದ ಶಾಲಾ ಕೊಠಡಿಗಳ ನಿರ್ಮಾಣ ಸಾಧ್ಯವಾಗುವುದಿಲ್ಲ. ಆದ್ದರಿಂದ ಹಾಲಿ ಪ್ರತಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ನೀಡುತ್ತಿರುವ 90 ಸಾವಿರ ರೂಪಾಯಿಗಳ ಮೊತ್ತವನ್ನು ಆ ಭಾಗಕ್ಕೆ ಅನ್ವಯಿಸುವಂತೆ ಹೆಚ್ಚಿಗೆ ಮಾಡಿದರೆ ಬಹಳ ಅನುಕೂಲವಾಗುತ್ತದೆ ಎಂಬುದು ನನ್ನ ಅನಿಸಿಕೆಯಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತದೆ ಎಂದು ಹೇಳಿದ್ದಾರೆ. ಇದು ಅತ್ಯಂತ ಸಂತೋಷವಾದಂತಹ ವಿಚಾರ. ಈ ರಾಜ್ಯದಲ್ಲಿ ನೀರಾವರಿ ಎಂದ ಕೂಡಲೇ ಎಲ್ಲರಿಗೂ ಕೃಷ್ಣ ಮತ್ತು ಕಾವೇರಿ ನದಿಗಳು ಮಾತ್ರ ನೆನಪಿಗೆ ಬರುತ್ತದೆ. ಬಹುಶಃ ಉಳಿದೆಲ್ಲಾ ನದಿಗಳನ್ನು ಎಲ್ಲರೂ ಮರೆತ ಹಾಗೆ ಕಾಣುತ್ತದೆ. ನಮ್ಮ ಜಿಲ್ಲೆಯಲ್ಲಿ ನೀರಾವರಿಗಾಗಿ ಮಲಪ್ರಭಾ ನದಿಗೆ ಡ್ಯಾಮ್ ಒಂದನ್ನು ಕಟ್ಟಲಾಯಿತು. ಆದರೆ ಯಾವೊಂದು ಉದ್ದೇಶಕ್ಕಾಗಿ ಅದನ್ನು ನಿರ್ಮಿಸಲಾಗಿತ್ತೋ ಆ ಉದ್ದೇಶ ಸಂಪೂರ್ಣವಾಗಿ ಇಂದು ವಿಫಲವಾಗಿದೆ. ಏಕೆಂದರೆ ಇತ್ತಿಚೆಗೆ ನದಿ ಸಂಪೂರ್ಣವಾಗಿ ಬರಡಾಗುತ್ತಿದೆ. ಅನೇಕ ಸರ್ಕಾರಗಳು ಮಲಪ್ರಭಾ ನದಿಗೆ ಮಹದಾಯಿ ನದಿಯನ್ನು ಜೋಡಣೆ ಮಾಡುವುದಾಗಿ ಹೇಳಿಕೊಂಡು ಬಂದಿವೆ. ಮಾನ್ಯ ನೀರಾವರಿ ಸಚಿವರು ಆ ಭಾಗಕ್ಕೆ ಬಂದಾಗ ನಾವು ಯಾವ ರೀತಿಯಲ್ಲಾದರೂ ಸರಿ ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸುತ್ತೇವೆ ಎಂದು ಹೇಳಿದ್ದರು. ಅಲ್ಲಿಯ ಜನರು ಬಹುಶಃ ಈಗಾಗಲೇ ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸಲಾಗಿದೆ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಆ ರೀತಿಯಲ್ಲಿ ಮಾನ್ಯ ಸಚಿವರು ಭರವಸೆ ನೀಡಿದ್ದರು. ಆದರೆ ಈ ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಸರ್ಕಾರ ಯಾವುದೇ ಪ್ರಸ್ತಾಪನೆಯನ್ನು ಮಾಡಿಲ್ಲ. ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸಿದಲ್ಲಿ ಮಾತ್ರ ಮಲಪ್ರಭಾ ನೀರಾವರಿ ಯೋಜನೆ ಜನತೆಗೆ

ಉಪಯೋಗವಾಗುತ್ತದೆ. ಇಲ್ಲದಿದ್ದರೆ ಮಲಪ್ರಭಾ ನೀರಾವರಿ ಯೋಜನೆ ಕೇವಲ ಹುಬ್ಬಳ್ಳಿ, ಧಾರವಾಡ, ಸವದತ್ತಿ ಮತ್ತು ಬೈಲಹೊಂಗಲ ನಗರಗಳಿಗೆ ಕುಡಿಯುವ ನೀರು ಒದಗಿಸಲಿಕ್ಕೆ ಮಾತ್ರ ಉಪಯೋಗವಾಗುತ್ತದೆ. ಬಹುಶಃ ಇನ್ನು ಕೆಲವು ದಿವಸಗಳಲ್ಲಿ ಇದೇ ರೀತಿಯಾಗಿ ಬಿಟ್ಟರೆ ಕುಡಿಯುವ ನೀರನ್ನು ಒದಗಿಸುವುದಕ್ಕೂ ಕೂಡ ತೊಂದರೆಯಾಗುತ್ತದೆ. ಆದಷ್ಟು ಬೇಗ ರಾಜ್ಯ ಸರ್ಕಾರ ಗೋವಾ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸುವ ಕಾರ್ಯವನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ. ಅದೂ ಅಲ್ಲದೇ ಮಲಪ್ರಭಾ ನದಿಗೆ ಡ್ಯಾಮ್ ಅನ್ನು ಕಟ್ಟುವಾಗ ಆ ಭಾಗದ ಜನರಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರಾವರಿಗೆ ಸೌಲಭ್ಯಗಳನ್ನು ಒದಗಿಸಿಕೊಡುವುದಾಗಿ ಸರ್ಕಾರ ಲಿಖಿತ ರೂಪದಲ್ಲಿ ಭರವಸೆ ನೀಡಿತ್ತು. ಆದರೆ ಇದುವರೆಗೂ ಸಹಿತ ಅಲ್ಲಿ ಯಾವುದೇ ರೀತಿಯಾದಂತಹ ಏಕ ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡಿಲ್ಲ. ಹಿಂದಿನ ಸರ್ಕಾರ ನನ್ನ ತಾಲ್ಲೂಕಿನ ಮಲ್ಲೂರು, ಮಾಟೋಳಿ ಮತ್ತು ವಕ್ಕುಂಡ ಏತ ನೀರಾವರಿ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಟೆಂಡರ್ ಕರೆದು ಏಜೆನ್ಸಿಯನ್ನೂ ಸಹಾ ಫಿಕ್ಸ್ ಮಾಡಿತ್ತು. ಆದರೆ ಕಳೆದ ಎಂಟು ತಿಂಗಳಿನಿಂದ ಅಲ್ಲಿ ಯಾವೊಂದು ಕೆಲಸವನ್ನೂ ಕೂಡ ಪ್ರಾರಂಭ ಮಾಡಲಾಗಿಲ್ಲ. ಸರ್ಕಾರ ಬೇಗನೇ ಕಾರ್ಯಾರಂಭ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇನ್ನು ವೈದ್ಯಕೀಯ ಇಲಾಖೆ ಬಗ್ಗೆ ಹೇಳುವುದಾದರೆ, ನಾವು ಇವತ್ತು ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಡಾಕ್ಟರ್‌ಗಳಿಲ್ಲದೇ ಇರುವುದನ್ನು ನೋಡುತ್ತಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಾಗ ನಾವೆಲ್ಲರೂ ಸೇರಿಕೊಂಡು ಅವರಿಗೆ ಈ ಬಗ್ಗೆ ಹೇಳಿದ್ದೆವು. ಈಗಾಗಲೇ ಸರ್ಕಾರ ಕಾಂಟ್ರಾಕ್ಟ್ ಬೇಸಿಸ್ ಮೇಲೆ ವೈದ್ಯರನ್ನು ಗ್ರಾಮಗಳಲ್ಲಿ ನೇಮಕಾತಿ ಮಾಡುತ್ತಿದೆ. ಆದರೆ ತಾಲ್ಲೂಕು ಮಟ್ಟದಲ್ಲಿ ಅಂತಹ ನೇಮಕಾತಿ ಮಾಡುತ್ತಿಲ್ಲ. ಆದುದರಿಂದ ಸರ್ಕಾರದವರು ತಾಲ್ಲೂಕು ಮಟ್ಟದಲ್ಲೂ ಸಹಿತ ಕಾಂಟ್ರಾಕ್ಟ ಬೇಸಿಸ್ ಮೇಲೆ ವೈದ್ಯರುಗಳನ್ನು ನೇಮಕಾತಿ ಮಾಡುತ್ತಿದೆ.ಆದರೆ ತಾಲ್ಲೂಕು ಮಟ್ಟದಲ್ಲಿ ಅಂತಹ ನೇಮಕಾತಿ ಮಾಡುತ್ತಿಲ್ಲ. ಆದುದರಿಂದ ಸರ್ಕಾರದವರು ತಾಲ್ಲೂಕು ಮಟ್ಟದಲ್ಲೂ ಸಹಿತ ಕಾಂಟ್ರಾಕ್ಟ್ ಬೇಸಿಸ್ ಮೇಲೆ ವೈದ್ಯರುಗಳನ್ನು ನೇಮಕಾತಿ ಮಾಡಿಕೊಳ್ಳಬೇಕು. ಇದರಿಂದ ಅಲ್ಲಿಯ ಜನರಿಗೆ ಸಹಿತ ಅನುಕೂಲವಾಗುತ್ತದೆ ಎಂಬುದು ನನ್ನ ಅನಿಸಿಕೆಯಯಾಗಿದೆ. ಬಹುಶಃ ಈಗ ತಾಲ್ಲೂಕು ಮಟ್ಟದಲ್ಲಿ ಎಲ್ಲಿಯೂ ಡೆಂಟಲ್ ಡಾಕ್ಟರ್‌ಗಳು ಇಲ್ಲವೇ ಇಲ್ಲ. ಈಗಾಗಲೇ ಸುಮಾರು 2-3 ವರ್ಷಗಳ ಹಿಂದೆ ಸರ್ಕಾರವು ಪ್ರತಿಯೊಂದು ತಾಲ್ಲೂಕಿನಲ್ಲಿ 3-4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆಗತ್ಯ ವೈದ್ಯಕೀಯ ಸಲಕರಣೆಗಳನ್ನು ಪ್ರತಿಯೊಂದು ಆಸ್ಪತ್ರೆಗಳಿಗೆ ಒದಗಿಸಿರುವುದು ಕಂಡುಬರುತ್ತದೆ. ಅವುಗಳನ್ನು ಈಗ ಉಪಯೋಗಿಸದೇ ಇರುವುದರಿಂದ ಅವುಗಳು ಸಂಪೂರ್ಣವಾಗಿ ಕೆಟ್ಟ ಹೋಗಬಹುದು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ವೈದ್ಯರನ್ನು ನೇಮಕಾತಿ ಮಾಡಿಕೊಂಡರೆ ಈ ಸಲಕರಣೆಗಳ ಉಪಯೋಗವಾಗಿ ಜನರಿಗೆ ಬಹಳ ಅನುಕೂಲವಾಗುತ್ತದೆ ಎಂದು ನಾನೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಿಂದೆ ಮಾತನಾಡಿದ ಕೆಲವು ಮಾನ್ಯ ಸದಸ್ಯರು ಹೇಳಿದಂತೆ, ಬಹುಶಃ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಈಗಿರುವಷ್ಟು ಕ್ಯಾನ್ಸಲೇಷನ್‌ಗಳು ಹಿಂದೆಂದೂ ಇರಲಿಲ್ಲ ಆಗುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಬಹುಶಃ ದಿವಸಕ್ಕೆ ಸುಮಾರು ಶೇಕಡ

20-25ರಷ್ಟು ಕ್ಯಾನ್ಸಲೇಷನ್‌ಗಳು ಆಗುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಕಂಡಕ್ಟರ್‌ಗಳು ಮತ್ತು ಚಾಲಕರುಗಳ ಕೊರತೆ ಇರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಸರ್ಕಾರ ಆದಷ್ಟು ಬೇಗನೆ ಆದ್ಯತೆ ಮೇರೆಗೆ ಕಂಡಕ್ಟರ್‌ಗಳು ಮತ್ತು ಚಾಲಕರುಗಳ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವುದರ ಮೂಲಕ ಕ್ಯಾನ್ಸಲೇಶನ್ ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮದು ಪಾರದರ್ಶಕವಾದ ಸರ್ಕಾರ, ಜನತೆಗೆ ಸ್ಪಂದಿಸುವಂತಹ ಸರ್ಕಾರ ಎಂದು ನೀವು ಹೇಳಿಕೊಳ್ಳುತ್ತಿದ್ದೀರಿ. ನಮ್ಮ ಸರ್ಕಾರ ಇದ್ದಾಗ ಎ.ಪಿ.ಎಂ.ಸಿ. ವತಿಯಿಂದ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೇಗಳ ಅಭಿವೃದ್ದಿಗಾಗಿ ಸುಮಾರು 15 ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿತ್ತು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದನ್ನು ನಿಲ್ಲಿಸಿದೆ. ಅದನ್ನು ಮಾತ್ತೊಮ್ಮೆ ಪುನಃ ಹಿಂದಿನಂತೆ ಪ್ರಾರಂಭಿಸಿ 15 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಒತ್ತಾಯಿಸುತ್ತಾ. ನನಗೆ ಇದುವರೆಗೂ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ.ಭಕ್ತವತ್ಸಲಂ: (ಕೆಜಿಎಫ್): - ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ನನಗೆ ಅವಕಾಶ ಮಾಡಿ ಕೊಟ್ಟದ್ದಕ್ಕಾಗಿ ನಾನು ಮೊಟ್ಟ ಮೊದಲನೆಯದಾಗಿ ತಮಗೆ ವಂದನೆಗಳನ್ನರ್ಪಿಸುತ್ತೇನೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಕನ್ನಡ ಭಾಷೆಯಲ್ಲಿ ಭಾಷಣ ಮಾಡಿದ್ದು ಇಡೀ ರಾಜ್ಯಕ್ಕೆ ಬಹಳ ಸಂತೋಷಕರವಾದ ವಿಚಾರವಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಾಂಗ್ರೆಸ್ ಸರ್ಕಾರ ತಾನೂ ಮುಂದೆ ಸಾಧಿಸಲಿರುವ ಸಾಧನೆಗಳ ಬಗ್ಗೆ ಹೇಳಿಕೊಂಡಿದೆ. ಈ ವಿಧಾನ ಸಭೆಯಲ್ಲಿ ಕಳೆದ ಆರು ತಿಂಗಳಿನಲ್ಲಿ ನಾವು ಎರಡು ರಾಜ್ಯಪಾಲರ ಭಾಷಣಗಳನ್ನು ಕೇಳಿದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ಕುಡಿಯುವ ನೀರಿನ ಬಗ್ಗೆ, ಮಹಿಳೆಯರಿಗೆ ಹಾಸ್ಟೆಲ್‌ಗಳನ್ನು ನಿರ್ಮಿಸುವ ಬಗ್ಗೆ, ಮಹಿಳೆಯರ ಅಭಿವೃದ್ಧಿ ಬಗ್ಗೆ, ಬಸ್ಸಿನ ಸವಲತ್ತುಗಳನ್ನು ಒದಗಿಸುವ ಬಗ್ಗೆ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಮತ್ತು ಅಂಬೇಡ್ಕರ್ ಯೋಜನೆಗಳ ಮೂಲಕ ಒಂದು ವರ್ಷದಲ್ಲಿ 2 ಲಕ್ಷ ಮನೆಗಳನ್ನು ನಿರ್ಮಿಸಿ ಕೊಡುವ ಬಗ್ಗೆ ಹೇಳಿದೆ.

ಮುಖ್ಯವಾಗಿ ರೈತರಿಗೆ ಉಳಿತಾಯ ಪ್ರಾರಂಭ ಮಾಡುವ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಾನು ಎಸ್‌ಸಿ ಕಾನ್‌ಸ್ಟಿಟ್ಯುಯೆನ್ಸಿಯಿಂದ ಎಲೆಕ್ಟ್ ಆಗಿ ಬಂದಿದ್ದೇನೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಬಹಳ ಧನ್ಯವಾದಗಳನ್ನು ಹೇಳತ್ತೇನೆ. ಎಸ್‌ಸಿ/ಎಸ್‌ಟಿ ಮತ್ತು ಮೈನಾರಿಟಿಗೆ ಹಾಸ್ಟೆಲ್, ಫೆಸಿಲಿಟಿ, ಮೊರಾರ್ಜಿ ದೇಸಾಯಿ ಹೆಸರಿನಲ್ಲಿ ಶಾಲೆ, ಹಾಸ್ಟೆಲ್ ಮತ್ತು ಟ್ರೈನಿಂಗ್ ಸ್ಕೂಲ್ ಮಾಡುತ್ತೇವೆಂದು ರಾಜ್ಯಪಾಲರ ಭಾಷಣದ್ಲಲಿ ಹೇಳಿದ್ದಾರೆ. ಈ ರಾಜ್ಯದಲ್ಲಿ ಹಾಳಾಗಿ ಹೋಗಿರುವ ರಸ್ತೆಗಳನ್ನು ಸರಿ ಮಾಡುತ್ತೇವೆಂದು ಹೇಳಿದ್ದಾರೆ. ಕಂಪ್ಯೂಟರ್ ಸಿಸ್ಟಮ್,ಇಂಟಕ್ ಸಿಸ್ಟಮ್, ಕನ್ನಡ ಭಾಷೆ ಡೆವಲಪ್‌ಮೆಂಟ್ ಮಾಡುತ್ತೇವೆಂದು ಹೇಳಿ, ಇನ್ನು ಏನೇನೋ ಹೇಳಿದ್ದಾರೆ. ಇದರ ಬಗ್ಗೆ ನನಗೆ ಸಂತೋಷ ಇದೆ. ಇವೆಲ್ಲಾ ಇಂಪ್ಲಿಮೆಂಟ್ ಮಾಡುತ್ತಾರಾ ಎಂದು ಸಂದೇಹ ಇದೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾದವು, ಈ ಸರ್ಕಾರದಿಂದ ನಮ್ಮ ಕೆಜಿಎಫ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಒಂದು ಅಭಿವೃದ್ದಿ ಕೆಲಸವೂ ಆಗಿಲ್ಲ. ನಾವು ಕಾಂಗ್ರೆಸ್ ಸರ್ಕಾರದ ಪಾಲಿಸಿ ಲೈಕ್ ಮಾಡುತ್ತೇವೆ. ಕಾಂಗ್ರೆಸ್‌ನವರು ಏನು

ಹೇಳುತ್ತಾರೆ, ಅದು ಮಾಡುತ್ತಾರೆ. ಏನು ಮಾಡುತ್ತಾರೆ ಅದನ್ನು ಹೇಳಿದ್ದಾರೆ. ಇದು ಅವರ ಪಾಲಿಸಿ ಅವರ ಬಗ್ಗೆ ನಾವು ನಂಬಿಕೆ ಇಟ್ಟಿದ್ದೇವೆ. ಕುಡಿಯುವ ನೀರಿನ ಬಗ್ಗೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ನನ್ನ ಕೆಜಿಎಫ್ ನಲ್ಲಿ 10 ದಿವಸಕ್ಕೆ ಒಂದು ಸಾರಿ ನೀರು ಕೊಡುತ್ತಾರೆ ವಾಟರ್ ಡಿಪಾರ್ಟ್‌ಮೆಂಟ್‌ಗೆ ಹೋಗಿ ಕೇಳಿದರೆ, ಕರೆಂಟ್ ಇಲ್ಲ, ಶಾರ್ಟೇಜ್ ಇದೆ, ಓಲ್ಟೇಜ್ ಇಲ್ಲ ನಾವು ಏನು ಮಾಡುವುದು ಎಂದು ಹೇಳುತ್ತಾರೆ. ಎಲೆಕ್ಟ್ರಿಕಲ್ ಇಂಜಿನಿಯರ್‌ಗೆ ಕೇಳಿದರೆ, ಬೆಂಗಳೂರಿನಿಂದ ಸಾರ್ಟೇಜ್ ಇದೆ, ಕರೆಂಟ್ ಇಲ್ಲ, ನಾವು ಏನು ಮಾಡುವುದು ಎಂದು ಹೇಳುತ್ತಾರೆ ? ಒಂದು ತಿಂಗಳಲ್ಲಿ ಮೂರು ದಿವಸ, ನಾಲ್ಕು ದಿವಸಕ್ಕೊಂದು ಸಾರಿ ನೀರನ್ನು ಕೊಡುತ್ತಾರೆ. ಹೀಗಾಗಿ ಕೆಜಿಎಫ್‌ನಲ್ಲಿ ಬಹಳ ತೊಂದರೆಯಾಗಿದೆ. ಸರ್ಕಾರ ಈ ಸಮಸ್ಯೆಯನ್ನು ಸಾಲ್ವ್ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಹಿಂದಿನ ಸರ್ಕಾರದಲ್ಲಿ ಆಶ್ರಯ ಸ್ಕೀಮ್ ಇರಬಹುದು, ಡಾ: ಅಂಬೇಡ್ಕರ್ ಯೋಜನೆ ಇರಬಹುದು, ಒಂದೇ ಒಂದು ಸಿಂಗಲ್ ಮನೆ ಐದು ವರ್ಷಗಳಲ್ಲಿ ಕಟ್ಟಿಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರಣೆ ಮಾಡಿ ಜಾಸ್ತಿ ಮನೆ ಕಟ್ಟಿ ಕೊಡುವುದಕ್ಕೆ ನಮ್ಮ ಸರ್ಕಾರ ಹಣ ಅಲಾಟ್ ಮಾಡಬೇಕೆಂದು ಕೇಳುತ್ತೇನೆ. ಅಲ್ಲಿ ಇರತಕ್ಕಂಥವರೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಬಡವರು. 60 ಪರ್ಸ್‌ಂಟ್ ಎಸ್‌ಸಿಯವರು ಇದ್ದಾರೆ ಅಲ್ಲಿ ಒಂದು ದಿನ ಬಿಟ್ಟು ಒಂದು ದಿನ ಬಿಜಿಎಮ್‌ಎಲ್ ಕ್ಲೋಸ್ ಮಾಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ಇರುವವರಿಗೆ ಮನೆ ಇಲ್ಲ ಅವರೆಲ್ಲರೂ ಬಡವರಾಗಿದ್ದಾರೆ. ಸರ್ಕಾರ ಆಶ್ರಯ ಸ್ಕೀಮ್‌ನಲ್ಲಿ ಮನೆ ಕಟ್ಟಿ ಕೊಡಬೇಕು, ಅಂಬೇಡ್ಕರ್ ಸ್ಕೀಮ್‌ನಲ್ಲಿ ಮನೆ ಕಟ್ಟಿ ಕೊಡಬೇಕೆಂದು ನಾನು ಕೇಳುತ್ತೇನೆ. ಮಾನ್ಯ ಸಿಂಧ್ಯರವರು ಮಂತ್ರಿಗಳಾಗಿದ್ದ ಕಾಲದಲ್ಲಿ ಒಂದು ಬಸ್‌ಸ್ಟ್ಯಾಂಡ್ ಮಾಡಿ ಕೊಟ್ಟಿದ್ದರು, ಆ ಬಸ್‌ಸ್ಟ್ಯಾಂಡ್ ನೋಡುವುದಕ್ಕಾಗುತ್ತಿಲ್ಲ. ಕಳೆದ ಸಾರಿ ನಾನು ಮಾತನಾಡಿದ್ದೇನೆ. ಅಲ್ಲಿ ಒಂದು ಲೆಟ್ರಿನ್ ಇಲ್ಲ, ಟೆಲಿಫೋನ್ ಇಲ್ಲ, ಅಂಗಡಿ ಇಲ್ಲ ಮಳೆ ಬಂದರೆ ನಿಲ್ಲುವುದಕ್ಕೆ ಜಾಗ ಇಲ್ಲ ಹಾಗೆಯೇ ಇದೆ. ಇದರ ಮೇಲೆ ನಮ್ಮ ಸರ್ಕಾರ ಗಮನಹರಿಸಿ ಇಮ್ಮಿಡಿಯಟ್ಟಾಗಿ ಈ ಕೆಲಸಗಳನ್ನೆಲ್ಲಾ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ರಸ್ತೆಗಳ ಬಗ್ಗೆ ನಾನು ಕೆ.ಜಿ.ಎಫ್‌ನಲ್ಲಿ ಮುನಿಸಿಪಾಲಿಟಿ ಅಧ್ಯಕ್ಷನಾಗಿದ್ದ ಸಮಯದಲ್ಲಿ ಮುಖ್ಯವಾದ ರಸ್ತೆ ಯಾವುದಿದೆ, ಆ ರಸ್ತೆಗೆ ಒಂದು ಹೆಸರು ಇಟ್ಟಿದ್ದೆವು. ಕನ್ನಡ ಕವಿ ಡಾ:ಗುಂಡಪ್ಪ ಅವರ ಹೆಸರಿನಲ್ಲಿ ಒಂದು ರೋಡ್ ಇದೆ, ಡಾ: ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ರಸ್ತೆ ಇದೆ, ಕನ್ನಡ ಕವಿ ಕುವೆಂಪು ಅವರ ಹೆಸರಿನಲ್ಲಿ ಒಂದು ರಸ್ತೆ ಇದೆ, ಡಾ:ಕೆ.ಸಿ. ರೆಡ್ಡಿ ನಮ್ಮ ಕರ್ನಾಟಕದ ಮೊದಲ ಮುಖ್ಯಮಂತ್ರಿಯವರ ಹೆಸರಿನಲ್ಲಿ ಒಂದು ರಸ್ತೆ ಇದೆ. ಡಾ: ರಾಜ್ ಕುಮಾರ್ ಹೆಸರಿನಲ್ಲಿ ಒಂದು ಸರ್ಕಲ್ ಇದೆ, ಇಷ್ಟು ಕೆಲಸ ನಾವು ಕೆಜಿಎಫ್ ನಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದ ಸಮಯದಲ್ಲಿ ಮಾಡಿದ್ದೇವೆ. ಈ ರೋಡುಗಳೆಲ್ಲಾ ಈಗ ಹಾಳಾಗಿ ಹೋಗಿವೆ. ಕನ್ನಡ ಕವಿಗಳ ಹೆಸರು ಹಾಕಿರುವ ರಸ್ತೆಗಳನ್ನು ನೋಡಿದರೆ ಹಾಳಾಗಿ ಹೋಗಿವೆ. ಈ ರಸ್ತೆ ಮಾಡಿಕೊಡಿ ಎಂದು ಮುನಿಸಿಪಲ್ ಪ್ರೆಸಿಡೆಂಟ್‌ಗೆ ಹೇಳಿದರೆ ನಮ್ಮಲ್ಲಿ ಹಣ ಇಲ್ಲ , ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಜಿಲ್ಲಾ ಪಂಚಾಯಿತಿಯಾದರೂ ಮಾಡುವುದಿಲ್ಲ. ಮುನಿಸಿಪಾಲಿಟಿಯವರು ಹಣವಿಲ್ಲವೆಂದು ಹೇಳುತ್ತಾರೆ. ರಾಜ್ಯ ಸರ್ಕಾರ ಡೆವಲಪ್‌ಮೆಂಟ್ ಕಾರ್ಯಗಳನ್ನು ಮಾಡುವುದಕ್ಕೆ ಹಣ ಕೊಡುವುದಿಲ್ಲ. ಅದಕ್ಕೋಸ್ಕರ ಮುನಿಸಿಪಲ್ ಮಿನಿಸ್ಟರ್ ಹೆಚ್ಚಿನ ಹಣ ಅಲಾಟ್ ಮಾಡಿ ಈ ರಸ್ತೆಗಳನ್ನು ಸರಿ ಮಾಡಬೇಕೆಂದು

ಈ ಸಂದರ್ಭದಲ್ಲಿ ಕೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ನಾನು ಹೇಳಬೇಕೆಂದರೆ ಅದು ಇಲ್ಲಿ ಎಲ್ಲ ಶಾಸಕರಿಗೂ ವಿಷಯ ತಿಳಿದಿದೆ. 120 ವರ್ಷಗಳ ಹಿಂದೆ ಪ್ರಾರಂಭವಾದ ಗೋಲ್ಡ್ ಮೈನ್ಸ್ ಮುಚ್ಚುತ್ತೇವೆಂದು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದು 1987ರಲ್ಲಿ ಪ್ರಾರಂಭವಾಗಿದೆ. ಇದನ್ನು ಮುಚ್ಚಬಾರದು ಎಂದು ಎಲ್ಲರೂ ಹೋರಾಟ ಮಾಡಿದರೂ ಇದು ಮುಚ್ಚಲೇಕೆಂದು ತೀರ್ಮಾನವಾಗಿದೆ. ಆದಕ್ಕೋಸ್ಕರ ಎಲ್ಲ ಪಾರ್ಟಿಯವರು ಹೋರಾಟ ಮಾಡಿ ಈಗ ಮಾರ್ಚ್ 31ಕ್ಕೆ ಕ್ಲೋಸ್ ಮಾಡುತ್ತೇವೆಂದು ತೀರ್ಮಾನ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾವು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಿದ್ದೇವೆ, ಅವರು ನಮ್ಮ ಕೋಲಾರ ಜಿಲ್ಲೆಯ ಎಲ್ಲ ಶಾಸಕರನ್ನು ಪ್ರತ್ಯೇಕವಾಗಿ ಒಂದು ಮೀಟಿಂಗ್ ಕರೆದು ಆ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿ ನಾವು ಗೋಲ್ಡ್ ಮೈನ್ ಕ್ಲೋಸ್ ಮಾಡುವುದಕ್ಕೆ ಬಿಡುವುದಿಲ್ಲ, ಇದು ಕರ್ನಾಟಕದಲ್ಲಿ ಇರುವುದು ಕರ್ನಾಟಕದ ಮಕ್ಕಳು ಇಲ್ಲಿರುವುದು. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು ಒಂದು ಇರಲಿ, ಅಲ್ಲಿ ಇರುವ ಮಕ್ಕಳೆಲ್ಲಾ ಕರ್ನಾಟಕದವರು. ಅಲ್ಲಿ ಇರುವವರೆಲ್ಲ ಬಡವರು. ಆದಕ್ಕೋಸ್ಕರ ಗೋಲ್ಡ್ ಮೈನ್ಸ್ ಮುಚ್ಚಬಾರದು ಎಂದು ನಮ್ಮ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ ಎಂದು ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಕಾಗದ ಬರೆದಿದ್ದಾರೆ. ಆ ಪತ್ರದಲ್ಲಿ ಗೋಲ್ಡ್ ಮೈನ್ಸ್‌ನಲ್ಲಿ ಒಂದು ಗ್ರಾಮ್ ಗೋಲ್ಡ್ ತೆಗೆದುಕೊಳ್ಳುವುದಕ್ಕೆ 11 ರೂಪಾಯಿಗಳು ಕಂದಾಯ ಕಟ್ಟುತ್ತೇವೆ. ಕರೆಂಟ್ ಬಿಲ್ ಒಂದು ವರ್ಷಕ್ಕೆ ಬಿಜಿಎಮ್‌ಎಲ್‌ನಿಂದ 16 ಕೋಟಿ ರೂಪಾಯಿ ಕಲೆಕ್ಟ್ ಮಾಡುತ್ತೇವೆ. ಎರಡು ವರ್ಷದ ಕರೆಂಟ್ ಬಿಲ್ ನಮಗೆ ಬೇಕಾಗಿಲ್ಲವೆಂದು ನಮ್ಮ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದರ ಮೇಲೆ ಸೆಂಟ್ರಲ್ ಗವರ್ನಮೆಂಟ್ ಇದು ರನ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಪತ್ರ ಬರೆದಿದ್ದಾರೆ. ಕೇಂದ್ರ ಮಂತ್ರಿಗಳಾದ ಶ್ರೀ ಅನಂತ್‌ಕುಮಾರ್‌ರವರು ಈ ಗೋಲ್ಡ್ ಮೈನ್ಸ್ ಕ್ಲೋಸ್ ಮಾಡಬಾರದು ಎಂದು ಪತ್ರ ಬರೆದಿದ್ದಾರೆ. ಡಿಸ್ಟ್ರಿಕ್ಟ್ ಆಫೀಸ್‌ನಲ್ಲಿ ಎರಡು ಸಾರಿ ಡೆಪ್ಯುಟಿ ಕಮೀಷನರ್ ಮುಂದೆ ಈ ಎಲ್ಲ ಶಾಸಕರನ್ನು ಕರೆದು ಮೀಟಿಂಗ್ ಮಾಡಿ ಕ್ಲೋಸ್ ಮಾಡಬಾರದು, ಮುಚ್ಚಿದ್ದರೆ ಬಹಳ ತೊಂದರೆಯಾಗುತ್ತದೆ. ಅಲ್ಲಿ ಇರುವವರೆಲ್ಲ ಎಸ್‌ಸಿಯವರು ಅದಕ್ಕೋಸ್ಕರ ನಾವು ಮುಚ್ಚುವುದಕ್ಕೆ ಬಿಡುವುದಿಲ್ಲವೆಂದು ತೀರ್ಮಾನ ಮಾಡಿ ಎರಡು ಸಾರಿ ಮೀಟಿಂಗ್ ಮಾಡಿದ್ದಾರೆ. ಇನ್ನೊಂದು ನಮ್ಮ ಕೈಗಾರಿಕಾ ಸಚಿವರು ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಈ ಗೋಲ್ಡ ಮೈನ್ಸ್ ಮುಚ್ಚಬಾರದು, ಅಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದೆ. ಅಲ್ಲಿ ಎಸ್‌ಸಿಯವರು ಇದ್ದಾರೆ, 120 ವರ್ಷಗಳ ಹಳೆಯ ಗೋಲ್ಡ್ ಮೈನ್ಸ್ ಅದು, ಆದಕ್ಕೆ ಬೇರೆ ಅಲ್ಟರ್ನೇಟಿವ್ ಮಾಡಿ ಕ್ಲೋಸ್ ಮಾಡಿ ಎಂದು ಪತ್ರ ಬರೆದಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಭಕ್ತ ವತ್ಸಲ್‌ಂರವರು ಬಹಳ ಪ್ರಮುಖವಾದ ವಿಚಾರ ಪ್ರಸ್ತಾಪ ಮಾಡಿದ್ದಾರೆ. ತಮಿಳುನಾಡು ಅಸೆಂಬ್ಲಿಯಲ್ಲಿ ಇದೇ ತರಹ ಸೇಲಂ ಯೂನಿಟಾ ಬಗ್ಗೆ ಸಮಸ್ಯೆ ಬಂದಾಗ Assembly moved a Resolution and sent it to the Central Government.

ಸೇಲಂ ಯೂನಿಟ್ ಕ್ಲೋಸ್ ಮಾಡುವುದಿಲ್ಲವೆಂದು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

ಬಿಜಿಎಮ್‌ಎಲ್ ಏನಿದೆ, ನಾನು ಅದೆಲ್ಲವನ್ನು ವಿಚಾರಿಸಿದೆ, ಶೇಕಡ 80 ರಿಂದ 85ರಷ್ಟು ಪರಿಶಿಷ್ಟ ಜಾತಿಯವರು ಅಲ್ಲಿದ್ದಾರೆ. ಅಕ್ಯುಮ್ಯುಲೇಟೆಡ್ ಲಾಸ್ ನೋಡಿದರೆ ಸೇಲಂ ಯೂನಿಟ್ ಕಂಪೇರ್ ಮಾಡಿದರೆ ಏನೇನೂ ಅಲ್ಲ. ಈ ಯೂನಿಟ್ ಉಳಿಸುವುದಕ್ಕೆ ಈ ಶಾಸನಸಭೆ ಕೂಡ ಯುನಾನಿಮಸ್‌ಆಗಿ ರೆಸಲ್ಯೂಷನ್ ಪಾಸ್ ಮಾಡುವ ದೃಷ್ಟಿಯಿಂದ ಕ್ರಮ ತೆಗೆದು ಕೊಳ್ಳುವುದು ಬಹಳ ಆಗತ್ಯವಿದೆ.

ಶ್ರೀ ಬಿ.ಸೋಮಶೇಖರ್: ನಮ್ಮ ಪಕ್ಷದವರು ಇದಕ್ಕೆ ಬೆಂಬಲ ಕೊಡುತ್ತೇವೆ. ಇದರಲ್ಲಿ ಯಾವುದೇ ಪಕ್ಷದ ಭಿನ್ನಾಭಿಪ್ರಾಯ ಇರುವುದಿಲ್ಲ. ಈ ವಿಚಾರದಲ್ಲಿ ಎಲ್ಲರು ಸಮ್ಮತಿ ಇರುವುದರಿಂದ ಸರ್ಕಾರದವರು ಒಂದು ರೆಸಲ್ಯೂಷನ್ ತರಲಿ ನಾವು ಅದಕ್ಕೆ ಬೆಂಬಲ ಕೊಡುತ್ತೇವೆ. ಯುನಾನಿಮಸ್ ರೆಸಲ್ಯೂಷನ್ ಮಾಡಿ ಕಳುಹಿಸಬೇಕು. ಇದು ಒಂದು ಉಪಯುಕ್ತವಾದ ಕೆಲಸವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮಂತ್ರಿಗಳು):- ನಾಳೆ ಮುಖ್ಯಮಂತ್ರಿಗಳು ಬಂದಮೇಲೆ ಇದರ ಬಗ್ಗೆ ಮಾತನಾಡೋಣ. ಆದರೆ ರಾಜ್ಯ ಸರ್ಕಾರ ಒಂದು ರೆಸಲ್ಯೂಶನ್ ಮಾಡಿ ಕಳುಹಿಸಿದಲೂ ಕೂಡ ಕೇಂದ್ರ ಸರ್ಕಾರವೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು.

ಶ್ರೀ ಎಸ್.ಸುರೇಶ್‌ಕುಮಾರ್:- ಕೇಂದ್ರ ಸರ್ಕಾರದಲ್ಲಿ ನಮ್ಮ ಕಡೆಯವರು ಬಿ.ಜಿ.ಎಂ.ಎಲ್. ಮುಚ್ಚಬಾರದು ಎನ್ನುವುದಕ್ಕೆ ಏನು ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಅವರಿಗೆ ಇಲ್ಲಿಂದ ಕಳುಹಿಸುವ ರೆಸಲ್ಯೂಶನ್ ಸ್ಟೆಂಥನ್ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾಳೆ ಮುಖ್ಯಮಂತ್ರಿಗಳು ಬರಲಿ. ಇದರ ಬಗ್ಗೆ ಮಾತನಾಡೋಣ.

ಶ್ರೀ ಎಂ.ಭಕ್ತವತ್ಸಲಂ:- ತಮಿಳುನಾಡಿನಲ್ಲಿ ಸೇಲಂ ಯೂನಿಟ್‌ನ್ನು ಖಾಸಗೀಕರಣ ಮಾಡುವುದಕ್ಕೆ ಅಲ್ಲಿನ ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಮತ್ತು ಇತರ ಪಕ್ಷದವರು ಒಪ್ಪದೇ ಒಂದು ರೆಸಲ್ಯೂಶನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದೇ ರೀತಿಯಲ್ಲಿ ಬಿ.ಜಿ.ಎಂ.ಎಲ್. ಮುಚ್ಚಬಾರದೆಂದು ನಮ್ಮ ಸದನದಲ್ಲಿ ಒಂದು ರೆಸಲ್ಯೂಶನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. 1880ರಲ್ಲಿ ಬ್ರಿಟೀಷರ ಕಾಲದಲ್ಲಿ ಮೈಸೂರು ಸರ್ಕಾರ ಎಂದು ಇದ್ದಾಗ ಬಿ.ಜಿ.ಎಂ.ಎಲ್. ಪ್ರಾರಂಭವಾಗಿ ಶಿವನಸಮುದ್ರದಿಂದ ಮೊಟ್ಟ ಮೊದಲು ವಿದ್ಯುತ್ ಸರಬರಾಜಾಗಿದ್ದೇ ಕೆ.ಜಿ.ಎಫ್ ಗೆ ಎಂದು ಹೇಳ ಬಯಸುತ್ತೇನೆ. 120 ವರ್ಷಗಳ ಹಿಂದೆ ಪ್ರಾರಂಭವಾದ ಅಂದಿನಿಂದ ಇಂದಿನವರೆಗೆ 800 ಟನ್ ಬಂಗಾರವನ್ನು ತೆಗೆದುಕೊಟ್ಟು ಸುಮಾರು 45 ಸಾವಿರ ಕೋಟಿ ರೂಪಾಯಿ ಗಳಷ್ಟು ಹಣ ಸರ್ಕಾರಕ್ಕೆ ಸಂಪಾದನೆಯಾಗಿದೆ. ಅಪಘಾತಗಳಲ್ಲಿ ಸುಮಾರು 6,000 ಕಾರ್ಮಿಕರು ತೀರಿಹೋಗಿದ್ದಾರೆ. ಬಹಳ ಕಷ್ಟಪಟ್ಟು ಕಾರ್ಮಿಕರು ಕೆಲಸ ಮಾಡಿದ್ದಾರೆ. ಇಷ್ಟು ಸಂಪಾದನೆಯನ್ನು ಸರ್ಕಾರಕ್ಕೆ ಮಾಡಿಕೊಟ್ಟು ಬಿ.ಜಿ.ಎಂ.ಎಲ್‌.ನ್ನು ಕೇಂದ್ರ ಸರ್ಕಾರ ಮುಚ್ಚುವುದಕ್ಕೆ ಹೊರಟಿದೆ. ಆದರೆ ಮುಚ್ಚುವುದಕ್ಕೆ ಮೊದಲು ಅಲ್ಲಿರುವ ಕಾರ್ಮಿಕರಿಗೆ ಬದಲಿ ಉದ್ಯೋಗದ ವ್ಯವಸ್ಥೆಯನ್ನು

ಮಾಡಿ ಮುಚ್ಚಲಿ. ರಾಜ್ಯ ಸರ್ಕಾರ ಕೂಡ ಮುಂದೆ ಬಂದು ಅಲ್ಲಿನ ಬಡವರಿಗೋಸ್ಕರ ಸಣ್ಣ ಕೈಗಾರಿಕೆಗಳನ್ನು ತೆರೆಯಬೇಕೆಂದು ವಿನಂತಿಸುತ್ತೇನೆ. ಮುಖ್ಯಮಂತ್ರಿಗಳು ಕೂಡ ರಾಜ್ಯ ಸರ್ಕಾರದಿಂದ ಏನೇನು ಸಹಾಯವನ್ನು ಮಾಡಬಹುದೋ ಅದನ್ನು ಮಾಡುತ್ತೇನೆಂದು ಮತ್ತು ಬಿ.ಜಿ.ಎಂ.ಎಲ್.ನ್ನು ಮುಚ್ಚುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಮುಖ್ಯಮಂತ್ರಿಗಳಿಗೆ, ಅನಂತಕುಮಾರ್‌ರವರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಇನ್ನು ಇಡೀ ರಾಜ್ಯದಲ್ಲಿ ಎಸ್‌ಸಿ ಕ್ರಿಶ್ಚಿಯನ್ಸ್ ಇದ್ದಾರೆ. ಆದಿ ದ್ರಾವಿಡ ಎಸ್‌ಸಿ ಕ್ರಿಶ್ಚಿಯನ್ಸ್ ಏನಿದ್ದಾರೆ ಅವರಿಗೆ ಎಸ್‌ಸಿ ಗಳಿಗೆ ನಮ್ಮ ಸರ್ಕಾರ ಏನು ಸವಲತ್ತುಗಳನ್ನು ಕೊಡುತ್ತದೋ ಅದೇ ರೀತಿಯಲ್ಲಿ ಸವಲತ್ತುಗಳನ್ನು ಎಸ್‌ಸಿ ಆದಿ ದ್ರಾವಿಡ ಕ್ರಿಶ್ಚಿಯನ್ಸ್‌ಗೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಕೆ.ಜಿ.ಎಫ್.ನಲ್ಲಿ ಶಾಸಕನಾಗಿ ಚುನಾಯಿತನಾಗಿದ್ದರೂ ನನ್ನ ಕ್ಷೇತ್ರಕ್ಕೆ ಬೇರೆ ಶಾಸಕರುಗಳು ಪ್ರದೇಶ ಮಾಡುತ್ತಿದ್ದಾರೆ. ಒಂದು ಉದಾಹರಣೆಯನ್ನು ಕೊಡುವುದಾದರೆ ಬಿ.ಜಿ.ಎಂ.ಎಲ್. ಪೋಲಿಸ್ ಸ್ಟೇಶನ್ ಇದೆ, ಅಲ್ಲಿ ಯಾವಾಗಲೂ ಟೆನ್‌ಶನ್ ಇರುವುದರಿಂದ ಒಬ್ಬ ಸಬ್ ಇನ್ಸ್‌ಪೆಕ್ಟರ್‌ನ್ನು ಹಾಕಿಕೊಡಬೇಕೆಂದು ನಾನು ಗೃಹ ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಆ ಪತ್ರದ ಮೇರೆಯೇ ಗೃಹ ಮಂತ್ರಿಗಳು ಆರ್ಡರ್ ಮಾಡಿ ಬರೆದಿದ್ದಾರೆ. ಆ ಪತ್ರ ಮಂತ್ರಿಗಳ ಕಛೇರಿಯಿಂದ ಡಿ.ಐ.ಜಿ. ಕಛೇರಿಗೆ ಹೋಗಿದೆ. ಈ ಮಧ್ಯೆ ಬೇರೆ ಶಾಸಕರು ಡಿ.ಐ.ಜಿ. ಕಛೇರಿಗೆ ಹೋಗಿ ಮಂತ್ರಿಗಳ ಪತ್ರವನ್ನು ಮತ್ತು ನನ್ನ ಪತ್ರವನ್ನು ಆಚೆಗೆ ಬಿಸಾಕಿಬಿಟ್ಟು ಬೇರೆ ಪತ್ರವನ್ನು ಕೊಟ್ಟು ಬೇರೆ ಆರ್ಡರ್ ಮಾಡಿಸಿ ಬೇರೊಬ್ಬ ಆಫೀಸರ್‌ನ್ನು ಅಲ್ಲಿಗೆ ಹಾಕಿಸಿಕೊಂಡಿದ್ದಾರೆ. ಆ ಆಫೀಸರ್ ನನಗೂ ಮರ್ಯಾದೆ ಕೊಡುತ್ತಿಲ್ಲ ಮತ್ತು ನಾನು ಹೇಳಿದ ವಿಷಯಗಳನ್ನು ಕೇಳುವುದೇ ಇಲ್ಲ, ಈ ಪರಿಸ್ಥಿತಿ ಅಲ್ಲಿದೆ. ಇದೊಂದೇ ಅಲ್ಲದೇ ಮೂರ್ನಾಲ್ಕು ಕೆಲಸಗಳಲ್ಲಿ ಬೇರೆ ಶಾಸಕರುಗಳು ಮಧ್ಯೆ ಪ್ರವೇಶ ಮಾಡಿ ಗೊಂದಲ ಮಾಡುತ್ತಾರೆ. ಅಲ್ಲಿನ ಜನರು ಮತ ಕೊಟ್ಟು ನನ್ನನ್ನು ಚುನಾಯಿಸಿರುವಾಗ ಬೇರೆ ಶಾಸಕರುಗಳು ಮಧ್ಯೆ ಬಂದು ನನಗೆ ಮರ್ಯಾದೆ ಇರದ ಹಾಗೆ ನಡೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಆ ಶಾಸಕರು ಯಾರು?

ಶ್ರೀ ಎಂ.ಭಕ್ತವತ್ಸಲಂ:- ನನ್ನ ಪಕ್ಕದ ಕ್ಷೇತ್ರದ ಶಾಸಕರಾದ ವೆಂಕಟೇಶಪ್ಪನವರೇ ಮಧ್ಯೆ ಪ್ರವೇಶ ಮಾಡುವುದು. ಇವರು ಹಾಸ್ಪೆಲೇ ವಿಚಾರದಲ್ಲಿ, ಪೋಲೀಸ್ ಸ್ಟೇಶನ್ ವಿಚಾರದಲ್ಲಿ ಎಂಟರ್ ಆಗುತ್ತಾರೆ. ಸಬ್ ಇನ್ಸ್‌ಪೆಕ್ಟರನ್ನು ವರ್ಗಾವಣೆ ಮಾಡಿಸುತ್ತಾರೆ. ನನಗೇ ಗೊತ್ತಿಲ್ಲದೇ ಮೂವರು ಸಬ್ ಇನ್ಸ್‌ಪೆಕ್ಟರ್‌ನ್ನು ವರ್ಗಾವಣೆ ಮಾಡಿಸಿದ್ದಾರೆ. ಈಗಿರುವ ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ನನಗೆ ಮರ್ಯಾದೆ ಕೊಡುವುದಿಲ್ಲ. ಗೃಹ ಮಂತ್ರಿಗಳ ಕಛೇರಿಯಿಂದ ಹೋಗಿರುವ ಪತ್ರವನ್ನೇ ಡಿ.ಐ.ಜಿ. ಕಛೇರಿಯಲ್ಲಿ ಕಳ್ಳತನ ಮಾಡಿದ್ದಾರೆ. ಈ ರೀತಿಯಾದರೆ ನಮಗೆ ಹೇಗೆ ನ್ಯಾಯ ಸಿಗುತ್ತದೆ? ಕೋಲಾರದ ಎಲ್ಲಾ ಆಫೀಸ್‌ನಲ್ಲಿ ಕೆ.ಜಿ.ಎಫ್. ಕೆಲಸವನ್ನೇ ಮಾಡುತ್ತಾರೆ. ನಾವು ಹೋದರೆ ಗಲಾಟೆ ಮಾಡುತ್ತಾರೆ. ನೀವು ಪತ್ರಿಕೆಗಳಲ್ಲಿ ಶಾಸಕ-ಶಾಸಕರಿಗೆ ಗಲಾಟೆ ಎಂದು ಓದಿರಬಹುದು. ನಾವು ಏನಾದರೂ ಕೇಳುವುದಕ್ಕೆ ಹೋದರೆ ನಮಗೆ ಹೆರಾಸ್ ಮೆಂಟ್ ಮಾಡುತ್ತಾರಲ್ಲದೇ ರೌಡಿಸ್ಂ ಮಾಡುತ್ತಾರೆ. ಈ ರೀತಿಯಾಗಿ ನಮಗೆ ಸ್ವತಂತ್ರ

ಇಲ್ಲವಾಗಿದೆ. ಇನ್ನು ಮೇಲಾದರೂ ಇವುಗಳ ಬಗ್ಗೆ ಮಂತ್ರಿಗಳು ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವಿಬ್ಬರೂ ಜಗಳ ಮಾಡಿಕೊಳ್ಳಬೇಡಿ.

ಶ್ರೀ ಎಸ್.ಸುರೇಶ್ ಕುಮಾರ್:- ಇಬ್ಬರು ಜಗಳ ಆಡಬೇಡಿ ಎಂದಿರಿ. ಜಗಳ ಆಡಬಾರದು ಎಂದರೆ ಅವರು ಏನು ಮಾಡಾದರೂ ಇವರು ಸುಮ್ಮನೇ ಕುಳಿತುಕೊಳ್ಳಬೇಕಾಗುತ್ತದಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: -ಇವರ ಮೇಲೆ ಅವರು ಬರೆದುಕೊಟ್ಟಿದ್ದಾರೋ ಅಥವಾ ಅವರ ಮೇಲೆ ಇವರು ಬರೆದುಕೊಟ್ಟಿದ್ದಾರೋ ಎಂಬುದನ್ನು ನಾವು ನೋಡಬೇಕು.

ಶ್ರೀ ಎಂ.ಭಕ್ತವತ್ಸಲಂ:- ನನ್ನ ಕ್ಷೇತ್ರಕ್ಕೆ ಅನಾವಶ್ಯಕವಾಗಿ ಎಂಟರ್ ಆಗುತ್ತಾರೆಂದೇ ನಾನು ಹೇಳಿದ್ದೇನೆ. ನಾನು ಹಲವಾರು ಬಾರಿ ನಿಮಗೆ ಬೆಂಬಲ ಕೊಟ್ಟಿದ್ದೇನೆ. ರಾಜ್ಯಸಭಾ ಚುನಾವಣೆಯಲ್ಲಿ ನೀವು ನನ್ನನ್ನು ಕೇಳದಿದ್ದರೂ ಕೂಡ ನಿಮ್ಮವರಿಗೆ ನಾನೇ ವಾಲಿಂಟರಿಯಾಗಿ ಮತ ಹಾಕಿದ್ದೇನೆ. ಈ ರೀತಿಯಾಗಿ ನಾವು ಬೆಂಬಲ ಕೊಟ್ಟಿದ್ದೇವೆ. ನೀವು ಕೂಡ ನಮ್ಮ ಮನವಿಗೆ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಿ.ಜಿ.ಎಂ.ಎಲ್. ಬಗ್ಗೆ ಒಂದು ರೆಸಲ್ಯುಶನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

9. ಪ್ರಕಟಣೆ

ಉಪಾಧ್ಯಕ್ಷರು:- ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಿಂದ ಒಂದು ಸಂದೇಶವು ಬಂದಿದ್ದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 18-4-2000 ದಂದು ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000, ಈ ವಿಧೇಯಕ ಯಾವುದೇ ತಿದ್ದುಪಡಿಗಳಿಲ್ಲದೇ ವಿಧಾನ ಪರಿಷತ್ತು ಅಂಗೀಕರಿಸಿರುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: - ಮಾನ್ಯ ಉಪಾಧ್ಯಕ್ಷರೆ, ಸದನ ಮುಂದೂಡುವುದಕ್ಕೆ ಮುಂದೆ ಒಂದು ವಿಷಯವನ್ನು ಹೇಳುತ್ತೇನೆ. ರಾಜ್ಯದ ಹಿತದೃಷ್ಟಿಯಿಂದ ಶ್ವೇತ ಪತ್ರದ ಮೇಲೆ ಚರ್ಚೆಯನ್ನು ಮಾಡಬೇಕೆಂದು ಒಂದು ಸೂಚನೆಯನ್ನು ಅಧ್ಯಕ್ಷರ ಮುಂದೆ ಇಟ್ಟಿದ್ದೇವು. ನಾಳೆ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತಾರೋ ಎಂಬ ಬಗ್ಗೆ ಮುಖ್ಯಮಂತ್ರಿಗಳಿಂದ ಒಂದು ಹೇಳಿಕೆಯನ್ನು ಕೊಡಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:-ನಾಳೆ ಅದರ ಬಗ್ಗೆ ಹೇಳುತ್ತೇವೆ.

ಉಪಾಧ್ಯಕ್ಷರು:- ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು. (ಸದನವು ಸಂಜೆ 6 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 19-4-2000 ಬುಧವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 45, 350 ಪುಸ್ತಕಗಳು ದಿ : 09-10-2001.